ವಿಶ್ವವಾಣಿ
ವಿಶ್ವಾಸವೇ ವಿಶ್ವ

ನಾಡಿನ ಜನತೆಗೆ ಧನ್ಯವಾದ

ರಾಜೀನಾಮೆ ನೀಡಿದ ಬಳಿಕ ಸಿದ್ದರಾಮಯ್ಯ ಅವರು ಸಾಮಾಜಿಕ ಜಾಲತಾಣದಲ್ಲಿ ಸುದೀರ್ಘ ಪೋಸ್ಟ್ ಹಂಚಿಕೊಂಡಿದ್ದು, ನನ್ನ ರಾಜೀನಾಮೆ ಮುಖ್ಯಮಂತ್ರಿ ಹುದ್ದೆಗೆ ಮಾತ್ರ, ಸಕ್ರಿಯ ರಾಜಕಾರಣಕ್ಕಲ್ಲ. ಕೊನೆ ಉಸಿರು ಇರುವವರೆಗೆ ಸಾಮಾಜಿಕ ನ್ಯಾಯಕ್ಕಾಗಿ, ಸಂವಿಧಾನದ ಉಳಿವಿಗಾಗಿ ಹೋರಾಡುತ್ತೇನೆ ಎಂದಿದ್ದಾರೆ. ಜನರು ತೋರಿಸಿದ ಪ್ರೀತಿಗೆ ಧನ್ಯವಾದ ತಿಳಿಸಿದ್ದಾರೆ.

ಸಿದ್ದು ಪರ್ವ ಅಂತ್ಯ

ಸುದೀರ್ಘ ಆಡಳಿತಕ್ಕೆ ವಿದಾಯ, ಡಿಕೆಶಿ ಮುಂದಿನ ಸಿಎಂ | ಲೋಕಭವನಕ್ಕೆ ತೆರಳಿ ರಾಜೀನಾಮೆ ಸಲ್ಲಿಸಿದ ಸಿದ್ದರಾಮಯ್ಯ | ರಾಜ್ಯಪಾಲ ಗೆಹ್ಲೋತ್ ವಾಪಸಾದ ಬಳಿಕ ಪತ್ರ ಅಂಗೀಕಾರ | ಉಪಾಹಾರ ಸಭೆಯಲ್ಲಿ ಡಿಕೆಶಿ ಹೆಸರು ಖುದ್ದು ಪ್ರಕಟಿಸಿದ ಸಿಎಂ | ಬೆಂಬಲಿಗರ ಕಣ್ಣೀರು, ಭಾವುಕ ಕ್ಷಣಗಳ ನಡುವೆ ನಿರ್ಗಮನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಮೂಲಕ ಸಿದ್ದರಾಮಯ್ಯ ಅವರು ತಮ್ಮ ಸುದೀರ್ಘ ಆಡಳಿತಕ್ಕೆ ವಿದಾಯ ಹೇಳಲು ನಿರ್ಧರಿಸಿದ್ದಾರೆ. ಇದರೊಂದಿಗೆ ಕಳೆದ ಆರು ತಿಂಗಳಿನಿಂದ ನಾಯಕತ್ವ ಬದಲಾವಣೆ ವಿಷಯದಲ್ಲಿ ಕಾಂಗ್ರೆಸ್‌ನಲ್ಲಿ ನಡೆಯುತ್ತಿದ್ದ ಮುಸುಕಿನ ಗುದ್ದಾಟಕ್ಕೆ ತೆರೆ ಬಿದ್ದಿದೆ.

ದೆಹಲಿಯ ಇಂದಿರಾ ಭವನದಲ್ಲಿ ನಡೆದ ಸುದೀರ್ಘ ಸಭೆಯ ಬಳಿಕ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡುವುದು ಖಚಿತವಾಗಿದ್ದರೂ, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಬುಧವಾರ ರಾತ್ರಿ, 'ನಾಯಕತ್ವದ ಬಗ್ಗೆ ಚರ್ಚೆಯಾಗಿಲ್ಲ' ಎಂದು ಹೇಳುವ ಮೂಲಕ ಮತ್ತೊಮ್ಮೆ ಹೈಡ್ರಾಮದ ನಿರೀಕ್ಷೆ ಹುಟ್ಟಿಸಿದ್ದರು. ಆದರೆ ರಾಹುಲ್ ಗಾಂಧಿ ಅವರಿಗೆ ನೀಡಿದ್ದ ಮಾತಿನಂತೆ, ಪಕ್ಷದ ವರ್ಚಸ್ಸಿಗೆ ಧಕ್ಕೆಯಾಗದಂತೆ ನೋಡಿ ಕೊಳ್ಳುವ ಮುತ್ಸದ್ದಿತನವನ್ನು ತೋರಿದ ಸಿದ್ದರಾಮಯ್ಯ ಅವರು ಗುರುವಾರ ಮಧ್ಯಾಹ್ನ 3 ಗಂಟೆ ಸುಮಾರಿಗೆ ತಮ್ಮ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಈ ಮೂಲಕ ರಾಜ್ಯದಲ್ಲಿ ಸುದೀರ್ಘ ಅವಧಿಗೆ ಅಂದರೆ ಎಂಟು ವರ್ಷ ಎಂಟು ದಿನ ಮುಖ್ಯಮಂತ್ರಿಯಾಗಿ, 16 ರಿಂದ 17 ವರ್ಷಗಳ ಕಾಲ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನ ಸ್ಥಾನದಿಂದ ಕೆಳಗೆ ಇಳಿದಿದ್ದಾರೆ.

ಗುರುವಾರ ಬೆಳಗ್ಗೆ ಸಚಿವ ಸಂಪುಟ ಸಹೋದ್ಯೋಗಿಗಳೊಂದಿಗೆ ಸಭೆ ನಡೆಸಿ, ತಮ್ಮ ತೀರ್ಮಾನವನ್ನು ಪ್ರಕಟಿಸಿದ ಬಳಿಕ ಲೋಕಭವನಕ್ಕೆ ತೆರಳಿ ರಾಜೀನಾಮೆ ಸಲ್ಲಿಸಿದರು. ಆದರೆ ರಾಜ್ಯಪಾಲರು ಲೋಕಭವನದಲ್ಲಿ ಇಲ್ಲದೇ ಇರುವುದರಿಂದ ಸಿದ್ದರಾಮಯ್ಯ ಅವರ ರಾಜೀನಾಮೆ ಅಂಗೀಕಾರವಾಗಿಲ್ಲ. ರಾಜಕೀಯವಾಗಿ ಸಿದ್ದರಾಮಯ್ಯ ಅವರು ತಮ್ಮ ಹುದ್ದೆಯಿಂದ ಕೆಳಗೆ ಇಳಿದಿದ್ದರೂ, ಆಡಳಿತಾತ್ಮಕವಾಗಿ, ಕಾನೂನಾತ್ಮಕವಾಗಿ ಸಿದ್ದ ರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಮುಂದುವರಿದಿದ್ದಾರೆ.

'ಸಿದ್ದರಾಮಯ್ಯ ಎಂಬ ಹೆಸರಿನವನಾದ ನಾನು' ಎನ್ನುವ ಹೇಳಿಕೆಯಿಂದ 2023 ಮೇ 20ರಂದು ಅಧಿಕಾರ ಸ್ವೀಕರಿಸಿದ್ದ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಸ್ವಯಂ ಪ್ರೇರಿತನಾಗಿಯೇ ಈ ಹುದ್ದೆಗೆ ರಾಜೀನಾಮೆ ನೀಡುತ್ತಿದ್ದೇನೆ. ಮುಖ್ಯಮಂತ್ರಿ ಸ್ಥಾನದಿಂದ ಕೆಳಗೆ ಇಳಿದರೂ, ರಾಜ್ಯ ರಾಜಕೀಯದಲ್ಲಿ ಮುಂದುವರಿಯುವೆ. ಕೋಮುಶಕ್ತಿಗಳ ವಿರುದ್ಧ ಸೈದ್ಧಾಂತಿಕ ಹೋರಾಟವನ್ನು ಮುಂದುವರಿಸುವೆ' ಎನ್ನುವ ಮೂಲಕ ತಾವಿನ್ನೂ ರಾಜ್ಯ ರಾಜಕೀಯದಲ್ಲಿ ಸಕ್ರಿಯ ಎನ್ನುವ ಸಂದೇಶವನ್ನು ರವಾನಿಸಿದ್ದಾರೆ.

ಶನಿವಾರವೇ ರಾಜೀನಾಮೆ ಅಂಗೀಕಾರ?: ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್ ಅವರ ಅನುಪಸ್ಥಿತಿಯಲ್ಲಿಯೂ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಿದ್ದಾರೆ. ರಾಜ್ಯಪಾಲರ ಬದಲಿಗೆ ಅವರ ಕಾರ್ಯದರ್ಶಿ ಪ್ರಭುಶಂಕರ್ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದ್ದರೂ, ಅದು ಅಂಗೀಕಾರವಾಗುವುದಿಲ್ಲ ಎನ್ನುವ ಸ್ಪಷ್ಟ ಮಾತನ್ನು ಅಧಿಕಾರಿಗಳು ತಿಳಿಸಿದ್ದಾರೆ. ರಾಜ್ಯಪಾಲರು ಗುರುವಾರ ರಾತ್ರಿ ಬೆಂಗಳೂರಿಗೆ ವಾಪಸಾದರೂ, ಸಿದ್ದರಾಮಯ್ಯ ಅವರು ದೆಹಲಿಗೆ ತೆರಳಿದ್ದಾರೆ. ಶುಕ್ರವಾರವೂ ವಾಪಸಾಗುವ ಬಗ್ಗೆ ಸದ್ಯದ ಪ್ರವಾಸ ಪಟ್ಟಿಯಲ್ಲಿ ಪ್ರಸ್ತಾಪವಾಗಿಲ್ಲ. ಆದ್ದರಿಂದ ಸಿದ್ದರಾಮಯ್ಯ ಅವರು ಶುಕ್ರವಾರ ತಡರಾತ್ರಿ ದೆಹಲಿಯಿಂದ ವಾಪಸಾದರೂ, ಶನಿವಾರ ಮತ್ತೊಮ್ಮೆ ರಾಜ್ಯಪಾಲರನ್ನು ಭೇಟಿಯಾಗಿ ರಾಜೀನಾಮೆ ಸಲ್ಲಿಸಬೇಕು. ರಾಜಕೀಯವಾಗಿ ಸಿದ್ದರಾಮಯ್ಯ ಅವರು ಗುರುವಾರವೇ ರಾಜೀನಾಮೆ ಸಲ್ಲಿಸಿದರೂ, ಶನಿವಾರದವರೆಗೂ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯುವ ಸಾಧ್ಯತೆಯಿದೆ. ಸಿದ್ದರಾಮಯ್ಯ ಅವರ ರಾಜೀನಾಮೆ ಅಂಗೀಕಾರವಾದ ಬಳಿಕವೇ, ಮುಂದಿನ ಮುಖ್ಯಮಂತ್ರಿ ಆಯ್ಕೆಗೆ ಸಂಬಂಧಿಸಿದ ಕಾನೂನಾತ್ಮಕ ಪ್ರಕ್ರಿಯೆಗಳು ಶುರುವಾಗಲಿದೆ ಎನ್ನುವುದು ಸ್ಪಷ್ಟ.

ಸಿಎಲ್‌ಪಿ ಸಭೆ ಬಗ್ಗೆ ಸಿಗದ ಸ್ಪಷ್ಟನೆ: ಮುಂದಿನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎನ್ನುವುದು ಈಗಾಗಲೇ ಅನಧಿಕೃತವಾಗಿ ಘೋಷಣೆಯಾಗಿದ್ದರೂ, ಶಾಸಕಾಂಗ ಪಕ್ಷದ ಸಭೆ ಕರೆಯುವ ವಿಷಯದಲ್ಲಿ ಈಗಲೂ ಗೊಂದಲಗಳಿವೆ. ಸಿಎಲ್‌ಪಿ ಸಭೆ ಕರೆದರೆ ಸಭೆಯ ವೇಳೆ ಶಾಸಕರು ಹೈಕಮಾಂಡ್ ತೀರ್ಮಾನ ಪ್ರಶ್ನಿಸಿದರೆ ಅಥವಾ ಡಿ.ಕೆ.ಶಿವಕುಮಾರ್ ಅವರಿಗೆ ಬಹಿರಂಗ ವಿರೋಧ ವ್ಯಕ್ತಪಡಿಸಿದರೆ ಎನ್ನುವ ಆತಂಕ ಹೈಕಮಾಂಡ್ ನಾಯಕರಿಗೆ ಇದೆ. ಆದರೆ ಸಿದ್ದರಾಮಯ್ಯ ಅವರೇ ಡಿಕೆ ಮುಖ್ಯಮಂತ್ರಿಯಾಗಲು ಒಪ್ಪಿಗೆ ಸೂಚಿಸಿರುವುದರಿಂದ ಸ್ವತಃ ಸಿದ್ದರಾಮಯ್ಯ ಅವರಿಂದಲೇ ಹೆಸರು ಸೂಚಿಸಲು ಮುಂದಾದರೆ ಯಾವುದೇ ಗೊಂದಲವಿರುವುದಿಲ್ಲ. ಆದ್ದರಿಂದ ಔಪಚಾರಿಕವಾಗಿ ಸಭೆ ನಡೆಸಿ, ಅಧಿಕೃತವಾಗಿ ಘೋಷಿಸುವ ಸಾಧ್ಯತೆಯಿದೆ. ಆದರೆ ಸಭೆ ಯಾವಾಗ ಕರೆಯಬೇಕು ಎನ್ನುವ ಬಗ್ಗೆ ಈವರೆಗೆ ಸ್ಪಷ್ಟನೆ ಸಿಕ್ಕಿಲ್ಲ ಎನ್ನಲಾಗಿದೆ.

ದಿನದ ಬೆಳವಣಿಗೆ

- ಗುರುವಾರ ಬೆಳಗ್ಗೆಯೇ ಸಿದ್ದು ನಿವಾಸಕ್ಕೆ ಆಪ್ತ ಶಾಸಕರು, ಸಚಿವರ ಆಗಮನ
- ಡಿ.ಕೆ.ಶಿವಕುಮಾರ್ ನಿವಾಸದ ಮುಂದೆ ಅಭಿಮಾನಿಗಳ ಜಯಘೋಷ
- ಸಿಎಂ ಬ್ರೇಕ್‌ಫಾಸ್ಟ್ ಮೀಟಿಂಗ್‌ಗೆ ಆಗಮಿಸಿದ ಡಿಕೆ; ಎರಡೂವರೆ ತಾಸು ಸಚಿವರ ಜತೆ ಸಭೆ
- ಸಭೆಯಲ್ಲಿ ಎಲ್ಲ ಸಚಿವರಿಗೆ ಧನ್ಯವಾದ; ಮುಂದಿನ ಸಿಎಂ ಡಿಕೆ ಎಂದು ಘೋಷಣೆ
- ಸಭೆಯ ಬಳಿಕ ಆಪ್ತರ ಭೇಟಿ, ರಾಜೀನಾಮೆ ನಿರ್ಧಾರ ಅಚಲ ಎಂದ ಸಿದ್ದರಾಮಯ್ಯ,
- ವರುಣ ಕ್ಷೇತ್ರದ ಅಭಿಮಾನಿಗಳು, ಕಾರ್ಯಕರ್ತರೊಂದಿಗೆ ಕೆಲ ಕಾಲ ಕಳೆದ ಸಿಎಂ
- ಲೋಕಭವನಕ್ಕೆ ತೆರಳಿ ರಾಜೀನಾಮೆ, ಬಳಿಕ ಗೃಹ ಕಚೇರಿ ಕೃಷ್ಣದಲ್ಲಿ ವಿದಾಯ ಭಾಷಣ
- ವಿದಾಯ ಭಾಷಣದಲ್ಲಿ ಹೈಕಮಾಂಡ್‌ಗೆ ಧನ್ಯವಾದ, ರಾಜಕೀಯ ಜೀವನದ ಮೆಲುಕು
- ಸಿದ್ದರಾಮಯ್ಯ ದೆಹಲಿಗೆ, ಡಿಕೆಶಿ ನೊಣವಿನಕೆರೆ ಮಠಕ್ಕೆ ಭೇಟಿ, ಶ್ರೀಗಳಿಂದ ಆಶೀರ್ವಾದ

ರಾಜೀನಾಮೆಯ ಬೆನ್ನಲ್ಲೇ ಹೈಡ್ರಾಮ

- ಯಾದಗಿರಿಯಲ್ಲಿ ಸಿದ್ದು ಅಭಿಮಾನಿಯಿಂದ ಆತ್ಮಹತ್ಯೆಗೆ ಯತ್ನ
- ಲೋಕಭವನಕ್ಕೆ ರಾಜೀನಾಮೆ ಸಲ್ಲಿಸಲು ತೆರಳುವಾಗ ಕಾರಿಗೆ ಅಡ್ಡಬಿದ್ದ ಅಭಿಮಾನಿ
- ರಾಜ್ಯದ ವಿವಿಧೆಡೆ ಸಿದ್ದರಾಮಯ್ಯ ರಾಜೀನಾಮೆ ವಿರೋಧಿಸಿ ಪ್ರತಿಭಟನೆ
- ದಲಿತ ಮುಖ್ಯಮಂತ್ರಿಗೆ ಆಗ್ರಹಿಸಿ ವಿವಿಧ ದಲಿತ ಸಂಘಟನೆಗಳಿಂದ ಆಗ್ರಹ

ಸುದ್ದಿಗೋಷ್ಠಿಯಲ್ಲಿ ಸಿದ್ದು ಹೇಳಿದ್ದೇನು?

- ಪಕ್ಷದ ಹೈಕಮಾಂಡ್ ಸೂಚನೆಯಂತೆ ನಾನು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ
- ಹೈಕಮಾಂಡ್ ರಾಜ್ಯಸಭೆಗೆ ಬರಲು ತಿಳಿಸಿದೆ. ಆದರೆ ನಾನು ವಿನಮ್ರವಾಗಿ ಇದನ್ನು ತಿರಸ್ಕರಿಸಿದ್ದೇನೆ
- ರಾಷ್ಟ್ರ ರಾಜಕಾರಣದಲ್ಲಿ ಆಸಕ್ತಿ ಇಲ್ಲ; ರಾಜ್ಯ ರಾಜಕೀಯದಲ್ಲಿಯೇ ಮುಂದುವರಿಯುತ್ತೇನೆ
- ಹಣದ ಹಿಂದೆ ಹೋಗಿಲ್ಲ, ಆಸ್ತಿ-ಪಾಸ್ತಿ ಮಾಡಿಕೊಂಡಿಲ್ಲ; ಮತದಾರರೇ ನನ್ನ ದೇವರು
- ರಾಜಕೀಯ ಜೀವನ ತೆರೆದ ಪುಸ್ತಕ; ಜೆಡಿಎಸ್‌ನಿಂದ ಹೊರಬಂದ ಬಳಿಕ ಅವಕಾಶ ನೀಡಿದ ಕಾಂಗ್ರೆಸ್‌ಗೆ ಧನ್ಯವಾದ
- ಶಾಸಕನಾಗಿ ಐದು ವರ್ಷದ ಅವಧಿಗೆ ಚುನಾಯಿತನಾಗಿದ್ದೇನೆ. ಈ ಅವಧಿಯನ್ನು ಮುಗಿಸುತ್ತೇನೆ.

ರಾಜ್ಯ ರಾಜಕೀಯದಲ್ಲಿ ಇನ್ನೂ ಕೂಡ ಸಕ್ರಿಯ

ಪತ್ರಿಕಾಗೋಷ್ಠಿಯಲ್ಲಿ ಮಾತನಾಡುವ ವೇಳೆ, ನಾನು ರಾಜ್ಯಸಭೆಗೆ ಹೋಗುವುದಿಲ್ಲ. ಎರಡು ವರ್ಷಗಳ ಶಾಸಕ ಅವಧಿ ಇನ್ನೂ ಬಾಕಿ ಇದೆ ಎಂದು ಹೇಳಿದ್ದ ಸಿಎಂ, ಸಾಮಾಜಿಕ ಜಾಲತಾಣದಲ್ಲಿ ಹಾಕಿದ ಪೋಸ್ಟ್‌ನಲ್ಲೂ ತಾವು ರಾಜ್ಯ ರಾಜಕೀಯದಲ್ಲಿ ಮುಂದುವರಿಯುವುದಾಗಿ ಸ್ಪಷ್ಟಪಡಿಸಿದ್ದಾರೆ. 'ಮುಖ್ಯಮಂತ್ರಿ ಸ್ಥಾನದಿಂದ ಕೆಳಗೆ ಇಳಿದರೂ, ರಾಜ್ಯ ರಾಜಕೀಯದಲ್ಲಿ ಮುಂದುವರಿಯುವೆ. ಕೊನೆ ಉಸಿರು ಇರುವವರೆಗೆ ಸಾಮಾಜಿಕ ನ್ಯಾಯಕ್ಕಾಗಿ, ಸಂವಿಧಾನದ ಉಳಿವಿಗಾಗಿ, ಕೋಮುಶಕ್ತಿಗಳ ವಿರುದ್ಧ ಸೈದ್ಧಾಂತಿಕ ಹೋರಾಟವನ್ನು ಮುಂದುವರಿಸುವೆ' ಎಂದು ಹೇಳಿದ್ದಾರೆ.

ಮೌನಕ್ಕೆ ಶರಣಾಗಿರುವ ಡಿಸಿಎಂ ಡಿಕೆ ಶಿವಕುಮಾರ್

ಸ್ವತಃ ಸಿದ್ದರಾಮಯ್ಯ ಅವರೇ ಡಿ.ಕೆ.ಶಿವಕುಮಾರ್ ಅವರು ಮುಂದಿನ ಮುಖ್ಯಮಂತ್ರಿ ಎಂದು ಘೋಷಿಸಿದ್ದರೂ, ಡಿ.ಕೆ. ಶಿವಕುಮಾರ್ ಇಡೀ ದಿನ ಮೌನಕ್ಕೆ ಶರಣಾಗಿದ್ದರು. ಡಿಕೆ ನಂಬುವ ಅಜ್ಜಯ್ಯನ ಎಚ್ಚರಿಕೆಯೇ ಈ ಮೌನಕ್ಕೆ ಕಾರಣ ಎನ್ನಲಾಗಿದೆ. ಅಧಿಕಾರ ಸ್ವೀಕರಿಸುವ ತನಕ ಯಾವುದೇ ಹೇಳಿಕೆ, ಘೋಷಣೆಗಳನ್ನು ಮಾಡಬೇಡಿ. ಇದೇ ವಿಷಯವನ್ನು ನಿಮ್ಮ ಬೆಂಬಲಿಗರಿಗೂ ತಿಳಿಸಿ ಎನ್ನುವ ಎಚ್ಚರಿಕೆಯನ್ನು ಅಜ್ಜಯ್ಯ ನೀಡಿದ್ದಾರೆ. ಸಿದ್ದರಾಮಯ್ಯ ಅವರ ವಿದಾಯದ ಸಮಯದಲ್ಲಿ ಯಾವುದೇ ಹೇಳಿಕೆ ನೀಡಿ ವಿವಾದಕ್ಕೆ ಗುರಿಯಾಗದಿರಲು ಡಿಕೆಶಿ ನಿರ್ಧರಿಸಿದ್ದಾರೆ ಎನ್ನಲಾಗಿದೆ.

> ಎರಡು ಅವಧಿಗೆ ಮುಖ್ಯಮಂತ್ರಿ ಮಾಡಿದ್ದ ಪಕ್ಷದ ವರಿಷ್ಠೆ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರಿಗೆ ಧನ್ಯವಾದ. ಸಿದ್ಧಾಂತದಲ್ಲಿ ಎಂದಿಗೂ ರಾಜಿ ಮಾಡಿಕೊಂಡಿಲ್ಲ. ಈ ಹಿಂದೆ ಹಲವು ಬಾರಿ ಹೇಳಿದಂತೆ ಹೈಕಮಾಂಡ್ ಹೇಳಿದ ಕೂಡಲೇ ಸ್ವಯಂಪ್ರೇರಿತನಾಗಿ ರಾಜೀನಾಮೆ ನೀಡಿದ್ದೇನೆ. ಮುಂದಿನ ಮುಖ್ಯಮಂತ್ರಿಯನ್ನು ಶಾಸಕಾಂಗ ಪಕ್ಷದ ಸಭೆ ಹಾಗೂ ಪಕ್ಷದ ಹೈಕಮಾಂಡ್ ತೀರ್ಮಾನಿಸಲಿದೆ. ನಾನು ರಾಜ್ಯ ರಾಜಕೀಯದಲ್ಲಿಯೇ ಮುಂದುವರಿಯುವೆ.
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ಡಿಕೆಶಿ ಪ್ರಮಾಣವಚನಕ್ಕೆ ಭರ್ಜರಿ ತಯಾರಿ ಆರಂಭ

ಡಿ.ಕೆ.ಶಿವಕುಮಾರ್ ಅಭಿಮಾನಿಗಳು ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮಕ್ಕೆ ಭರ್ಜರಿ ಸಿದ್ಧತೆ ಆರಂಭಿಸಿದ್ದಾರೆ. ಕಂಠೀರವ ಕ್ರೀಡಾಂಗಣ ಅಥವಾ ವಿಧಾನಸೌಧದ ಮುಂದೆ ಬೃಹತ್ ವೇದಿಕೆ ಸಿದ್ಧಪಡಿಸಲು ಅಧಿಕಾರಿಗಳು ಸ್ಥಳ ವೀಕ್ಷಣೆ ನಡೆಸಿದ್ದಾರೆ. ಪ್ರಮಾಣವಚನ ಸಮಾರಂಭದಲ್ಲಿ ಸುಮಾರು 50 ಸಾವಿರಕ್ಕೂ ಹೆಚ್ಚು ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಹಾಗೂ ಡಿ.ಕೆ. ಶಿವಕುಮಾರ್ ಅಭಿಮಾನಿಗಳು ಭಾಗವಹಿಸುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ಕ್ರೀಡಾಂಗಣ ಅಥವಾ ವಿಧಾನಸೌಧ ಸುತ್ತಮುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲು ನಿರ್ಧರಿಸಲಾಗಿದೆ.

ಸಿದ್ದು-ಡಿಕೆಶಿ ಅಪ್ಪುಗೆ ಫೋಟೋ ವೈರಲ್

ಸಚಿವರ ಬ್ರೇಕ್‌ಫಾಸ್ಟ್ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ, 'ಮುಂದಿನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್' ಎಂದು ಘೋಷಿಸಿದರು. ಸಭೆಗೆ ಡಿಕೆಶಿ ಆಗಮಿಸುತ್ತಿದ್ದಂತೆ, ಆತ್ಮೀಯವಾಗಿ ಅಪ್ಪುಗೆಯ ಸ್ವಾಗತವನ್ನು ನೀಡಿದರು. ಈ ವೇಳೆ ಇಬ್ಬರೂ ಒಂದು ಕ್ಷಣ ಭಾವುಕರಾದರು. ಇದಾದ ಬಳಿಕ ಡಿಕೆಶಿ, ಸಿದ್ದರಾಮಯ್ಯ ಅವರ ಕಾಲಿಗೆ ಬಿದ್ದು ಆಶೀರ್ವಾದ ಪಡೆದರು. ಈ ಅಪ್ಪುಗೆಯ ಫೋಟೋ ಹಾಗೂ ಆಶೀರ್ವಾದ ಪಡೆದಿರುವ ಫೋಟೋಗಳನ್ನು ಕಾಂಗ್ರೆಸ್ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡು ಪಕ್ಷದಲ್ಲಿ ಒಗ್ಗಟ್ಟಿದೆ ಎಂಬ ಸಂದೇಶ ಸಾರಿದೆ.

ಆಪ್ತರ ಬಂಡಾಯ ಮಾತಿಗೆ ಅಹಿಂದ ನಾಯಕನ ಬ್ರೇಕ್

ಆಕ್ರೋಶಿತ ಶಾಸಕರು, ಸಚಿವರನ್ನು ಸಂತೈಸಿದ ಸಿಎಂ ಸಿದ್ದು

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರ ತ್ಯಾಗದ ಬಗ್ಗೆ ಮಾತನಾಡುತ್ತಿದ್ದಂತೆ, ಸಿದ್ದು ಆಪ್ತರು ಬಂಡಾಯದ ಮಾತುಗಳನ್ನು ಆಡಿದ್ದಾರೆ. ಆದರೆ ಯಾವುದೇ ಕಾರಣಕ್ಕೂ ಗೊಂದಲ ಸೃಷ್ಟಿಸಬೇಡಿ ಎನ್ನುವ ಸ್ಪಷ್ಟ ಸಂದೇಶವನ್ನು ಸಿದ್ದರಾಮಯ್ಯ ರವಾನಿಸಿದ್ದಾರೆ ಎಂದು ತಿಳಿದುಬಂದಿದೆ.

ರಾಜೀನಾಮೆ ನೀಡುವಂತೆ ಹೈಕಮಾಂಡ್ ಸೂಚಿಸಿದ ಬಳಿಕ, ಸಿದ್ದರಾಮಯ್ಯ ತಮ್ಮ ಆಪ್ತರ ಮೂಲಕ ಬಂಡಾಯದ ಬಾವುಟವನ್ನು ಹಾರಿಸಬಹುದು ಎನ್ನುವ ಆತಂಕ ಕಾಂಗ್ರೆಸ್ ವರಿಷ್ಠರಿಗೆ ಇತ್ತು. ರಾಜೀನಾಮೆ ನೀಡುವುದು ಖಚಿತವಾದ ಬಳಿಕವೂ 70ಕ್ಕೂ ಹೆಚ್ಚು ಶಾಸಕರು ಸಿದ್ದರಾಮಯ್ಯ ಅವರೊಂದಿಗೆ ಇದ್ದಾರೆ. ಆದ್ದರಿಂದ ಒಂದು ವೇಳೆ ಸಿದ್ದರಾಮಯ್ಯ ಅವರು ಮನಸ್ಸು ಮಾಡಿದ್ದರೆ, ಶಾಸಕಾಂಗ ಪಕ್ಷದ ಸಭೆಯಲ್ಲಿ ಇಂಥವರು ಮುಂದಿನ ಮುಖ್ಯ ಮಂತ್ರಿ ಆಯ್ಕೆಯಾಗಲಿ ಎನ್ನುವ ಪಟ್ಟನ್ನು ಹಿಡಿಯಬಹುದಾಗಿತ್ತು. ಆದರೆ ಇದ್ಯಾವುದು ಮಾಡದೇ, ಬಂಡಾಯದ ಮಾತನ್ನಾಡಿದ ಶಾಸಕರನ್ನು ಸಮಾಧಾನಪಡಿಸಿ, ಇಡೀ ಪ್ರಕ್ರಿಯೆ ಸರಾಗವಾಗಿ ಮುಗಿಯುವಂತೆ ನೋಡಿಕೊಂಡಿದ್ದಾರೆ.

ಬುಧವಾರ ತಡರಾತ್ರಿವರೆಗೆ ಸಿದ್ದರಾಮಯ್ಯ ಅವರ ನಿವಾಸದಲ್ಲಿ ಸಿದ್ದು ಬೆಂಬಲಿಗರಿದ್ದರು. ಗುರುವಾರ ಬೆಳಗ್ಗೆ ಸಚಿವರ ಬ್ರೇಕ್‌ಫಾಸ್ಟ್ ಸಭೆಗೂ ಮೊದಲು ಕೆಲ ಸಚಿವರೊಂದಿಗೆ ಸಭೆ ನಡೆಸಿದ್ದರು. ಡಿ.ಕೆ.ಶಿವಕುಮಾರ್ ಆಗಮಿಸುವ ಮೊದಲೂ ಸಭೆಯಲ್ಲಿದ್ದ ಸಚಿವರು 'ಈ ರೀತಿಯ ತೀರ್ಮಾನದ ಅಗತ್ಯವೇನಿತ್ತು? ಕನಿಷ್ಠ ಪ್ರತಿಭಟನೆಯನ್ನು ಮಾಡದೆ ರಾಜೀನಾಮೆ ನೀಡಲು ಒಪ್ಪಿಕೊಂಡ ಹಿಂದಿನ ಕಾರಣವೇನು' ಎನ್ನುವ ಪ್ರಶ್ನೆಗಳನ್ನು ಕೇಳಿದರು.

→10

ಬ್ರೇಕ್‌ಫಾಸ್ಟ್ ಸಭೆಗೂ ಆಗಮಿಸದ ಸುರ್ಜೇವಾಲ

ಈ ನಡುವೆ ರಾಜ್ಯದಲ್ಲಿ ನಡೆಯುತ್ತಿರುವ ಬೆಳವಣಿಗೆಯನ್ನು ಗಮನಿಸಲು ಬುಧವಾರ ರಾತ್ರಿಯೇ ಬೆಂಗಳೂರಿಗೆ ಆಗಮಿಸಿದ್ದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಗುರುವಾರದ ಬ್ರೇಕ್‌ಫಾಸ್ಟ್ ಸಭೆಯಲ್ಲಿ ಭಾಗವಹಿಸಲಿದ್ದಾರೆ ಎನ್ನಲಾಗಿತ್ತು. ಆದರೆ ಸಿದ್ದರಾಮಯ್ಯ ಅವರ ಅಧಿಕೃತ ನಿವಾಸ ಕಾವೇರಿಗೆ ಆಗಮಿಸದ ಸುರ್ಜೇವಾಲ ಅವರು ಖಾಸಗಿ ಹೋಟೆಲ್‌ನಲ್ಲಿಯೇ ತಂಗಿದ್ದರು. ಬ್ರೇಕ್‌ಫಾಸ್ಟ್ ಸಭೆಯ ಬಳಿಕವೂ, ಸಿದ್ದರಾಮಯ್ಯ ಅವರನ್ನು ಭೇಟಿ ಮಾಡದ ಸುರ್ಜೇವಾಲ ಸಂಜೆ ಒಟ್ಟಾಗಿ ವಿಮಾನವೇರಿ ದೆಹಲಿಗೆ ಹೊರಟರು.

ಸಕಾಲದಲ್ಲಿ ರಾಜೀನಾಮೆ ಸಲ್ಲಿಸಿ ಗೊಂದಲ ತಪ್ಪಿಸಿದ ಸಿದ್ರಾಮಯ್ಯ

ರಾಜ್ಯಪಾಲರ ಗೈರು ಆಟಕ್ಕೆ ಸಿಲುಕದ ಮುಖ್ಯಮಂತ್ರಿ ಸಿದ್ದು

ರಾಜ್ಯಪಾಲರ ಬದಲಿಗೆ ಅವರ ಕಾರ್ಯದರ್ಶಿ ಪ್ರಭುಶಂಕರ್‌ಗೆ ರಾಜೀನಾಮೆ ಪತ್ರ ಹಸ್ತಾಂತರ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಯಿಂದ ರಾಜ್ಯ ಕಾಂಗ್ರೆಸ್‌ನಲ್ಲಿ ಶುರುವಾಗಬಹುದಾದ ಗೊಂದಲದ ಜ್ವಾಲೆಗೆ ತುಪ್ಪ ಸುರಿಯುವ ಕಾರಣಕ್ಕೆ ರಾಜ್ಯಪಾಲರ ಥಾವರ್ ಚಂದ್ ಗೆಹ್ಲೋಥ್ ಇಂದೋರ್ ಪ್ರವಾಸ ಕೈಗೊಂಡರೇ ಎನ್ನುವ ಅನುಮಾನ ಶುರುವಾಗಿದೆ.

ದೆಹಲಿಯಿಂದ ವಾಪಸಾಗುತ್ತಿದ್ದ ಸಿದ್ದರಾಮಯ್ಯ ಅವರು ಗುರುವಾರ ರಾಜೀನಾಮೆ ಸಲ್ಲಿಸಲು ತೀರ್ಮಾನಿಸಿ, ಲೋಕಭವನಕ್ಕೆ ಸಂದೇಶ ರವಾನಿಸಿ ರಾಜ್ಯಪಾಲರ ಸಮಯವನ್ನು ಕೇಳಿದ್ದರು. ಅಲ್ಲಿಯ ತನಕ ಬೆಂಗಳೂರಿನ ಲೋಕಭವನದಲ್ಲಿಯೇ ಇದ್ದ ರಾಜ್ಯಪಾಲರು, ಏಕಾಏಕಿ ಪತ್ನಿಗೆ ಅನಾರೋಗ್ಯವೆಂದು ಇಂದೋ ರ್‌ಗೆ ತೆರಳಿದರು. ಆದರೆ ಅನಾರೋಗ್ಯಕ್ಕಿಂತ ಹೆಚ್ಚಾಗಿ, ಸಿದ್ದರಾಮಯ್ಯ ಅವರಿಂದ ರಾಜೀ ನಾಮೆ ಪಡೆಯುವುದನ್ನು ಒಂದೆರೆಡು ದಿನ ಮುಂದೂಡಿ, ಇದರಿಂದ ಕಾಂಗ್ರೆಸ್‌ನಲ್ಲಿ ಉದ್ಭವಿಸಬಹುದಾದ ಗೊಂದಲ, ಗದ್ದಲ ಹೆಚ್ಚಿಸಲು ಇಂದೋರ್‌ಗೆ ತೆರಳಿದ್ದಾರೆ ಎನ್ನಲಾಗಿದೆ. ರಾಜ್ಯಪಾಲರ ಈ ನಡೆಯನ್ನು ಅರಿತ ಸಿದ್ದ ರಾಮಯ್ಯ ಅವರು, ರಾಜ್ಯಪಾಲರ ಅನುಪಸ್ಥಿತಿಯ ಹೊರತಾಗಿಯೂ ತಮ್ಮ ರಾಜೀನಾಮೆಯನ್ನು ರಾಜ್ಯಪಾಲರ ಕಾರ್ಯದರ್ಶಿಗೆ ಸಲ್ಲಿಸುವ ಮೂಲಕ ಮುತ್ಸದ್ದಿತನ ತೋರಿದ್ದಾರೆ. ರಾಜೀನಾಮೆ ನೀಡುವುದನ್ನು ಮುಂದೂಡ ಬೇಕಿದ್ದರೆ, ರಾಜ್ಯಪಾಲರು ಊರಿನಲ್ಲಿಲ್ಲ. ಅವರು ಬಂದ ಬಳಿಕ ರಾಜೀನಾಮೆ ನೀಡುವೆ ಎಂದು ಹೇಳಿ ಕಾಲಹರಣ ಮಾಡಲು ಸಾಧ್ಯವಿತ್ತು.

→10

ಪತ್ನಿಗೆ ರಾಜ್ಯಸಭೆಯ ಸೀಟು ಆಫರ್: ಒಲ್ಲೆ ಎಂದ ಸಿದ್ದು!

ವರಿಷ್ಠರ ಪ್ರಸ್ತಾಪವನ್ನು ಸಾರಾಸಗಟಾಗಿ ತಿರಸ್ಕರಿಸಿದ ಸಿದ್ದರಾಮಯ್ಯ

ಬೆಂಗಳೂರು: ಅಹಿಂದ ನಾಯಕ ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಿಂದ ಇಳಿಸುವ ಮೊದಲು ಅವರ ಪತ್ನಿ ಪಾರ್ವತಿ ಸಿದ್ದರಾಮಯ್ಯ ಅವರಿಗೆ ರಾಜ್ಯಸಭಾ ಆಫರ್ ಅನ್ನು ಪಕ್ಷದ ಹೈಕಮಾಂಡ್ ನೀಡಿತ್ತು ಎನ್ನುವ ಅಂಶ ಇದೀಗ ಬಹಿರಂಗವಾಗಿದೆ. ಸಿದ್ದರಾಮಯ್ಯ ಅವರನ್ನು ಪಟ್ಟದಿಂದ ಕೆಳಗಿಳಿಸಲು ಮುಂದಾದರೆ, ಮುನಿಸಿಕೊಳ್ಳುವ ಸಾಧ್ಯತೆಯಿದೆ ಎನ್ನುವ ಆತಂಕ ಪಕ್ಷದ ವರಿಷ್ಠರಿಗೆ ಇತ್ತು. ಆದ್ದರಿಂದ 'ರಾಜ್ಯಸಭೆಗೆ ಬನ್ನಿ' ಎನ್ನುವ ಆಫರ್ ಅನ್ನು ರಾಹುಲ್ ಗಾಂಧಿ ನೀಡಿದ್ದರು. ಆದರೆ ಇದಕ್ಕೆ ಒಪ್ಪದೇ, ರಾಜ್ಯ ರಾಜಕೀಯ ದಲ್ಲಿಯೇ ಮುಂದುವರಿಯುವು ದಾಗಿ ಹೇಳಿದ್ದ ರಿಂದ, ಮುನಿಸು ತಣಿಸಲು ಪತ್ನಿ ಪಾರ್ವತಿ ಅವರನ್ನು ರಾಜ್ಯಸಭೆಗೆ ಕಳುಹಿಸಿಕೊಡಿ ಎನ್ನುವ ಮಾತನ್ನು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹೇಳಿದರು ಎನ್ನುವ ಮಾತುಗಳು ಕೇಳಿಬಂದಿದೆ. ಆದರೆ ಪಕ್ಷದ ಹೈಕಮಾಂಡ್‌ನ ಈ ಸಲಹೆಯನ್ನು ಸಿದ್ದರಾ ಮಯ್ಯ ಅವರು ಸಾರಸಗಟಾಗಿ ತಳ್ಳಿಹಾಕಿದ್ದಾರೆ ಎಂದು ವಿಶ್ವಸನೀಯ ಮೂಲಗಳು ತಿಳಿಸಿವೆ.

→10

ಪುತ್ರಶೋಕದ ಬಳಿಕ ಮೊದಲ ಬಾರಿಗೆ ಅತ್ತ ಸಿದ್ದು

ಸಿದ್ದರಾಮಯ್ಯ ಅವರು ಸಾಮಾನ್ಯವಾಗಿ ತಮ್ಮ ಭಾವನೆಗಳನ್ನು ಸಾರ್ವಜನಿಕ ವೇದಿಕೆಗಳಲ್ಲಿ, ಮಾಧ್ಯಮಗಳ ಎದುರು ತೋರಿಸಿಕೊಳ್ಳುವುದಿಲ್ಲ. ಈ ಹಿಂದೆ ಮುಖ್ಯಮಂತ್ರಿಯಾಗಿದ್ದಾಗ 2017-18ರ ಅವಧಿಯಲ್ಲಿ ಸಿದ್ದರಾಮಯ್ಯ ಅವರ ಪುತ್ರ ರಾಕೇಶ್ ಸಿದ್ದರಾಮಯ್ಯ ಅವರು ಅಕಾಲಿಕ ನಿಧನ ಹೊಂದಿದಾಗ ಕಣ್ಣೀರು ಸುರಿಸಿದ್ದರು. ಅದಾದ ಬಳಿಕ ಗುರುವಾರ ವರುಣ, ಮೈಸೂರು, ಚಾಮರಾಜನಗರದ ಸುತ್ತಮುತ್ತಲಿನ ಅಭಿಮಾನಿಗಳು ಸಿದ್ದರಾಮಯ್ಯ ಅವರ ಕೈ ಹಿಡಿದು ರೋದಿಸಿದಾಗ ಕಣ್ಣೀರು ಸುರಿಸಿದರು. ಸಿದ್ದರಾಮಯ್ಯನವರ ರಾಜೀನಾಮೆ ಸುದ್ದಿ ಕೇಳಿ ವರುಣ ಕ್ಷೇತ್ರದ ಸುತ್ತಮುತ್ತಲ ಊರುಗಳಿಂದ ಸಾವಿರಾರು ಅಭಿಮಾನಿಗಳು ಆಗಮಿಸಿದ್ದರು. ಇದರಿಂದ ಕಾವೇರಿ ನಿವಾಸದಲ್ಲಿ ನಿಲ್ಲುವುದಕ್ಕೂ ಜಾಗವಿಲ್ಲದ ಸ್ಥಿತಿ ನಿರ್ಮಾಣವಾಗಿತ್ತು. ಸಾವಿರಾರು ಅಭಿಮಾನಿಗಳು 'ನೀವು ಎಂದೆಂದಿಗೂ ನಮ್ಮ ಪಾಲಿನ ಮುಖ್ಯಮಂತ್ರಿ' ಎಂದು ಘೋಷಣೆ ಕೂಗಿದಾಗ, ಸಿದ್ದರಾಮಯ್ಯ ಅವರು ಒಂದು ಕ್ಷಣ ಭಾವುಕರಾಗಿ ಕಣ್ಣೀರು ಸುರಿಸಿದರು.

ಸೊಂಪಾದ ಪುಟಗಳು

ಅಡುಗೆ ಮನೆ ಇನ್ನೊಂದ್ ಚೂರು ದೊಡ್ಡದಿದ್ದಿದ್ದರೆ..!
ಶಿಶಿರಕಾಲ
ಶಿಶಿರ್ ಹೆಗಡೆ 6

ಬಾನಿನಿಂದ ಸುರಿವ ಮಳೆಹನಿಯೇ! ಬೇಗ ಬಾ!
ಶಶಾಂಕಣ
ಶಶಿಧರ ಹಾಲಾಡಿ 7

ದಾರಿದೀಪೋಕ್ತಿ



ಒಂದು ದೊಡ್ಡ ಸಂಬಂಧವು ಎರಡು ತತ್ವಗಳನ್ನು ಆಧರಿಸಿರುತ್ತದೆ. ಮೊದಲನೆಯದು, ನಿಮ್ಮ ಹೋಲಿಕೆಗಳನ್ನು ಮೆಚ್ಚುವುದು ಹಾಗೂ ಎರಡನೆಯದು, ನಿಮ್ಮ ವ್ಯತ್ಯಾಸಗಳನ್ನು ಗೌರವಿಸುವುದು. ಯಾವತ್ತೂ ಸಂಬಂಧವನ್ನು ಗೌರವಿಸಬೇಕು.

ವಕ್ರತುಂಡೋಕ್ತಿ

ದುಡ್ಡು ಕೊಟ್ಟರೆ ಏನು ಬೇಕಾದರೂ ಸಿಗುತ್ತದೆ. ಸಿಗದೇ ಇರೋದು ಅಂದ್ರೆ ಕೊಟ್ಟ ದುಡ್ಡು.

ಜೈಪುರದಲ್ಲಿ ಇಳಿದ ಸಿದ್ದು ವಿಮಾನ

ಬೆಂಗಳೂರು: ಬೆಂಗಳೂರಿನಿಂದ ಗುರುವಾರ ಸಂಜೆ 4.30ಕ್ಕೆ ದೆಹಲಿಗೆ ವಿಶೇಷ ವಿಮಾನದಲ್ಲಿ ಪ್ರಯಾಣ ಬೆಳೆಸಿದ್ದ ಸಿಎಂ ಸಿದ್ದರಾಮಯ್ಯ ಅವರಿದ್ದ ವಿಶೇಷ ವಿಮಾನವನ್ನು ಹವಾಮಾನ ವೈಪರೀತ್ಯದ ಹಿನ್ನೆಲೆಯಲ್ಲಿ ಜೈಪುರದಲ್ಲಿ ಇಳಿಸಲಾಯಿತು. ಜೈಪುರ ವಿಮಾನ ನಿಲ್ದಾಣದಲ್ಲಿ ರಾಜಸ್ಥಾನ ಮಾಜಿ ಮುಖ್ಯಮಂತ್ರಿ ಅಶೋಕ್ ಗೆಹ್ಲೋತ್ ಅವರು ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಕುಶಲೋಪರಿ ವಿಚಾರಿಸಿದರು. ಸಿಎಂ ಜತೆ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಸಚಿವರಾದ ಕೆ.ಜೆ. ಜಾರ್ಜ್, ಬೈರತಿ ಸುರೇಶ್, ಕಾನೂನು ಸಲಹೆಗಾರ ಪೊನ್ನಣ್ಣ, ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ ಪ್ರಭಾಕರ್, ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ, ಎಐಸಿಸಿ ಕಾರ್ಯದರ್ಶಿ ಅಭಿಷೇಕ್ ದತ್ ವಿಮಾನದಲ್ಲಿ ದೆಹಲಿಗೆ ತೆರಳಿದ್ದಾರೆ.

ಅಧಿಕಾರದ ಕೊನೆ ದಿನ ಅಧಿಕಾರಿಗಳ ವರ್ಗಾವರ್ಗಿ

ಬೆಂಗಳೂರು: ಸಿಎಂ ಸಿದ್ದರಾಮಯ್ಯ, ತಮ್ಮ ಅಧಿಕಾರದ ಕೊನೆಯ ದಿನದಂದು ಅತ್ಯಂತ ಮಹತ್ವದ ನಿರ್ಧಾರ ಕೈಗೊಂಡಿದ್ದು, ಮುಖ್ಯಮಂತ್ರಿ ಸಚಿವಾಲಯ ಸೇರಿದಂತೆ ರಾಜ್ಯದ ವಿವಿಧ ಇಲಾಖೆಗಳ ನೂರಾರು ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಸರಕಾರ ಆದೇಶ ಹೊರಡಿಸಿದೆ. ಮಧ್ಯ ರಾತ್ರಿಯೇ ಈ ಬೃಹತ್ ವರ್ಗಾವಣೆ ಪಟ್ಟಿ ಬಿಡುಗಡೆಯಾಗಿದ್ದು, ಇದು ಆಡಳಿತ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ. ಪೊಲೀಸ್ ಇಲಾಖೆ, ಕಂದಾಯ ಇಲಾಖೆ, ಸರ್ವೆ ಇಲಾಖೆ ಸೇರಿದಂತೆ ಹಲವಾರು ಇಲಾಖೆಗಳ ಒಂದು ಸಾವಿರಕ್ಕೂ ಹೆಚ್ಚು ಅಧಿಕಾರಿಗಳ ವರ್ಗಾವಣೆ ಮಾಡಲಾಗಿದೆ. ಇನ್ನು ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ಬೇರೆ ಬೇರೆ ಜಿಲ್ಲೆಗಳ 27 ತಹಶೀಲ್ದಾರ್‌ಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾವಣೆ ಮಾಡಿ ಆದೇಶಿಸಲಾಗಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

'ಹೈಡ್ರೇಟೆಡ್ ಆಗಿರಿ, ಮಧ್ಯಾಹ್ನ ಹೊರಗೆ ಹೋಗಬೇಡಿ'–ಸಾರ್ವಜನಿಕರಿಗೆ ಪಿಎಂ ಮನವಿ

ಸುದ್ದಿ



ಸಮಾಚಾರ ಸಣ್ಣದಲ್ಲ

ಬೆಳೆ ಕಟಾವು ಪ್ರಯೋಗಗಳ ಅನುಷ್ಠಾನಕ್ಕೆ ಡಿಸಿ ಸೂಚನೆ

ತುಮಕೂರು: 2025–26ನೇ ಸಾಲಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬೀಮಾ(ವಿಮಾ) ಯೋಜನೆಗೆ ಬೆಳೆ ಕಟಾವು ಪ್ರಯೋಗಗಳ ಪರಿಣಾಮಕಾರಿ ಅನುಷ್ಠಾನಗೊಳಿಸಲಾಗಿದ್ದು, ಅದೇ ರೀತಿ 2026–27ನೇ ಸಾಲಿನಲ್ಲಿ ಯಾವುದೇ ಪ್ರಯೋಗಗಳು ನಷ್ಟವಾಗದಂತೆ ಕ್ರಮವಹಿಸಲು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಸೂಚಿಸಿದರು. ಗೂಗಲ್ ಮೀಟ್ ಮೂಲಕ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, 2025–26ನೇ ಸಾಲಿನ ಬೆಳೆ ಸಮೀಕ್ಷೆಯ ಶೇ.1ರಷ್ಟು ದತ್ತಾಂಶ ಪರಿಶೀಲನೆಯನ್ನು ಪೂರ್ಣಗೊಳಿ ಸಲಾಗಿದ್ದು, 2026–27ನೇ ಸಾಲಿನ ಬೆಳೆ ಸಮೀಕ್ಷೆಯ ಶೇ.1ರಷ್ಟು ದತ್ತಾಂಶ ಪರಿಶೀಲನೆಯನ್ನು ಸಹ ಪರಿಪೂರ್ಣವಾಗಿ ಅನುಷ್ಠಾನಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ತುಮಕೂರು ಜಿಲ್ಲೆಯಲ್ಲಿ 11ನೇ ಕೃಷಿ ಗಣತಿ ಕಾರ್ಯವು ಯಶಸ್ವಿಯಾಗಿ ಪೂರ್ಣಗೊಂಡಿದೆ. 11ನೇ ಕೃಷಿ ಗಣತಿಯನ್ನು 3 ಹಂತದಲ್ಲಿ ಕೈಗೊಳ್ಳಲಾಗಿದ್ದು, ತುಮಕೂರು ಜಿಲ್ಲೆ ಎಲ್ಲ ಹಂತಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ ಹಾಗೂ ಈಗಾಗಲೇ ಮೂಲ ಕಾರ್ಯಕರ್ತರಿಗೆ 1ನೇ ಹಂತದ ಗೌರವಧನವನ್ನು ಪಾವತಿಸಲಾಗಿದೆ ಹಾಗೂ ಉಳಿದ ಹಂತಗಳಿಗೂ ಕೂಡ ಶೀಘ್ರದಲ್ಲಿ ಗೌರವಧನ ಪಾವತಿಸಲಾಗುವುದು ಎಂದು ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಡಿ.ರಂಗಸ್ವಾಮಿ, ಸಹಾಯಕ ನಿರ್ದೇಶಕ(ಸಾಂಖ್ಯಿಕ) ಸೇರಿದಂತೆ ಕಂದಾಯ, ಕೃಷಿ, ತೋಟಗಾರಿಕೆ, ಆರೋಗ್ಯ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.

ರೋಟರಿ ಮಿಸ್ಟಿ ಹಿಲ್ಸ್ ವತಿಯಿಂದ ಆರೋಗ್ಯ ತಪಾಸಣಾ ಶಿಬಿರ | ಡಾ.ಕೆ.ಟಿ.ರಾಜಶ್ರೀ

ಜಾಲತಾಣಕ್ಕಿಂತ ವೈದ್ಯರ ಮೇಲೆ ವಿಶ್ವಾಸವಿಡಿ

ಮಡಿಕೇರಿ: ಸಾಮಾಜಿಕ ಜಾಲತಾಣಗಳಲ್ಲಿ ಆರೋಗ್ಯ ಸಂರಕ್ಷಣೆಯ ಪ್ರಚಾರದ ಮೂಲಕ ಮಾರುಕಟ್ಟೆ ವ್ಯಾಪಿಸುತ್ತಿರುವ ಈ ದಿನಗಳಲ್ಲಿ ಎಲ್ಲ ರೀತಿಯ ಪ್ರಚಾರವನ್ನೂ ನಂಬುವ ಬದಲಿಗೆ ಸೂಕ್ತ ವೈದ್ಯರ ಸಲಹೆಯಂತೆ ಚಿಕಿತ್ಸೆ ಪಡೆಯಬೇಕೆಂದು ಕೊಡಗು ವೈದ್ಯಕೀಯ ವಿಜ್ಞಾನಗಳ ಮಹಾಸಂಸ್ಥೆಯ ವೈದ್ಯೆ ಡಾ ಕೆ.ಟಿ.ರಾಜಶ್ರೀ ಸಲಹೆ ನೀಡಿದ್ದಾರೆ.

ನಗರದ ರೋಟರಿ ಸಭಾಂಗಣದಲ್ಲಿ ರೋಟರಿ ಮಿಸ್ಟಿ ಹಿಲ್ಸ್ ವತಿಯಿಂದ ಆಯೋಜಿತ ಆರೋಗ್ಯ ಚಿಕಿತ್ಸಾ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಡಾ.ರಾಜಶ್ರೀ, ಹಿಂದಿನ ಕಾಲದಲ್ಲಿ ನೀಡಲಾಗುತ್ತಿದ್ದ ಚಿಕಿತ್ಸೆ ಮತ್ತು ಹಳೇ ಆರೋಗ್ಯ ಪದ್ಧತಿಯನ್ನೇ ನಂಬಿಕೊಂಡಿರಬಾರದು. ಆರೋಗ್ಯ ಪದ್ಧತಿ ಕೂಡ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಹೋಗುತ್ತದೆ ಎಂದರು. ಇಂದಿನ ನವ ತಂತ್ರಜ್ಞಾನದ ಕಾಲದಲ್ಲಿ ಸಾಮಾಜಿಕ ಜಾಲತಾಣಗಳ ಮೂಲಕ ಆರೋಗ್ಯ ಚಿಕಿತ್ಸೆ ಸಂಬಂಧಿತ ಪ್ರಚಾರ ನಡೆಯುತ್ತಿದೆ ಆದರೆ ಇಂಥ ಪ್ರಚಾರವನ್ನು ನಂಬುವ ಬದಲಿಗೆ ಸೂಕ್ತ ವೈದ್ಯರನ್ನು ಮುಖತ ಭೇಟಿಯಾಗಿ ಚಿಕತ್ಸೆ ಪಡೆಯುವುದು ಅಗತ್ಯ ಎಂದುಹೇಳಿದರು. ರೋಟರಿ ಮಿಸ್ಟಿ ಹಿಲ್ಸ್ ಕಾರ್ಯದರ್ಶಿ ಬಿ.ಕೆ.ಕಾರ್ಯಪ್ಪ ವಂದಿಸಿದ ಕಾರ್ಯಕ್ರಮದಲ್ಲಿ ಮಿಸ್ಟಿ ಹಿಲ್ಸ್ ಮುಂದಿನ ಸಾಲಿನ ಅಧ್ಯಕ್ಷ ಪಿ.ಆರ್.ರಾಜೇಶ್, ಕಾರ್ಯದರ್ಶಿ ಡಾ.ಚೇತನ್ ಶೆಟ್ಟಿ ಇನ್ನರ್‌ವೀಲ್ ಸಂಸ್ಥೆಯ ಕಾರ್ಯದರ್ಶಿ ನಮಿತಾ ರೈ, ರೋಟರಿ ವುಡ್ಸ್ ಅಧ್ಯಕ್ಷ ಕಿರಣ್ ಕುಂದರ್, ಕಾರ್ಯದರ್ಶಿ ಪ್ರಮೀಳಾ ಶೆಟ್ಟಿ ಹಾಜರಿದ್ದರು. ತಜ್ಞ ವೈದ್ಯ ಡಾ. ಸಿ.ಆರ್. ಪ್ರಶಾಂತ್, ಡಾ.ರಾಜೇಶ್ವರಿ, ಡಾ.ಚಂದ್ರಶೇಖರ್, ಡಾ. ರಾಕೇಶ್, ಡಾ.ಶುಭಾ ಕೆ.ಜಿ. ಎಸ್.ಎಂ., ಚೇತನ್, ಡಾ. ರಾಜಶ್ರೀ ಡಾ.ನವೀನ್, ಡಾ.ಜಿಶ್ಮಾ ತಪಾಸಣೆ ಕೈಗೊಂಡರು.



ನಗರದ ರೋಟರಿ ಸಭಾಂಗಣದಲ್ಲಿ ರೋಟರಿ ಮಿಸ್ಟಿ ಹಿಲ್ಸ್ ವತಿಯಿಂದ ಆಯೋಜಿತ ಆರೋಗ್ಯ ಚಿಕಿತ್ಸಾ ಶಿಬಿರಕ್ಕೆ ಕೊಡಗು ವೈದ್ಯಕೀಯ ವಿಜ್ಞಾನಗಳ ಮಹಾಸಂಸ್ಥೆಯ ವೈದ್ಯೆ ಡಾ ಕೆ.ಟಿ.ರಾಜಶ್ರೀ ಚಾಲನೆ ನೀಡಿದರು.

‘ಟಚ್ಚಿಂಗ್ ದಿ ಲಿಟಲ್ ಹಾರ್ಟ್ಸ್’ ಯೋಜನೆ ಜಾರಿ

ರೋಟರಿ ಸಂಸ್ಥೆಯಿಂದ ಶ್ರವಣ ಸಮಸ್ಯೆಯಿರುವವರಿಗೆ ದಿ ಗಿಫ್ಟ್ ಆಫ್ ಸೌಂಡ್ ಎಂಬ ಯೋಜನೆ ಜಾರಿಗೊಳಿಸಲಾಗುತ್ತಿದೆ. ಈ ಮೂಲಕ ಶ್ರವ್ಯ ಸಲಕರಣೆಯನ್ನು ದಾನಿಗಳ ಸಹಾಯದಿಂದ ನೀಡಲಾಗುತ್ತದೆ. ಅಂತೆಯೇ, ದೇಶದಲ್ಲಿ ಹೆಚ್ಚುಗಾತ್ತಿರುವ ಮಕ್ಕಳಲ್ಲಿನ ಹೃದ್ರೋಗ ಸಮಸ್ಯೆಯನ್ನು ಗಮನದಲ್ಲಿರಿಸಿಕೊಂಡು ಟಚ್ಚಿಂಗ್ ದಿ ಲಿಟಲ್ ಹಾರ್ಟ್ಸ್ ಎಂಬ ಯೋಜನೆ ಜಾರಿಗೊಳ್ಳಲಿದೆ. ಅಗತ್ಯವುಳ್ಳ ಮಕ್ಕಳಿಗೆ ರೋಟರಿ ವತಿಯಿಂದ ಉಚಿತವಾಗಿ ಹೃದ್ರೋಗ ಶಸ್ತ್ರಚಿಕಿತ್ಸೆ ನೆರವೇರಿಸಲಾಗುತ್ತದೆ. ರೋಟರಿ ಸಂಸ್ಥೆಯ ಪ್ರಯತ್ನದಿಂದಾಗಿಯೇ ಜಾಗತಿಕವಾಗಿ ಪೋಲಿಯೋ ನಿರ್ಮೂಲನೆ ಸಾಧ್ಯವಾಗಿದೆ. ಪ್ರಸ್ತುತ ಪಾಕಿಸ್ತಾನದಲ್ಲಿ ಪೋಲಿಯೋದ 1 ಪ್ರಕರಣ ಹೊರತುಪಡಿಸಿದಂತೆ ಪ್ರಪಂಚ ಪೋಲಿಯೋ ಮುಕ್ತವಾಗಿದೆ. ಎಂದು ರೋಟರಿ ಜಿಲ್ಲೆ 3181 ನ ಪಬ್ಲಿಕ್ ಇಮೇಜ್ ಸಮಿತಿ ಉಪಾಧ್ಯಕ್ಷ ಅನಿಲ್ ಎಚ್.ಟಿ. ಹೇಳಿದರು.

ಪ್ರತಿ ವರ್ಷ ರೋಟರಿ ಹಿಲ್ಸ್ ವತಿಯಿಂದ ಆರೋಗ್ಯ ಚಿಕಿತ್ಸಾ ಶಿಬಿರ ಆಯೋಜಿಸಲಾಗುತ್ತಿದ್ದು, ಈ ಬಾರಿಯೂ ಮಡಿಕೇರಿ, ರೋಟರಿ ವುಡ್ಸ್ ಮತ್ತು ಇನ್ನರ್‌ವೀಲ್ ಸಂಸ್ತೆಗಳ ಸದಸ್ಯರು ಮತ್ತು ಕುಟುಂಬ ವರ್ಗದವರಿಗೆ ಆರೋಗ್ಯ ತಪಾಸಣೆಯನ್ನು ಹಮ್ಮಿಕೊಳ್ಳಲಾಗಿದೆ.
–ರತ್ನಾಕರ್ ರೈ, ಅಧ್ಯಕ್ಷ, ರೋಟರಿ ಮಿಸ್ಟಿ ಹಿಲ್ಸ್

ಈ ಬಾರಿ ಸಚಿವ ಸ್ಥಾನ ಸಿಗುವ ವಿಶ್ವಾಸವಿದೆ: ಶಾಸಕ ಷಡಕ್ಷರಿ

ತುಮಕೂರು: ತಾವು ಹಿರಿಯ ನಾಯಕನಾಗಿದ್ದು, ಈ ಬಾರಿ ಸಚಿವ ಸ್ಥಾನ ಸಿಗುವ ಸಂಪೂರ್ಣ ವಿಶ್ವಾಸವಿದೆ ಎಂದು ಶಾಸಕ ಕೆ.ಷಡಕ್ಷರಿ ಪರೋಕ್ಷವಾಗಿ ತಮ್ಮ ಇಂಗಿತ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ನಾನು ಕಳೆದ 40 ವರ್ಷಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ನಿಷ್ಠೆಯಿಂದ ದುಡಿದಿದ್ದೇನೆ. ವೀರೇಂದ್ರ ಪಾಟೀಲರ ಕಾಲದಿಂದಲೂ ಪಕ್ಷ ಸಂಘಟನೆ ಮಾಡಿಕೊಂಡು ಬಂದಿ ದ್ದೇನೆ. ನಾನು ಯಾರನ್ನೂ ವಿರೋಧಿಸಿಲ್ಲ. ಹಳೇ ಮೈಸೂರು ಭಾಗದಲ್ಲಿ ನಾನೊಬ್ಬನೇ ಏಕೈಕ ಲಿಂಗಾಯತ ಶಾಸಕನಾಗಿದ್ದೇನೆ.

ಹಾಗಾಗಿ ಹೈಕಮಾಂಡ್ ನನ್ನ ಹಿರಿತನವನ್ನು ಗುರುತಿಸಿ ಸಚಿವ ಸ್ಥಾನ ನೀಡಬಹುದು ಎಂಬ ಭಾವನೆ ನನಗಿದೆ. ಈ ಹಿಂದೆ ಸಿದ್ದರಾಮಯ್ಯನವರೇ ನನಗೆ ಸಹಕಾರಿ ಖಾತೆಯನ್ನು ನೀಡಲು ಮುಂದಾಗಿದ್ದರು. ಈ ಬಾರಿ ನಾನು ಸಚಿವನಾಗುತ್ತೇನೆಂಬ ಭರವಸೆ ಇದೆ ಎಂದರು.

ಸಿದ್ದರಾಮಯ್ಯನವರು 8 ವರ್ಷ ಎಲ್ಲರನ್ನೂ ಒಟ್ಟಿಗೆ ಕರೆದುಕೊಂಡು ಹೋಗಿ ಉತ್ತಮ ಆಡಳಿತ ನೀಡಿದ್ದಾರೆ. ಅವರ ಅವಶ್ಯಕತೆ ಕೇವಲ ರಾಜ್ಯಕ್ಕಷ್ಟೇ ಅಲ್ಲ, ರಾಷ್ಟ್ರಕ್ಕೂ ಇದೆ. ಸಿದ್ದರಾಮಯ್ಯನವರು ರಾಷ್ಟ್ರ ರಾಜಕಾರಣಕ್ಕೆ ಹೋಗುವುದು ದೇಶದ ದೃಷ್ಟಿಯಿಂದ ಅತ್ಯಗತ್ಯವಾಗಿದೆ ಎಂದರು.

ಡಿಕೆಶಿ ಅವರ ಆಸೆ ಇವತ್ತು ಈಡೇರುತ್ತಿದೆ. ಡಿಕೆಶಿ ಅವರ ಮಾತು ಸ್ವಲ್ಪ ಒರಟಾಗಿ ಕಾಣಿಸಬಹುದು ಆದರೆ ಅವರ ಸ್ವಭಾವ ಅತ್ಯಂತ ಮೃದು. ನೊಣವಿನಕೆರೆ ಅಜ್ಜಯ್ಯನವರ ಆಶೀರ್ವಾದ ಡಿಕೆಶಿ ಮೇಲೆ ಸದಾ ಇರಲಿದೆ. ಎಂತಹದ್ದೇ ಕಷ್ಟದ ಪರಿಸ್ಥಿತಿ ಬಂದರೂ ದೇವರು ಅವರನ್ನು ಕೈಬಿಡುವುದಿಲ್ಲ ಎಂದು ಭವಿಷ್ಯ ನುಡಿದರು.

ಇತಿಹಾಸ ನೆನೆದ ಶಾಸಕರು

ಸಿದ್ದರಾಮಯ್ಯನವರ ಆರಂಭದ ದಿನಗಳನ್ನು ನೆನಪಿಸಿಕೊಂಡ ಶಾಸಕರು, ಹಿಂದೆ ದೇವೇಗೌಡರು ಸಿದ್ದರಾಮಯ್ಯ ಅವರನ್ನು ಜೆಡಿಎಸ್‌ನಿಂದ ಹೊರಹಾಕಿದಾಗ, ಅವರನ್ನು ಕಾಂಗ್ರೆಸ್ ಪಾರ್ಟಿಗೆ ಸೇರಿಸಿಕೊಳ್ಳಿ ಎಂದು ಅಂದಿನ ಹಿರಿಯ ನಾಯಕ ಎಸ್.ಎಂ.ಕೃಷ್ಣ ಅವರು ಹೇಳಿದ್ದರು ಎಂಬ ಹಳೆಯ ರಾಜಕೀಯ ಇತಿಹಾಸವನ್ನು ಬಿಚ್ಚಿಡುವ ಮೂಲಕ ತಾವು ಎಷ್ಟು ಹಳೆಯ ನಾಯಕ ಎಂಬುದನ್ನು ಪರೋಕ್ಷವಾಗಿ ನೆನಪಿಸಿದರು.

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ. ಎಫ್.ಸಿ ರವರ ನ್ಯಾಯಲಯ, ಮಧುಗಿರಿ
ಸಿಮಿಸ್ ಸಂಖ್ಯೆ–149/2026

ಅರ್ಜಿದಾರರು: 1.ಗುರಮ್ಮ ಕೋಂ. ಸುಬ್ಬರಾಯಪ್ಪ–55 ವರ್ಷ, ಕೋರೆನಹಳ್ಳಿ, ಪೆರಸಂದ್ರ ಹೋಬಳಿ ಚಿಕ್ಕಬಳ್ಳಾಪುರ ತಾಲೂಕು ಮತ್ತು ಜಿಲ್ಲೆ,
2.ಕೃಷ್ಣಪ್ಪ ಬಿನ್ ಲೇಟ್ ಗಂಗಪ್ಪ–55 ವರ್ಷ, ಬಟ್ಟಗೆರೆ ಗ್ರಾಮ,ಪುರವರ ಹೋಬಳಿ ಮಧುಗಿರಿ ತಾಲೂಕು ತುಮಕೂರು ಜಿಲ್ಲೆ.

ವಿರುದ್ಧ

ಎದುರುದಾರರು: ಉಪತಹಸಿಲ್ದಾರ್ ನಾಡಕಚೇರಿ, ಪುರವರ ಹೋಬಳಿ, ಮಧುಗಿರಿ ತಾಲೂಕು.

ಪ್ರಕಟಣೆ

ಮೇಲ್ಕಂಡ 1ನೇ ಅರ್ಜಿದಾರರ ಮಾವ ಮತ್ತು 2ನೇ ಅರ್ಜಿದಾರರ ತಂದೆಯಾದ ಗಂಗಪ್ಪ ಬಿನ್ ಲೇಟ್ ರಂಗಪ್ಪರವರು ದಿನಾಂಕ–20–07–1970 ರಂದು ಮಧುಗಿರಿ ತಾಲೂಕು, ಪುರವರ ಹೋಬಳಿ, ಬಟ್ಟಗೆರೆ ಗ್ರಾಮದಲ್ಲಿ ಮರಣ ಹೊಂದಿದ್ದು, ಈ ಮೇಲ್ಕಂಡ ಅರ್ಜಿದಾರರು ಸದರಿ ಮೃತರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮೃತರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ–01/07/2026 ರಂದು ಬೆಳಿಗ್ಗೆ 11–00 ಗಂಟೆಗೆ ಖುದ್ದು ತಾವಾಗಲಿ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. 2026ನೇ ವರ್ಷದ ಮೇ ತಿಂಗಳ 27ನೇ ದಿನ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ, ನ್ಯಾಯಾಲಯದ ಮೊಹರಿನೊಂದಿಗೆ
ಶಿರಸ್ತೇದಾರರು.
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಮಧುಗಿರಿ.
ಅರ್ಜಿದಾರರ ಪರ ವಕೀಲರು.
ಕೆ.ಜೆ ಲಕ್ಷ್ಮಿ ನಾರಾಯಣಪ್ಪ
ವಕೀಲರು, ಮಧುಗಿರಿ

ಗುಡಿಬಂಡೆಯಲ್ಲಿ ಸಸಿ ನೆಟ್ಟು ಬಕ್ರೀದ್ ಆಚರಣೆ

ಗುಡಿಬಂಡೆ: ಪಟ್ಟಣದ ಸೇರಿದಂತೆ ತಾಲೂಕಿನ ವಿವಿಧ ಕಡೆ ಮುಸ್ಲಿಂ ಬಾಂಧವರು ತ್ಯಾಗ ಮತ್ತು ಬಲಿದಾನಗಳ ಸಂಕೇತದ ಬಕ್ರೀದ್ ಹಬ್ಬವನ್ನು ಶ್ರದ್ಧಾ ಮತ್ತು ಭಕ್ತಿಯಿಂದ ಆಚರಿಸಿದರು.

ಪಟ್ಟಣದ ಪವಿತ್ರ ಪ್ರಾರ್ಥನಾ ಸ್ಥಳವಾದ ನಮಾಜ್ ಬಂಡೆ ಮತ್ತು ಸ್ಮಶಾನಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸಿದರು. ಲೋಕದ ಶಾಂತಿಗೆ ಹಾಗೂ ಮಾಡಿದ ತಪ್ಪಿಗೆ ಪರಿಹಾರಕ್ಕೆ ಈದ್ ಹಬ್ಬದ ಪ್ರಾರ್ಥನೆ ಹೊಸತನ ನೀಡಲಿದೆ ಎಂಬ ಭಾವನೆಯಿಂದ ಪುಟಾಣಿ ಮಕ್ಕಳು, ಯುವಕರು ಹಾಗೂ ಹಿರಿಯ ನಾಗರೀಕರು ಈ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಿ ಪರಸ್ಪರ ಅಪ್ಪಿಕೊಂಡು ಹಬ್ಬದ ಸಂತೋಷವನ್ನು ಹಂಚಿಕೊಂಡರು.

ಇನ್ನೂ ಪುಟಾಣಿ ಮಕ್ಕಳು ಹಬ್ಬದ ಪ್ರಯುಕ್ತ ಬಣ್ಣ ಬಣ್ಣದ ಸುಂದರ ವಸ್ತ್ರವಿನ್ಯಾಸವನ್ನು ಹೊಂದಿರುವ ಉಡುಪುಗಳನ್ನು ಧರಿಸಿ, ಹೆಣ್ಣು ವಿವಿಧ ಬಣ್ಣದ ಬಳೆಗಳನ್ನು ಧರಿಸಿಕೊಂಡು ಸಭ್ರಮದಿಂದ ಸಿಹಿ ಹಂಚಿ ಬಂಧು ಮತ್ತು ಮಿತ್ರರೊಂದಿಗೆ ರಂಜಾನ್ ಹಬ್ಬವನ್ನು ಆಚರಿಸಿದರು. ಪಟ್ಟಣದ ಈದ್ಗಾ ಮೈದಾನದಲ್ಲಿ ಮುಸ್ಲೀಂ ಬಾಂದವರು ಸಾವಿರಾರು ಸಂಖ್ಯೆಯಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಮುಖ್ಯ ರಸ್ತೆಯಲ್ಲಿ ಹೊರಟು ಹಿರಿಯರ ಸಮಾಧಿಗಳ ಬಳಿ ಪ್ರಾರ್ಥನೆ ಸಲ್ಲಿಸಿ, ಹಬ್ಬದ ಶುಭಾಷಯಗಳನ್ನು ಹಂಚಿಕೊಂಡರು.

ಇನ್ನೂ ಪರಿಸರ ವೇದಿಕೆ ವತಿಯಿಂದ ಬಕ್ರೀದ್ ಹಬ್ಬದ ಪ್ರಯುಕ್ತ ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಜಿಲ್ಲಾ ಪರಿಸರ ವೇದಿಕೆ ಅಧ್ಯಕ್ಷ ಡಾ.ಗುಂಪು ಮರದ ಆನಂದ ಮಾತನಾಡಿ, ಬಕ್ರೀದ್ ಪ್ರವಾದಿ ಇಬ್ರಾಹಿಂ ಅವರ ಅಚಲ ಭಕ್ತಿ ಮತ್ತು ತ್ಯಾಗವನ್ನು ಸ್ಮರಿಸುವ ಇಸ್ಲಾಂ ಧರ್ಮದ ಅತ್ಯಂತ ಪವಿತ್ರವಾದ ಹಬ್ಬವಾಗಿದೆ. ಇದು ಅಲ್ಲಾನ ಮೇಲಿನ ಪ್ರೀತಿಗಾಗಿ ತಮ್ಮ ಪ್ರಾಣಕ್ಕಿಂತಲೂ ಪ್ರಿಯವಾದದ್ದನ್ನು ತ್ಯಾಗ ಮಾಡಲು ಸಿದ್ಧರಿರುವ ನಿಸ್ವಾರ್ಥತೆಯ ಹಾಗೂ ಮಾನವೀಯ ಸಂದೇಶವನ್ನು ಸಾರುತ್ತದೆ ಎಂದು ತಿಳಿಸಿದ ಅವರು, ಪ್ರತಿ ವಿಶೇಷ ದಿನಗಳಂದು ಪ್ರತಿಯೊಬ್ಬರೂ ಸಸಿ ನೆಡುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು ಎಂದರು.

ಪಟ್ಟಣದ ಪವಿತ್ರ ಪ್ರಾರ್ಥನಾ ಸ್ಥಳವಾದ ನಮಾಜ್ ಬಂಡೆಯ ಬಳಿ ಬಕ್ರೀದ್ ಹಬ್ಬದ ಅಂಗವಾಗಿ ಮುಸ್ಲಿಂ ಬಾಂದವರು ಸಾಮೂಹಿಕ ಪ್ರಾರ್ಥನೆ ಮಾಡಲಾಯಿತು.

ಶಿಕ್ಷಕರಿಗೆ ಡಿಜಿಟಲ್ ಹಾಜರಾತಿ ಸಡಿಲಿಕೆಗೆ ಮನವಿ

ಬಾಗೇಪಲ್ಲಿ: ರಾಜ್ಯದಲ್ಲಿ ಹೊಸ ಶೈಕ್ಷಣಿಕ ವರ್ಷದ ಆರಂಭವಾಗುತ್ತಿದ್ದು, ಶಾಲೆ ಆರಂಭದ ಮೊದಲ ದಿನದಿಂದಲೇ ಕರ್ನಾಟಕ ಅಡ್ವಾನ್ಸ್ ಮ್ಯಾನೇಜಮೆಂಟ್ ಸಿಸ್ಟಮ್ ತಂತ್ರಾಂಶದ ಮೂಲಕ ಶಿಕ್ಷಕರಿಗೆ ಡಿಜಿಟಲ್ ಹಾಜರಾತಿ ವ್ಯವಸ್ಥೆ ಮಾಡಲು ಶಿಕ್ಷಣ ಇಲಾಖೆ ಮುಂದಾಗಿದೆ.

ಶಿಕ್ಷಕರಿಗೆ ಡಿಜಿಟಲ್ ಹಾಜರಾತಿ ಕಡ್ಡಾಯವಾಗಿ ಅನುಷ್ಠಾನಗೊಳಿಸಲು ಶಿಕ್ಷಣ ಇಲಾಖೆ ಆದೇಶಿಸಿದೆ. ಆದರೆ, ಇದರಿಂದ ಬಾಗೇಪಲ್ಲಿ ತಾಲೂಕಿನ ಗಡಿಭಾಗದ ಶಾಲಾ ಶಿಕ್ಷಕರಿಗೆ ತಾಂತ್ರಿಕ ಹಾಗೂ ವಿವಿಧ ಸಮಸ್ಯೆಗಳು ಎದುರಾಗಲಿವೆ. ಹಾಗಾಗಿ ಇಲಾಖೆಯು ನಿಯಮ ಸಡಿಲಿಕೆ ಕೋರಿ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಹಾಗೂ ಕಾರ್ಯದರ್ಶಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸಿ.ವೆಂಕಟರಾಯಪ್ಪ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿಕ್ಷಕರಿಗೆ ನೂತನ ಹಾಜರಾತಿ ವ್ಯವಸ್ಥೆ ಸ್ವಾಗತಾರ್ಹ. ಗುಣಾತ್ಮಕ ಶಿಕ್ಷಣವನ್ನು ಇನ್ನಷ್ಟು ಬಲವರ್ಧನೆಗೊಳಿಸಲು ಸಹಕಾರಿಯಾಗಲಿದೆ. ಗ್ರಾಮೀಣ ಪ್ರದೇಶದ ಕೆಲ ಗ್ರಾಮಗಳಲ್ಲಿ ನೆಟ್ ವರ್ಕ್ ಸರಿಯಾಗಿ ಬರುವುದಿಲ್ಲ. ಕೆಲ ಗ್ರಾಮಗಳಿಗೆ ಬಸ್ ವ್ಯವಸ್ಥೆ ಇಲ್ಲದಿರುವುದರಿಂದ ಸಮಯಕ್ಕೆ ಸರಿಯಾಗಿ ಹೋಗುವುದು ತಡವಾದರೆ ಗೈರು ಆಗುವ ಸಾಧ್ಯತೆ ಇದೆ. ಇಂತಹ ಸಮಸ್ಯೆಗಳಿಗೆ ಗಮನದಲ್ಲಿಟ್ಟುಕೊಂಡು ಪರ್ಯಾಯ ಹಾಜರಾತಿ ವ್ಯವಸ್ಥೆಯನ್ನು ಕಲ್ಪಿಸಬೇಕೆಂದು ಒತ್ತಾಯಿಸಿದರು.

ಶಿಕ್ಷಕರ ಆಕ್ಷೇಪ: ಕಾಮ್ಸ್ ವ್ಯವಸ್ಥೆಗೆ ಕೆಲ ಶಿಕ್ಷಕರು ಆಕ್ಷೇಪ ಹಾಗೂ ಆತಂಕ ವ್ಯಕ್ತಪಡಿಸಿದ್ದಾರೆ. ಕೆಲವು ಗ್ರಾಮೀಣ ಪ್ರದೇಶದಲ್ಲಿ ಸಮಯಕ್ಕೆ ಸರಿಯಾಗಿ ಶಾಲೆಗೆ ತೆರಳಲು ಸಮರ್ಪಕ ಬಸ್ ವ್ಯವಸ್ಥೆ ಇರುವುದಿಲ್ಲ. ನೆಟ್‌ವರ್ಕ್ ಕೂಡ ಸರಿಯಾಗಿ ಬರುವುದಿಲ್ಲ. ಇಂತಹ ಸಂದರ್ಭದಲ್ಲಿ ಲಾಗಿನ್ ಆಗುವುದು ಹೇಗೆ? ಇದರಿಂದ ಶಿಕ್ಷಕರು ಕರ್ತವ್ಯಕ್ಕೆ ಹಾಜರಾದರೂ ಗೈರು ತೋರಿಸುವ ಸಾಧ್ಯತೆ ಇದೆ. ಇಂತಹ ತಾಂತ್ರಿಕ ತೊಂದರೆ ನಿವಾರಣೆಗೆ ಆದ್ಯತೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಒಂದು ವೇಳೆ ಮೊಬೈಲ್ ಮನೆಯಲ್ಲಿ ಮರೆತು ಬಂದರೆ ಅಥವಾ ಶಾಲೆಗೆ ಬರುವಾಗ ಮೊಬೈಲ್ ಕಳುವಾದರೆ ಇಲ್ಲವೇ ಮೊಬೈಲ್ ಹಾಳಾದರೆ, ಎಲ್ಲಕ್ಕಿಂತ ಮುಖ್ಯವಾಗಿ ಸ್ಮಾರ್ಟ್ ಫೋನ್ ಇಲ್ಲದವರು ಇದನ್ನು ಹೇಗೆ ನಿರ್ವಹಿಸಬೇಕು? ಎಂಬುದು ಶಿಕ್ಷಕರ ಪ್ರಶ್ನೆ.

ಟಾಟಾ ಕ್ಯಾಪಿಟಲ್ ಲಿಮಿಟೆಡ್
ನೋಂ. ಕಚೇರಿ: ಟವರ್ ಎ, 11ನೇ ಮಹಡಿ, ಪೆನಿನ್ಸುಲಾ ಬ್ಯುಸಿನೆಸ್ ಪಾರ್ಕ್, ಗಣಪತ್ರಾವ್ ಕದಮ್ ಮಾರ್ಗ್, ಲೋವರ್ ಪರೇಲ್ ಮುಂಬೈ – 400 013.
ಸಂದೇಶ್ ಆರ್ಕೆಡ್ 2ನೇ ಮಹಡಿ, ನಂ. 74, 17ನೇ ಮೈನ್, ಸಾಹುಕಾರ್ ಚೆನ್ನಯ್ಯ ರಸ್ತೆ, ಕುವೆಂಪುನಗರ ಉತ್ತರ, ಸರಸ್ವತಿಪುರಂ, ಮೈಸೂರು, ಕರ್ನಾಟಕ–570009

ಸ್ಥಿರ ಆಸ್ತಿ ಮಾರಾಟದ ಸೂಚನೆ
(ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002 ರ ನಿಯಮ 8(6) ಮತ್ತು ನಿಯಮ 9(1) ರ ಅಡಿಯಲ್ಲಿ)

ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ, 20002ರ ಅಡಿ ನಿಯಮ 8(6) ಮತ್ತು ನಿಯಮ 9(1) ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002ರ ಅಡಿ ಸ್ಥಿರಾಸ್ತಿಗಳ ಮಾರಾಟಕ್ಕಾಗಿ 30 ದಿನಗಳ ಇ–ಹರಾಜು ಸೂಚನೆ.

ಸಾಲ ಖಾತೆ ಸಂಖ್ಯೆ: TCFLA0455000011789493:21781477: ಶ್ರೀ ರಾಹುಲ್ ಚಾವ್ಲಾ ಪಿ

ಈ ಮೂಲಕ ತಿಳಿಸುವುದೇನೆಂದರೆ, ಟಾಟಾ ಕ್ಯಾಪಿಟಲ್ ಲಿಮಿಟೆಡ್ (ಟಿಸಿಎಲ್) ಒಂದು ಬ್ಯಾಂಕೇತರ ಹಣಕಾಸು ಕಂಪನಿಯಾಗಿದ್ದು, ಕಂಪನಿಗಳ ಕಾಯ್ದೆ, 1956 ರ ನಿಬಂಧನೆಗಳ ಅಡಿಯಲ್ಲಿ ನೋಂದಾಯಿಸಲ್ಪಟ್ಟಿದೆ. ಇದರ ನೋಂದಾಯಿತ ಕಚೇರಿಯು ಪೆನಿನ್ಸುಲಾ ಬಿಸಿನೆಸ್ ಪಾರ್ಕ್, ಟವರ್ ಎ, 11ನೇ ಮಹಡಿ, ಗಣಪತರಾವ್ ಕದಂ ಮಾರ್ಗ, ಲೋವರ್ ಪರೇಲ್, ಮುಂಬೈ–400013 ರಲ್ಲಿದ್ದು, ಇತರ ಸ್ಥಳಗಳ ಜೊತೆಗೆ ಕೇರಳದಲ್ಲಿಯೂ ಶಾಖಾ ಕಚೇರಿಯನ್ನು ಹೊಂದಿದೆ ("ಶಾಖೆ").ದಿನಾಂಕ 24.11.2023 ರ ಆದೇಶಗಳ ಪ್ರಕಾರ, ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ (ಎನ್‌ಸಿಎಲ್‌ಟಿ) ಮುಂಬೈ, ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್ ("ಟಿಸಿಎಫ್‌ಎಲ್") ಮತ್ತು ಟಾಟಾ ಕ್ಲೀನ್‌ಟೆಕ್ ಕ್ಯಾಪಿಟಲ್ ಲಿಮಿಟೆಡ್ ("ಟಿಸಿಸಿಎಲ್") ಇವುಗಳನ್ನು ವರ್ಗಾವಣೆದಾರ ಕಂಪನಿಗಳಾಗಿ ಮತ್ತು ಟಾಟಾ ಕ್ಯಾಪಿಟಲ್ ಲಿಮಿಟೆಡ್ ("ಟಿಸಿಎಲ್") ಅನ್ನು ವರ್ಗಾವಣೆ ಸ್ವೀಕರಿಸುವ ಕಂಪನಿಯಾಗಿ ಇರಿಸಿ, ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 230 ರಿಂದ 232 ಮತ್ತು ಸೆಕ್ಷನ್ 66 ಹಾಗೂ ಇತರ ಅನ್ವಯವಾಗುವ ನಿಬಂಧನೆಗಳ ಅಡಿಯಲ್ಲಿ ವ್ಯವಸ್ಥೆ ಯೋಜನೆಯನ್ನು ("ಹೇಳಲಾದ ಯೋಜನೆ") ಸಕ್ರಮವಾಗಿ ಅನುಮೋದಿಸಿದೆ.ಅದರ ಪ್ರಕಾರ, ಟಿಸಿಎಫ್‌ಎಸ್‌ಎಲ್ ಮತ್ತು ಟಿಸಿಸಿಎಲ್ (ವರ್ಗಾವಣೆದಾರ ಕಂಪನಿಗಳು) ತಮ್ಮ ಎಲ್ಲಾ ಉದ್ಯಮ, ಆಸ್ತಿ, ಹಕ್ಕುಗಳು, ಪ್ರಯೋಜನಗಳು, ಹಿತಾಸಕ್ತಿ, ಕರ್ತವ್ಯಗಳು, ಬಾಧ್ಯತೆಗಳು, ಹೊಣೆಗಾರಿಕೆಗಳು, ಒಪ್ಪಂದಗಳು, ಕರಾರುಗಳು, ಭದ್ರತೆಗಳು ಇತ್ಯಾದಿ ಸಹಿತ ಟಿಸಿಎಲ್ ನೊಂದಿಗೆ ಚಾಲ್ತಿ ಉದ್ಯಮವಾಗಿ ದಿನಾಂಕ 01.01.2024 ರಿಂದ ವಿಲೀನಗೊಂಡಿವೆ.

ಹೇಳಲಾದ ಆದೇಶ ಮತ್ತು ಯೋಜನೆಯ ಅನ್ವಯ, ಟಿಸಿಎಫ್‌ಎಸ್‌ಎಲ್ ನಿಂದ ಕಾರ್ಯಗತಗೊಳಿಸಲ್ಪಟ್ಟ ಎಲ್ಲಾ ಸೌಲಭ್ಯ ದಾಖಲೆಗಳು ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲಾ ಬಾಕಿಗಳು ಅರ್ಜಿದಾರ ಕಂಪನಿಗೆ ವರ್ಗಾಯಿಸಲ್ಪಟ್ಟಿವೆ. ಆದ್ದರಿಂದ ಟಿಸಿಎಲ್ ಅಧಿಕೃತವಾಗಿ [ಸಾಲಗಾರರು/ಸಹ–ಸಾಲಗಾರರಿಂದ] ಅದನ್ನು ಕ್ಲೈಮ್ ಮಾಡಲು ಅರ್ಹವಾಗಿದೆ.

ಸಾರ್ವಜನಿಕರಿಗೆ ಸಾಮಾನ್ಯವಾಗಿ ಮತ್ತು ವಿಶೇಷವಾಗಿ ಕೆಳಕಂಡ ಸಾಲಗಾರ/ಸಹ–ಸಾಲಗಾರರಿಗೆ ಈ ಮೂಲಕ ನೋಟೀಸು ನೀಡುವುದೇನೆಂದರೆ, ಟಾಟಾ ಕ್ಯಾಪಿಟಲ್ ಲಿಮಿಟೆಡ್‌ಗೆ (ಪೂರಕ ಭದ್ರತಾದಾರ/ಟಿಸಿಎಲ್) ಅಡಮಾನ ಇಟ್ಟಿರುವ ಕೆಳಕಂಡ ಸ್ಥಿರ ಆಸ್ತಿಯ ಸ್ವಾಧೀನವನ್ನು, ಸೆಕ್ಯುರಿಟೈಸೇಶನ್ ಮತ್ತು ಹಣಕಾಸು ಆಸ್ತಿಗಳ ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002 ಸರ್ಫೇಸಿ ಕಾಯ್ದೆ) (ಸಂಖ್ಯೆ 54/2002) ರ ಸೆಕ್ಷನ್ 13(2) ರ ಅಡಿಯಲ್ಲಿ ನೋಟೀಸು ನೀಡಿ, ಟಾಟಾ ಕ್ಯಾಪಿಟಲ್ ಲಿಮಿಟೆಡ್‌ನ (ಭದ್ರತಾ ಸಾಲಗಾರ) ಅಧಿಕೃತ ಅಧಿಕಾರಿಯು ಸ್ವಾಧೀನಪಡಿಸಿಕೊಂಡಿರುತ್ತಾರೆ. ಕೆಳಕಂಡ ಸ್ಥಿರ ಆಸ್ತಿಗಳನ್ನು ದಿನಾಂಕ 14ನೇ ಜುಲೈ 2026 ರಂದು "ಇರುವ ಸ್ಥಳದಲ್ಲಿ ಇರುವಂತೆ" ಮತ್ತು "ಇರುವಂತೆ, ಏನಿದೆಯೋ ಅದರಂತೆ ಮತ್ತು ಏನೇ ಇದ್ದರೂ ಹಿಂದಿರುಗಿಸದ ಆಧಾರದ ಮೇಲೆ" ಮಾರಾಟ ಮಾಡಲಾಗುವುದು.

ಭದ್ರತಾ ಆಸ್ತಿಯ ಮಾರಾಟವನ್ನು ಭದ್ರತಾ ಸಾಲವನ್ನು ವಸೂಲು ಮಾಡಲು ಮಾಡಲಾಗುತ್ತಿದ್ದು, ದಿನಾಂಕ 25–05–2026 ರಂತೆ ಸಾಲಗಾರ ಮತ್ತು ಸಹ–ಸಾಲಗಾರರು/ಜಾಮೀನುದಾರರಿಂದ ಒಟ್ಟು ರೂ.1,04,90,023/– (ಒಂದು ಕೋಟಿ ನಾಲ್ಕು ಲಕ್ಷ ತೊಂಬತ್ತು ಸಾವಿರ ಇಪ್ಪತ್ತಮೂರು ರೂಪಾಯಿ ಮಾತ್ರ) ಬಾಕಿ ಇರುತ್ತದೆ. ಅಂದರೆ ಸಾಲ ಖಾತೆ ಸಂಖ್ಯೆ TCFLA0455000011789493 ರಲ್ಲಿ ರೂ. 22,19,200.00/– ಮತ್ತು ಸಾಲ ಖಾತೆ ಸಂಖ್ಯೆ 21781477 ರಲ್ಲಿ ರೂ. 82,70,823/– ಬಾಕಿ ಇರುತ್ತದೆ.

ಸಾಲಗಾರರು ಮತ್ತು ಸಹ–ಸಾಲಗಾರರು/ಜಾಮೀನುದಾರರ ವಿವರ:
(1) ಶ್ರೀ ರಾಹುಲ್ ಚಾವ್ಲಾ ಪಿ, ಬಿನ್‌ಪಲಜ್ ಚಾವ್ಲಾ, ನಂ. 301, ಸಂಕಲ್ಪ ಸೆಂಟ್ರಲ್ ಪಾರ್ಕ್, ಗೆರೇನಿಯಂ, ಯಾದವಗಿರಿ, ಮೈಸೂರು, ಕರ್ನಾಟಕ, ಪಿನ್–570020, ಮೊಬೈಲ್–9886451986.
(2) ಶ್ರೀ ರಾಹುಲ್ ಚಾವ್ಲಾ ಪಿ, ಬಿನ್ ಪಲಜ್ ಚಾವ್ಲಾ, ರಾಹುಲ್ಸ್ ಕಾರ್ ಸ್ಪಾ & ಟೈರ್ ಕೇರ್, ಶೆಡ್ ನಂ ಸಿ–57, ಯಾದವಗಿರಿ ಕೈಗಾರಿಕಾ ಪ್ರದೇಶ, ಯಾದವಗಿರಿ, ಮೈಸೂರು, ಕರ್ನಾಟಕ, ಪಿನ್–570020, ಮೊಬೈಲ್–9886451986.
(3) ಶ್ರೀಮತಿ ನೇಹಾ ಚಾವ್ಲಾ, ಬಿನ್ ಠಾಕೂರದಾಸ್ ರಾಜಪಾಲ್, ಕೋಂ ಪಲಜ್ ಚಾವ್ಲಾ, ನಂ. 301, ಸಂಕಲ್ಪ ಸೆಂಟ್ರಲ್ ಪಾರ್ಕ್, ಗೆರೇನಿಯಂ, ಯಾದವಗಿರಿ, ಮೈಸೂರು, ಕರ್ನಾಟಕ, ಪಿನ್–570020, ಮೊಬೈಲ್–9886451986.
(4) ಮೆ. ರಾಹುಲ್ಸ್ ಕಾರ್ ಸ್ಪಾ & ಟೈರ್ ಕೇರ್, ಪ್ರತಿನಿಧಿಸುತ್ತಿರುವ ಇದರ ಮಾಲೀಕ ಶ್ರೀ ರಾಹುಲ್ ಚಾವ್ಲಾ, ಶೆಡ್ ನಂ ಸಿ–57, ಯಾದವಗಿರಿ ಕೈಗಾರಿಕಾ ಪ್ರದೇಶ, ಯಾದವಗಿರಿ, ಮೈಸೂರು, ಕರ್ನಾಟಕ, ಪಿನ್–570020, ಮೊಬೈಲ್–9886451986.

ಈ ಮೂಲಕ ತಿಳಿಸುವುದೇನೆಂದರೆ, ಮಾರಾಟವನ್ನು ಮುಂದೂಡದ ಅಥವಾ ರದ್ದುಗೊಳಿಸದ ಹೊರತು, ಹೇಳಲಾದ ಆಸ್ತಿಯನ್ನು ದಿನಾಂಕ 14ನೇ ಜುಲೈ 2026 ರಂದು ಮಧ್ಯಾಹ್ನ 2.00 ಗಂಟೆಗೆ ಟಿಸಿಎಲ್ ನಿಂದ ಇ–ಹರಾಜು ಮೂಲಕ ಮಾರಾಟ ಮಾಡಲಾಗುವುದು. ಟಿಸಿಎಲ್ ನ ಶಾಖಾ ಕಚೇರಿಯು ಸಂದೇಶ್ ಆರ್ಕೇಡ್, 2ನೇ ಮಹಡಿ, ನಂ 74, 17ನೇ ಮೇನ್, ಸಾಹುಕಾರ್ ಚೆನ್ನಯ್ಯ ರಸ್ತೆ, ಕುವೆಂಪುನಗರ ನಾರ್ತ್, ಸರಸ್ವತೀಪುರಂ, ಮೈಸೂರು, ಕರ್ನಾಟಕ 570009 ರಲ್ಲಿದೆ.

ಆಸ್ತಿ ಖರೀದಿಗಾಗಿ ಮೊಹರಾದ ಇ–ಹರಾಜು ಪತ್ರ ಮತ್ತು ಇಎಂಡಿ ಡಿಮಾಂಡ್ ಡ್ರಾಫ್ಟ್ ಅನ್ನು ದಿನಾಂಕ 13ನೇ ಜುಲೈ 2026 ರಂದು ಸಂಜೆ 5.00 ಗಂಟೆಯೊಳಗೆ ಟಾಟಾ ಕ್ಯಾಪಿಟಲ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಿಂದ ಸ್ವೀಕರಿಸಲಾಗುವುದು.

ಭದ್ರತಾ ಸ್ವತ್ತಿನ ವಿವರ	ಸ್ವಾಧೀನತೆ ಸ್ವರೂಪ ರಚನಾತ್ಮಕ/ ಭೌತಿಕ	ಮೀಸಲು ಬೆಲೆ (ರೂ.)	ಅರ್ನೆಸ್ಟ್ ಠೇವಣಿ ಹಣ (ರೂ.)
ಷೆಡ್ಯೂಲ್ ಎ ಆಸ್ತಿ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಭೂಮಿಯ ಮುನ್ಸಿಪಲ್ ವಿಂಗಡಿಸಿದ ಖಾತಾ ನಂ. 1 ಮತ್ತು 2, ವಿಸ್ತೀರ್ಣ 19.559 ಚದರ ಮೀಟರ್ ಇದರಲ್ಲಿ ನಾಗರೀಕ ಸೌಲಭ್ಯಗಳು ಮತ್ತು ಉದ್ಯಾನವನಕ್ಕಾಗಿ ಬಿಟ್ಟುಕೊಡಲಾಗಿದ್ದು, ಮತ್ತು 17. 213 ಚದರ ಮೀಟರ್ ಭಾಗ ಮಾಡಲಾಗದ ಪಾಲು ಒಡಿ ಭೂಮಿಯಲ್ಲಿದ್ದು, 1ನೇ ಹಂತ ನಿರ್ಮಾಣ ಭೂಮಿಯಲ್ಲಿದ್ದು, ಸಂಯುಕ್ತ ಆಸ್ತಿಯಲ್ಲಿ ವಾಸಯೋಗ್ಯ ಉದ್ದೇಶಕ್ಕೆಂದು ಗುರುತು ಹಾಕಲಾಗಿದ್ದು, ಇದರ ಸಿಟಿಎಸ್ ನಂ. 3360 ಮತ್ತು ಮುನ್ಸಿಪಲ್ ನಂ. 1ರಿಂದ 7, ಜಾವ ಮುಖ್ಯ ರಸ್ತೆ, ಯಾದವಗಿರಿ ಕೈಗಾರಿಕಾ ಪ್ರದೇಶ, ದೇವರಾಜ ಮೊಹಲ್ಲಾ, ಮೈಸೂರು ಇಲ್ಲಿದ್ದು ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಮೆ. ಶಾಲೋಮ್ ವಾಯೇಜರ್ಸ್ ಪ್ರೈವೇಟ್ ಲಿಮಿಟೆಡ್ ಹೊಂದಿರುವ ವಾಣಿಜ್ಯ ಆಸ್ತಿ, ಪಶ್ಚಿಮಕ್ಕೆ: ಈ ಆಸ್ತಿ ಮತ್ತು ರಾಮಕೃಷ್ಣ ಆಶ್ರಮ ವಿದ್ಯಾಶಾಲೆಯ ನಡುವಿನ ರಸ್ತೆ, ಉತ್ತರಕ್ಕೆ: ಮೆ. ಶಾಲೋಮ್ ವಾಯೇಜರ್ಸ್ ಪ್ರೈವೇಟ್ ಲಿಮಿಟೆಡ್ ಹೊಂದಿರುವ ಉಳಿದ ವಸತಿ ಆಸ್ತಿ, ದಕ್ಷಿಣಕ್ಕೆ: ಜಾವಾ ಮೇನ್ ರಸ್ತೆ. ಷೆಡ್ಯೂಲ್ ಬಿ ಆಸ್ತಿ : ಈಕ್ವಿಟೇಬಲ್ ಪಾಲು ಇರುವ ಭಾಗಮಾಡಲಾಗದ ಹಿತಾಸಕ್ತಿ ಷೆಡ್ಯೂಲ್ ಎ ಆಸ್ತಿಯಲ್ಲಿದ್ದು, ಅದು 724.32 ಚದರ ಅಡಿಗಳಿಗೆ ಸಮನಾಗಿದ್ದು, ಷೆಡ್ಯೂಲ್ ಸಿ ಫ್ಲ್ಯಾಟ್‌ನ ನಿರ್ಮಾಣ ಹಕ್ಕನ್ನು ಹೊಂದಿದೆ. ಷೆಡ್ಯೂಲ್ ಸಿ ಆಸ್ತಿ : ವಾಸಯೋಗ್ಯ ಫ್ಲ್ಯಾಟ್ ನಂ. 301, ಬ್ಲಾಕ್ ನಂ. 13, ವಿಂಗ್ ಝೆಡ್2, 3ನೇ ಮಹಡಿಯಲ್ಲಿದ್ದು, 3 ಬಿಹೆಚ್‌ಕೆ ಫ್ಲ್ಯಾಟ್‌ನ ಸುಪರ್ ಬಿಲ್ಟಪ್ ಪ್ರದೇಶದ ವಿಸ್ತೀರ್ಣ 1800 ಚದರ ಅಡಿ, ಇದರಲ್ಲಿ ಸಾಮಾನ್ಯ ಪ್ರದೇಶದ ಪಾಲು ಸಹ ಒಳಗೊಂಡಿದ್ದು, ಕಟ್ಟಡವನ್ನು "ಸಂಕಲ್ಪ್ ಸೆಂಟ್ರಲ್ ಪಾರ್ಕ್" ಎಂದು ಕರೆಯಲಾಗುತ್ತಿದ್ದು, ಜೊತೆಗೆ ತಳಮಹಡಿಯಲ್ಲಿ ಗುರುತು ಹಾಕಲಾದ ಕಾರು ಪಾರ್ಕಿಂಗ್ ಪ್ರದೇಶವನ್ನು ಸಹ ಒಳಗೊಂಡಿದೆ. ಈ ನೋಟೀಸಿನ ನಂತರದ ಎಲ್ಲಾ ವೆಚ್ಚಗಳು ವಾಸ್ತವಿಕ ಲೆಕ್ಕದಂತಿರುತ್ತವೆ.	ಭೌತಿಕ	ರೂ. 1,48,50,000/– (ಒಂದು ಕೋಟಿ ನಲವತ್ತೆಂಟು ಲಕ್ಷ ಐವತ್ತು ಸಾವಿರ ರೂಪಾಯಿಗಳು ಮಾತ್ರ)	ರೂ. 14,85,000/– (ಹದಿನಾಲ್ಕು ಲಕ್ಷ ಎಂಭತ್ತೈದು ಸಾವಿರ ರೂಪಾಯಿಗಳು ಮಾತ್ರ)

ಮಾರಾಟಕ್ಕೆ ಇಡಲಾಗುವ ಆಸ್ತಿಯ ವಿವರಣೆಯು ಶೆಡ್ಯೂಲ್‌ನಲ್ಲಿದೆ. ಮೇಲೆ ವಿವರಿಸಿದ ಭದ್ರತಾ ಆಸ್ತಿಯೊಳಗೆ ಮತ್ತು ಒಳಗಡೆ ಇರುವ ಯಾವುದೇ ಚರ ವಸ್ತುಗಳು/ಮನೆಯ ದಾಸ್ತಾನು ಇದ್ದಲ್ಲಿ, ಹರಾಜು ಮಾರಾಟ ನೋಟೀಸ್‌ನಲ್ಲಿ ನಿರ್ದಿಷ್ಟವಾಗಿ ವಿವರಿಸದ ಹೊರತು ಭದ್ರತಾ ಆಸ್ತಿಯ ಜೊತೆಗೆ ಮಾರಾಟಕ್ಕೆ ಲಭ್ಯವಿರುವುದಿಲ್ಲ. ಮೇಲ್ಕಂಡ ಬಾಕಿ ಮೊತ್ತ, ಬಡ್ಡಿ ಮತ್ತು ವೆಚ್ಚಗಳನ್ನು (ಮಾರಾಟದ ವೆಚ್ಚ ಸೇರಿದಂತೆ) ಅಧಿಕೃತ ಅಧಿಕಾರಿಗೆ ಸಲ್ಲಿಸಿದಲ್ಲಿ ಅಥವಾ ಅಂತಹ ಭದ್ರತಾ ಸಾಲ, ಬಡ್ಡಿ ಮತ್ತು ವೆಚ್ಚಗಳನ್ನು ಪಾವತಿಸಿರುವ ಪುರಾವೆ ನೀಡಿದಲ್ಲಿ ಮಾರಾಟವನ್ನು ನಿಲ್ಲಿಸಲಾಗುವುದು. ಮಾರಾಟದಲ್ಲಿ ಸಾರ್ವಜನಿಕರು ವೈಯಕ್ತಿಕವಾಗಿ ತಮ್ಮ ಟೆಂಡರ್ ಸಲ್ಲಿಸಲು ಆಹ್ವಾನಿಸಲಾಗಿದೆ. ಆದರೆ ಈ ಮಾರಾಟದ ಸಂಬಂಧದಲ್ಲಿ ಯಾವುದೇ ಕರ್ತವ್ಯ ನಿರ್ವಹಿಸುವ ಯಾವುದೇ ಅಧಿಕಾರಿ ಅಥವಾ ವ್ಯಕ್ತಿಯು ನೇರವಾಗಿ ಅಥವಾ ಪರೋಕ್ಷವಾಗಿ ಮಾರಾಟವಾಗುವ ಆಸ್ತಿಯಲ್ಲಿ ಬಿಡ್ ಮಾಡಲು, ಸ್ವಾಧೀನಪಡಿಸಿಕೊಳ್ಳಲು ಅಥವಾ ಹಿತಾಸಕ್ತಿ ಪಡೆಯಲು ಪ್ರಯತ್ನಿಸಬಾರದು. ಮಾರಾಟವು ಸರ್ಫೇಸಿ ಕಾಯ್ದೆ, 2002 ರ ಅಡಿಯಲ್ಲಿ ನಿಗದಿಪಡಿಸಿದ ನಿಯಮಗಳು/ಷರತ್ತುಗಳಿಗೆ ಒಳಪಟ್ಟಿರುತ್ತದೆ. ಇ–ಹರಾಜು ದಿನಾಂಕ 14ನೇ ಜುಲೈ 2026 ರಂದು ಮಧ್ಯಾಹ್ನ 2.00 ರಿಂದ 3.00 ಗಂಟೆಯವರೆಗೆ ತಲಾ 10 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ https://augeo.samil.in ಪೋರ್ಟಲ್ ಮೂಲಕ ನಡೆಯಲಿದೆ. ಆಸ್ತಿ ಖರೀದಿಗಾಗಿ ಸಲ್ಲಿಸಲಾಗುವ ಎಲ್ಲಾ ಬಿಡ್‌ಗಳ ಜೊತೆಗೆ ಮೇಲೆ ಉಲ್ಲೇಖಿಸಿದಂತೆ ತ್ರಿಶ್ಶೂರ್‌ನಲ್ಲಿ ಪಾವತಿಯಾಗುವಂತೆ "ಟಾಟಾ ಕ್ಯಾಪಿಟಲ್ ಲಿಮಿಟೆಡ್" ಹೆಸರಿಗೆ ಡಿಮಾಂಡ್ ಡ್ರಾಫ್ಟ್ ಮೂಲಕ ಅರ್ನೆಸ್ಟ್ ಠೇವಣಿ ಹಣವನ್ನು ಸಲ್ಲಿಸತಕ್ಕದ್ದು. ಆಸ್ತಿಯ ಪರಿವೀಕ್ಷಣೆಯನ್ನು ದಿನಾಂಕ 02ನೇ ಜುಲೈ 2026 ರಂದು ಬೆಳಿಗ್ಗೆ 11.00 ರಿಂದ ಸಂಜೆ 5.00 ಗಂಟೆಯವರೆಗೆ ಮಾಡಬಹುದಾಗಿದೆ.

ಸೂಚನೆ: ಬಿಡ್ ಮಾಡಲು ಉದ್ದೇಶಿಸಿದ ಬಿಡ್ದಾರರು ಟಾಟಾ ಕ್ಯಾಪಿಟಲ್ ಲಿಮಿಟೆಡ್ ಅಧಿಕೃತ ಅಧಿಕಾರಿ ಶ್ರೀ ರಾಜ್‌ಕುಮಾರ್ ಕಿಶನ್‌ಪಾಲ್ ಅವರನ್ನು ಮೊಬೈಲ್ ಸಂಖ್ಯೆ +91–8691005238, ಇಮೇಲ್: rajkumar.kishanmal @tatacapital.com ಮತ್ತು ಮೊಬೈಲ್ ಸಂಖ್ಯೆ +91–9731655955 ರಲ್ಲಿ ಸಂಪರ್ಕಿಸಬಹುದು.

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಭದ್ರತಾ ಸಾಲಗಾರರ ವೆಬ್‌ಸೈಟ್‌ನಲ್ಲಿ ನೀಡಲಾದ ಲಿಂಕ್ ಅನ್ನು ನೋಡಿ: http://www.tatacapital.com/content/dam/tata-capital/pdf/e-auctionActs1/01st-E-Auction-Sale-Notice-Newspaper-Publication-TCFLA0455000011789493-21781477-Mr-RAHUL-CHAWLA-P.pdf.

ಸಹಿ/–
ಅಧಿಕೃತ ಅಧಿಕಾರಿ
ಟಾಟಾ ಕ್ಯಾಪಿಟಲ್ ಲಿಮಿಟೆಡ್

ಸ್ಥಳ: ಮೈಸೂರು (ಕರ್ನಾಟಕ)
ದಿನಾಂಕ: 29.05.2026

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಲಯ, ಮಧುಗಿರಿ
ಸಿಮಿಸ್ ಸಂಖ್ಯೆ–76/2026

ಅರ್ಜಿದಾರರು:
1.ಮಂಜುಳ.ಎಸ್. ಕೋಂ: ವೆಂಕಟೇಶ್, 39 ವರ್ಷ,
2.ವಿಶ್ವನಾಥ ಬಿನ್ ವೆಂಕಟೇಶ್, 23 ವರ್ಷ,
3.ಶಿವಶಂಕರ ಬಿನ್. ವೆಂಕಟೇಶ್, 21 ವರ್ಷ,
ಎಲ್ಲರ ವಾಸ –ವಾರ್ಡ್ ನಂ.8, ಪಾವಗಡ ರೋಡ್, ಬೆಂಕಿಪುರ, ಮಧುಗಿರಿ ಟೌನ್.

ವಿರುದ್ಧ

ಎದುರುದಾರರು: ಟಿ.ಎಂ.ಸಿ, ಮಧುಗಿರಿ ಟೌನ್

ಪ್ರಕಟಣೆ

ಮೇಲ್ಕಂಡ 1ನೇ ಅರ್ಜಿದಾರರ ತಾಯಿ ಮತ್ತು 2 ಮತ್ತು 3ನೇ ಅರ್ಜಿದಾರರ ಅಜ್ಜಿಯಾದ ತಿಮ್ಮಕ್ಕ ಕೋಂ. ಲೇಟ್: ಶಂಕರಪ್ಪ ರವರು ದಿನಾಂಕ:01–04–2002 ರಂದು ಮಧುಗಿರಿ ಟೌನ್, ಮರಣ ಹೊಂದಿದ್ದು, ಈ ಮೇಲ್ಕಂಡ ಅರ್ಜಿದಾರರು ಸದರಿ ಮೃತರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮೃತರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ–06/07/2026 ರಂದು ಬೆಳಿಗ್ಗೆ 11–00 ಗಂಟೆಗೆ ಖುದ್ದು ತಾವಾಗಲಿ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸಬಹುದು.ಇಲ್ಲವಾದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.
2026ನೇ ವರ್ಷದ ಮೇ ತಿಂಗಳ 27ನೇ ದಿನ.
ನ್ಯಾಯಾಲಯದ ಅಪ್ಪಣೆಯ ಮೇರೆಗೆ, ನ್ಯಾಯಾಲಯದ ಮೊಹರಿನೊಂದಿಗೆ

ಶಿರಸ್ತೇದಾರರು.
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಮಧುಗಿರಿ.
ಅರ್ಜಿದಾರರ ಪರ ವಕೀಲರು.
ಸಂತೋಷ್ ಕುಮಾರ್.ಕೆ.
ವಕೀಲರು, ಮಧುಗಿರಿ

IN THE COURT OF THE ADDL, CIVIL JUDGE AND JMFC AT PAVAGADA.
C.MIS. NO. 215/2026.

PETITIONERS: 1.Manjunatha M S/o Mallappa, Aged about 34 years,
2.Mahadevi D/o Mallappa, Aged about 32 years,
3.Bhargavi D/o Mallappa, Aged about 30 years,
4.Hanumantharyappa S/o Late Gangappa, Aged about 46 years,
5.Anjamma D/o Late Gangappa, Aged about 44 years,
6.Mahadevi D/o Late Gangappa, Aged about 42 years,
7.Anjinamma D/o Late Mugono @ Anjinappa, Aged about 68 years,
8.Malamma D/o Late Mugono @ Anjinappa, aged about 66 years,
9.Mallappa S/o Mugono @ Anjinappa, aged about 64 years,
10.Ramappa S/o Mugono @ Anjinappa, aged about 62 years.
All are R/at B.K Halli Village, Nagalamdike Hobali, Pavagada Taluk, Tumakur District.

V/S

RESPONDENT: The Dy, Tahashildar, Nada Kacheri, Nagalamadike, Hobali, Pavagada Taluk. Tumakur District.

PAPER PUBLICATION

WHEREAS, the Petitioners has filed the above petition seeking issue of Death certificate of their grandfather by name Mugono @ Anjinappa S/o Late GuddiRamanna was died on 20-02-1979 at B.K Halli village, Nagalamadike Hobali, Pavagada Taluk now the matter is set down for issue notice/ suit summons to all or any interested persons or legal heirs whoever got any objection over the above said death certificate may appear in this case either as respondent/ petitioners and may prosecute the same on the date of hearing i.e.01-07-2026 you are hereby called upon to appear before this Hon'ble court at 11.00 a.m. on the said date of hearing either in person or through your counsel.

If you fail to appear this court, the matter will be heard and decided exparte.Given under my hand and seal of the court this day of 29 may: 2026.

By order of court
CEO
A.C.J & J.M.F.C COURT Pavagada.
Advocate for petitioners
D.H SUDHAKAR, Pavagada.

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಮಧುಗಿರಿ.
ಸಿಮಿಸ್ ಸಂಖ್ಯೆ–86/2026

ಅರ್ಜಿದಾರರು:1.ಮಹಮ್ಮದ್ ಶರೀಫ್ ಬಿನ್ ಲೇಟ್:ದಸ್ತಗಿರಿಸಾಬ್. 51 ವರ್ಷ .
2.ಗೌಸಾಬ್ ಬಿನ್ ಲೇಟ್:ಯಾಕುಬ್ ಸಾಬ್, 72 ವರ್ಷ,
3.ಅನ್ವರ್ ಭಾಷ ಬಿನ್ ಲೇಟ್:ಯಾಕುಬ್ ಸಾಬ್. 67 ವರ್ಷ,
4.ಜೈತೂನ್ ಭೀ ಬಿನ್. ಲೇಟ್:ಯಾಕುಬ್ ಸಾಬ್, 65 ವರ್ಷ,
5.ಕೌಸರ್ ಬಾನು ಬಿನ್ ಲೇಟ್:ಯಾಕುಬ್ ಸಾಬ್, 57 ವರ್ಷ,
6.ಇಬ್ರಾಹಿಂಖಲೀಲುಲ್ಲಾ ಖಾನ್ ಬಿನ್ ಲೇಟ್:ಯಾಕುಬ್ ಸಾಬ್, 61 ವರ್ಷ.
ಎಲ್ಲರೂ ವಾಸ ಸಿಂಗರಗೊಂಡನಹಳ್ಳಿ ಗ್ರಾಮ, ಪುರವರ ಹೋಬಳಿ, ಮಧುಗಿರಿ ತಾಲ್ಲೂಕು.

ವಿರುದ್ಧ

ಎದುರುದಾರರು:ಉಪ–ತಹಸೀಲ್ದಾರ್, ನಾಡಕಛೇರಿ, ಪುರವರ ಹೋಬಳಿ, ಮಧುಗಿರಿ ತಾಲ್ಲೂಕು.

ಪ್ರಕಟಣೆ

ಮೇಲ್ಕಂಡ 1 ನೇ ಅರ್ಜಿದಾರರ ತಾತ ಮತ್ತು 2 ರಿಂದ 6ನೇ ಅರ್ಜಿದಾರರ ತಂದೆಯಾದ ಯಾಕುಬ್ ಸಾಬ್ ಬಿನ್ ಲೇಟ್: ಅಲ್ಲಿಸಾಬ್ ರವರು ದಿನಾಂಕ:03–02–2011 ರಂದು ಮಧುಗಿರಿ ತಾಲ್ಲೂಕು, ಪುರವರ ಹೋಬಳಿ, ಸಿಂಗರಗೊಂಡನಹಳ್ಳಿ ಗ್ರಾಮದ ವಾಸದ ಮನೆಯಲ್ಲಿ ಹೊಂದಿದ್ದು. ಈ ಮೇಲ್ಕಂಡ ಅರ್ಜಿದಾರರು ಸದರಿ ಮೃತರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮೃತರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ: 06/07/2026 ರಂದು ಬೆಳಿಗ್ಗೆ 11–00 ಗಂಟೆಗೆ ಖುದ್ದು ತಾವಾಗಲಿ ಅಥವಾ ತಮ್ಮ ವಕೀಲರ ಮೂಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸಬಹುದು.ಇಲ್ಲವಾದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.
2026ನೇ ವರ್ಷದ ಮೇ ತಿಂಗಳ 27 ನೇ ದಿನ.
ನ್ಯಾಯಾಲಯದ ಅಪ್ಪಣೆಯ ಮೇರೆಗೆ,ನ್ಯಾಯಾಲಯದ ಮೊಹರಿನೊಂದಿಗೆ,

ಶಿರಸ್ತೇದಾರರು
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಮಧುಗಿರಿ.
ಅರ್ಜಿದಾರರ ಪರ ವಕೀಲರು.
ಸಂತೋಷ್ ಕುಮಾರ್.ಕೆ.
ವಕೀಲರು, ಮಧುಗಿರಿ

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಮಧುಗಿರಿ. ಸಿಮಿಸ್ ಸಂಖ್ಯೆ–87/2026

ಅರ್ಜಿದಾರರು:
1.ಮಹಮ್ಮದ್ ಶರೀಫ್ ಬಿನ್ ಲೇಟ್:ದಸ್ತಗಿರಿಸಾಬ್. 51 ವರ್ಷ .
2.ಗೌಸಾಬ್ ಬಿನ್ ಲೇಟ್:ಯಾಕುಬ್ ಸಾಬ್, 72 ವರ್ಷ,
3.ಅನ್ವರ್ ಭಾಷ ಬಿನ್ ಲೇಟ್:ಯಾಕುಬ್ ಸಾಬ್. 67 ವರ್ಷ,
4.ಜೈತೂನ್ ಭೀ ಬಿನ್. ಲೇಟ್:ಯಾಕುಬ್ ಸಾಬ್, 65 ವರ್ಷ,
5.ಕೌಸರ್ ಬಾನು ಬಿನ್ ಲೇಟ್:ಯಾಕುಬ್ ಸಾಬ್, 57 ವರ್ಷ,
6.ಇಬ್ರಾಹಿಂಖಲೀಲುಲ್ಲಾ ಖಾನ್ ಬಿನ್ ಲೇಟ್:ಯಾಕುಬ್ ಸಾಬ್, 61 ವರ್ಷ.
ಎಲ್ಲರೂ ವಾಸ ಸಿಂಗರಗೊಂಡನಹಳ್ಳಿ ಗ್ರಾಮ, ಪುರವರ ಹೋಬಳಿ, ಮಧುಗಿರಿ ತಾಲ್ಲೂಕು.

ವಿರುದ್ಧ

ಎದುರುದಾರರು:ಉಪ–ತಹಸೀಲ್ದಾರ್, ನಾಡಕಛೇರಿ, ಪುರವರ ಹೋಬಳಿ, ಮಧುಗಿರಿ ತಾಲ್ಲೂಕು.

ಪ್ರಕಟಣೆ

ಮೇಲ್ಕಂಡ 1ನೇ ಅರ್ಜಿದಾರರ ಅಜ್ಜಿ ಮತ್ತು 2 ರಿಂದ 6ನೇ ಅರ್ಜಿದಾರರ ತಾಯಿಯಾದ ಮಾಜನ್ ಬೀ
ಬಿನ್ ಲೇಟ್ ಯಾಕುಬ್ ಸಾಬ್ ರವರು ದಿನಾಂಕ:07–010–2016 ರಂದು ಮಧುಗಿರಿ ತಾಲ್ಲೂಕು, ಪುರವರ ಹೋಬಳಿ, ಸಿಂಗರಗೊಂಡನಹಳ್ಳಿ ಗ್ರಾಮದ ವಾಸದ ಮನೆಯಲ್ಲಿ ಹೊಂದಿದ್ದು. ಈ ಮೇಲ್ಕಂಡ ಅರ್ಜಿದಾರರು ಸದರಿ ಮೃತರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮೃತರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ: 06/07/2026 ರಂದು ಬೆಳಿಗ್ಗೆ 11–00 ಗಂಟೆಗೆ ಖುದ್ದು ತಾವಾಗಲಿ ಅಥವಾ ತಮ್ಮ ವಕೀಲರ ಮೂಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸಬಹುದು.ಇಲ್ಲವಾದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.
2026ನೇ ವರ್ಷದ ಮೇ ತಿಂಗಳ 27 ನೇ ದಿನ.
ನ್ಯಾಯಾಲಯದ ಅಪ್ಪಣೆಯ ಮೇರೆಗೆ,ನ್ಯಾಯಾಲಯದ ಮೊಹರಿನೊಂದಿಗೆ,

ಶಿರಸ್ತೇದಾರರು
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಮಧುಗಿರಿ.
ಅರ್ಜಿದಾರರ ಪರ ವಕೀಲರು.
ಸಂತೋಷ್ ಕುಮಾರ್.ಕೆ.
ವಕೀಲರು, ಮಧುಗಿರಿ

ಮಕ್ಕಳ ಭವಿಷ್ಯಕ್ಕೆ ಪ್ರಾಥಮಿಕ ಶಾಲೆ ಬುನಾದಿ

ಪಟ್ಟಣದ ತೀನಂಶ್ರೀ ಭವನದಲ್ಲಿ ತಾಲೂಕಿನ ಎಲ್ಲ ಪ್ರಾಥಮಿಕ ಶಾಲೆಗಳ ಮುಖ್ಯ ಶಿಕ್ಷಕರಿಗಾಗಿ ಏರ್ಪಡಿಸಲಾಗಿದ್ದ 2026–27ನೇ ಸಾಲಿನ ಶಾಲಾ ಪ್ರಾರಂಭೋತ್ಸವದ ಪೂರ್ವಭಾವಿ ಸಭೆಯನ್ನು ಶಾಸಕ ಸಿ.ಬಿ.ಸುರೇಶ್ ಬಾಬು ಉದ್ಘಾಟಿಸಿದರು.

ಚಿಕ್ಕನಾಯಕನಹಳ್ಳಿ: ‘ಈ ದೇಶದ ಉತ್ತಮ ಪ್ರಜೆಗಳನ್ನು ರೂಪಿಸುವ ನಿಜವಾದ ಕಾರ್ಖಾನೆ ಪ್ರಾಥಮಿಕ ಶಾಲೆಯಾಗಿದೆ. ಪ್ರತಿಯೊಬ್ಬರ ಭವಿಷ್ಯವೆಂಬುದು ಪ್ರಾಥಮಿಕ ಶಾಲಾ ಹಂತದ ಶಿಕ್ಷಣದಿಂದಲೇ ನಿರ್ಧಾರವಾಗುತ್ತದೆ. ಗುಣಾತ್ಮಕ ಶಿಕ್ಷಣದ ಈ ತಳಪಾಯದಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಪ್ರಮುಖವಾಗಿದೆ’ ಎಂದು ಶಾಸಕ ಸಿ.ಬಿ.ಸುರೇಶ್ ಬಾಬು ತಿಳಿಸಿದರು.

ಪಟ್ಟಣದ ತೀನಂಶ್ರೀ ಭವನದಲ್ಲಿ ತಾಲೂಕಿನ ಎಲ್ಲ ಪ್ರಾಥಮಿಕ ಶಾಲೆಗಳ ಮುಖ್ಯ ಶಿಕ್ಷಕರಿಗಾಗಿ ಏರ್ಪಡಿಸಲಾಗಿದ್ದ 2026–27ನೇ ಸಾಲಿನ ಶಾಲಾ ಪ್ರಾರಂಭೋತ್ಸವದ ಪೂರ್ವಭಾವಿ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತಳಪಾಯ ಚೆನ್ನಾಗಿದ್ದರೆ ಕಟ್ಟಡ ಸುಭದ್ರವಾಗಿರುವಂತೆ, ಪ್ರಾಥಮಿಕ ಶಾಲಾ ಶಿಕ್ಷಣ ಪ್ರತಿಯೊಬ್ಬ ಮಗುವಿಗೂ ಸರಿಯಾದ ರೀತಿಯಲ್ಲಿ ಸಿಗಬೇಕು. ಶಿಕ್ಷಕರು ತಮ್ಮ ವೃತ್ತಿಯನ್ನು ಗೌರವಯುತವಾಗಿ ನಿರ್ವಹಿಸಿ, ಮಕ್ಕಳಲ್ಲಿ ಕಲಿಯುವ ಆಸಕ್ತಿ ಮೂಡಿಸಬೇಕು ಎಂದು ಶಾಸಕರು ಕರೆ ನೀಡಿದರು. ಶಿಕ್ಷಣಕ್ಕಾಗಿ ಸರಕಾರ ಪ್ರತಿ ಮಗುವಿನ ಮೇಲೆ ವಾರ್ಷಿಕವಾಗಿ ಎಲ್ಲ ಖರ್ಚು ವೆಚ್ಚ ಒಳಗೊಂಡಂತೆ 50 ರಿಂದ 55 ಸಾವಿರ ರು.ಗಳನ್ನು ವೆಚ್ಚ ಮಾಡುತ್ತಿದೆ. ಹೀಗಾಗಿ ಗುಣಾತ್ಮಕ ಶಿಕ್ಷಣ ನೀಡಿ, ಸರಕಾರಿ ಶಾಲೆಗಳನ್ನು ಉಳಿಸುವ ಕೆಲಸವಾಗಬೇಕು ಎಂದರು. ಮೇ 29ರಿಂದ ಶಾಲೆಗಳು ಪ್ರಾರಂಭವಾಗುತ್ತಿದ್ದು, ಶಿಕ್ಷಕರು ಆಯಾ ಗ್ರಾಮಗಳ ಮುಖಂಡರು, ಶಾಲಾ ಅಭಿವೃದ್ಧಿ ಸಮಿತಿ ಹಾಗೂ ಪೋಷಕರ ಸಭೆ ಕರೆದು, ಶಾಲೆಯ ಅಭಿವೃದ್ಧಿಗೆ ಸಹಕಾರ ಪಡೆದು ಉತ್ತಮ ವಾತಾವರಣ ನಿರ್ಮಿಸಬೇಕು ಎಂದು ಅವರು ಸೂಚಿಸಿದರು.

ಬಿಇಒ ಕಾಂತರಾಜು ಮಾತನಾಡಿ, ‘ಸರಕಾರದ ಸುತ್ತೋಲೆ ಮತ್ತು ನಿಯಮಗಳಂತೆ ಶಿಕ್ಷಕರು ಕೆಲಸ ಮಾಡಬೇಕು. ಸಮಯ ವ್ಯರ್ಥ ಮಾಡಬೇಡಿ. ಶೈಕ್ಷಣಿಕ ಕ್ಷೇತ್ರದಲ್ಲಿ ಆಗುತ್ತಿರುವ ನಿಯಮಾವಳಿಗಳ ಬದಲಾವಣೆಗೆ ಹೊಂದಿಕೊಂಡು ನಾವು ಕೆಲಸ ಮಾಡಬೇಕಿದೆ. ನಮಗೆ ಸಿಕ್ಕಿರುವ ಈ ಉತ್ತಮ ಅವಕಾಶವನ್ನು ಬಳಸಿಕೊಂಡು, ಮಕ್ಕಳ ಬಗ್ಗೆ ಕಾಳಜಿ ಬೆಳೆಸಿಕೊಳ್ಳಬೇಕು. ಸಿಬ್ಬಂದಿ ಕೊರತೆಯಿದ್ದರೂ ಲಭ್ಯವಿರುವ ಸಿಬ್ಬಂದಿಯೊಂದಿಗೆ ಸಮನ್ವಯದಿಂದ ಕೆಲಸ ಮಾಡಿ, ಯಾವುದೇ ಸಮಸ್ಯೆಗಳಿದ್ದರೆ ನನ್ನ ಗಮನಕ್ಕೆ ತನ್ನಿ’ ಎಂದು ಭರವಸೆ ನೀಡಿದರು.

ಅಕ್ಷರದಾಸೋಹ ಇಲಾಖೆಯ ಸಹಾಯಕ ನಿರ್ದೇಶಕ ಗವಿರಂಗಯ್ಯ ಮಾತನಾಡಿದರು. ಸಭೆಯಲ್ಲಿ ಕ್ಷೇತ್ರ ಸಮನ್ವಯಾಧಿಕಾರಿ ಕುಮಾರಸ್ವಾಮಿ, ಸರಕಾರಿ ನೌಕರರ ಸಂಘದ ನಿರ್ದೇಶಕ ಆರ್.ಪರಶಿವಮೂರ್ತಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ವೆಂಕಟರಮಣಯ್ಯ, ಸಹಕಾರ ಸಂಘದ ಅಧ್ಯಕ್ಷ ಶಿವಕುಮಾರ್, ಪ್ರಮುಖರಾದ ರೇವಣ್ಣ, ನಾಗರಾಜು, ಈರಸಿದ್ದಯ್ಯ, ಯೋಗಿಶ್, ಪ್ರಕಾಶ್, ನಟರಾಜ್ ಅರಸ್ ಹಾಗೂ ವಿವಿಧ ಸಂಘಗಳ ಅಧ್ಯಕ್ಷರು, ಪದಾಧಿಕಾರಿಗಳು, ಸಿ.ಆರ್.ಪಿ., ಬಿ.ಆರ್.ಪಿ., ಇ.ಸಿ.ಒ. ಮತ್ತು ಬಿ.ಆರ್.ಸಿ ಸಿಬ್ಬಂದಿ ಉಪಸ್ಥಿತರಿದ್ದರು.

ಮೇ 31 ರಂದು ಗೊಟಕನಾಪುರದ ಕೆರೆ ಹಬ್ಬ

ಗೌರಿಬಿದನೂರು: ಗೌರಿಬಿದನೂರು ಸೇವಾ ಪ್ರತಿಷ್ಠಾನ ಟ್ರಸ್ಟ್ ವತಿಯಿಂದ ಮೇ 31 ರಂದು ಗೊಟಕನಾಪುರ ಗ್ರಾಮದಲ್ಲಿ ಕೆರೆ ಹಬ್ಬ ಮತ್ತು ಗಂಗಾ ಆಹ್ವಾನ ಪೂಜಾ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಾಗಿ ಟ್ರಸ್ಟ್ ನ ಗೌರವಾಧ್ಯಕ್ಷ ಸಂಜೀವ ರೆಡ್ಡಿ ತಿಳಿಸಿದ್ದಾರೆ

ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು. ಗೌರಿಬಿದನೂರು ಸೇವಾ ಪ್ರತಿಷ್ಠಾನದ ವತಿಯಿಂದ ಇದುವರೆಗೂ 16 ಕೆರೆಗಳನ್ನು ಪುನಶ್ಚೇತನ ಗೊಳಿಸಲಾಗಿದೆ. ನಮ್ಮ ತಾಲೂಕಿನವರೇ ಆದ ಹಿರಿಯ ಶ್ರೇಣಿಯ ಕೆ.ಎ.ಎಸ್ ಅಧಿಕಾರಿ ಬಿ.ಎನ್.ವರಪ್ರಸಾದ್ ರೆಡ್ಡಿ ಅವರ ಮಾರ್ಗದರ್ಶನದಲ್ಲಿ ಈ ಕಾರ್ಯ ನಡೆದಿದೆ.

ಇದರಿಂದಾಗಿ ಒಟ್ಟಾರೆ ಐದುನೂರ ಎಪತ್ತೈದು ಎಕರೆಗಳಷ್ಟು ಕೆರೆ ಪ್ರದೇಶವು ಸ್ವಚ್ಛಗೊಂಡಿದೆ, ಒಟ್ಟಾರೆಯಾಗಿ ಈ ಪ್ರದೇಶದಲ್ಲಿ 220 ಕೋಟಿ ಲೀಟರ್‌ಗಳಷ್ಟು ನೀರಿನ ಸಂಗ್ರಹ ಸಾಮರ್ಥ್ಯವು ಅಧಿಕವಾಗಿದೆ ಎಂದರು.

ಅದೇ ರೀತಿ ಗೌರಿಬಿದನೂರು ನಗರಕ್ಕೆ ತಾಕಿಕೊಂಡೇ ಇರುವ ಮತ್ತು ನಗರದ ಜನತೆಗೆ ಪ್ರಮುಖ ನೀರಿನ ಆಸರೆಯಾಗಿರುವ ಗೊಟಕನಾಪುರದ ಕೆರೆಯ ಸುಮಾರು ನೂರಾ ಇಪತ್ತು ಎಕರೆ ಕೆರೆ ಪ್ರದೇಶದಲ್ಲಿ ಎಂಬತ್ತು ಎಕರೆ ಕೆರೆ ಪ್ರದೇಶವನ್ನು ಪುನಶ್ಚತನಗೊಳಿಸಲಾಗಿದ್ದು, ಮುಂಗಾರಿನ ಮೊದಲ ಮಳೆಗೇ ಕೆರೆಯಲ್ಲಿ ಸಾಕಷ್ಟು ಪ್ರಮಾಣದ ನೀರು ಸಂಗ್ರಹವಾಗಿರುವುದಾಗಿ ತಿಳಿಸಿದರು.

ಈ ಹಿನ್ನೆಲೆಯಲ್ಲಿ ಕೆರೆಗಳ ಪುನಶ್ಚೇತನದ ಕಾರ್ಯದ ಮಹತ್ವವನ್ನು ಜನರಿಗೆ ತಿಳಿಯಪಡಿಸುವ ಉದ್ದೇಶದಿಂದ ಕೆರೆಹಬ್ಬವನ್ನು ಆಯೋಜಿಸಿದ್ದು ಮುದುಗಾನಕುಂಟೆಯ ಗಂಗಾ ಭಾಗೀರಥಿಯ ಪಂಚಲೋಹದ ಮೂರ್ತಿಯನ್ನು ಪ್ರತಿಷ್ಠಾಪಿಸಿ ಎಲ್ಲ ತಾಯಂದಿರಿಂದ ಜಲಾಭಿಶೇಕವನ್ನು ನೆರವೇರಿಸಲಾಗುವುದು. ಇದರ ಸಂಪೂರ್ಣ ಪೂಜಾ ಕೈಂಕರ್ಯದ ನೇತೃತ್ವವನ್ನು ವೇ.ಬ್ರಹ್ಮ ಶ್ರೀ ಅಶ್ವತ್ಥನಾರಾಯಣ ಶರ್ಮ ರವರು ವಹಿಸಿಕೊಳ್ಳುವರು ಎಂಬುದಾಗಿ ತಿಳಿಸಿದರು.

ಇದೇ ವೇಳೆ ಮಾತನಾಡಿದ ಟ್ರಸ್ಟ್ ನ ಸದಸ್ಯ ಮತ್ತು ಗೊಟಕನಾಪುರ ಕೆರೆಯ ಪುನಶ್ಚತನ ಕಾರ್ಯದ ಉಸ್ತುವಾರಿ ವರುಣ್, ಕೆರೆಹಬ್ಬವನ್ನು ಅತ್ಯಂತ ವಿಶಿಷ್ಟವಾಗಿ ಮತ್ತು ಸಾಂಪ್ರದಾಯ ಬದ್ದವಾಗಿ ಆಯೋಜಿಸಲಾಗಿದೆ ಮತ್ತು ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಪರಮ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ರವರು ಶ್ರೀಮತಿ ತೇಜಸ್ವಿನಿ ಅನಂತ್ ಕುಮಾರ್, ರಾಷ್ಟ್ರೀಯ ಚಲನಚಿತ್ರ ಪ್ರಶಸ್ಥಿ ಪುರಸ್ಕೃತರಾದ ಅನಿರುದ್ಧ ಜತಕರ ರವರು ಆಗಮಿಸುವುದಾಗಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಪ್ರತಿಷ್ಠಾನದ ಕಾನೂನು ಸಲಹೆಗಾರರಾದ ಹರೀಶ್, ಖಜಾಂಚಿ ಉಪೇಂದ್ರ ಸೇರಿದಂತೆ ಇನ್ನಿತರರು ಹಾಜರಿದ್ದರು.

ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ನ ಗೌರವಾಧ್ಯಕ್ಷ ಸಂಜೀವ ರೆಡ್ಡಿ ಮಾತನಾಡಿದರು.

ಸಮಾಚಾರ ಸಣ್ಣದಲ್ಲ

ಹುಣಸೂರು ತಾಲೂಕಿನಿಂದ ಆರು ಜನರ ಕಾಣೆ

ಹುಣಸೂರು: ತಾಲೂಕಿನ ಹಲವು ಗ್ರಾಮಗಳಿಂದ ಸುಮಾರು ಆರು ಜನ ಕಾಣೆಯಾಗಿರುವ ಘಟನೆ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಜರುಗಿದೆ. ತಾಲೂಕಿನ ಕೊತ್ತೇಗಾಲ ಗ್ರಾಮದ ಚಲುವರಾಜ್ ಪುತ್ರ ಸುಬ್ರಹ್ಮಣ್ಯ 42 ವರ್ಷ ಸುಮಾರು 6 ತಿಂಗಳಿಂದ ಮನೆ ಬಿಟ್ಟುಹೊರ ಹೋದವರು ಮರಳಿ ಬಂದಿರುವುದಿಲ್ಲ. ಹಾಗೆ ಶಿವಪುರ ಗ್ರಾಮದ ಆಲೇಗೌಡರ ಮಗ ಬೋರೇಗೌಡ 24. ವರ್ಷ 1.08.25ರಂದು ಹೊರಹೋದವರು ಮರಳಿ ಬಂದಿಲ್ಲ. ಮತ್ತು ಶಿಂಡೇನಹಳ್ಳಿ ಗೇಟ್ ಬಳಿ ವಾಸವಿದ್ದ ಲೇಟ್ ಸಣ್ಣ ಕಾಳಯ್ಯನ ಪುತ್ರ ರವಿ 28.ವರ್ಷ ಇವರೂ ಕೂಡ 2017ರ ಜ.1ರಂದು ಕಾಣೆಯಾದವರು ಇಲ್ಲಿಯವರೆಗೂ ಪತ್ತೆ ಯಾಗಿರುವುದಿಲ್ಲ. ಮತ್ತೊಬ್ಬರಾದ ರತ್ನಪುರಿ ಗ್ರಾಮದ ವೆಂಕಟ ಬೋವಿ ಯ ಮಗ ಷಣ್ಮುಗ 30. ವರ್ಷ ಇವರು ದಿನಾಂಕ 01.04.26ರಂದು ಬಾಂಬೆಗೆ ಡ್ರೈವಿಂಗ್ ಕೆಲಸಕ್ಕೆ ಮನೆಯಿಂದ ಹೋದವರು ಇನ್ನೂ ಮರಳಿ ಬಂದಿರುವುದಿಲ್ಲ. ಹರವೆ ಗ್ರಾಮದ ಲೇಟ್ ದೇವನಾಯಕನ ಪುತ್ರ ಮರಿನಾಯಕ 46. ವರ್ಷ ಎಂಬುವವರು 2024ರ ಜ.14ರಂದು ಹರವೆ ಗ್ರಾಮದಿಂದ ಹೊದವರು ಇನ್ನೂ ಪತ್ತೆಯಾಗಿರುವುದಿಲ್ಲ. ಅದೇ ರೀತಿ ತಾಲೂಕಿನ ಕೆರಗಲ್ ಕೊಪ್ಪಲ್ ಗ್ರಾಮದ ಕರಿಯ ಜೋಗಿ 65 ವರ್ಷ ಇವರು 2022ರ ಡಿ.17ರಂದು ಕಾಣೆಯಾದವರು ಮನೆಗೆ ಬಂದಿರುವುದಲ್ಲವಾದ್ದರಿಂದ ಇವರ ಕುಟುಂಬಸ್ಥರು ಗ್ರಾಮಾಂತರ ಪೊಲೀಸ್ ಠಾಣೆಗೆ ಲಿಖಿತವಾಗಿ ದೂರು ನೀಡಿದ್ದು, ಕಾಣೆಯಾದವರು.ಯಾರಿಗಾದರೂ ಸಿಕ್ಕಲ್ಲಿ ಠಾಣೆಯ ಸಬ್ ಇನ್ಸ್‌ಪೆಕ್ಟರ್‌ಸಂತೋಷ್ ಕಶ್ಯಪ್ ಅಥವಾ ಕಛೇರಿಯ ದೂರವಾಣಿ ಸಂಖ್ಯೆ 08222 252042 ಸಂಪರ್ಕಿಸುವಂತೆ ಪತ್ರಿಕಾ ಹೇಳಿಕೆ ಮೂಲಕ ಮನವಿ ಮಾಡಿದ್ದಾರೆ.

ಜೋಳದ ಬೆಳೆ ನಾಶ: ರೈತ ಆತ್ಮಹತ್ಯೆಗೆ ಯತ್ನ

ಪಿರಿಯಾಪಟ್ಟಣ: ತಾಲ್ಲೂಕಿನ ಹಾರನಹಳ್ಳಿ ಹೋಬಳಿಯ ಮರಟಿಕೊಪ್ಪಲು ಗ್ರಾಮದ ರೈತನೊಬ್ಬ ತನಗೆ ಸೇರಿದ 1.10 ಗುಂಟೆ ಜಮೀನಿನಲ್ಲಿ ಬೆಳೆದಿದ್ದ ಮುಸುಕಿನ ಜೋಳದ ಬೆಳೆಯನ್ನು ದುಷ್ಕರ್ಮಿಗಳು ರಾತ್ರೋರಾತ್ರಿ ರೋಟವೇಟರ್‌ನಿಂದ ನಾಶ ಪಡಿಸಿದ್ದಾರೆ ಎಂದು ಆರೋಪಿಸಿ ಮನನೊಂದು ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ ಬಗ್ಗೆ ಬೈಲುಕುಪ್ಪೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಈ ಬಗ್ಗೆ ರೈತನ ಪತ್ನಿ ಮಹದೇವಮ್ಮ ಮಾತನಾಡಿ, ಅಕ್ರಮವಾಗಿ ಜಮೀನನ್ನು ಕಬಳಿಸಲು ಹೊಂಚು ಹಾಕುತ್ತಿರುವ ಆರೋಪಿಗಳ ವಿರುದ್ಧ ಪೊಲೀಸರು ನಮಗೆ ನ್ಯಾಯ ರಕ್ಷಣೆ ನೀಡಿ ಇವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಪೊನ್ನಂಪೇಟೆ ತಾಪಂ ಪ್ರಗತಿ ಪರಿಶೀಲನಾ ಸಭೆ | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎನ್.ವಿ.ಪ್ರಸಾದ್ ಸೂಚನೆ

ಮುಂಗಾರಿಗೆ ಅಗತ್ಯ ಮುನ್ನೆಚ್ಚರಿಕೆ ವಹಿಸಿ

ಮಡಿಕೇರಿ: ಮುಂಗಾರು ಪ್ರಾರಂಭವಾಗುವ ಲಕ್ಷಣಗಳು ಕಾಣುತ್ತಿದ್ದು, ಅಗತ್ಯ ಪೂರ್ವ ತಯಾರು ಮಾಡಿಕೊಳ್ಳುವಂತೆ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎನ್.ವಿ.ಪ್ರಸಾದ್ ಅವರು ಸೂಚಿಸಿದ್ದಾರೆ.

ಪೆಲನ್ನಂಪೇಟೆ ತಾಲೂಕು ಪಂಚಾಯಿತಿಯ ಸಾಮರ್ಥ್ಯ ಸೌಧದಲ್ಲಿ ನಡೆದ ಪ್ರಗತಿ ಪರಿಶಿಲನಾ ಸಭೆಯಲ್ಲಿ ಮಾಹಿತಿ ಪಡೆದು ಮಾತನಾಡಿದರು.

ಜಿಲ್ಲೆಯ ಸೂಕ್ಷ್ಮ ಪ್ರದೇಶಗಳಲ್ಲಿ ಅಗತ್ಯ ಎಚ್ಚರ ವಹಿಸಬೇಕು. ಪ್ರವಾಹ ಪೀಡಿತ ಪ್ರದೇಶಗಳ ಕುಟುಂಬಗಳಿಗೆ ಕಾಲಕಾಲಕ್ಕೆ ಮಾಹಿತಿ ನೀಡುವಂತಾಗಬೇಕು. ಕಾಳಜಿ ಕೇಂದ್ರದಲ್ಲಿ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಕೆಲಸ ನಿರ್ವಹಿಸಿ ಎಂದು ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ ಅಪಾಯ ಶಿಥಿಲ ಸ್ಥಿತಿಯಲ್ಲಿರುವ ಶಾಲಾ ಹಾಗೂ ಅಂಗನವಾಡಿ ಕಟ್ಟಡಗಳ ಕಾಮಗಾರಿಗಳನ್ನು ಪೂರ್ಣಗೊಳಿಸಿ ಯಾವುದೇ ಅವಘಡಗಳು ಬಾರದ ರೀತಿಯಲ್ಲಿ ನೋಡಿಕೊಳ್ಳಲು ನಿರ್ದೇಶನ ನೀಡಿದರು.

ಪೊನ್ನಂಪೇಟೆ ತಾಲೂಕು ಪಂಚಾಯಿತಿಯ ಸಾಮರ್ಥ್ಯ ಸೌಧದಲ್ಲಿ ನಡೆದ ಸಭೆಯಲ್ಲಿ ಡಾ.ಎನ್.ವಿ.ಪ್ರಸಾದ್ ಅವರು ಮಾತನಾಡಿದರು.

ಕುಡಿಯುವ ನೀರು ಪೂರೈಕೆಗೆ ಸಂಬಂಧಿಸಿದಂತೆ ಯಾವೆಲ್ಲಾ ಕಾಮಗಾರಿಗಳು ಪೂರ್ಣಗೊಂಡಿದೆ ಹಾಗೂ ಸಮಸ್ಯೆಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಜೆಜೆಎಂ ಯೋಜನೆಯಡಿ ಅಪೂರ್ಣಗೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ತಿಳಿಸಿದರು.

ಮಳೆಗಾಲ ಪ್ರಾರಂಭವಾಗುತ್ತಿರುವ ಹಿನ್ನೆಲೆ ಕೃಷಿ ಇಲಾಖೆಯಡಿ ರೈತರಿಗೆ ಸಮರ್ಪಕವಾಗಿ ರಸಗೊಬ್ಬರ ಮತ್ತು ಬಿತ್ತನೆ ಬೀಜ, ಯೂರಿಯ, ಕೃಷಿ ಯಂತ್ರೋಪಕರಣಗಳ ಬಗ್ಗೆ ಮಾಹಿತಿ ಪಡೆದು ರೈತರಿಗೆ ಯಾವುದೇ ರೀತಿಯ ಸಮಸ್ಯೆಯಾಗದಂತೆ ನೋಡಿಕೊಳ್ಳಲು ಸಲಹೆ ನೀಡಿದರು.

ಜಿಲ್ಲೆಯಲ್ಲಿ ಈಗಾಗಲೇ ಮಳೆಗಾಲಕ್ಕೆ ಎಲ್ಲಾ ರೀತಿಯ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದ್ದು, ಸಹಾಯವಾಣಿ ಕೇಂದ್ರ ತೆರೆಯಲಾಗಿದ್ದು, ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ.

ಮುಂಗಾರು ಸಂಬಂಧ ಎಲ್ಲಾ ರೀತಿಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ ಎಂದು ಕೊಡಗು ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್‌ಅವರು ತಿಳಿಸಿದರು.

ಪಶುಸಂಗೋಪನೆ, ತೋಟಗಾರಿಕೆ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಇದೇ ಸಂದರ್ಭದಲ್ಲಿ ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ ಅವರು ಹಲವು ವಿಷಯಗಳ ಕುರಿತು ಮಾತನಾಡಿದರು.

> **ಕುಡಿಯುವ ನೀರು ಪೂರೈಕೆಗೆ ಸಂಬಂಧಿಸಿದಂತೆ ಯಾವೆಲ್ಲಾ ಕಾಮಗಾರಿಗಳು ಪೂರ್ಣಗೊಂಡಿದೆ ಹಾಗೂ ಸಮಸ್ಯೆಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಜೆಜೆಎಂ ಯೋಜನೆಯಡಿ ಅಪೂರ್ಣಗೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಿ.**
> -ಡಾ.ಎನ್.ವಿ.ಪ್ರಸಾದ್
> ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಉಪ ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ್ ಎನ್.ಎಚ್, ವಿರಾಜಪೇಟೆ ತಹಶೀಲ್ದಾರ್‌ಪ್ರವೀಣ್ ಕುಮಾರ್, ಪೊನ್ನಂಪೇಟೆ ತಹಸೀಲ್ದಾರ್‌ಸಿ.ಎಸ್. ಸಂಜನಾ, ವಿರಾಜಪೇಟೆ ತಾ.ಪಂ.ಇಒ ರಾಜೇಶ್ ಕೆ.ಆರ್, ಮಡಿಕೇರಿ ತಾ.ಪಂ.ಇಒ ಶೇಖರ್, ವಿವಿಧ ಇಲಾಖೆಯ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು, ಕಂದಾಯ ಇಲಾಖೆಯ ಸಿಬ್ಬಂದಿ ವರ್ಗದವರು ಹಾಗೂ ಇತರರು ಉಪಸ್ಥಿತರಿದ್ದರು.

ತ್ಯಾಗ, ಭಕ್ತಿಯ ಪ್ರತೀಕ ಬಕ್ರೀದ್ ಹಬ್ಬ

ತಿ.ನರಸೀಪುರ: ತ್ಯಾಗ, ಬಲಿದಾನ ಮತ್ತು ಭಕ್ತಿ ಪರಾಕಾಷ್ಠೆಯ ಪ್ರತೀಕವಾದ ಪವಿತ್ರ ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಮುಸ್ಲಿಂ ಭಾಂದವರು ಪಟ್ಟಣದ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಜಗತ್ತಿಗೆ ಕೋರಿದರು.

ಪಟ್ಟಣದ ಈದ್ಗಾ ಮೈದಾನದಲ್ಲಿ ಧಾರ್ಮಿಕ ಗುರು ಮೌಲನಾ ಫಯಾಜ್ ಅಹಮದ್ ರಜ್ವಿ ಅವರ ನೇತೃತ್ವದಲ್ಲಿ ನೆರೆದಿದ್ದ ನೂರಾರು ಮುಸ್ಲಿಂ ಭಾಂದವರು, ಪ್ರಪಂಚದ ಸರ್ವ ಜನಾಂಗಕ್ಕೂ ಒಳಿತು ಆಗಲೆಂದು ಸಾಮೂಹಿಕ ವಾಗಿ ಪ್ರಾರ್ಥನೆ ಸಲ್ಲಿಸಿದರು.

ಇದೇ ವೇಳೆ ಮಾತನಾಡಿದ ಜಾಮಿಯಾ ಮಸೀದಿಯ ಧಾರ್ಮಿಕ ಗುರು ಮೌಲನಾ ಫಯಾಜ್ ಅಹಮದ್ ರಜ್ವಿ , ಇಸ್ಲಾಂ ಧರ್ಮ ವು ತ್ಯಾಗಕ್ಕೆ ಹೆಚ್ಚು ಹೆಸರುವಾಸಿಯಾಗಿದ್ದು, ಜಗತ್ತಿನ ಎಲ್ಲ ಧರ್ಮದ ಜನರಿಗೆ ಶಾಂತಿ, ನೆಮ್ಮದಿ ಆರ್ಥಿಕ ಸದೃಢತೆ ಮತ್ತು ಎಲ್ಲ ಸನ್ಮಂಗಳನ್ನು ಉಂಟು ಮಾಡಲಿ ಎಂದು ಇಸ್ಲಾಂ ಧರ್ಮ ಪ್ರತಿಪಾದಿಸುತ್ತದೆ.

ಬಕ್ರೀದ್ ಹಬ್ಬವು ಭಕ್ತಿಯ ಉಳಿವಿಗಾಗಿ ತ್ಯಾಗಕ್ಕೆ ಸಿದ್ದರಾದ ಮಹಮದ್ ಪೈಗಂಬರ್ ಅವರ ತ್ಯಾಗವನ್ನು ಸ್ಮರಿಸುತ್ತದೆ ಎಂದರು.

ಪಟ್ಟಣದ ಜಾಮಿಯಾ ಮಸೀದಿ ಕಾರ್ಯದರ್ಶಿ ಹಾಗೂ ಮುತವಲ್ಲಿಯಾದ ಕೌಸರ್ ಪಾಷಾ ಮಾತನಾಡಿ, ದ್ವೇಷ, ಅಸೂಯೆಗಳಿಂದ ಜಗತ್ತಿನಲ್ಲಿ ಏನನ್ನು ಸಾಧಿಸಲು ಸಾಧ್ಯವಿಲ್ಲ. ಸ್ನೇಹ, ತ್ಯಾಗ ಮನೋಭಾವದಿಂದ ಜಗತ್ತಿಗೆ ಎಲ್ಲ ಭಾವಗಳನ್ನು ಗೆಲ್ಲಬಹುದು. ಬಕ್ರೀದ್ ಹಬ್ಬ ಕೂಡ ತ್ಯಾಗದ ಸಂಕೇತವಾಗಿದೆ ಎಂದರು. ಪ್ರಾರ್ಥನೆಯಲ್ಲಿ ಜಾಮಿಯಾ ಮಸೀದಿ ಅಧ್ಯಕ್ಷ ಮಹಮದ್ ಹನೀಫ್, ಉಪಾಧ್ಯಕ್ಷ ಕೈಸರ್‌ಪಾಷಾ, ಸದಸ್ಯರಾದ ಸಿಕಂದರ್‌ಪಾಷಾ, ಆಫ್ರೋಜ್ ಪಾಷಾ, ರಿಜ್ವಾನ್, ಸೈಫುಲ್ಲಾ, ಅಬ್ದುಲ್ ರಶೀದ್, ಆಸೀಫ್, ನಾಸಿರ್‌ಅಹ 'ಮದ್, ಮಹಮ್ಮದ್ ಸಜಾಯತ್ ಸೇರಿದಂತೆ ನೂರಾರು ಮುಸ್ಲಿಂ ಭಾಂದವರು ಇದ್ದರು.

ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಮುಸ್ಲಿಂ ಭಾಂದವರು ಪಟ್ಟಣದ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಬಕ್ರೀದ್: ಸಾಮೂಹಿಕ ಪ್ರಾರ್ಥನೆ ಸಲ್ಲಿಕೆ

ಬಕ್ರೀದ್ ಹಬ್ಬವನ್ನು ಮುಸ್ಲಿಂ ಬಾಂಧವರು ಶುಕ್ರವಾರ ಚಾಮರಾಜನಗರದಲ್ಲಿ ಅತ್ಯಂತ ಸಡಗರ, ಸಂಭ್ರಮದಿಂದ ಆಚರಿಸಿದರು

ಚಾಮರಾಜನಗರ: ಬಕ್ರೀದ್ ಹಬ್ಬವನ್ನು ಮುಸ್ಲಿಂ ಬಾಂಧವರು ಶುಕ್ರವಾರ ನಗರದಲ್ಲಿ ಅತ್ಯಂತ ಸಡಗರ, ಸಂಭ್ರಮದಿಂದ ಆಚರಿಸಿದರು.

ನಗರದ ಸರಕಾರಿ ಪಾಲಿಟೆಕ್ನಿಕ್ ಕಾಲೇಜು ಸಮೀಪದಲ್ಲಿರುವ ಈದ್ಗಾ ಮೈದಾನದಲ್ಲಿ ಬೆಳಗ್ಗೆ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದ ಮುಸ್ಲಿಮರು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು. ಹೊಸ ಬಟ್ಟೆ ಧರಿಸಿ ಕಂಗೊಳಿಸಿದ ಪುಟಾಣಿ ಗಳು ಕೂಡ ಪರಸ್ಪರ ಅಪ್ಪಿ ಈದ್ ಶುಭಾಶಯ ವಿನಿಮಯ ಮಾಡಿಕೊಳ್ಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಧರ್ಮಗುರು ಮೌಲಾನ ಅಬ್ದುಲ್ ಹಸೀಬ್ ಬಕ್ರೀದ್ ಹಬ್ಬದ ಮಹತ್ವ ಕುರಿತು ಸಂದೇಶ ನೀಡಿದರು.

ಬಳಿಕ ದೇವರ ಹೆಸರಿನಲ್ಲಿ ಮನೆ-ಮನೆಗಳಲ್ಲಿ ಪ್ರಾಣಿ ಬಲಿ ನೆರವೇರಿಸಲಾಯಿತು. ಮಾಂಸದ ಒಂದು ಭಾಗವನ್ನು ಮನೆಗೆ, ಇನ್ನೊಂದು ಭಾಗವನ್ನು ಸಂಬಂಧಿಕರಿಗೆ ಹಾಗೂ ಮತ್ತೊಂದು ಭಾಗವನ್ನು ಬಡ-ಬಗ್ಗರಿಗೆ ದಾನ ಮಾಡುವುದು ಬಕ್ರೀದ್ ಹಬ್ಬದ ಪದ್ಧತಿಗಳಲ್ಲೊಂದು. ಅದರಂತೆ, ಕೆಲವರು ಮಾಂಸವನ್ನು ದಾನ ಮಾಡಿದರೆ, ಇನ್ನೂ ಕೆಲವರು ಅಡುಗೆ ಮಾಡಿ ಬಡವರಿಗೆ ದಾನ ಮಾಡುವ ಮೂಲಕ ತಮ್ಮ ಸೇವೆಯನ್ನು ಸಮರ್ಪಿಸಿದರು. ಬಳಿಕ ದೇವರ ಹೆಸರಿನಲ್ಲಿ ಮನೆ-ಮನೆ ಗಳಲ್ಲಿ ಪ್ರಾಣಿ ಬಲಿ ನೆರವೇರಿಸಲಾಯಿತು. ಮಾಂಸದ ಒಂದು ಭಾಗವನ್ನು ಮನೆಗೆ, ಇನ್ನೊಂದು ಭಾಗವನ್ನು ಸಂಬಂಧಿಕರಿಗೆ ಹಾಗೂ ಮತ್ತೊಂದು ಭಾಗವನ್ನು ಬಡ-ಬಗ್ಗರಿಗೆ ದಾನ ಮಾಡುವುದು ಬಕ್ರೀದ್ ಹಬ್ಬದ ಪದ್ಧತಿಗಳಲ್ಲೊಂದು. ಅದರಂತೆ, ಕೆಲವರು ಮಾಂಸ ವನ್ನು ದಾನ ಮಾಡಿದರೆ, ಇನ್ನೂ ಕೆಲವರು ಅಡುಗೆ ಮಾಡಿ ಬಡವರಿಗೆ ದಾನ ಮಾಡುವ ಮೂಲಕ ತಮ್ಮ ಸೇವೆಯನ್ನು ಸಮರ್ಪಿಸಿದರು.

ಸರಕಾರಿ, ಖಾಸಗಿ ವಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವೇತನಕ್ಕೆ ವೈಜ್ಞಾನಿಕ ನಿಯಮ ಜಾರಿಗೆ ತರಬೇಕು: ಸಿಐಟಿಯು ಆಗ್ರಹ

ಕನಿಷ್ಠ ವೇತನ ಜಾರಿಗಾಗಿ ಆಗ್ರಹಿಸಿ ಜಿಲ್ಲಾಧಿಕಾರಿ ಕಚೇರಿ ಚಲೋ ನಾಳೆ

ಸುದ್ದಿಗೋಷ್ಠಿಯಲ್ಲಿ ಸಿಐಟಿಯು ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಆರ್.ಭರತ್ ಅವರು ಮಾತನಾಡಿದರು.

ಮಡಿಕೇರಿ: ಸರಕಾರಿ ಹಾಗೂ ಖಾಸಗಿ ವಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಕನಿಷ್ಠ ವೇತನಕ್ಕೆ ವೈಜ್ಞಾನಿಕ ರೂಪದ ನಿಯಮ ಜಾರಿಗೆ ತರಬೇಕು ಮತ್ತು ಕೇಂದ್ರ ಸರಕಾರ ಅನುಷ್ಠಾನಗೊಳಿಸುತ್ತಿರುವ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ತಡೆದು ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಬೇಕು ಎಂದು ಒತ್ತಾಯಿಸಿ ಮೇ 30 ರಂದು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ನ ಕೊಡಗು ಜಿಲ್ಲಾ ಸಮಿತಿ ಜಿಲ್ಲಾಧಿಕಾರಿ ಕಚೇರಿ ಚಲೋ ಹೋರಾಟವನ್ನು ರೂಪಿಸಿದೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿಐಟಿಯು ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಆರ್.ಭರತ್ ಅವರು ರಾಜ್ಯದಲ್ಲಿ ಬೃಹತ್ ಸಂಖ್ಯೆಯಲ್ಲಿರುವ ಸಂಘಟಿತ, ಅಸಂಘಟಿತ ಮತ್ತು ಯೋಜನಾ ಕಾರ್ಮಿಕರ ಬದುಕನ್ನು ರಕ್ಷಿಸುವುದು ರಾಜ್ಯ ಸರಕಾರದ ಜವಾಬ್ದಾರಿಯಾಗಿದೆ.

ಕೇಂದ್ರ ಸರಕಾರ ಜಾರಿಗೆ ತರುತ್ತಿರುವ 4 ಕಾರ್ಮಿಕ ಸಂಹಿತೆಗಳು ಕಾರ್ಮಿಕರ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸುತ್ತಿದೆ. ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಲು ಸಂವಿಧಾನ ನೀಡಿರುವ ಅಧಿಕಾರ ವನ್ನು ರಾಜ್ಯ ಸರಕಾರ ಬಳಸಿಕೊಂಡು ಇದನ್ನು ತಡೆಯಬೇಕು. ಆ ಮೂಲಕ ಸೂಕ್ತ ತಿದ್ದುಪಡಿಗಳೊಂದಿಗೆ ನಿಯಮಾವಳಿಗಳನ್ನು ರೂಪಿಸ ಬೇಕು ಎಂದು ಒತ್ತಾಯಿಸಿದರು.

ಏಪ್ರಿಲ್ 2025ರಲ್ಲಿ ಕನಿಷ್ಠ ವೇತನದ ಕರಡು ಅಧಿಸೂಚನೆ ಹೊರಡಿಸಲಾಗಿದ್ದರೂ, ಇಲ್ಲಿಯವರೆಗೆ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಅನ್ವಯ ರಾಜ್ಯದಲ್ಲಿನ ಕಾರ್ಮಿಕರಿಗೆ ನೀಡಬೇಕಾದ ವೈಜ್ಞಾನಿಕ ರೂಪದ ಕನಿಷ್ಠ ವೇತನವನ್ನು ಅಂತಿಮಗೊಳಿಸಿಲ್ಲ. 2017ರ ನಂತರ 9 ವರ್ಷಗಳಿಂದ ಪುನರ್ವಿಮರ್ಶೆಯಾಗದಿರುವ ಕನಿಷ್ಠ ವೇತನವನ್ನು ಪೂರ್ವಾನ್ವಯವಾಗುವಂತೆ, ತುಟ್ಟಿಭತ್ಯೆಯೊಂದಿಗೆ, ವಲಯ 3ರಲ್ಲಿನ ಅಕುಶಲ ಕಾರ್ಮಿಕರಿಗೆ ಮಾಸಿಕ ರು.31 ಸಾವಿರದಂತೆ ನಿಗದಿ ಮಾಡಬೇಕು.

> **ಏಪ್ರಿಲ್ 2025ರಲ್ಲಿ ಕನಿಷ್ಠ ವೇತನದ ಕರಡು ಅಧಿಸೂಚನೆ ಹೊರಡಿಸಲಾಗಿದ್ದರೂ, ಇಲ್ಲಿಯವರೆಗೆ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಅನ್ವಯ ರಾಜ್ಯದಲ್ಲಿನ ಕಾರ್ಮಿಕರಿಗೆ ನೀಡಬೇಕಾದ ವೈಜ್ಞಾನಿಕ ರೂಪದ ಕನಿಷ್ಠ ವೇತನವನ್ನು ಅಂತಿಮಗೊಳಿಸಿಲ್ಲ.**
> -ಪಿ.ಆರ್.ಭರತ್
> ಸಿಐಟಿಯು ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ

ಪ್ರಕಟಿತ ಕನಿಷ್ಠ ವೇತನಕ್ಕಿಂತಲೂ ಕಡಿಮೆ ವೇತನ ಪಡೆಯುವ ಸರಕಾರಿ, ಖಾಸಗಿ ವಲಯಗಳಲ್ಲಿ, ಕೇಂದ್ರ ಮತ್ತು ರಾಜ್ಯ ಸರಕಾರದ ವಿವಿಧ ಯೋಜನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು, ನೌಕರರು ಹಾಗೂ ಎಲ್ಲಾ ಸ್ವರೂಪದ ಬಾಹ್ಯಮೂಲ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಕಟ್ಟುನಿಟ್ಟಾಗಿ ಜಾರಿ ಮಾಡಬೇಕು.

ಕಾರ್ಮಿಕ ಸಂಹಿತೆಗಳಿಗೆ ಕಾರ್ಮಿಕರ ಪರವಾಗಿ ರಾಜ್ಯ ಸರಕಾರದ ತಿದ್ದುಪಡಿಗಳ ನಂತರವೇ ನಿಯಮಾವಳಿಗಳನ್ನು ರೂಪಿಸಿ ಜಾರಿಗೆ ತರಬೇಕು.

ಖಾಯಂ ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡುವ ಮೂಲಕ ಹಾಗೂ ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಶನಿವಾರ ಬೆಳಿಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಪಿ.ಆರ್.ಭರತ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಿಐಟಿಯು ಅಧ್ಯಕ್ಷ ಎ.ಸಿ.ಸಾಬು, ಉಪಾಧ್ಯಕ್ಷ ಕೆ.ಕೆ.ಹರಿದಾಸ್, ಸರಕಾರಿ ಆಸ್ಪತ್ರೆ ಸ್ವಚ್ಛತಾ ನೌಕರರ ಸಂಘದ ಅಧ್ಯಕ್ಷೆ ಎಚ್.ಕೆ.ಜಾನಕಿ, ಗ್ರಾ.ಪಂ ನೌಕರರ ಸಂಘದ ಕುಶಾಲನಗರ ತಾಲ್ಲೂಕು ಕಾರ್ಯದರ್ಶಿ ಎಚ್.ಎಂ.ದಿನೇಶ್, ಅಂಗನವಾಡಿ ಕಾರ್ಯಕರ್ತರು ಹಾಗೂ ಸಹಾಯಕಿಯರ ಸಂಘದ ಪ್ರಮುಖರಾದ ಇಂದಿರಾ ಕೆ.ಸಿ ಉಪಸ್ಥಿತರಿದ್ದರು.

ಶಾಸಕ ಪುಟ್ಟರಂಗಶೆಟ್ಟಿಗೆ ಸಚಿವ ಸ್ಥಾನ ನೀಡಿ

ಚಾಮರಾಜನಗರ: ಚಾಮರಾಜನಗರ ವಿಧಾ ನಸಭಾ ಕ್ಷೇತ್ರದಿಂದ ಸತತ 4 ಬಾರಿ ಶಾಸಕ ರಾಗಿ ಆಯ್ಕೆಯಾಗಿ ದಾಖಲೆ ನಿರ್ಮಿಸಿ ರುವ ಸಿ. ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಯಳಂದೂರು ಪಿಎಲ್ ಡಿ ಬ್ಯಾಂಕ್ ನಿರ್ದೇಶಕ ಹೊನ್ನೂರು ಸಿದ್ದಪ್ಪ ಸ್ವಾಮಿ ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಪುಟ್ಟರಂಗಶೆಟ್ಟಿ ಅವರು ರಾಜ್ಯದ ಉಪ್ಪಾರ ಜನಾಂಗದ ಏಕೈಕ ಶಾಸಕರು. ಕಾಂಗ್ರೆಸ್ ಗೆಲುವಿಗೆ ಶ್ರಮಿಸಿ ದ್ದಾರೆ.

ಉಪ್ಪಾರ ಸಮಾಜ ಮತದಾರರು ಹೆಚ್ಚು ಇರುವ ಕ್ಷೇತ್ರದಲ್ಲಿ ಕಾಂಗ್ರೆಸ್ ಬೆಂಬಲಿಸು ವಂತೆ ಜಾಗೃತಿ ಮೂಡಿಸಿದ್ದಾರೆ.

2008ರಿಂದ ನಿರಂತರ ಆಯ್ಕೆಯಾಗಿದ್ದಾರೆ. ಜಿಲ್ಲಾ ಕೇಂದ್ರ ದ ಅಭಿವೃದ್ಧಿ ಗಾಗಿ ಶ್ರಮಿಸಿದ್ದಾರೆ ಎಂದರು.

ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಅವರು ಕಾಂಗ್ರೆಸ್ ಪಕ್ಷದಿಂದಲ್ಲೇ ರಾಜಕೀಯ ಆರಂ ಭಿಸಿದರು.

ಅಧಿಕಾರ ಇರಲಿ, ಇಲ್ಲದಿದ್ದ ಸಂದರ್ಭ ದಲ್ಲೂ ಕಾಂಗ್ರೆಸ್ ಬಿಟ್ಟು ಹೋಗಿಲ್ಲ.

ಅವರಿಗೆ ಬೇರೆ ಪಕ್ಷಗಳಿಂದಲ್ಲೂ ಅಫರ್ ಬಂದರು ಕೂಡ ಪಕ್ಷಾಂತರ ಮಾಡದೆ ಕಾಂಗ್ರೆಸ್‌ನಲ್ಲಿ ನಿಷ್ಠಾವಂತರಾಗಿ ಪಕ್ಷ ಬೆಳೆಸಿದ್ದಾರೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಟ್ಟ ಅಭಿಮಾನಿಯಾಗಿರುವ ಶಾಸಕ ಸಿ.ಪುಟ್ಟ ರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡಿ ಚಾಮ ರಾಜನಗರ ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ಮಾಡಬೇಕು ಕಾಂಗ್ರೆಸ್ ವರಿಷ್ಠರಲ್ಲಿ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಕಟ್ಟೆ ಮನೆ ಯಜಮಾನ ಆನಂದ್, ಸೋಮಣ್ಣೇಗೌಡ, ಗುರುಲಿಂಗಯ್ಯ, ಮಹಾದೇವಸ್ವಾಮಿ, ಧನ ರಾಜು, ಮರಿಲಿಂಗ ಇತರರು ಹಾಜರಿದ್ದರು.



ಸಮಾಚಾರ ಸಣ್ಣದಲ್ಲ

ನಮ್ಮ ಆಸೆ ಪೂರೈಕೆ ಕಾಲ ಸನ್ನಿಹಿತ

ರಾಮನಗರ: ನಮ್ಮ ಆಸೆ, ಅಭಿಲಾಷೆಯನ್ನು ಭಗವಂತ ಈಡೇರಿಸುತ್ತಿದ್ದಾನೆ, ಪ್ರಾರ್ಥನೆ ನೆರವೇರುವ ಕಾಲ ಬಂದಿದೆ ಎಂದು ಶಾಸಕ ಇಕ್ಬಾಲ್ ಹುಸೇನ್ ಹೇಳಿದ್ದಾರೆ.

ಡಿ.ಕೆ. ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ಸಿಗುವ ವಿಚಾರ ಕುರಿತು ರಾಮನಗರದಲ್ಲಿ ಪ್ರತಿಕ್ರಿಯೆ ನೀಡಿದ ಶಾಸಕ ಇಕ್ಬಾಲ್ ಹುಸೇನ್ ಅವರು, ಎಲ್ಲರಿಗೂ ಆಸೆ ಇರುತ್ತದೆ. ನನಗೂ ಆಸೆ, ಅಭಿಲಾಷೆ ಇದೆ. ಪಕ್ಷದ ಲಕ್ಷಾಂತರ ಕಾರ್ಯಕರ್ತರು, ಮುಖಂಡರುಗಳಿಗೂ ಒಂದು ಆಸೆ ಇತ್ತು. ಆ ಆಸೆಯನ್ನು ಭಗವಂತ ಈಡೇರಿಸುತ್ತಿದ್ದಾನೆ. ನಾನು ಮೌನ ಮುರಿದು ಮಾತಾಡಿದ್ದೆ ಅಷ್ಟೇ. ಕೆಲವರು ಮೌನವಾಗಿಯೇ ಪ್ರಾರ್ಥನೆ ಮಾಡಿದ್ದರು. ಅದು ಈಡೇರುವ ಕಾಲ ಹತ್ತಿರ ಬಂದಿದೆ. ನಮ್ಮ ನಾಯಕರಿಗೆ ಒಂದು ಅವಕಾಶ ಸಿಗುತ್ತಾ ಇದೆ ಎಂದು ಭಗವಂತನಿಗೆ ಕೃತಜ್ಞತೆ ತಿಳಿಸಿದ್ದೇನೆ. ಇಂದು ಬಕ್ರೀದ್ ಹಬ್ಬ ಮಾಡ್ತಿದ್ದೇನೆ. ಹಬ್ಬದಲ್ಲಿ ರಾಜಕೀಯ ಬೆರೆಸಲ್ಲ ಎಂದು ತಿಳಿಸಿದ್ದಾರೆ.

ದಲಿತ ನಾಯಕರೇ ಬಿಜೆಪಿಗೆ ಬನ್ನಿ

ಬೀದರ್: ಕಾಂಗ್ರೆಸ್‌ನಲ್ಲಿ ಮೇಲ್ಜಾತಿಯವರೇ ಸಿಎಂ ಆಗುವುದಾದರೇ ದಲಿತರ ಪಾಡೇನು? ಕಾಂಗ್ರೆಸ್ ದಲಿತರನ್ನು ಮತ್ತೊಮ್ಮೆ ದೋಖಾ ಮಾಡಿದೆ. ದಲಿತ

ನಾಯಕರಿಗೆ ಅಂಬೇಡ್ಕರ್ ಬಗ್ಗೆ ಗೌರವ, ಸ್ವಾಭಿಮಾನದ ಬದುಕು ಬೇಕಾದರೆ ಬಿಜೆಪಿಗೆ ಬನ್ನಿ ಎಂದು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆಹ್ವಾನ ನೀಡಿದ್ದಾರೆ. ನಗರದಲ್ಲಿ ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಕಾಂಗ್ರೆಸ್ 80 ವರ್ಷಗಳಿಂದ ಪರಿಶಿಷ್ಟರನ್ನು ವಂಚಿಸುತ್ತಾ ಬಂದಿದೆ. ದೊಡ್ಡ ಬಹುಮತ ಇದ್ದಾಗಲೇ ದಲಿತರನ್ನು ಸಿಎಂ ಮಾಡಲಿಲ್ಲ. ಮುಂದೆ ಆ ಪಕ್ಷಕ್ಕೆ ಅಧಿಕಾರಕ್ಕಂತೂ ಬರುವುದಿಲ್ಲ. ಹಾಗಾದರೆ ದಲಿತರಿಗೆ ಯಾವಾಗ ಅಧಿಕಾರ ಕೊಡುತ್ತೀರಿ ? ಎಐಸಿಸಿ ಅಧ್ಯಕ್ಷ ಸ್ಥಾನಕ್ಕೇರಿದ ಡಾ. ಖರ್ಗೆ ಅವರಿಗೆ ಸಿಎಂ ಪಟ್ಟ ಕಟ್ಟಬೇಕಾಗಿತ್ತು. ಇಲ್ಲವೇ ಆ ಸ್ಥಾನಕ್ಕೆ ಪಕ್ಷದಲ್ಲಿ ಪರಮೇಶ್ವರ, ಮುನಿಯಪ್ಪ ಸೇರಿ ಹಲವು ನಾಯಕರು ಇರಲಿಲ್ಲವೇ ಎಂದು ಪ್ರಶ್ನಿಸಿದರು. 8 ವರ್ಷಗಳ ಕಾಲ ರಾಜ್ಯವನ್ನು ಆಳಿದ ಸಿಎಂ ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ ಹೈಕಮಾಂಡ್ ಅಗೌರವದಿಂದ ನಡೆಸಿಕೊಂಡಿದೆ ಎಂದರು.

ಒಳ್ಳೆಯ ಆಡಳಿತದ ನಂಬಿಕೆ ಉಳಿದಿಲ್ಲ

ಹೊಸಪೇಟೆ: ಸಿಎಂ ಬದಲಾವಣೆಯಾದರೂ ಒಳ್ಳೆಯ ಆಡಳಿತ ನಡೆಸುತ್ತಾರೆ ಎನ್ನುವ ನಂಬಿಕೆ ಉಳಿದಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಲೇವಡಿ ಮಾಡಿದ್ದಾರೆ.

ಹೊಸಪೇಟೆಯಲ್ಲಿ ಮಾತನಾಡಿದ ವಿಜಯೇಂದ್ರ, ಮುಖ್ಯಮಂತ್ರಿಗಳು ರಾಜ್ಯಪಾಲರ ಭೇಟಿಗೆ ಅನುಮತಿ ಕೇಳಿದರೆ, ಅದು ಮುಖ್ಯಮಂತ್ರಿಗಳ ಟಿಪಿಯಲ್ಲಿ ಇರುತ್ತೆ. ಸಿಎಂ ಬದಲಾವಣೆ ವಿಚಾರದಲ್ಲಿ ಬಿಜೆಪಿ ಬಳಸಿಕೊಳ್ಳಲ್ಲ. ರಾಜ್ಯ ಕಾಂಗ್ರೆಸ್‌ಗೆ 136 ಸ್ಥಾನ ನೀಡಿ ಸ್ಥಿರ ಸರಕಾರ ನೀಡಿದೆ. ಈ ವಿಚಾರದಲ್ಲಿ ನಾವು ಯಾವುದೇ ಕಾರಣಕ್ಕೂ ಕೈ ಹಾಕಲ್ಲ ಎಂದು ತಿಳಿಸಿದರು. ಕಾಂಗ್ರೆಸ್ ಪಕ್ಷದ ಆಂತರಿಕ ವಿಚಾರ ಅಷ್ಟು ಬೇಗ ಬಗೆಹರಿಯೋ ಹಾಗೆ ಕಾಣಿಸ್ತಿಲ್ಲ. ವರ್ಷದಿಂದ ಕಾಂಗ್ರೆಸ್ ಆಂತರಿಕ ಕಚ್ಚಾಟದಿಂದ ರಾಜ್ಯದಲ್ಲಿ ಆಡಳಿತ ಸಂಪೂರ್ಣ ಕುಸಿದಿದೆ. ರಾಜೀನಾಮೆ ಕೊಟ್ಟ ನಂತರ ಈ ಗೊಂದಲ ಮುಂದುವರಿಯುತ್ತವೆ. ಆಡಳಿತ ಪಕ್ಷದ ಆಂತರಿಕ ಕಚ್ಚಾಟದ ಪರಿಣಾಮ ಕರ್ನಾಟಕ ರಾಜ್ಯ ಆರ್ಥಿಕವಾಗಿ, ಆಡಳಿತಾತ್ಮಕವಾಗಿ ನೆಲಕಚ್ಚಿದೆ ಎಂದರು.

ಬ್ರೇಕ್ ಫಾಸ್ಟ್ ಸಭೆಯಲ್ಲಿ ಸಹೋದ್ಯೋಗಿಗಳಿಗೆ ಧನ್ಯವಾದ | ಅಧಿಕಾರ ತ್ಯಾಗ ಮಾಡುವ ಭಾವೋದ್ವೇಗದಲ್ಲಿ ಕಣ್ಣೀರು

ಸಿಎಂ ಪದವಿಗೆ ಸಿದ್ದರಾಮಯ್ಯ ಅಧಿಕೃತ ವಿದಾಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಪ್ಪು ಚುಕ್ಕೆ ಇಲ್ಲದೆ 3 ವರ್ಷ ರಾಜ್ಯದ ಸಿಎಂ ಆಗಿ ಆಡಳಿತ ನಡೆಸಿದ ಸಿದ್ದರಾಮಯ್ಯ ಅವರು ಗುರುವಾರ ತಮ್ಮ ಪದವಿಗೆ ಅಧಿಕೃತ ರಾಜೀನಾಮೆ ಘೋಷಣೆ ಮಾಡಿದರು.

ಈ ಮೂಲಕ ಕಳೆದ ಆರು ತಿಂಗಳ ಗೊಂದಲಗಳಿಗೆ ತಾವೇ ತೆರೆ ಎಳೆದರು. ಸಿದ್ದರಾಮಯ್ಯ ಅವರು ಕರೆದಿದ್ದ ಸಚಿವರ ಬ್ರೇಕ್‌ಫಾಸ್ಟ್ ಸಭೆಯಲ್ಲಿ ತಮ್ಮ ರಾಜೀನಾಮೆಯನ್ನು ಘೋಷಿಸುವುದರೊಂದಿಗೆ, ಮುಂದಿನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಆಗಲಿದ್ದಾರೆ ಎನ್ನುವುದನ್ನು ಅಧಿಕೃತ ಘೋಷಿಸಿದ್ದಾರೆ. ಸಚಿವರ ಉಪಾಹಾರ ಕೂಟದಲ್ಲಿ ಸಚಿವರೊಂದಿಗೆ ಮಾತನಾಡಿದ ಸಿದ್ದರಾಮಯ್ಯ ಅವರು, ತಾವು ರಾಜೀನಾಮೆ ನೀಡುತ್ತಿರುವುದಾಗಿ ಪ್ರಕಟಿಸಿದರು. ಸಚಿವರನ್ನು ಉದ್ದೇಶಿಸಿ ಮಾತನಾಡುವಾಗ ಸಿದ್ದರಾಮಯ್ಯ ಅವರು ಅಧಿಕಾರ ತ್ಯಾಗ ಮಾಡುವ ಭಾವೋದ್ವೇಗದಲ್ಲಿ ಕಣ್ಣೀರು ಹಾಕಿದರು ಎಂದು ತಿಳಿದು ಬಂದಿದೆ. ಸಿದ್ದರಾಮಯ್ಯ ಅವರ ಕಣ್ಣೀರು ಕಂಡು ಬಹಳಷ್ಟು ಸಚಿವರು ಗದ್ಗದಿತರಾದರು ಎಂದು ತಿಳಿದು ಬಂದಿದೆ.

ಕಳೆದ 3 ವರ್ಷ ನನ್ನ ನೇತೃತ್ವದಲ್ಲಿ ನಡೆಸಿದ ಆಡಳಿತಕ್ಕೆ ನೀವೆಲ್ಲರೂ ಸಹಕಾರ ನೀಡಿದ್ದೀರಿ. ಸಹಕಾರ ನೀಡಿದ್ದಕ್ಕೆ ನಿಮಗೆ ಕೃತಜ್ಞತೆಗಳು. ನಾನು ಎರಡು ವರ್ಷ ಶಾಸಕನಾಗಿ ನಿಮ್ಮ ಜತೆಗೇ ಇರುತ್ತೇನೆ. ಹೈಕಮಾಂಡ್ ಡಿ.ಕೆ. ಶಿವಕುಮಾರ್ ಮುಂದಿನ ಸಿಎಂ ಅಂತ ಹೇಳಿದೆ. ಅದನ್ನು ನಿಮ್ಮ ಮುಂದೆ ಹೇಳುತ್ತಿದ್ದೇನೆ. ನಾನು ಇನ್ನೂ ರಾಜಕೀಯದಲ್ಲಿ ಸಕ್ರಿಯವಾಗಿಯೇ ಇರುತ್ತೇನೆ. 2028ರಲ್ಲೂ ಪಕ್ಷವನ್ನು ಅಧಿಕಾರಕ್ಕೆ ತರೋಣ. ನಾವೆಲ್ಲರೂ ಸೇರಿ ಕೆಲಸ ಮಾಡೋಣ ಎನ್ನುವ ಮಾತನ್ನಾಡಿದ್ದಾರೆ ಎಂದು ತಿಳಿದುಬಂದಿದೆ.

ಸಿಎಂರಿಂದ ಸಚಿವರುಗಳಿಗೆ ಆರ್ಥಿಕ ಪಾಠ: ನಾನು ರಾಜಕಾರಣದಲ್ಲಿ ಇರೋದಿಲ್ಲ ಅಂತಾ ಭಾವಿಸಬೇಡಿ. ನಾನು ನಿಮ್ಮೊಂದಿಗೆ ಇರುತ್ತೇನೆ. ಒಟ್ಟಾಗಿ ಹೋಗೋಣ. ಮೂರು ವರ್ಷದ ಸರಕಾರದ ಉತ್ತಮ ಕೆಲಸಗಳನ್ನು ಮುಂದುವರಿಸಿಕೊಂಡು ಹೋಗಿ. ರಾಜ್ಯ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದೆ. ಸಾಲ, ಹಣಕಾಸು ಹೊಣೆಗಾರಿಕೆ ಕಾಯ್ದೆ ಮಿತಿಯೊಳಗೇ ಇದೆ. ಪಂಚ ಗ್ಯಾರಂಟಿ ಯೋಜನೆಗಳನ್ನು ಯಾವುದೇ ಪರಿಷ್ಕರಣೆ ಇಲ್ಲದೆ ಮುಂದುವರಿಸಿಕೊಂಡು ಹೋಗಿ. ಹಣಕಾಸು ಇಲಾಖೆ ಪಂಚ ಗ್ಯಾರಂಟಿ ಯೋಜನೆಗಳ ಪರಿಷ್ಕರಣೆಗೆ ತಾಕೀತು ಮಾಡುತ್ತಿರುತ್ತದೆ. ಆದರೆ, ಅದರ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ. ಜನಕಲ್ಯಾಣ ಯೋಜನೆಗಳಾದ ಪಂಚ ಗ್ಯಾರಂಟಿಯನ್ನು ಮುಂದುವರಿಸಿಕೊಂಡು ಹೋಗಿ. ಆಡಳಿತವನ್ನು ಚೆನ್ನಾಗಿ ನಡೆಸಿ ಎಂದು ಡಿ.ಕೆ. ಶಿವಕುಮಾರ್ ಅವರಿಗೆ ಸಲಹೆ ನೀಡಿದರು.

ನಾನು ರಾಜೀನಾಮೆ ಕೊಡುತ್ತಿದ್ದೇನೆ. ಡಿಕೆಶಿ ಮುಖ್ಯಮಂತ್ರಿ ಅಂತ ಹೈಕಮಾಂಡ್ ಹೇಳಿ ಕಳಿಸಿದ್ದಾರೆ. ಹಾಗಾಗಿ ಎಲ್ಲರೂ ಡಿಕೆಶಿಗೆ ಸಹಕಾರ ನೀಡಿ. ಇನ್ನೂ ಎರಡು ವರ್ಷ ಸರಕಾರ ಇರಲಿದೆ. ಎಲ್ಲರ ಸಹಕಾರದಿಂದ ಮತ್ತೆ ಅಧಿಕಾರಕ್ಕೆ ತರೋಣ. ಯಾರು ಅನ್ಯಥಾ ಭಾವಿಸಬೇಡಿ. ನಾನು ನನ್ನ ನಿರ್ಧಾರ ತಿಳಿಸಿದ್ದೇನೆ. ಹೈಕಮಾಂಡ್ ಹೇಳಿದ್ದಕ್ಕೆ ನಾನು ಬದ್ಧನಾಗಿದ್ದೇನೆ. ಅವರ ಸೂಚನೆ ಮೇರೆಗೆ ನಾನು ರಾಜೀನಾಮೆ ನೀಡ್ತಿದ್ದೇನೆ. ಯಾರು ಬೇರೆ ರೀತಿ ಅಪಾರ್ಥ ಮಾಡುವುದು ಬೇಡವೆಂದು ಸಿದ್ದರಾಮಯ್ಯ ಹೇಳಿದರು. ಇದೇ ವೇಳೆ ಕೆಲ ಸಚಿವರು ಮಾತನಾಡಿ, ನಿಮ್ಮ ಆಡಳಿತದಲ್ಲಿ ರಾಜ್ಯ ಸಾಕಷ್ಟು ಅಭಿವೃದ್ಧಿ ಕಂಡಿದೆ. ಉತ್ತಮ ಆಡಳಿತ ನಡೆಸಿದ್ದೀರಿ. ನಮಗೆ ಎಲ್ಲಾ ರೀತಿಯ ಸಲಹೆ, ಸಹಕಾರಗಳನ್ನು ನೀಡಿದ್ದೀರಿ ಎಂದು ಭಾವುಕರಾಗಿ ಅಭಿಪ್ರಾಯ ವ್ಯಕ್ತಪಡಿಸಿದರು ಎಂದು ತಿಳಿದುಬಂದಿದೆ.

ಸುದ್ದಿಗೋಷ್ಠಿ ಬಳಿಕ ಸಿದ್ದರಾಮಯ್ಯ ಅವರ ಕೈ ಹಿಡಿದು ಡಿಸಿಎಂ ಡಿಕೆಶಿ, ಸಚಿವರಾದ ಜಿ.ಪರಮೇಶ್ವರ್, ಎಚ್.ಸಿ.ಮಹದೇವಪ್ಪ, ಪ್ರಿಯಾಂಕ್ ಖರ್ಗೆ, ಕೆ.ಜೆ.ಜಾರ್ಜ್ ಒಗ್ಗಟ್ಟು ಪ್ರದರ್ಶಿಸಿದರು.

ಮುಂದಿನ ಮುಖ್ಯಮಂತ್ರಿ ಯಾರು ಸರ್?

ಸಿದ್ದರಾಮಯ್ಯ ರಾಜೀನಾಮೆ ಬಗ್ಗೆ ಘೋಷಿಸುತ್ತಿದ್ದಂತೆ ಮುಂದಿನ ಮುಖ್ಯಮಂತ್ರಿ ಯಾರು ಸರ್ ಅಂತ ಪತ್ರಕರ್ತರು ಪ್ರಶ್ನಿಸಿದರು. ಅದಕ್ಕೆ ಜಾಣ್ಮೆಯಿಂದಲೇ ಉತ್ತರಿಸಿದ ಸಿದ್ದರಾಮಯ್ಯ, ಹೈಕಮಾಂಡ್ ಸೂಚಿಸಿದವ್ರು, ಶಾಸಕಾಂಗ ಸಭೆಯಲ್ಲಿ ಶಾಸಕರ ಬೆಂಬಲ ಪಡೆದವರೇ ಸಿಎಂ ಆಗ್ತಾರೆ ಅಂತ ಹೇಳಿದರು. ಆದ್ರೆ ಅಪ್ಪಿತಪ್ಪಿಯೂ ಡಿಕೆಶಿ ಹೆಸರು ಪ್ರಸ್ತಾಪಿಸಿಲ್ಲ!. ಅಲ್ಲದೆ, ರಾಜ್ಯಪಾಲರು ನನ್ನ ರಾಜೀನಾಮೆ ಪತ್ರವನ್ನು ಅವರು ಬಂದಮೇಲೆ ಅಂಗೀಕಾರ ಮಾಡ್ತಾರೆ ಅಂತ ವಿಶ್ವಾಸ ಇದೆ. ಸಂವಿಧಾನದ ಪ್ರಕಾರ ಮಾಡಲೇಬೇಕು. ಅವ್ರು ಪ್ರೊಸೀಜರ್ ಏನ್ ಮಾಡ್ತಾರೆ ಅವ್ರಿಗೆ ಬಿಟ್ಟಿದ್ದು. ಒಂದು ಸಾರಿ ಮುಖ್ಯಮಂತ್ರಿಗಳು ರಾಜೀನಾಮೆ ಕೊಟ್ಟಮೇಲೆ ಅಂಗೀಕಾರ ಮಾಡಿ, ಮುಂದಿನ ಮುಖ್ಯಮಂತ್ರಿಗೆ ಅವಕಾಶ ಮಾಡಿಕೊಡಬೇಕಾದದ್ದು ಅವರ ಜವಾಬ್ದಾರಿ ಎಂದು ಸಿದ್ದರಾಮಯ್ಯ ಹೇಳಿದರು.

ಸಿದ್ದರಾಮಯ್ಯ ಹೇಳಿದ್ದೇನು?

- 3 ವರ್ಷ ಸಹಕರಿಸಿದ್ದಕ್ಕೆ ಧನ್ಯವಾದ, ಉತ್ತಮ ಕಾರ್ಯ ಮುಂದುವರಿಸಲು ಸಲಹೆ
- ಹೈಕಮಾಂಡ್ ಡಿಕೆಶಿ ಮುಂದಿನ ಸಿಎಂ ಎಂದಿದೆ, ನಾನೂ ರಾಜಕೀಯದಲ್ಲಿ ಸಕ್ರಿಯವಾಗಿ ಇರುತ್ತೇನೆ.
- ಪಂಚ ಗ್ಯಾರಂಟಿಗಳನ್ನು ಮುಂದುವರಿಸಿಕೊಂಡು ಆಡಳಿತವನ್ನು ಚೆನ್ನಾಗಿ ನಡೆಸಿ, ಡಿಕೆಶಿಗೆ ಕಿವಿಮಾತು
- ಇನ್ನೂ ಎರಡು ವರ್ಷ ಸರಕಾರ ಇರಲಿದೆ. ಎಲ್ಲರ ಸಹಕಾರದಿಂದ ಮತ್ತೆ ಅಧಿಕಾರಕ್ಕೆ ತರೋಣ

ಮಾಧ್ಯಮದ ಮುಂದೆ ಸಂತೋಷ್ ಲಾಡ್ ಕಣ್ಣೀರು

ಬೆ.9ಕ್ಕೆ ಆರಂಭವಾದ ಬ್ರೇಕ್‌ಫಾಸ್ಟ್ ಸಭೆ ಸುಮಾರು ಎರಡು ಗಂಟೆಗಳ ಕಾಲ ನಡೆಯಿತು. ಸಭೆಯ ಬಳಿಕ ಸಚಿವರೆಲ್ಲ ಒಬ್ಬೊಬ್ಬರೇ ಹೊರ ನಡೆಯುವಾಗ, ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು. ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಕಾಣಿಸಿಕೊಂಡಿದ್ದ ಸಂತೋಷ್ ಲಾಡ್ ಅವರು ಮಾಧ್ಯಮದವರು ಪ್ರಶ್ನಿಸುತ್ತಿದ್ದಂತೆ ಕಣ್ಣೀರು ಸುರಿಸಿದರು. ಇನ್ನು ಕೆಲ ಸಚಿವರು ಭಾವುಕರಾಗಿ ಮೌನಕ್ಕೆ ಶರಣಾಗಿ ಪ್ರತಿಕ್ರಿಯೆ ನೀಡದೇ ಹೊರನಡೆದರು.

ಗೃಹ ಕಚೇರಿ ಕೃಷ್ಣಾದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿದ್ದರಾಮಯ್ಯ ಅವರು ಸಿಎಂ ಸ್ಥಾನಕ್ಕೆ ಅಧಿಕೃತ ರಾಜೀನಾಮೆ ಘೋಷಣೆ ಮಾಡಿದರು.

ರಾಜ್ಯಪಾಲರ ಕಾರ್ಯದರ್ಶಿಗೆ ರಾಜೀನಾಮೆ ಪತ್ರ ಸಲ್ಲಿಕೆ | ಶೀಘ್ರದಲ್ಲೇ ರಾಜ್ಯಕ್ಕೆ ನೂತನ ಸಿಎಂ

ಮತದಾರರೇ ದೇವರೆಂದ ಸಿದ್ದರಾಮಯ್ಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿರುವುದಾಗಿ ಘೋಷಿಸಿರುವ ಸಿದ್ದರಾಮಯ್ಯ ಅವರು, ರಾಜ್ಯಪಾಲರಿಗೆ ರಾಜೀನಾಮೆ ಪತ್ರ ಸಲ್ಲಿಸಿರುವುದಾಗಿ ತಿಳಿಸಿದರಲ್ಲದೆ, ಸಾಂವಿಧಾನಿಕ ವಿಧಿ-ವಿಧಾನಗಳ ಮೂಲಕ ಮುಂದಿನ ಕ್ರಮಗಳು ನಡೆಯಲಿದ್ದು ಶೀಘ್ರದಲ್ಲೇ ರಾಜ್ಯಕ್ಕೆ ನೂತನ ಮುಖ್ಯಮಂತ್ರಿ ದೊರೆಯಲಿದ್ದಾರೆ ಎಂದು ಹೇಳಿದರು.

ರಾಜೀನಾಮೆ ಬಳಿಕ ಗೃಹ ಕಚೇರಿ ಕೃಷ್ಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ತಮ್ಮ ನಾಲ್ಕೂವರೆ ದಶಕಗಳ ರಾಜಕೀಯ ಪಯಣ, ಹೋರಾಟ, ತತ್ವನಿಷ್ಠೆ ಹಾಗೂ ಜನಸೇವೆಯ ಬದ್ಧತೆ ನೆನಪಿಸಿಕೊಂಡರು. ನಾನು ಒತ್ತಡ ಮತ್ತು ಪ್ರಭಾವಗಳಿಗೆ ತಲೆಬಾಗುವ ವ್ಯಕ್ತಿಯಲ್ಲ. ಈ ರಾಜೀನಾಮೆ ಪತ್ರವನ್ನೂ ಸಂತೋಷದಿಂದ ಮನಪೂರ್ವಕವಾಗಿ ಸಲ್ಲಿಸಿದ್ದೇನೆ ಎಂದು ಅವರು ಸ್ಪಷ್ಟಪಡಿಸಿದರು. ಗ್ರಾಮೀಣ ರೈತ ಕುಟುಂಬದಿಂದ ಬಂದ ತಾವು ಶಾಸಕ, ಸಚಿವ ಅಥವಾ ಮುಖ್ಯಮಂತ್ರಿ ಆಗುವ ಕನಸನ್ನೂ ಕಂಡಿರಲಿಲ್ಲ ಎಂದು ಹೇಳಿದ ಅವರು, ಈ ಮಟ್ಟಕ್ಕೆ ನನ್ನನ್ನು ತಂದು ನಿಲ್ಲಿಸಿದ್ದು ಡಾ. ಬಿ. ಆರ್.ಅಂಬೇಡ್ಕರ್ ರಚಿಸಿದ ಸಂವಿಧಾನ. ಸಂವಿಧಾನದ ಬಲ ಇಲ್ಲದೆ ಇದ್ದರೆ ನಾನು ಎಲ್ಲೋ ಕುರಿ ಮೇಯಿಸುತ್ತಿರುತ್ತಿದ್ದೆ ಎಂದು ಭಾವುಕರಾದರು.

ಜನತೆ ತಮ್ಮನ್ನು ಎರಡು ಬಾರಿ ಮುಖ್ಯಮಂತ್ರಿ ಸ್ಥಾನಕ್ಕೆ ಏರಿಸಿದ ಬಗ್ಗೆ ಕೃತಜ್ಞತೆ ಸಲ್ಲಿಸಿದ ಅವರು, ಮತದಾರರನ್ನು ಮತದಾರ ದೇವರು ಎಂದು ಕರೆದರು. ಕಾಂಗ್ರೆಸ್ ಪಕ್ಷವು ತಮ್ಮ ಸೈದ್ಧಾಂತಿಕ ಹೋರಾಟಕ್ಕೆ ಮಾನ್ಯತೆ ನೀಡಿ ರಾಜಕೀಯ ಅವಕಾಶ ನೀಡಿದೆ ಎಂದು ಹೇಳಿ, ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರಿಗೆ ವಿಶೇಷ ಧನ್ಯವಾದಗಳನ್ನು ಸಲ್ಲಿಸಿದರು. ನಾನು ರಾಜಕಾರಣವನ್ನು ಅಧಿಕಾರ ಅಥವಾ ವ್ಯಾಪಾರದ ಸಾಧನವೆಂದು ನೋಡಿಲ್ಲ. ಅದು ಬಡವರು, ಶೋಷಿತರು ಮತ್ತು ನೊಂದವರಿಗೆ ನೆರವಾಗುವ ಅವಕಾಶ ಎಂದು ತಿಳಿದುಕೊಂಡಿದ್ದೇನೆ ಎಂದು ಹೇಳಿದರು.

ತಮ್ಮ ರಾಜಕೀಯ ಪಯಣದಲ್ಲಿ ರಾಜಪ್ಪ ಮಾಸ್ತರ್, ರೈತನಾಯಕ ಎಂ.ಡಿ.ನಂಜುಂಡಸ್ವಾಮಿ ಹಾಗೂ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರ ಮಾರ್ಗದರ್ಶನ ಸ್ಮರಿಸಿದ ಸಿದ್ದರಾಮಯ್ಯ, ಅವರ ನೆರವು ಇಲ್ಲದೆ ಈ ಮಟ್ಟಕ್ಕೆ ಏರಲು ಸಾಧ್ಯವಾಗುತ್ತಿರಲಿಲ್ಲ ಎಂದರು. ರಾಜಕೀಯ ಜೀವನದಲ್ಲಿ ಎದುರಿಸಿದ ಟೀಕೆ, ದ್ವೇಷ, ಪಿತೂರಿ ಹಾಗೂ ಕುಟುಂಬದ ಮೇಲಿನ ಆರೋಪಗಳನ್ನು ನೆನಪಿಸಿಕೊಂಡ ಅವರು, ನನ್ನ ಪತ್ನಿಯ ಮೇಲೂ ಸುಳ್ಳು ಆರೋಪ ಮಾಡಿ ಮಾನಸಿಕ ಹಿಂಸೆ ನೀಡಲಾಯಿತು. ಆದರೂ ಹೋರಾಟದ ದಾರಿಯಿಂದ ಹಿಂದೆ ಸರಿಯಲಿಲ್ಲ ಎಂದರು.

ಸಚಿವರು ಹಾಗೂ ಶಾಸಕರ ನಿಯೋಗದ ಜತೆ ಲೋಕಭವನಕ್ಕೆ ತೆರಳಿದ ಸಿದ್ದರಾಮಯ್ಯ ಅವರು ಸಿಎಂ ಹುದ್ದೆಯ ರಾಜೀನಾಮೆ ಪತ್ರವನ್ನು ರಾಜ್ಯಪಾಲರ ಆಪ್ತ ಕಾರ್ಯದರ್ಶಿಗೆ ಸಲ್ಲಿಕೆ ಮಾಡಿದರು.

ದೇಶದಲ್ಲೇ ನಂಬರ್ 1 ರಾಜ್ಯ

ತಮ್ಮ ಆಡಳಿತಾವಧಿಯ ಸಾಧನೆಗಳನ್ನು ಉಲ್ಲೇಖಿಸಿದ ಸಿದ್ದರಾಮಯ್ಯ, ಕರ್ನಾಟಕ ಇಂದು ದೇಶದಲ್ಲೇ ತಲಾ ಆದಾಯದಲ್ಲಿ ಮೊದಲ ಸ್ಥಾನದಲ್ಲಿದೆ, ಗ್ಯಾರಂಟಿ ಯೋಜನೆಗಳ ಮೂಲಕ ಸಾಮಾಜಿಕ ಭದ್ರತೆ ಒದಗಿಸಲಾಗಿದೆ, ಹಸಿವು ಮತ್ತು ಅಪೌಷ್ಟಿಕತೆ ಕಡಿಮೆಯಾಗಿದೆ ಎಂದು ಹೇಳಿದರು. ಕೃಷಿ, ನೀರಾವರಿ, ಆರೋಗ್ಯ, ಶಿಕ್ಷಣ ಹಾಗೂ ಮೂಲಸೌಕರ್ಯ ಕ್ಷೇತ್ರಗಳಲ್ಲಿ ಸರಕಾರ ಮಹತ್ವದ ಪ್ರಗತಿ ಸಾಧಿಸಿದೆ ಎಂದರು. ಅಲ್ಲದೆ, ಹದಿನೇಳು ಬಜೆಟ್ ಮಂಡಿಸಿರುವ ತೃಪ್ತಿ ವ್ಯಕ್ತಪಡಿಸಿದ ಅವರು, ಇತಿಹಾಸದಲ್ಲಿ ಸುದೀರ್ಘ ಅವಧಿಯ ಮುಖ್ಯಮಂತ್ರಿ ಎಂದು ಗುರುತಿಸಿಕೊಳ್ಳುವುದಕ್ಕಿಂತ ಜನರ ಏಳಿಗೆಗೆ ಕಾರಣವಾದ ಯೋಜನೆಗಳನ್ನು ನೀಡಿದ ನಾಯಕನಾಗಬೇಕು ಎಂಬ ಆಶಯದಿಂದ ಕೆಲಸ ಮಾಡಿದ್ದೇನೆ. ರಾಜಕೀಯ ನಿವೃತ್ತಿ ಇಲ್ಲ ಎಂದು ಸ್ಪಷ್ಟಪಡಿಸಿದ ಸಿದ್ದರಾಮಯ್ಯ, ಚುನಾವಣಾ ರಾಜಕಾರಣದಿಂದ ದೂರ ಸರಿದರೂ ಜನಸೇವೆಯ ಹೋರಾಟ ಮುಂದುವರಿಯಲಿದೆ ಎಂದು ಘೋಷಿಸಿದರು.

ಹಿರಿಯ ಸಚಿವರನ್ನು ಕೈಬಿಡುವ ಆಲೋಚನೆ
4 ಬಾರಿಗೂ ಹೆಚ್ಚು ಸಚಿವರಾದವರಿಗೆ ಕೊಕ್

ಡಿಕೆ ಕ್ಯಾಬಿನೆಟ್‌ನಲ್ಲಿ ಯುವಕರಿಗೆ ಮಣೆ



ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ನೀಡಿದ ಬೆನ್ನಲ್ಲೇ, ಹೊಸ ಸರಕಾರಕ್ಕೆ ಸಕಲ ಸಿದ್ಧತೆಗಳು ಶುರುವಾಗಿದೆ. ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಪ್ರಮಾಣ ವಚನ ಸ್ವೀಕರಿಸುವುದು ಬಹುತೇಕ ಖಚಿತವಾದರೂ, ಡಿಕೆ ಸಾಹೇಬರ ಸಂಪುಟಕ್ಕೆ ಯಾರೆಲ್ಲ ಸೇರಲಿದ್ದಾರೆ ಎನ್ನುವ ಕುತೂಹಲ ಶುರುವಾಗಿದೆ.

ಗುರುವಾರ ಬೆಳಗ್ಗೆ ನಡೆದ ಸಚಿವರೊಂದಿಗಿನ ಬ್ರೇಕ್‌ಫಾಸ್ಟ್ ಸಭೆಯಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಾವು ರಾಜೀನಾಮೆ ನೀಡುವುದಾಗಿ ಹೇಳುವುದಷ್ಟೇ ಅಲ್ಲದೇ, ಮುಂದಿನ ಸಚಿವ ಸಂಪುಟದ ಬದಲಾವಣೆಗೆ ಸಂಬಂಧಿಸಿದಂತೆಯೂ ಪರೋಕ್ಷವಾಗಿ ಪ್ರಸ್ತಾಪಿಸಿದ್ದಾರೆ. ರಾಜ್ಯದಲ್ಲಿರುವ ರಣದೀಪ್ ಸಿಂಗ್ ಸುರ್ಜೇವಾಲ, ಈ ಹಿಂದೆ ಸಚಿವರಾಗಿ ಕಾರ್ಯನಿರ್ವಹಿಸಿರುವ ಹಲವು ಸಚಿವರನ್ನು ಪಕ್ಷದ ಸಂಘಟನೆ ಕಳುಹಿಸಿ, ಸರಕಾರದಲ್ಲಿ ಹೊಸ ಮುಖಗಳಿಗೆ ಮನ್ನಣೆ ಹಾಕೋಣ ಎನ್ನುವ ಬಗ್ಗೆ ಮಾತನಾಡಿದ್ದಾರೆ ಎನ್ನಲಾಗಿದೆ.

ಚುನಾವಣೆಗೆ ಎರಡು ವರ್ಷ ಬಾಕಿಯಿರುವುದರಿಂದ ಮತ್ತೊಮ್ಮೆ ಸಂಪುಟ ಪುನಾರಚನೆಗೆ ಅವಕಾಶವಿಲ್ಲ, ಆದ್ದರಿಂದ ಈಗಲೇ ಪಕ್ಷ ಸಂಘಟನೆಗೆ ಕೆಲ ನಾಯಕರನ್ನು ಕಳುಹಿಸುವುದು ಸೂಕ್ತ. ಇದೇ ರೀತಿ ಸಂಪುಟದಲ್ಲಿ ಯುವಕರಿಗೆ ಅವಕಾಶ ನೀಡುವ ಮೂಲಕ ಹೊಸ ನೀರಿರುವ ಸರಕಾರ ಎನ್ನುವ ಸಂದೇಶ ರವಾನಿಸುವ ಲೆಕ್ಕಾಚಾರದಲ್ಲಿ ಪಕ್ಷದ ಹೈಕಮಾಂಡ್ ಇದೆ ಎನ್ನಲಾಗಿದೆ. ಕೇವಲ ಹಿರಿಯರಿಗೆ ಮನ್ನಣೆ ಹಾಕುವ ಬದಲು ಕಿರಿಯರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವ ಮೂಲಕ ಹಿರಿ-ಕಿರಿಯರ ಸಮಾಗಮದಲ್ಲಿ ಸಂಪುಟ ರಚಿಸುವುದು ಸೂಕ್ತ ಎನ್ನುವ ಮಾತುಗಳು ಕೇಳಿಬಂದಿದೆ.

ಆರಂಭದಲ್ಲಿ ಹಿರಿಯರನ್ನೆಲ್ಲ ಬಿಟ್ಟು ಕಿರಿಯವರಿಗೆ ಅವಕಾಶ ನೀಡಬೇಕು ಎನ್ನುವ ಮಾತುಗಳು ಕೇಳಿಬಂದಿತ್ತು. ಆದರೆ ಸಂಸದೀಯ ವ್ಯವಹಾರ, ಕಾನೂನು ವಿಷಯಗಳಲ್ಲಿ ಅನುಭವವಿರುವವರಿಗೆ ಅವಕಾಶ ನೀಡಬೇಕು. ಆದ್ದರಿಂದ ಕೆಲವು ಹಿರಿಯರನ್ನು ಸಂಪುಟದಲ್ಲಿ ಉಳಿಸಿಕೊಳ್ಳಬೇಕು ಎನ್ನುವ ಮಾತುಗಳು ಕೇಳಿಬರುತ್ತಿದೆ. ಪ್ರಮುಖವಾಗಿ ಮುಸ್ಲಿಂ ಕೋಟದಲ್ಲಿ ಸಂಪುಟ ಸೇರಲು ಹಲವು ನಾಯಕರು ತಯಾರಿ ನಡೆಸಿದ್ದು, ಸ್ಪೀಕರ್ ಯು.ಟಿ. ಖಾದರ್ ಸಂಪುಟಕ್ಕೆ ಬರುವುದು ಬಹುತೇಕ ನಿಶ್ಚಿತ ಎನ್ನಲಾಗಿದೆ. ಒಂದು ವೇಳೆ ಇದಾದರೆ ವಿಧಾನಸಭಾಧ್ಯಕ್ಷರಾಗಿ ಹಾಲಿ ಸಚಿವ ದಿನೇಶ್ ಗುಂಡೂರಾವ್ ಅವರು ಆಯ್ಕೆಯಾಗಲಿದ್ದಾರೆ ಎನ್ನಲಾಗಿದೆ.

ಡಿಕೆ ಸಂಪುಟಕ್ಕೆ ಸೇರದಿರಲು ಕೆಲವರ ತೀರ್ಮಾನ: ಒಂದೆಡೆ ಸಿಎಂ ಸಂಪುಟದಲ್ಲಿದ್ದ ಕೆಲವರನ್ನು ಕೈಬಿಡುವ ಆಲೋಚನೆಗಳು ನಡೆಯುತ್ತಿದ್ದರೆ, ಇನ್ನೊಂದೆಡೆ ಹಿರಿಯ ಶಾಸಕರು, ಸಚಿವರು ಡಿ.ಕೆ.ಶಿವಕುಮಾರ್ ಸಂಪುಟದ ಭಾಗವಾಗದಿರಲು ತೀರ್ಮಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಿದ್ದು ಆಪ್ತರಿಗೆ ಸಿಗದ ಸ್ಪಷ್ಟತೆ

ಇನ್ನು ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಕಾಣಿಸಿಕೊಂಡಿದ್ದ 10ಕ್ಕೂ ಹೆಚ್ಚು ಸಚಿವರು ಡಿ.ಕೆ.ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ಮುಂದುವರೆಯುವರೋ ಅಥವಾ ಇಲ್ಲವೋ ಎನ್ನುವ ಸ್ಪಷ್ಟನೆ ಸಿಕ್ಕಿಲ್ಲ. ಇದರೊಂದಿಗೆ ಕೆಲ ಸಚಿವಾಕಾಂಕ್ಷಿಗಳಿಗೆ ಡಿಕೆಶಿ ಮಣೆ ಹಾಕುವರೋ ಅಥವಾ ತಮ್ಮ ಆಪ್ತರಿಗೆ ಹೆಚ್ಚಿನ ಅವಕಾಶ ನೀಡುವರೋ ಎನ್ನುವ ಗೊಂದಲಗಳಿವೆ. ಈ ಗೊಂದಲಕ್ಕೆ ಶುಕ್ರವಾರ ಸ್ಪಷ್ಟನೆ ಸಿಗುವ ಸಾಧ್ಯತೆಯಿದ್ದು, ದೆಹಲಿಯಲ್ಲಿ ಸಿದ್ದರಾಮಯ್ಯ ಅವರು ಪಕ್ಷದ ಹೈಕಮಾಂಡ್ ಮೇಲೆ ತಮ್ಮ ಆಪ್ತರಿಗೆ ಸೂಕ್ತ ಸ್ಥಾನಮಾನ ನೀಡುವಂತೆ ಒತ್ತಡ ಹೇರುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಹಿರಿಯ ಸಚಿವರಿಗೆ ಕೊಕ್?

ಚುನಾವಣೆಗೆ ಎರಡು ವರ್ಷವಿರುವಾಗ ಯುವಕರಿಗೆ ಆದ್ಯತೆ ನೀಡುವ ಲೆಕ್ಕಾಚಾರದಲ್ಲಿ ಪಕ್ಷದ ಹೈಕಮಾಂಡ್ ಇದೆ ಎನ್ನಲಾಗಿದೆ. ಆದ್ದರಿಂದ ಸಿದ್ದರಾಮಯ್ಯ ಸಚಿವ ಸಂಪುಟದಲ್ಲಿದ್ದ ಹಲವು ಹಿರಿಯ ಸಚಿವರನ್ನು ಕೈಬಿಟ್ಟು 2ನೇ, 3ನೇ ಬಾರಿ ಶಾಸಕರಾಗಿರುವವರಿಗೆ ಅವಕಾಶ ನೀಡುವ ಲೆಕ್ಕಾಚಾರಗಳು ನಡೆಯುತ್ತಿದೆ. ಆದರೆ ಈ ರೀತಿ ಮಾಡುವುದರಿಂದ, ಎದುರಾಗಬಹುದಾದ ಸಮಸ್ಯೆಗಳನ್ನು ಗಮನಿಸಿಕೊಂಡು ಎಚ್ಚರಿಕೆಯ ಹೆಜ್ಜೆ ಇಡಲು ಹೈಕಮಾಂಡ್ ತೀರ್ಮಾನಿಸಿದೆ. ಏಕೆಂದರೆ, ಈಗಾಗಲೇ ಸಿದ್ದರಾಮಯ್ಯ ಅವರನ್ನು ಕೈಬಿಟ್ಟಿರುವುದರಿಂದ ಅಸಮಾಧಾನವಿದೆ. ಈಗ ಹಿರಿಯರನ್ನು ಕೈಬಿಟ್ಟರೆ ಕಾರ್ಯಕರ್ತರು ತಿರುಗಿಬೀಳುವ ಸಾಧ್ಯತೆಯಿದೆ ಎನ್ನುವ ಆತಂಕ ನಾಯಕರಲ್ಲಿದೆ.

ಮಾಜಿ ಸಿಎಂಗೆ ರಾಜ್ಯದಲ್ಲಿ ಯಾವ ಹೊಣೆ? | ಇದು ಡಿಕೆಶಿಗೆ ಮಾತ್ರವಲ್ಲ, ಪಕ್ಷಕ್ಕೇ ದೊಡ್ಡ ಸವಾಲು

ಸಿದ್ದು ಸಕ್ರಿಯ ರಾಜಕಾರಣಕ್ಕೆ ದಾರಿ ಯಾವುದಯ್ಯ?

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ರಾಜೀನಾಮೆ ಸಲ್ಲಿಕೆಯಾಗಿದೆ. ಹಾಗಾದರೆ ಮುಂದೇನು? ಇದು ಕಾಂಗ್ರೆಸ್‌ನಲ್ಲಿ ನಡೆದ ಬಹುನಿರೀಕ್ಷಿತ ಬೆಳವಣಿಗೆ ನಂತರ ರಾಜ್ಯ ರಾಜಕಾರಣದಲ್ಲಿ ಕೇಳಿಬರುತ್ತಿರುವ ಸಹಜ ಪ್ರಶ್ನೆ.

ಹೌದು... ಹಿಂದುಳಿದ ವರ್ಗಗಳ ಸದ್ಯದ ಪ್ರಶ್ನಾತೀತ ನಾಯಕ ಸಿದ್ದರಾಮಯ್ಯ ಅವರಿಂದ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಿಸಿದ್ದಾಗಿದೆ. ಆದರೆ ಮುಂದೇನು ಎನ್ನುವ ಪ್ರಶ್ನೆ ಎದುರಾಗಿದೆ. ಇದಕ್ಕೆ ರಾಜೀನಾಮೆ ಸಲ್ಲಿಕೆ ನಂತರ

ಅವರೇ ಸೂಚ್ಯವಾದ ಉತ್ತರಗಳನ್ನೂ ನೀಡಿದ್ದಾರೆ. ಅದೆಂದರೆ, ನಾನು ಯಾವುದೇ ಕಾರಣಕ್ಕೂ ರಾಷ್ಟ್ರರಾಜಕಾರಣಕ್ಕೆ ಹೋಗುವುದಿಲ್ಲ. ರಾಜ್ಯ ರಾಜಕಾರಣದಲ್ಲೇ ಮುಂದುವರಿಯುತ್ತೇನೆ. ಅದೂ ಸಕ್ರಿಯವಾಗಿಯೇ ಇರುತ್ತೇನೆ. ಜತೆಗೆ ಕೋಮುವಾದಿ ಶಕ್ತಿಗಳ ವಿರುದ್ಧ ನಿರಂತರ ಹೋರಾಟ ನಡೆಸುತ್ತೇನೆ ಎಂದು ತಮ್ಮ ಭವಿಷ್ಯದ ನಿರ್ಧಾರಗಳನ್ನು ಪ್ರಕಟಿಸಿದ್ದಾರೆ. ಆದರೆ ಅವರು ರಾಜ್ಯ ರಾಜಕಾರಣದಲ್ಲಿ ಹೇಗೆ ಸಕ್ರಿಯವಾಗಿ ಇರುತ್ತಾರೆ. ತಮ್ಮ ಮುಂದಿನ ಹೋರಾಟಗಳನ್ನು ಕಾಂಗ್ರೆಸ್‌ನಲ್ಲಿ ಯಾವ ಸ್ಥಾನಮಾನಗಳ ಮೂಲಕ ನಡೆಸುತ್ತಾರೆ ಎನ್ನುವುದನ್ನು ಮಾತ್ರ ಹೇಳದೆ ಅದನ್ನು ಸೂಚ್ಯವಾಗಿ ಪಕ್ಷದ ಹೈಕಮಾಂಡ್ ನಿರ್ಧಾರಕ್ಕೆ ಬಿಟ್ಟಿದ್ದಾರೆ. ಕಾರಣ ಅದನ್ನು ಪಕ್ಷ ನಿರ್ಧರಿಸಬೇಕಿದೆ. ಹೀಗಾಗಿ ಸಿದ್ದರಾಮಯ್ಯ ರಾಜೀನಾಮೆ ನಂತರ ಅವರನ್ನು ಪಕ್ಷದಲ್ಲಿ ಹೇಗೆ ನಡೆಸಿಕೊಳ್ಳಬೇಕು ಎನ್ನುವ ಬಗ್ಗೆ ಕಾಂಗ್ರೆಸ್ ಹೈಕಮಾಂಡ್‌ನಲ್ಲಿ ಸದ್ಯ ಗೊಂದಲ ಶುರುವಾಗಿದೆ ಎನ್ನಲಾಗಿದೆ ಎಂದು ಮೂಲಗಳು ತಿಳಿಸಿವೆ.

ಪಕ್ಷದ ಹೈಕಮಾಂಡ್ ಒತ್ತಡವೋ ಅಥವಾ ಹಿಂದೆ ನೀಡಿದ್ದ ವಚನ ಪಾಲನೆಗಾಗಿಯೋ ಸಿದ್ದರಾಮಯ್ಯ ಅವರಿಂದ ರಾಜೀನಾಮೆ ಕೊಡಿಸಿ ಆಗಿದೆ. ಆದರೆ ಅವರ ಆಡಳಿತ ಅನುಭವ, ಆರ್ಥಿಕ ತಜ್ಞತೆ ಹಾಗೂ ರಾಜಕೀಯ ತಂತ್ರಗಾರಿಕೆಗಳನ್ನು ಹೇಗೆ ಬಳಸಿಕೊಳ್ಳಬೇಕು. ಅದಕ್ಕಾಗಿ ಅವರಿಗೆ ಪಕ್ಷದಲ್ಲಿ ಅಥವಾ ಸರಕಾರದಲ್ಲಿ ಯಾವ ಸ್ಥಾನಮಾನ ನೀಡಬೇಕು ಎನ್ನುವುದು ಪಕ್ಷದ ಹೈಕಮಾಂಡ್‌ಗೆ ಸದ್ಯಕ್ಕೆ ತಲೆನೋವು ತಂದಿದೆ. ಏಕೆಂದರೆ, ಸಿದ್ದರಾಮಯ್ಯ ರಾಜೀನಾಮೆ ನಂತರ ಸಲ್ಲಿಸಿರುವ ನಂತರದ ಬೇಡಿಕೆಗಳಲ್ಲಿ ತಮಗೆ ರಾಷ್ಟ್ರರಾಜಕಾರಣ ಬೇಡ, ಸಕ್ರಿಯ ರಾಜಕಾರಣ ಬೇಕು. ಕೋಮು ಶಕ್ತಿಗಳ ವಿರುದ್ಧ ಹೋರಾಟ ನಡೆಸಬೇಕು ಎನ್ನುವುದು. ಈ ಬೇಡಿಕೆಗಳನ್ನು ಪಕ್ಷದ ಹೈಕಮಾಂಡ್ ಹೇಗೆ ಈಡೇರಿಸುತ್ತದೆ ಎನ್ನುವ ಪ್ರಶ್ನೆ ಪಕ್ಷದ ರಾಜ್ಯ ನಾಯಕರನ್ನು ಕಾಡುತ್ತಿದೆ.

ಈ ಬೇಡಿಕೆಗಳ ಈಡೇರಿಕೆ ಕಷ್ಟಸಾಧ್ಯ

ಸಿದ್ದರಾಮಯ್ಯ ಅವರು ರಾಜಕೀಯವಾಗಿ ಸಲ್ಲಿಸುವ ಬೇಡಿಕೆಗಳಾದ ತಮ್ಮವರಿಗೆ ಮಂತ್ರಿ ಸ್ಥಾನಗಳು, ಪುತ್ರ ಯತೀಂದ್ರ ಹಾಗೂ ತಾವು ಸೂಚಿಸಿದವರಿಗೆ ಉಪಮುಖ್ಯಮಂತ್ರಿ ಸ್ಥಾನಗಳು, ಇನ್ನೂ ಮೀರಿ ಸಮನ್ವಯ ಸಮಿತಿ ರಚನೆ ಹಾಗೂ ಅದರ ಅಧ್ಯಕ್ಷ ಸ್ಥಾನ ಇತ್ಯಾದಿ ಬೇಡಿಕೆಗಳನ್ನು ಸಲ್ಲಿಸಬಹುದು. ಸದ್ಯದ ಮಾಹಿತಿ ಪ್ರಕಾರ, ಈ ಬೇಡಿಕೆಗಳು ಸಿದ್ದರಾಮಯ್ಯ ಅವರ ಪಾಳಯದಿಂದ ನಿರೀಕ್ಷಿತ ಕೂಡ ಎನ್ನಲಾಗಿದೆ. ಇವುಗಳಲ್ಲಿ ಪಕ್ಷದ ಹೈಕಮಾಂಡ್ ಚೌಕಾಶಿ ಮಾಡಿಯೋ ಅಥವಾ ಮನವೊಲಿಸಿಯೋ ಕೆಲವು ಬೇಡಿಕೆಗಳನ್ನು ಮಾತ್ರ ಈಡೇರಿಸಬಹುದು. ಆದರೆ ಸರಕಾರದಲ್ಲಿ ನೀತಿ, ನಿರ್ಧಾರಗಳನ್ನು ಕೈಗೊಳ್ಳುವ ಸಮನ್ವಯ ಸಮಿತಿ ರಚನೆಗೆ ಅದರಲ್ಲೂ ಅದರ ಅಧ್ಯಕ್ಷ ಹುದ್ದೆಯನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಒಪ್ಪುವ ಸಾಧ್ಯತೆ ಇಲ್ಲವೇ ಇಲ್ಲ ಎಂಬುದು ಅವರ ಆಪ್ತ ವಲಯದ ಮಾತು. ಇನ್ನು ಪಕ್ಷದ ಹೈಕಮಾಂಡ್ ಕೂಡ ಇದಕ್ಕೆ ಸೊಪ್ಪು ಹಾಕುವ ಸಾಧ್ಯತೆ ತೀರಾ ವಿರಳ ಎನ್ನಲಾಗಿದೆ. ಹೀಗಾಗಿ ಪಕ್ಷದ ಹೈಕಮಾಂಡ್ ಸಿದ್ದರಾಮಯ್ಯ ಅವರಿಗೆ ಮುಖ್ಯಮಂತ್ರಿಗಿಂತ ಉನ್ನತವಾದ ಯಾವುದೇ ಹುದ್ದೆ ನೀಡಲಾಗದು. ಅದಕ್ಕಿಂತ ತಳಮಟ್ಟದ ಹುದ್ದೆಗಳಿಗೆ ಅವರನ್ನು ಒಪ್ಪಿಸುವುದಕ್ಕೂ ಸಾಧ್ಯವಿಲ್ಲ. ಹಾಗಂತ ಅವರನ್ನು ಸಂಘಟನೆಯಲ್ಲೂ ತೊಡಗಿಸಲು ಆಗದು. ಹಾಗಾದರೆ ಸಿದ್ದರಾಮಯ್ಯ ಅವರಿಗೆ ಪಕ್ಷ ನೀಡುವ ಹಾಗೂ ವಹಿಸಬಹುದಾದ ಜವಾಬ್ದಾರಿಯಾದರೂ ಏನು ಎನ್ನುವ ಪ್ರಶ್ನೆಗೆ ಸದ್ಯ ಪಕ್ಷದ ಹೈಕಮಾಂಡ್ ಬಳಿ ಉತ್ತರ ಇಲ್ಲ ಎನ್ನುತ್ತಾರೆ ಪಕ್ಷದ ಹಿರಿಯ ನಾಯಕರು.

ಸಿದ್ದರಾಮಯ್ಯ ಅವರಿಗೆ ಯಾವುದಾದರೂ ಜವಾಬ್ದಾರಿ ಸ್ಥಾನ ನೀಡದಿದ್ದರೆ ಕಷ್ಟ. ಅವರು ಸುಮ್ಮನೆ ಕುಳಿತುಕೊಳ್ಳುವವರಲ್ಲ. ಹಿಂದುಳಿದ ವರ್ಗದ ಆಯೋಗದ ವರದಿಯನ್ನು ಕೊನೆಯ ಸಂದರ್ಭದಲ್ಲಿ ಸ್ವೀಕರಿಸಿದ್ದಾರೆ ಎಂದರೆ ಸಂಘರ್ಷ ಜೀವಂತ ಎಂದೇ ಅರ್ಥ. ಹೀಗಾಗಿ ಸದ್ಯ ಪಕ್ಷಕ್ಕೂ ದೊಡ್ಡ ಸವಾಲಿದೆ.

– ಬಿ.ಆರ್.ಪಾಟೀಲ್, ಕಾಂಗ್ರೆಸ್ ಹಿರಿಯ ಶಾಸಕ

ಸಿದ್ದು ಸುಮ್ಮನಿರಲಾರರು ಏಕೆ?

ಸುಮಾರು 50 ವರ್ಷಗಳ ರಾಜಕೀಯ ಅನುಭವದ ದೊಡ್ಡ ಬೆಟ್ಟದಂತಿರುವ ಸಿದ್ದರಾಮಯ್ಯ ಅವರು ಸದಾ ಜನರ ಮಧ್ಯೆ ರಾಜಕಾರಣ ಮಾಡಿರುವ ಹಿಂದುಳಿದ ವರ್ಗದ ದೊಡ್ಡ ನಾಯಕ. ಮಾಸ್ ಲೀಡರ್ ಎಂದು ದೇಶದಲ್ಲೇ ಹೆಸರುವಾಸಿಯಾದವರು. ಹೋರಾಟ ಮತ್ತು ವಾಕ್ಸಮರದ ಮೂಲಕ ಎದುರಾಳಿಯನ್ನು ಹಿಮ್ಮೆಟ್ಟಿಸುವವರು. ಸದಾ ಆಜ್ಞೆ, ಆದೇಶಗಳನ್ನು ಮಾಡುವ ನೈಪುಣ್ಯತೆ ಹೊಂದಿರುವವರು, ಆರ್ಥಿಕ ತಜ್ಞರು ಕೂಡ. ರಾಜಕಾರಣದಲ್ಲಿ ಸಕ್ರಿಯವಾಗಿ ಇರಬೇಕೆನ್ನುವುದರಲ್ಲಿ ಮಾಜಿ ಪ್ರಧಾನಿ ದೇವೇಗೌಡರ ಹಾದಿ ತುಳಿದವರಂತೆ ಇರುವವರು. ಇಂಥ ವ್ಯಕ್ತಿತ್ವ ಹಾಗೂ ಸ್ವಭಾವದ ಸಿದ್ದರಾಮಯ್ಯ ಅವರಿಂದ ರಾಜೀನಾಮೆ ಪಡೆದಿರುವ ಪಕ್ಷದ ಹೈಕಮಾಂಡ್ ಅವರನ್ನು ಒಂದಷ್ಟು ಕಾಲ ವಿಶ್ರಾಂತಿಯಿಂದ ಇರಿಸಬಹುದು. ಒಂದೊಮ್ಮೆ ಪಕ್ಷದ ವರಿಷ್ಠರು ದೀರ್ಘಕಾಲದವರೆಗೆ ಸಿದ್ದರಾಮಯ್ಯ ಅವರಿಗೆ ಯಾವುದೇ ಜವಾಬ್ದಾರಿಗಳನ್ನು ನೀಡದೆ, ಅವರಿಗೆ ಸೂಕ್ತ ಸ್ಥಾನಮಾನಗಳನ್ನು ಕಲ್ಪಿಸದೆ ಇದ್ದರೆ, ಸಿದ್ದರಾಮಯ್ಯ ಅವರು ನಿರೀಕ್ಷಿಸಿದ ಗೌರವಗಳು ಪಕ್ಷದೊಳಗೆ ಮತ್ತು ಸರಕಾರದಲ್ಲಿ ಸಿಗದೇ ಇದ್ದರೆ ಅವರಲ್ಲಿ ಅಸಮಾಧಾನ, ಅತೃಪ್ತಿ, ಅಸಹಕಾರದಂತಹ ಶಬ್ದಗಳು ಬಳಕೆಯಾದರೂ ಅಚ್ಚರಿ ಇಲ್ಲ ಎನ್ನುವುದು ಅವರ ಆಪ್ತರ ಆತಂಕದ ಚಿಂತನೆ. ಏಕೆಂದರೆ ರಾಜೀನಾಮೆಗೂ ಮುನ್ನ ಸಿದ್ದರಾಮಯ್ಯ ಹಿಂದುಳಿದ ವರ್ಗಗಳ ಆಯೋಗದ ವರದಿ ಸ್ವೀಕರಿಸಿದ್ದಾರೆ. ಅದರಲ್ಲೂ ಅಲ್ಪಸಂಖ್ಯಾತರ ಜನಸಂಖ್ಯೆ ಹೆಚ್ಚು ಎಂದು ಸೋರಿಕೆ ಮಾಡಲಾಗಿದೆ. ಜತೆಗೆ ಪರಿಶಿಷ್ಟ ಜಾತಿಯಲ್ಲಿನ ಒಳ ಮೀಸಲಾತಿ ಕೂಡ ಇನ್ನೂ ಜಾರಿಯಾಗಿಲ್ಲ. ಇಂಥ ಅನೇಕ ವಿಚಾರಗಳು ಎಂದಾದರೂ, ಹೇಗಾದರೂ ಮುನ್ನೆಲೆಗೆ ಅಸ್ತ್ರಗಳಾಗಬಹುದು ಎನ್ನುವ ಚರ್ಚೆಗಳೂ ಇವೆ. ಹೀಗಾಗಿ ಪಕ್ಷದ ಹೈಕಮಾಂಡ್ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಇಳಿಸಿದಷ್ಟು ಸುಲಭವಾಗಿ ಅವರನ್ನು ರಾಜ್ಯ ರಾಜಕಾರಣದಲ್ಲಿ ಮೂಲೆ ಸೇರಿಸಲಾಗದು. ಸಿದ್ದರಾಮಯ್ಯ ಅವರ ಸಮುದಾಯಿಕ ಶಕ್ತಿ ಹಾಗೂ ಪ್ರಭಾವದ ವ್ಯಾಪಕತೆ ಕರ್ನಾಟಕ ಉದ್ದಗಲಕ್ಕೂ ಇದೆ. ಚುನಾವಣೆ ಗಳು ಎದುರಾಗುತ್ತಿರುವ ಸಂದರ್ಭದಲ್ಲಿ ಅವರನ್ನು ಹಗುರವಾಗಿ ಪರಿಗಣಿಸುವುದಕ್ಕೂ ಸಾಧ್ಯವಿಲ್ಲ. ಹೀಗಾಗಿ ಸಿದ್ದರಾಮಯ್ಯ ಅವರನ್ನು ಪಕ್ಷ ಹೇಗೆ ಬಳಸಿಕೊಳ್ಳುತ್ತದೆ ಎನ್ನುವ ಪ್ರಶ್ನೆ ಬರೀ ಸಿದ್ದರಾಮಯ್ಯ ಆಪ್ತ ಬಳಗದಲ್ಲಿ ಮಾತ್ರವಲ್ಲ, ಇಡೀ ಕಾಂಗ್ರೆಸ್ ವಲಯದಲ್ಲೇ ದೊಡ್ಡ ಚರ್ಚೆಯನ್ನು ಹುಟ್ಟು ಹಾಕಿದೆ.

ಸಮಾಚಾರ ಸಣ್ಣದಲ್ಲ

ಮುಖ್ಯಮಂತ್ರಿ ಆಪ್ತ ಅಧಿಕಾರಿಗಳ ವರ್ಗ

ಬೆಂಗಳೂರು: ಸಿಎಂ ಪದತ್ಯಾಗಕ್ಕೂ ಮುನ್ನವೇ ಸಿದ್ದರಾಮಯ್ಯನವರ ಆಪ್ತ ಅಧಿಕಾರಿಗಳ ವರ್ಗಾವಣೆ ನಡೆದಿದೆ. ಸಿಎಂ ಸಿದ್ದರಾಮಯ್ಯ ಅವರ ಆಪ್ತ ಕಾರ್ಯದರ್ಶಿ ಡಾ.ವೆಂಕಟೇಶಯ್ಯ, ಸಿಎಂ ವಿಶೇಷ ಕರ್ತವ್ಯಾಧಿಕಾರಿ ರಮೇಶ್ ಪಿ.ಕೋನರೆಡ್ಡಿ, ಸಿಎಂ ಜಂಟಿ ಕಾರ್ಯದರ್ಶಿಯಾಗಿದ್ದ ಟಿ.ಎನ್.ಕೃಷ್ಣಮೂರ್ತಿ ಹಾಗೂ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಅವರನ್ನ ವರ್ಗಾವಣೆ ಮಾಡಲಾಗಿದೆ. ಸಿಎಂ ಸಿದ್ದರಾಮಯ್ಯ ಆಪ್ತ ಕಾರ್ಯದರ್ಶಿಯಾಗಿದ್ದ ಕೆಎಎಸ್ ಅಧಿಕಾರಿ ಡಾ. ವೆಂಕಟೇಶಯ್ಯ ಅವರನ್ನು ವರ್ಗಾವಣೆ ಕೃಷಿ ಮಾರಾಟ ಇಲಾಖೆ ನಿರ್ದೇಶಕರಾಗಿ ವರ್ಗಾವಣೆ ಮಾಡಲಾಗಿದೆ. ಇನ್ನು ಸಿಎಂ ವಿಶೇಷ ಕರ್ತವ್ಯಾಧಿಕಾರಿಯಾಗಿದ್ದ ರಮೇಶ್ ಪಿ.ಕೋನರೆಡ್ಡಿ ಅವರನ್ನು ವಿದ್ಯುತ್ ಪ್ರಸರಣ ನಿಗಮದ ನಿರ್ದೇಶಕರಾಗಿ ವರ್ಗಾಯಿಸಲಾಗಿದೆ. ಈ ಮೂಲಕ ಸಿದ್ದರಾಮಯ್ಯ ಪದತ್ಯಾಗಕ್ಕೂ ಮುನ್ನವೇ ತಮ್ಮ ಆಪ್ತ ಅಧಿಕಾರಿಗಳನ್ನು ಆಯಾ ಕಟ್ಟಿನ ಸ್ಥಳಗಳಿಗೆ ನಿಯುಕ್ತಿಗೊಳಿಸಿದ್ದಾರೆ. ಸಿಎಂ ಜಂಟಿ ಕಾರ್ಯದರ್ಶಿಯಾಗಿದ್ದ ಟಿ.ಎನ್.ಕೃಷ್ಣಮೂರ್ತಿ ನಗರಾಭಿವೃದ್ಧಿ ಇಲಾಖೆ ಜಂಟಿ ಕಾರ್ಯದರ್ಶಿ-2 ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ಹಾಗೇ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಅವರನ್ನ ಕ್ರೈಸ್ ಶಿಕ್ಷಣ ಸಂಸ್ಥೆಗಳ ಕಾರ್ಯನಿರ್ವಾಹಕ ನಿರ್ದೇಶಕ ಹುದ್ದೆಗೆ ವರ್ಗಾಯಿಸಲಾಗಿದೆ. ಯಾವುದೇ ಹೊಸ ಸರಕಾರ ಆಡಳಿತಕ್ಕೆ ಬಂದರೆ ತಮಗೆ ಬೇಕಾದ ಅಧಿಕಾರಿಗಳನ್ನು ನೇಮಕ ಮಾಡಿಸಿಕೊಳ್ಳುವುದು ಸಾಮಾನ್ಯ. ಹೀಗಾಗಿ 2023ರಲ್ಲಿ ಎರಡನೇ ಬಾರಿಗೆ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದ ವೇಳೆ ಕೆಎಎಸ್ ಅಧಿಕಾರಿ ಡಾ. ವೆಂಕಟೇಶಯ್ಯ ಅವರನ್ನು ಗುತ್ತಿಗೆ ಆಧಾರದ ಮೇಲೆ ಸಿಎಂ ಆಪ್ತ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿತ್ತು. ಜತೆಗೆ ಕೆಎಎಸ್ (ಹಿರಿಯ ಶ್ರೇಣಿ) ಅಧಿಕಾರಿಯಾಗಿರುವ ರಮೇಶ್ ಪಿ.ಕೋನರೆಡ್ಡಿ ಅವರನ್ನು ಸಿಎಂ ವಿಶೇಷ ಕರ್ತವ್ಯಾಧಿಕಾರಿಯಾಗಿ ನೇಮಿಸಲಾಗಿತ್ತು.

ಅಹಿಂದ ನಾಯಕನ ಬಲಿ: ಶಾಸಕ ಯತ್ನಾಳ್

ವಿಜಯಪುರ: ಹೈಕಮಾಂಡ್ ಮೇಲೆ ಒತ್ತಡ ಹಾಕಿ ಬಕ್ರೀದ್ ಹಬ್ಬದ ದಿನವೇ ಹಿಂದುಳಿದ ವರ್ಗಗಳ ನಾಯಕ ಸಿದ್ದರಾಮಯ್ಯ ಅವರನ್ನು ಬಲಿ ಪಡೆಯಲಾಗಿದೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು, ಸ್ಥಳಿಯ 2028 ರ ಚುನಾವಣೆಯಲ್ಲಿ ಹಿಂದುಳಿದ, ದಲಿತ ವರ್ಗಗಳು ಕಾಂಗ್ರೆಸ್ ಬಲಿ ಪಡೆಯುತ್ತವೆ. ಸಿದ್ದರಾಮಯ್ಯ ಅಧಿಕಾರಾವಧಿಯಲ್ಲಿ ಮುಸ್ಲಿಂ ತುಷ್ಟೀಕರಣ ಮಾಡಿ ಅತಿರೇಕ ಮಾಡಿದ್ದರು. ಮಮತಾ ಬ್ಯಾನರ್ಜಿ ಬಳಿಕ ಸಿದ್ದರಾಮಯ್ಯ ಮುಸ್ಲಿಂ ತುಷ್ಟೀಕರಣ ಮಾಡಿದ್ದರು, ಹಿಂದುಳಿದವರನ್ನಾ ದಲಿತರನ್ನಾ ನೋಡದೇ ಈ ಅವಧಿಯಲ್ಲಿ ದ್ವೇಷದ ರಾಜಕಾರಣ ಮಾಡಿದ್ದರು, ಮೊದಲಿನ ಸಿದ್ದರಾಮಯ್ಯ ಇಲ್ಲವೆಂದು ಸದನದಲ್ಲೇ ನಾನು ಹೇಳಿದ್ದೇ, ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರೂ ಒಬ್ಬ ಮುಸ್ಲಿಂ ಸಿದ್ದರಾಮಯ್ಯ ಪರ ಪ್ರತಿಭಟನೆ ಮಾಡಿಲ್ಲಾ, ಒಬ್ಬ ಮೌಲ್ವೀ ಸಹ ಕಾಂಗ್ರೆಸ್ ಹೈಕಮಾಂಡ್ ಮಾಡಿದ್ದು ತಪ್ಪು ಎಂದು ಹೇಳಿಲ್ಲಾ. ಸಿದ್ದರಾಮಯ್ಯ ಮುಸ್ಲಿಂ ಪರವಾಗಿ ಕಾರ್ಯಕ್ರಮಗಳನ್ನು ಮಾಡಿದರು. ದೇಶಕ್ಕೆ ಹಾಗೂ ಹಿಂದೂಗಳಿಗೆ ಮುಸ್ಲಿಂ ನಿಷ್ಠರಾಗಿರಲ್ಲಾ ಎಂದು ಅಂಬೇಡ್ಕರ್ ಹೇಳಿದ್ದು ನಿಜ. ರಾಜ್ಯದಲ್ಲಿ ಮುಸ್ಲಿಂ ಸಂಖ್ಯೆ ಹೆಚ್ಚಿದೆ ಎಂದು ಕೊನೆಯ ದಿನವೂ ಮುಸ್ಲಿಂ ಪರವಾಗಿಯೇ ರಾಜಕಾರಣ ಮಾಡಿದರು. ಸಿದ್ದರಾಮಯ್ಯ ತಮ್ಮ ಕಾಲ ಮೇಲೆ ತಾವೇ ಕಲ್ಲು ಹಾಕಿಕೊಂಡರು ಎಂದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ವಿಶ್ವವಾಣಿ ಕ್ಲಬ್ ಹೌಸ್
29.05.2026
ಸಂಜೆ: 06.55 ರಿಂದ 08.05 ರವರೆಗೆ
ಶುಕ್ರವಾರದ ಅತಿಥಿ

ಶ್ರೀ ನಂದೀಶ್ ಪಿ ಕೆ
ವಿಷಯ
ಅರವಿಂದರ ಸಾವಿತ್ರಿ, 26
vishwavani.news

ದಿನ ವಿಶೇಷ

29 ಮೇ 2026 ಶುಕ್ರವಾರ

- » ಸೂರ್ಯೋದಯ : 5-43
- » ಸೂರ್ಯಾಸ್ತ : 7-04
- » ತಿಥಿ : ತ್ರಯೋದಶಿ
- » ನಕ್ಷತ್ರ : ಸ್ವಾತಿ
- » ಸಂವತ್ಸರ : ಪರಾಭವ
- » ಅಯನ : ಉತ್ತರಾಯನ
- » ಋತು : ಗ್ರೀಷ್ಮ
- » ಮಾಸ : ಅಧಿಕ ಜ್ಯೇಷ್ಠ
- » ಪಕ್ಷ : ಶುಕ್ಲಪಕ್ಷ

ಹೈಕಮಾಂಡ್ ನಡೆ ವಿರುದ್ಧ ಪ್ರಾದೇಶಿಕ ಕುರುಬರ ಸಂಘ ಆಕ್ರೋಶ | ಸಿದ್ದರಾಮಯ್ಯ ಸಿಎಂ ಆಗಿ ಮುಂದುವರಿಯಲಿ

ಪದತ್ಯಾಗ: ಸಿದ್ದು ಅಭಿಮಾನಿಗಳ ಹೋರಾಟ

ಸಿದ್ದರಾಮಯ್ಯ ಅವರು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿರುವುದನ್ನು ವಿರೋಧಿಸಿ ಕರ್ನಾಟಕ ಪ್ರದೇಶ ಕುರುಬರ ಸಂಘ ಹಾಗೂ ಸಿದ್ದರಾಮಯ್ಯ ಅವರ ಅಭಿಮಾನಿಗಳ ಸಂಘ ಒಗ್ಗೂಡಿ ರಾಜ್ಯದ ಹಲವು ಜಿಲ್ಲೆಗಳಲ್ಲಿ ಗುರುವಾರ ಪ್ರತಿಭಟನೆ ನಡೆಸಿದವು.

ಸಿದ್ದು, ಡಿಕೆಶಿ ಮತ್ತೆ ದೆಹಲಿ ದಂಡಯಾತ್ರೆ

ಡಿಸಿಎಂ, ಸಚಿವರು, ಕೆಪಿಸಿಸಿ ಅಧ್ಯಕ್ಷ ಸ್ಥಾನದ ಬಗ್ಗೆ ಚರ್ಚೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯಪಾಲರ ಅನುಪಸ್ಥಿತಿಯ ಹೊರತಾಗಿಯೂ ರಾಜೀನಾಮೆ ಸಲ್ಲಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ದೆಹಲಿಗೆ ತೆರಳಿದ್ದಾರೆ. ಇದರ ಬೆನ್ನಲ್ಲೇ ಡಿಸಿಎಂಡಿ.ಕೆ.ಶಿವಕುಮಾರ್ ಕೂಡ ಪ್ರತ್ಯೇಕವಾಗಿ ದೆಹಲಿ ತಲುಪಿದ್ದಾರೆ.

ಗುರುವಾರ ಮಧ್ಯಾಹ್ನ 3 ಗಂಟೆಗೆ ಸಚಿವ ಸಂಪುಟ ಸಹೋದ್ಯೋಗಿಗಳೊಂದಿಗೆ ಲೋಕಭವನಕ್ಕೆ ತೆರಳಿದ ಸಿದ್ದರಾಮಯ್ಯ ಅವರು, ರಾಜ್ಯಪಾಲರ ಕಾರ್ಯದರ್ಶಿಗೆ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ. ರಾಜ್ಯಪಾಲರು ಇಲ್ಲದೇ ಇರುವುದರಿಂದ ಅವರು ಬಂದ ಬಳಿಕವೇ ಅಂಗೀಕಾರವಾಗಲಿದೆ ಎನ್ನುವ ಮಾತನ್ನು ಕಾರ್ಯದರ್ಶಿಗಳು ಹೇಳಿದ್ದರೂ, ಗುರುವಾರ ಸಂಜೆ 4.30ಕ್ಕೆ ವಿಶೇಷ ವಿಮಾನದ ಮೂಲಕ ದೆಹಲಿಗೆ ತೆರಳಿದ್ದಾರೆ. ಡಿಸಿಎಂ ಡಿ.ಕೆ.ಶಿವಕುಮಾರ್ ರಾತ್ರಿ 7 ಗಂಟೆಗೆ ಬೆಂಗಳೂರು ಬಿಟ್ಟು 10.30ಕ್ಕೆ ದೆಹಲಿ ತಲುಪಿದ್ದು, ಇಂದು ವರಿಷ್ಠರನ್ನು ಭೇಟಿಯಾಗಲಿದ್ದಾರೆ.

ಮೂಲಗಳ ಪ್ರಕಾರ ಶುಕ್ರವಾರ ಬೆಳಗ್ಗೆ ಕಾಂಗ್ರೆಸ್ ವರಿಷ್ಠೆ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ಮುಖ್ಯಮಂತ್ರಿಯಾಗಿ ಕಾರ್ಯ ನಿರ್ವಹಿಸಲು ಅವಕಾಶ ನೀಡಿದ್ದಕ್ಕಾಗಿ ಸಿಎಂ ಸಿದ್ದರಾಮಯ್ಯ ಧನ್ಯವಾದ ಸಲ್ಲಿಸುವ ಸಾಧ್ಯತೆಯಿದೆ. ಅದರಲ್ಲಿಯೂ 2013ರಿಂದ 18ರ ಅವಧಿಗೆ ಪೂರ್ಣಾವಧಿ ಮುಖ್ಯಮಂತ್ರಿ, ಎರಡು ಅವಧಿಗೆ ಪ್ರತಿಪಕ್ಷ ನಾಯಕ, ಎರಡನೇ ಅವಧಿಯಲ್ಲಿ ಮೂರು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿರಲಿ ಅವಕಾಶ ನೀಡಿದ್ದ, ಬೆಂಬಲಿಸಿದ್ದ ರಾಹುಲ್ ಗಾಂಧಿ ಅವರಿಗೆ ಅಭಿನಂದನೆ ಸಲ್ಲಿಸಲು ತೀರ್ಮಾನಿಸಿದ್ದಾರೆ. ಗುರುವಾರ ಸಂಜೆ ದೆಹಲಿಗೆ ತೆರಳಿದರೂ, ಬೆಂಗಳೂರಿಗೆ ವಾಪಾಸು ಯಾವಾಗ ಎನ್ನುವ ಬಗ್ಗೆ ಅಧಿಕೃತ ಮಾಹಿತಿಯನ್ನು ಸಿದ್ದರಾಮಯ್ಯ ಅವರ ಕಚೇರಿ ನೀಡಿಲ್ಲ. ಶುಕ್ರವಾರ ದೆಹಲಿಯಲ್ಲಿ ನಾಯಕರನ್ನು ಭೇಟಿಯಾಗಿ, ಮುಂದಿನ ಸರಕಾರ ರಚನೆಗೆ ಸಂಬಂಧಿಸಿದಂತೆ ಚರ್ಚಿಸುವ ಸಾಧ್ಯತೆಯಿದೆ ಎನ್ನಲಾಗಿದೆ.

ಪ್ರಮುಖವಾಗಿ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅಧಿಕಾರ ಸ್ವೀಕರಿಸಿದರೂ, ಉಪ ಮುಖ್ಯಮಂತ್ರಿಗಳಾಗಿ ಯಾರನ್ನು ಆಯ್ಕೆ ಮಾಡಬೇಕು? ಕೆಪಿಸಿಸಿ ಅಧ್ಯಕ್ಷರು, ಕಾರ್ಯಧ್ಯಕ್ಷರು ಯಾರಾಗಿರಬೇಕು ಎನ್ನುವ ಬಗ್ಗೆ ಸಿದ್ದರಾಮಯ್ಯ ಅವರೊಂದಿಗೆ ಹೈಕಮಾಂಡ್ ಚರ್ಚಿಸಲಿದ್ದು, ಈ ವೇಳೆ ತಮ್ಮ ಆಪ್ತರಿಗೆ ಹೆಚ್ಚಿನ ಅವಕಾಶ ಸಿಗುವಂತೆ, ಆಯಕಟ್ಟಿನ ಸ್ಥಾನಗಳು ದೊರೆಯುವ ನಿಟ್ಟಿನಲ್ಲಿ ಹೈಕಮಾಂಡ್ ಬಳಿ ಬೇಡಿಕೆ ಸಲ್ಲಿಸಲಿದ್ದಾರೆ ಎನ್ನಲಾಗಿದೆ. ಹೈಕಮಾಂಡ್ ಹೇಳುತ್ತಿದ್ದಂತೆ ರಾಜೀನಾಮೆ ಸಲ್ಲಿಸಿರುವ ಹಾಗೂ ಅಧಿಕಾರ ಹಸ್ತಾಂತರದ ಅವಧಿಯಲ್ಲಿ ಯಾವುದೇ ಗೊಂದಲಕ್ಕೆ ಅವಕಾಶ ನೀಡದಂತೆ ನೋಡಿಕೊಂಡಿರುವುದರಿಂದ, ಸಿದ್ದರಾಮಯ್ಯ ಅವರ ಮಾತಿಗೂ ಹೈಕಮಾಂಡ್ ಮಣೆ ಹಾಕಲಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಸಿದ್ದು ಜತೆ ದೆಹಲಿಗೆ ಆಪ್ತರ ದಂಡು: ಆರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಗೆ ಹೋಗುವುದು ಖಚಿತವಾಗಿದ್ದರೂ, ಅವರೊಂದಿಗೆ ಯಾರೆಲ್ಲ ತೆರಳಲಿದ್ದಾರೆ ಎನ್ನುವ ಸ್ಪಷ್ಟನೆ ಇರಲಿಲ್ಲ. ಆದರೆ ದೆಹಲಿಗೆ ಸಿದ್ದರಾಮಯ್ಯ ಅವರೊಂದಿಗೆ ಆಪ್ತ ಸಚಿವರಾದ ಕೆಜೆ ಜಾರ್ಜ್, ಡಾ.ಜಿ. ಪರಮೇಶ್ವರ, ಬೈರತಿ ಸುರೇಶ್, ಎ.ಎಸ್. ಪೊನ್ನಣ್ಣ ತೆರಳಿದ್ದಾರೆ.

ಯಾಕೆ ದೆಹಲಿಗೆ?

- ಸೋನಿಯಾ, ರಾಹುಲ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆರನ್ನು ಭೇಟಿ
- ವರಿಷ್ಠರಿಗೆ ರಾಜ್ಯಸಭೆ ಸ್ಥಾನದ ಬಗ್ಗೆ ನಿಲುವು ಸ್ಪಷ್ಟಪಡಿಸಲಿರುವ ಸಿದ್ದರಾಮಯ್ಯ
- ಕೆಪಿಸಿಸಿ ಅಧ್ಯಕ್ಷರು, ಕಾರ್ಯಧ್ಯಕ್ಷರು ಯಾರಾಗಿರಬೇಕು ಎನ್ನುವ ಬಗ್ಗೆ ಚರ್ಚೆ

ಸಿಎಂ ಸ್ಥಾನಕ್ಕೆ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಿರುವುದನ್ನು ವಿರೋಧಿಸಿ ಬೆಂಗಳೂರಿನಲ್ಲಿ ಯತೀಂದ್ರಾ ಸಿದ್ದರಾಮಯ್ಯ ಬ್ರಿಗೇಡ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಗವರ್ನರ್ ಬರುವ ತನಕ ಮುಖ್ಯಮಂತ್ರಿನೇ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರೂ, ರಾಜ್ಯಪಾಲರು ಅಂಗೀಕಾರ ಮಾಡದೇ ಇರುವುದರಿಂದ ಹಾಲಿ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರೇ ಮುಂದುವರಿಯಲಿದ್ದಾರೆ. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್ ವಾಪಸಾದ ಬಳಿಕ ಲೋಕಭವನಕ್ಕೆ ಸಿದ್ದರಾಮಯ್ಯ ಅವರು ತೆರಳಿ ಮತ್ತೊಮ್ಮೆ ರಾಜೀನಾಮೆ ಸಲ್ಲಿಸಿದ ಬಳಿಕವೇ ಅಂಗೀಕಾರವಾಗುವ ಸಾಧ್ಯತೆಯಿದೆ. ಗುರುವಾರ ರಾತ್ರಿ, ರಾಜ್ಯಪಾಲರು ವಾಪಸಾದರೂ, ಸಿದ್ದರಾಮಯ್ಯ ಅವರು ಶುಕ್ರವಾರ ಇಡೀ ದಿನ ದೆಹಲಿಯಲ್ಲಿಯೇ ಇರುವುದರಿಂದ ರಾಜೀನಾಮೆ ಅಂಗೀಕಾರ ಎನ್ನುವ ಕಾನೂನಾತ್ಮಕ ಪ್ರಕ್ರಿಯೆ ಶನಿವಾರಕ್ಕೆ ಹೋಗಬಹುದು ಎಂದು ಹೇಳಲಾಗಿದೆ. ರಾಜೀನಾಮೆ ಅಂಗೀಕರಿಸುವ ತನಕ ಡಿ.ಕೆ. ಶಿವಕುಮಾರ್ ಅವರ ಆಯ್ಕೆ ಪ್ರಕ್ರಿಯೆ ವಿಳಂಬವಾಗುತ್ತದೆ ಎನ್ನುವುದು ಸ್ಪಷ್ಟವಾಗಿದೆ.

ಕಾಂಗ್ರೆಸ್‌ಗೆ ತಕ್ಕ ಪಾಠ

ಚಿಕ್ಕಮಗಳೂರು: ರಾತ್ರೋರಾತ್ರಿ ಸಿಎಂ ಬದಲಾದರೆ ಏನಾಗುತ್ತೆ ಅನ್ನೋದು ಕಾಂಗ್ರೆಸ್‌ಗೆ ಗೊತ್ತಿದೆ. ಕಾಂಗ್ರೆಸ್ ಇಟ್ಟರೋ ಹೆಜ್ಜೆಗೆ ತಕ್ಕ ಪಾಠ ಕಲಿಯಲಿದೆ ಎಂದು ಅಹಿಂದ ಮುಖಂಡ ಪುಟ್ಟೇಗೌಡ ಎಚ್ಚರಿಕೆ ನೀಡಿದ್ದಾರೆ. ಚಿಕ್ಕಮಗಳೂರಿನಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ರಾತ್ರೋರಾತ್ರಿ ಸಿಎಂ ಬದಲಾವಣೆ ಮಾಡುವ ಕಾಂಗ್ರೆಸ್ ನಡೆಗೆ ನಮ್ಮ ವಿರೋಧ ಇದೆ. ಕಾಂಗ್ರೆಸ್ ಭವಿಷ್ಯ ಭದ್ರವಾಗಿರಬೇಕು ಎಂದರೆ ಸಿದ್ದರಾಮಯ್ಯ ಅವರಿಗೆ ಇನ್ನೂ 2 ವರ್ಷ ಅಧಿಕಾರ ಕೊಡ ಬೇಕು. ಈ ಮೂಲಕ ರಾಜ್ಯದ ಅಭಿವೃದ್ಧಿಗೆ ಶ್ರಮಿಸಬೇಕು. ಇಲ್ಲವಾದರೆ, ಈಗ ಕಾಂಗ್ರೆಸ್ ಇಟ್ಟರೋ ಹೆಜ್ಜೆಗೆ ತಕ್ಕ ಪಾಠ ಕಲಿಯುತ್ತೆ. ಬಂಗಾರಪ್ಪ, ದೇವರಾಜ ಅರಸು, ವೀರಪ್ಪ ಮೊಯ್ಲಿ ಯವರನ್ನು ರಾತ್ರೋರಾತ್ರಿ ಇಳಿಸಿದರು. ಆಗ, ಕಾಂಗ್ರೆಸ್ ಏನಾಗಿದೆ ಎನ್ನುವ ಇತಿಹಾಸ ಅದರ ಕಣ್ಮುಂದೆಯೇ ಇದೆ ಎಂದು ಎಚ್ಚರಿಸಿದರು.

ಕಲಬುರಗಿ: ಸಿಎಂ ಪರ ಪ್ರತಿಭಟನೆ

ಸಿದ್ದರಾಮಯ್ಯ ರಾಜೀನಾಮೆ ವಿರೋಧಿಸಿ ಕಲಬುರಗಿಯಲ್ಲಿ ಪ್ರತಿಭಟನೆ ನಡೆಸಲಾಯಿತು.

ಕಲಬುರಗಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು 2028ರವರೆಗೆ ಪೂರ್ಣಾವಧಿಗೆ ಸಿಎಂ ಆಗಿ ಮುಂದುವರಿಸಬೇಕೆಂದು ಆಗ್ರಹಿಸಿ ಕರ್ನಾಟಕ ಪ್ರದೇಶ ಕುರುಬಗೊಂಡ ಸಂಘದ ನೇತೃತ್ವದಲ್ಲಿ ಗುರುವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ಇಲ್ಲಿನ ಎಸ್‌ವಿಪಿ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ಕಾರ್ಯಕರ್ತರು, ಹೈಕಮಾಂಡ್‌ನ ಏಕಪಕ್ಷೀಯ ಧೋರಣೆ ವಿರುದ್ಧ ಘೋಷಣೆಗಳನ್ನು ಕೂಗಿದರು. ಸಿಎಂ ಬದಲಾವಣೆಗೆ ದಿಲ್ಲಿ ಮಟ್ಟದಲ್ಲಿ ನಡೆದಿರುವ ವಿರುದ್ಧ ಸಮುದಾಯದ ಮುಖಂಡರು ತೀವ್ರ ಆಕ್ರೋಶ ಹೊರಹಾಕಿದರು. ಈ ವೇಳೆ ಮಾತನಾಡಿದ ಸಂಘದ ಜಿಲ್ಲಾಧ್ಯಕ್ಷ ಗುರುನಾಥ ಪೂಜಾರಿ, ರಾಜ್ಯ ರಾಜಕಾರಣ ದಲ್ಲೇ ಸಿದ್ದರಾಮಯ್ಯ ಅವರು ಅತ್ಯಂತ ನಿಷ್ಕಳಂಕ ಹಾಗೂ ಸ್ವಚ್ಛ ಚರಿತ್ರೆಯ ಅಪರೂಪದ ನಾಯಕ. ಇಂತಹ ಜನಪ್ರಿಯ ನಾಯಕನನ್ನು ಕೆಳಗಿಳಿಸಿ, ಭ್ರಷ್ಟಾಚಾರದ ಆರೋಪದಡಿ ತಿಹಾ ರ್ ಜೈಲು ಸೇರಿ ಬಂದಿರುವ ವ್ಯಕ್ತಿಗೆ ಸಿಎಂ ಪಟ್ಟ ಕಟ್ಟಲು ಹೈಕಮಾಂಡ್ ಹವಣಿಕೆ ಎಷ್ಟು ಸರಿ ಎಂದು ಪ್ರಶ್ನಿಸಿದರು.

ಸಿಎಲ್‌ಪಿ ಸಭೆ ಕರೆಯಲು ಹೈಕಮಾಂಡ್‌ಗೆ ಸವಾಲು

ದಿಲ್ಲಿಯಲ್ಲಿ ಕುಳಿತು ಸಿಎಂ ಬದಲಿಸುವ ಪ್ರಜಾಪ್ರಭುತ್ವ ವಿರೋಧಿ ನೀತಿಯನ್ನು ಖಂಡಿಸಿದ ಪ್ರತಿಭಟನಾ ಕಾರರು, ಹೈಕಮಾಂಡ್‌ಗೆ ತಾಕತ್ತಿದ್ದರೆ ತಕ್ಷಣವೇ ಶಾಸಕಾಂಗ ಪಕ್ಷದ ಸಭೆ ಕರೆಯಲಿ ಎಂದು ಸವಾಲು ಹಾಕಿದರು. ಬಹುಸಂಖ್ಯಾತ ಶಾಸಕರು ಯಾರ ಪರವಾಗಿದ್ದಾರೆ ಎಂಬುದು ಅಲ್ಲಿಯೇ ನಿರ್ಧಾರವಾಗಲಿ. ಅದನ್ನು ಬಿಟ್ಟು ಗುಪ್ತ ಅಜೆಂಡಾದ ಮೂಲಕ ಸಿದ್ದರಾಮಯ್ಯ ಅವರ ರಾಜೀನಾಮೆ ಪಡೆದರೆ ರಾಜ್ಯಾದ್ಯಂತ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಸಿದರು. ಈ ವೇಳೆ ರವಿಗೊಂಡ ಕಟ್ಟಿಮನಿ, ಪರಮೇಶ್ವರ ಆಲಗೂಡು, ನಾಗೇಂದ್ರಪ್ಪ ಪೂಜಾರಿ, ರವಿ ಪೂಜಾರಿ, ಬಸವರಾಜ ಹೊಸಳ್ಳಿ, ಧರ್ಮರಾಜ ಹೇರೂರ, ನಾಗೇಶ್, ರೇವಣ ಸೇರಿ ಇತರರಿದ್ದರು.

ಆತ್ಮಹತ್ಯೆಗೆ ಯತ್ನ

ಯಾದಗಿರಿ: ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡುವ ವಿಚಾರವನ್ನು ಖಂಡಿಸಿ ನಗರದಲ್ಲಿ ಅವರ ಅಭಿಮಾನಿಗಳು ಹಾಗೂ ಬೆಂಬಲಿಗರು ಬೃಹತ್ ಪ್ರತಿಭಟನೆ ನಡೆಸಿದ ವೇಳೆ ಅಭಿಮಾನಿಯೊಬ್ಬ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಯಾದಗಿರಿ ನಗರದಲ್ಲಿ ಜರುಗಿತು. ನಗರದ ಸುಭಾಷ್ ವೃತ್ತದಲ್ಲಿ ನಡೆದ ಪ್ರತಿಭಟನೆಯಲ್ಲಿ ನೂರಾರು ಮಂದಿ ಭಾಗವಹಿಸಿ ಸಿದ್ದರಾಮಯ್ಯ ಪರ ಘೋಷಣೆಗಳನ್ನು ಕೂಗಿ ಬೆಂಬಲ ವ್ಯಕ್ತಪಡಿಸಿದರು. ಇದೇ ವೇಳೆ ಭೀಮು ಪೂಜಾರಿ ಎಂಬ ಅಭಿಮಾನಿ ಕ್ರಿಮಿನಾಶಕದ ಬಾಟಲ್ ಹಿಡಿದು ಆತ್ಮಹತ್ಯೆಗೆ ಯತ್ನಿಸಿ ಕೆಲಕಾಲ ಆತಂಕ ಸೃಷ್ಟಿಸಿದರು. ಕ್ರಿಮಿನಾಶಕ ಸೇವಿಸಲು ಮುಂದಾದ ಭೀಮು ಪೂಜಾರಿಯನ್ನು ಪ್ರತಿಭಟನೆನಿರತರು ಹಾಗೂ ಪೊಲೀಸರು ತಕ್ಷಣ ತಡೆದು ಅನಾಹುತ ತಪ್ಪಿಸಿದರು.

ಯಾದಗಿರಿಯಲ್ಲಿ ಸಿದ್ದರಾಮಯ್ಯ ಅವರ ಅಭಿಮಾನಿಯೊಬ್ಬರು ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದರು.

ಕುರುಬ ಸಂಘ ಆಕ್ರೋಶ

ಬಳ್ಳಾರಿ: ಸಿದ್ದರಾಮಯ್ಯ ರಾಜೀನಾಮೆ ನೀಡುತ್ತಿರುವ ವಿಚಾರಕ್ಕೆ ಕುರುಬ ಸಂಘ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಬಳ್ಳಾರಿಯ ಕುರುಬ ಸಂಘದ ಜಿಲ್ಲಾಧ್ಯಕ್ಷ ಗಾದಿಲಿಂಗನ ಗೌಡ ಅವರು ಕಾಂಗ್ರೆಸ್ ಹೈಕಮಾಂಡ್ ನಡೆ ಸರಿಯಲ್ಲ. ಸಿದ್ದರಾಮಯ್ಯ ಅವರಿಗೆ ಅನ್ಯಾಯ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ರಾಜೀನಾಮೆ ನೀಡದಂತೆ ಪ್ರತಿಭಟನೆ

ಶಿವಮೊಗ್ಗ: ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ನೀಡಬಾರದು ಎಂದು ಶಿವಮೊಗ್ಗ ಜಿಲ್ಲಾ ಅಹಿಂದ ಮುಖಂಡರು ಟೈರ್‌ಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ಶಿವಪ್ಪ ನಾಯಕ ವೃತ್ತದಲ್ಲಿ ಸೇರಿದ ಅವರು ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬರಲು ಸಿದ್ದರಾಮಯ್ಯನವರು ಪ್ರಮುಖ ಕಾರಣ. ಅವರು 5 ಗ್ಯಾರಂಟಿಗಳ ಮೂಲಕ ಜನತೆಗೆ ಬಹಳ ಅನುಕೂಲ ಮಾಡಿಕೊಟ್ಟಿದ್ದಾರೆ. ರಾಜ್ಯದ ಜನ ಹೊಟ್ಟೆ ತುಂಬಾ ಊಟ ಮಾಡಲು ಅವಕಾಶ ನೀಡಿದ ಅನ್ನರಾಮಯ್ಯ ಅವರು. ಆದರೆ, ಕಾಂಗ್ರೆಸ್ ಹೈಕಮಾಂಡ್ ಈಗ ಅವರ ರಾಜೀನಾಮೆ ಪಡೆಯಲು ಮುಂದಾಗಿರುವುದು ಖಂಡನೀಯ. ಜನಪರ ಕೆಲಸ ಮಾಡಿದ ಸಿದ್ದರಾಮಯ್ಯರನ್ನೇ ಮುಂದುವರೆಸಬೇಕೆಂದು ಆಗ್ರಹಿಸಿದರು. ಪ್ರತಿಭಟನೆಯ ವೇಳೆ ಎರಡು ಟಗರುಗಳನ್ನು ತಂದಿದ್ದು ವಿಶೇಷವಾಗಿತ್ತು.

ತುಮಕೂರಿನಲ್ಲಿ ಟೈರ್‌ಗೆ ಬೆಂಕಿಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.

ಅಹಿಂದಕ್ಕೆ ಮಾಡಿದ ದ್ರೋಹವಿದು

ತುಮಕೂರು: ಮುಖ್ಯಮಂತ್ರಿ ಸಿದ್ದರಾಮಯ್ಯನವರ ರಾಜೀನಾಮೆಯನ್ನು ಹೈಕಮಾಂಡ್ ಪಡೆಯಬಾರದು ಎಂದು ಆಗ್ರಹಿಸಿ ಕುರುಬ ಸಮುದಾಯದ ಮುಖಂಡರು ಪ್ರತಿಭಟನೆ ನಡೆಸಿದರು. ಇದು ಅಹಿಂದ ವರ್ಗಕ್ಕೆ ಮಾಡಿದ ದ್ರೋಹ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಗರದ ಟೌನ್‌ಹಾಲ್ ವೃತ್ತದಲ್ಲಿ ಜಮಾಯಿಸಿದ ಕುರುಬ ಸಮುದಾಯದ ನೂರಾರು ಮಂದಿ ಮುಖಂಡರು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮಾನಿಗಳು ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ರಾಜೀನಾಮೆ ಪಡೆಯಬಾರದು ಎಂದು ಘೋಷಣೆಗಳನ್ನು ಕೂಗಿದರು. ದೇಶದ ತುಂಬೆಲ್ಲಾ ಕಳ್ಳಕಾಕರು ಆಡಳಿತ ನಡೆಸುತ್ತಿದ್ದಾರೆ. ನಿಮ್ಮಂತಹ ಸಜ್ಜನ ರಾಜಕಾರಣಿ ರಾಜೀನಾಮೆ ನೀಡುತ್ತಿರುವುದು ಹಾಗೂ ಕಾಂಗ್ರೆಸ್ ಹೈಕಮಾಂಡ್ ನಿಮ್ಮ ರಾಜೀನಾಮೆ ಪಡೆಯುತ್ತಿರುವುದು ವ್ಯವಸ್ಥೆಗೆ ಮಾಡುತ್ತಿರುವ ಅಪಮಾನ ಎಂದು ಕುರುಬ ಸಮುದಾಯದ ಮುಖಂಡರು ಆಕ್ರೋಶ ಹೊರ ಹಾಕಿದರು. ಯಾವ ಕಾರಣಕ್ಕಾಗಿ ರಾಜೀನಾಮೆ ಪಡೆಯುತ್ತಿದ್ದಾರೆ. ಯಾವುದೇ ಕಾರಣವಿರಲಿ ನಿಮ್ಮೊಂದಿಗೆ ಸದಾ ನಾವು ನಿಲ್ಲುತ್ತೇವೆ ಎಂಬ ಬಿತ್ತ ಪತ್ರಗಳನ್ನು ಹಿಡಿದು ಕೈ ಹೈಕಮಾಂಡ್ ನಿರ್ಧಾರದ ವಿರುದ್ಧ ಪ್ರತಿಭಟಿಸಿದರು.

ಸಿದ್ದರಾಮಯ್ಯ ಸಿಎಂ ಸ್ಥಾನಕ್ಕೆ ರಾಜೀನಾಮೆ | ಮೌನಕ್ಕೆ ಶರಣಾದ ಸ್ವಗ್ರಾಮದ ಜನ | ಪುಟ್ಟ ಮಕ್ಕಳಿಂದ ವೃದ್ಧರೂ ಕಣ್ಣೀರು

ಸ್ಥಾನ ತೊರೆದ ಅರಸ, ಸಿದ್ದರಾಮನಹುಂಡಿಯಲ್ಲಿ ಮೌನ

ರಾಜಕೀಯದ ಪುಸ್ತಕದಲ್ಲಿ ಇದು ಕೇವಲ ಒಂದು ರಾಜೀನಾಮೆ ಆಗಿರಬಹುದು. ಆದರೆ ಹುಟ್ಟೂರಿನ ಜನರ ಹೃದಯದಲ್ಲಿ ಇದು ಮನೆಯ ಮಗ ದೊಡ್ಡ ಹುದ್ದೆಯಿಂದ ಇಳಿದ ದಿನ. ಅದಕ್ಕೇ ಸಿದ್ದರಾಮನಹುಂಡಿಯ ಗಾಳಿ ಸ್ವಲ್ಪ ಭಾರವಾಗಿಯೇ ಇತ್ತು. ಮಣ್ಣು ಸ್ವಲ್ಪ ಮೌನವಾಗಿತ್ತು. ಕೆಲವರ ಕಣ್ಣಾಲೆಗಳು ಇನ್ನೂ ಒದ್ದೆಯಾಗುತ್ತಿವೆ.

ಮೈಸೂರು: ಮಳೆ ಬಿದ್ದರೆ ಮಣ್ಣಿಗೆ ಒಂದು ವಿಶೇಷವಾದ, ಹಿತವಾದ ವಾಸನೆ ಬರುತ್ತದೆ. ಅದೇ ರೀತಿ ಸಿದ್ದರಾಮನಹುಂಡಿ ಎಂಬ ಪುಟ್ಟ ಹಳ್ಳಿಯ ಪಾಲಿಗೆ ಸಿದ್ದು ಎಂಬ ಎರಡಕ್ಷರ ಹೆಸರೇ ಒಂದು ಆಪ್ತ ಭಾವನೆ. ಅದು ಕೇವಲ ರಾಜಕೀಯದ ಹೆಸರಲ್ಲ, ಅದು ತಲೆಮಾರುಗಳ ರಕ್ತ ಸಂಬಂಧ!

'ಸಿದ್ದರಾಮಯ್ಯ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ' ಎಂಬ ಬ್ರೇಕಿಂಗ್ ನ್ಯೂಸ್‌ಗಳು ಟಿವಿ ಪರದೆಯ ಬಿತ್ತರವಾಗುತ್ತಿದ್ದಾಗ, ಅದನ್ನು ನಂಬುವ ಸ್ಥಿತಿಯಲ್ಲಂತೂ ಸಿದ್ದರಾಮನಹುಂಡಿಯ ಜನ ಇರಲಿಲ್ಲ. ಆದರೆ, ಆ ಸುದ್ದಿ ಅಧಿಕೃತ ಎಂದು ಘೋಷಣೆಯಾದ ಮರುಕ್ಷಣ ಇಡೀ ಊರು ದಿಢೀರನೆ ಮೌನಕ್ಕೆ ಶರಣಾಯಿತು. ಹೆಣ್ಣುಮಕ್ಕಳ, ಹಿರಿಯರ ಕಣ್ಣಾಲಿಗಳು ತೇವಗೊಂಡವು. ಯಾಕಂದರೆ, ಸಿದ್ದರಾಮನಹುಂಡಿಗೆ ಸಿದ್ದರಾಮಯ್ಯ ಎಂದರೆ ಹೈಕಮಾಂಡ್ ಮೆಚ್ಚಿದ ಮುಖ್ಯಮಂತ್ರಿ ಅಲ್ಲ, ಇಡೀ ಊರು ಎದೆಯ ಮೇಲಿಟ್ಟುಕೊಂಡು ಬೆಳೆಸಿದ 'ನಮ್ಮ ಹುಡುಗ.'

ಊರಿಗೆ ಬರೋವಾಗ ಸಿಎಂ ಅಲ್ಲ, ಹಳೆಯ ಸಿದ್ದುನೇ: ಸಿದ್ದರಾಮಯ್ಯ ಅವರ ಹೆಸರನ್ನೇ ಉಚ್ಚರಿಸುವಾಗಲೂ ಇಲ್ಲಿ ಜನ 'ಅವರು' ಅಂತ ಹೇಳುವುದಿಲ್ಲ, 'ನಮ್ಮ ಸಾಹೇಬ್ರು' ಅಂತಲೇ ಹೇಳುತ್ತಾರೆ. ಹಳ್ಳಿಯ ಹಿರಿಯರೊಬ್ಬರು ಹೇಳ್ತಿದ್ದರು, 'ಅವನು ಎಷ್ಟೇ ದೊಡ್ಡವನಾದರೂ ಇಲ್ಲಿ ಬರೋವಾಗ ಇನ್ನೂ ಹಳೆಯ ಸಿದ್ದುನೇ' ಏಕೆಂದರೆ ಸಿದ್ದರಾಮಯ್ಯ ಈ ಜನರ ಜತೆ ಇರುವುದೇ ಹಾಗೇ. ಊರಿಗೆ ಬಂದರೆ ಸಾಕು ಎಲ್ಲರನ್ನು ಅವರದೇ ಹೆಸರಲ್ಲಿ ಕರೆದು ಮಾತಾಡಿಸುತ್ತಾರೆ. ಹೀಗಾಗಿ ಸಿದ್ದರಾಮನಹುಂಡಿ ಜನಕ್ಕೆ ಯಾವಾಗಲೂ ಅವರು ಹಳೆಯ ಸಿದ್ದರಾಮಯ್ಯನೇ!

ರಾಜಕೀಯದಲ್ಲಿ ಅಧಿಕಾರ ಬಿಟ್ಟು ಹೋಗುವುದು ಹೊಸದಲ್ಲ. ಕೆಲವರ ಅಧಿಕಾರ ಕೇವಲ ಕುರ್ಚಿಯಲ್ಲಿ ಇರುತ್ತದೆ. ಇನ್ನು ಕೆಲವರದ್ದು ಜನರ ಮನಸ್ಸಿನಲ್ಲಿ ಇರುತ್ತದೆ. ಸಿದ್ದರಾಮಯ್ಯ ಎರಡನೇ ವರ್ಗಕ್ಕೆ ಸೇರಿದವರು. ಅವರು ಸಿಎಂ ಕುರ್ಚಿ ಬಿಟ್ಟ ಈ ದಿನ ಸಿದ್ದರಾಮನಹುಂಡಿಯಲ್ಲಿ ಸದ್ದು ಇರಲಿಲ್ಲ. ಮನೆ ಮನೆಗಳಲ್ಲೂ ವಿಚಿತ್ರ ಮೌನ ಇತ್ತು. ಸಿದ್ದರಾಮಯ್ಯರ ರಾಜಕೀಯ ಜೀವನ ಹೋರಾಟದ ಚರಿತ್ರೆ. ಬಡತನದ ಮಣ್ಣಿನಿಂದ ಹೊರಬಂದು ರಾಜ್ಯದ ಅತಿ ದೊಡ್ಡ ಕುರ್ಚಿಯವರೆಗೆ ಹೋದ ಸುದೀರ್ಘ ಪಯಣ. ಆದರೆ ಸಿದ್ದರಾಮನಹುಂಡಿಯ ಜನರಿಗೆ ಆ ಕಥೆಯಲ್ಲಿ ದೊಡ್ಡದಾಗಿ ಕಾಣೋದು ಅಧಿಕಾರವಲ್ಲ. ಸಿದ್ದರಾಮಯ್ಯ ಅವರು ಮರೆತಿಲ್ಲದ ಹುಟ್ಟೂರಿನ ಹಳ್ಳಿ ಮನಸ್ಸು.

ಬೀದಿ ಬೀದಿಯಲ್ಲಿ ಅಲೆದ ಹುಡುಗ ಮೇರು ಪರ್ವತ: ಊರಿನಲ್ಲಿನ ಸಿದ್ದರಾಮಯ್ಯ ಅವರ ಬಾಲ್ಯ ಸ್ನೇಹಿತರಿಗೆ ಸಿದ್ದರಾಮಯ್ಯ ಬಗ್ಗೆ ಬಹಳ ಹೆಮ್ಮೆಯಿದೆ. ಚಪ್ಪಲಿ ಧೂಳು ಹಿಡಿದ ಹುಡುಗ, ಜಾತ್ರೆಗಳಲ್ಲಿ ತಿರುಗಾಡುತ್ತಿದ್ದ ಯುವಕ, ಹಳ್ಳಿಯ ಬೀದಿಯಲ್ಲಿ ಸೈಕಲ್ ಓಡಿಸುತ್ತಿದ್ದ ಸಿದ್ದರಾಮಯ್ಯ ಇಂದು ಈ ರಾಜ್ಯ ರಾಜಕಾರಣದ ದೊಡ್ಡ ಅಧ್ಯಾಯ ಬರೆದು ಕುರ್ಚಿ ಇಳಿದಿದ್ದಾರೆ. ಇದು ಇಡೀ ಊರಿನ ಗರ್ವಕ್ಕೆ ಕಾರಣವಾಗಿದೆ. ಅದಕ್ಕೇ ಊರಿನ ಒಬ್ಬ ಅಜ್ಜಿ ಹೇಳಿದರು, 'ಸಿಎಂ ಆದ ದಿನಕ್ಕೂ ನಾನು ಇಷ್ಟು ಅಳ್ತಿಲ್ಲಪ್ಪಾ.' ಈ ಒಂದು ವಾಕ್ಯದಲ್ಲಿ ಎಷ್ಟು ವರ್ಷಗಳ ಮಮತೆ ಅಡಗಿದೆಯೋ! ಸಿದ್ದರಾಮಯ್ಯನ ಬಗ್ಗೆ ರಾಜಕೀಯ ವಿರೋಧಿಗಳಿಗೇನೋ ಅಭಿಪ್ರಾಯ ಇರಬಹುದು. ಸಿದ್ದರಾಮನಹುಂಡಿಯಲ್ಲಿ ಅವರ ಬಗ್ಗೆ ಜನರಿಗೆ ಒಂದು ವಿಚಿತ್ರವಾದ ಆತ್ಮೀಯತೆ ಇದೆ. ಅವರು ಬರ್ತಾರೆ ಅಂದರೆ ಊರೇ ಎದ್ದು ನಿಲ್ಲುತ್ತೆ. ಮನೆಯ ಮುಂದೆ ಕುರ್ಚಿ ಇಡುತ್ತಾರೆ. 'ಊಟಕ್ಕೆ ಬನ್ನಿ, ನಾಟಿ ಕೋಳಿ ಅಡುಗೆ ಮಾಡಿದ್ದೇವೆ' ಎಂದು ಮನೆಗೆ ಕರೆಯುತ್ತಾರೆ. ಸಿದ್ದರಾಮಯ್ಯ ಕೂಡ ಅಷ್ಟೆ, ಯಾರು ಮನೆಗೆ ಕರೆದರೂ ಇಲ್ಲ ಎನ್ನದೆ ಹೋಗಿ ಬರುತ್ತಾರೆ. ಒಂದು ಹಳ್ಳಿಗೆ ತನ್ನವನೊಬ್ಬ ದೊಡ್ಡವನಾದಾಗ, ಆ ಹಳ್ಳಿಯ ಜನರು ತಮ್ಮ ಕನಸುಗಳನ್ನು ಅವನಲ್ಲಿ ನೋಡ್ತಾರೆ.

ಸಿದ್ದರಾಮಯ್ಯ ಸಿಎಂ ಆದಾಗ ಸಿದ್ದರಾಮನಹುಂಡಿಯ ಹಲವರು ತಮ್ಮ ಮನೆಯ ಗೋಡೆಗೆ ಅವರ ಫೋಟೊ ಹಾಕಿ ಕೊಂಡಿದ್ದರು. ದೇವರ ಫೋಟೊ ಪಕ್ಕದಲ್ಲೇ! ಅದು ಭಕ್ತಿ ಅಲ್ಲ, ಅದು ಬದುಕಿನ ಆಶೆ! ಅಧಿಕಾರ ಶಾಶ್ವತ ಅಲ್ಲ, ಕುರ್ಚಿ ಬರುತ್ತದೆ, ಹೋಗುತ್ತದೆ.

ಹುದ್ದೆ ಬಿಟ್ಟಿರಬಹುದು, ಊರಿನ ಕಾಳಜಿ ಬಿಟ್ಟಿಲ್ಲ: ಇವತ್ತು ಸಿದ್ದರಾಮಯ್ಯ ಕುರ್ಚಿ ಬಿಟ್ಟಿದ್ದಾರೆ. ಆದರೆ ಊರಿನ ಜನರ ಮನಸ್ಸಿನಲ್ಲಿ ಅವರು ಇನ್ನೂ 'ಮುಖ್ಯಮಂತ್ರಿ'ಯೇ. ಯಾಕಂದರೆ ಜನರಿಗೆ ಪದವಿಗಿಂತ ನೆನಪು ಮುಖ್ಯ. ಊರವರು ಹೇಳ್ತಿದ್ದರು, 'ಅವರು ಹುದ್ದೆ ಬಿಟ್ಟಿರಬಹುದು ಆದರೆ ನಮ್ಮ ಪ್ರೀತಿ ಬಿಡೋದಿಲ್ಲ. ಇದೇ ಹಳ್ಳಿ, ಇದೇ ಹಳ್ಳಿ ಮಣ್ಣು, ಇದೇ ಸಂಬಂಧ. ರಾಜಕೀಯ ಬೆಂಗಳೂರಿನಲ್ಲಿ ನಡೆಯುತ್ತಿತ್ತು. ಆದರೆ ಅದರ ನೋವು ಸಿದ್ದರಾಮನಹುಂಡಿಯಲ್ಲಿ ಅಕ್ಷರಶಃ ಕೇಳಿಸುತ್ತಿತ್ತು. ಸಿದ್ದರಾಮನ ಹುಂಡಿಯ ಬೀದಿಗಳಲ್ಲಿ ವಿಚಿತ್ರ ಮೌನ ಇತ್ತು. ಯಾರೂ ಜೋರಾಗಿ ಮಾತನಾಡಲಿಲ್ಲ, ಯಾರೂ ಟೀಕೆ ಮಾಡಲಿಲ್ಲ. ಕೆಲವರು ಟಿವಿ ಮುಂದೆ ಕೂತು ಸುದ್ದಿ ನೋಡುತ್ತಿದ್ದರು. ಆದರೆ ಅವರ ಕಣ್ಣು ಟಿವಿಯಲ್ಲಿ ಇರಲಿಲ್ಲ, ಹಳೆಯ ನೆನಪುಗಳಲ್ಲಿ ಇತ್ತು. 'ಮೊದಲ ಬಾರಿಗೆ ಸಚಿವರಾದ ದಿನ', 'ಮೊದಲ ಬಾರಿಗೆ ಸಿಎಂ ಆದ ದಿನ', 'ಊರಿಗೆ ಬಂದಾಗ ಕೈ ಬೀಸಿದ ಕ್ಷಣ ಎಲ್ಲವೂ ಸಿನೆಮಾ ದೃಶ್ಯಗಳಂತೆ ಅವರ ಕಣ್ಣ ಮುಂದೆ ಓಡುತ್ತಿದ್ದವು.

ಊರಿಗೆ ಹಳೆಯ ಸಿದ್ದು : ಒಂದು ಹಳ್ಳಿಯ ದೊಡ್ಡತನ ಏನಂದ್ರೆ ಅದು ತನ್ನವರನ್ನು ಮರೆಯುವುದಿಲ್ಲ. ಸಿದ್ದರಾಮಯ್ಯರ ರಾಜಕೀಯ ಏನೇ ಆಗಿರಲಿ, ಸಿದ್ದರಾಮನಹುಂಡಿಗೆ ಅವರು ಇನ್ನೂ ಆ ಹಳೆಯ ಸಿದ್ದು. ಮಣ್ಣಿನ ವಾಸನೆ ಮರೆತಿಲ್ಲದ ಹುಡುಗ. ಸಿದ್ದರಾಮನ ಹುಂಡಿ ಜನಕ್ಕೆ ಸಿದ್ದರಾಮಯ್ಯ ಸಿಎಂ ಆಗಿದ್ದೇ ದೊಡ್ಡ ವಿಷಯ ಅಲ್ಲ, ಸಿದ್ದರಾಮಯ್ಯ ನಮ್ಮೂರವರು ಅನ್ನೋದೇ ದೊಡ್ಡದು. ಅದು ರಾಜಕೀಯದ ಮಾತಲ್ಲ, ಅದು ಸಿದ್ದರಾಮನಹುಂಡಿಯ ಹೃದಯದ ಮಾತು. 'ಕುರ್ಚಿ ಹೋದರೂ ಜನರ ಮನಸ್ಸು ಗೆದ್ದವನು ಸೋಲುವುದಿಲ್ಲ ' ಇದು ಸಿದ್ದರಾಮಯ್ಯ ಅವರ ಬಗ್ಗೆ ಸಿದ್ದರಾಮನಹುಂಡಿಯ ಅಂತಿಮ ತೀರ್ಪು.

ರಾಜಕೀಯದ ಪುಸ್ತಕದಲ್ಲಿ ಇದು ಕೇವಲ ಒಂದು ರಾಜೀನಾಮೆ ಆಗಿರಬಹುದು. ಆದರೆ ಹುಟ್ಟೂರಿನ ಜನರ ಹೃದಯದಲ್ಲಿ ಇದು 'ಮನೆಯ ಮಗ ದೊಡ್ಡ ಹುದ್ದೆಯಿಂದ ಇಳಿದ ದಿನ'. ಅದಕ್ಕೇ ಸಿದ್ದರಾಮನ ಹುಂಡಿಯ ಗಾಳಿ ಸ್ವಲ್ಪ ಭಾರವಾಗಿಯೇ ಇತ್ತು. ಮಣ್ಣು ಸ್ವಲ್ಪ ಮೌನವಾಗಿತ್ತು ಮತ್ತು ಕೆಲವರ ಕಣ್ಣುಗಳು ಇನ್ನೂ ಒದ್ದೆಯಾಗುತ್ತಿದ್ದವು.

ವಿಶ್ವವಾಣಿ

ಸಂಪಾದಕೀಯ

ಜನನಾಯಕನ ನಿರ್ಗಮನ

ಎರಡನೇ ಅವಧಿಗೆ ಆಯ್ಕೆಯಾಗಿ, ಮೂರು ವರ್ಷಗಳ ಕಾಲ ಜನ ಮೆಚ್ಚುವ ಆಡಳಿತ ನೀಡಿದ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಪದವಿಯಿಂದ ನಿರ್ಗಮಿಸಿದ್ದಾರೆ. ಹೈಕಮಾಂಡ್ ಸೂಚನೆಯಂತೆ ರಾಜೀನಾಮೆ ನೀಡಿದ್ದೇನೆ ಎಂದಿದ್ದಾರೆ. ಸಿದ್ದರಾಮಯ್ಯ ಅವರು ಇಲ್ಲದ ಕರ್ನಾಟಕದ ರಾಜಕಾರಣವನ್ನು ಊಹಿಸಿಕೊಳ್ಳುವುದು ಕಷ್ಟ. ಆದರೆ ರಾಜ್ಯದಲ್ಲೇ ಸಕ್ರಿಯ ರಾಜಕಾರಣದಲ್ಲಿ ಮುಂದುವರಿಯುತ್ತೇನೆ ಎಂದು ಭರವಸೆ ನೀಡಿದ್ದಾರೆ. ಮೂರು ವರ್ಷ ಹಿಂದೆ ಕಾಂಗ್ರೆಸ್ ಸರಕಾರ ಆಡಳಿತಕ್ಕೆ ಬಂದಾಗ ಖಜಾನೆ, ತೆರಿಗೆಗೆ ಸಂಬಂಧಿಸಿದಂತೆ ಭರವಸೆಯ ವಾತಾವರಣ ಇರಲಿಲ್ಲ. ಅಂಥ ಹೊತ್ತಿನಲ್ಲೂ, ತಾವು ಚುನಾವಣೆ ಸಂದರ್ಭದಲ್ಲಿ ನೀಡಿದ್ದ ಉಚಿತ ಗ್ಯಾರಂಟಿಗಳನ್ನು ಹಿಂಜರಿಕೆಯಿಲ್ಲದೆ ಅನುಷ್ಠಾನಕ್ಕೆ ತಂದು, ಕೊಟ್ಟ ಮಾತಿನಂತೆ ನಡೆದುಕೊಂಡವರು ಸಿದ್ದರಾಮಯ್ಯ. ಈಗಲೂ ಅವರು ಹೈಕಮಾಂಡ್ ಮುಂದೆ ವಚನಬದ್ಧತೆ ಕಾಪಾಡಿಕೊಂಡಿದ್ದಾರೆ. ಸಿದ್ದರಾಮಯ್ಯ ಅವರನ್ನು ಎರಡನೇ ದೇವರಾಜ ಅರಸು ಎಂದವರಿದ್ದಾರೆ. ಇದರಲ್ಲಿ ಅತಿಶಯೋಕ್ತಿ ಇಲ್ಲ. ಅಲ್ಪಸಂಖ್ಯಾತ, ಹಿಂದುಳಿದ, ದಲಿತ ವರ್ಗಗಳ ಹಿತಕ್ಕಾಗಿ ತಮ್ಮ ರಾಜಕಾರಣವನ್ನು ಅವರು ಮುಡಿಪಾಗಿಟ್ಟಿದ್ದರು. ರಾಜೀನಾಮೆ ಸಲ್ಲಿಸುವ ಒಂದು ದಿನ ಮೊದಲೂ ಜಾತಿ ಸಮೀಕ್ಷೆ ವರದಿಯನ್ನು ಸ್ವೀಕರಿಸಿದ್ದು ಇದಕ್ಕೆ ಸಾಕ್ಷಿ. ಹಿಂದಿನ ಅವಧಿಯಲ್ಲೂ, ಈ ಅವಧಿಯಲ್ಲೂ ಹಲವು ಜನಪರ ಯೋಜನೆಗಳು ಹಾಗೂ ತೀರ್ಮಾನಗಳ ಮೂಲಕ ಮೆಚ್ಚುಗೆ ಗಳಿಸಿದ್ದಾರೆ. ಪಕ್ಷಕ್ಕೂ ಸಮುದಾಯಕ್ಕೂ ರಾಜ್ಯಕ್ಕೂ ಬೇಕಾಗಿ, ಅವರು ನಿಜಾರ್ಥದಲ್ಲಿ ಜನನಾಯಕರಾಗಿದ್ದರು. ಕಾಂಗ್ರೆಸ್ ಸದ್ಯ ದೃಢವಾಗಿ ಆಡಳಿತ ನಡೆಸುತ್ತಿರುವ, ಹೈಕಮಾಂಡ್ ಭರವಸೆ ಇಡಬಹುದಾದ ರಾಜ್ಯ ಎಂದರೆ ಕರ್ನಾಟಕ. ಇಲ್ಲಿ ಪಕ್ಷ ಶಿಥಿಲವಾಗದಂತೆ ನೋಡಿಕೊಂಡು ಆಡಳಿತವನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗುವ ಸಾಹಸವನ್ನು ನಿರ್ಗಮಿತ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಸೇರಿಕೊಂಡು ಮಾಡಿದ್ದಾರೆ. ಮಧ್ಯಪ್ರದೇಶದಲ್ಲಿ ಕಾಂಗ್ರೆಸ್‌ಗೆ ಬಂದಂಥ ಸ್ಥಿತಿ ಉಂಟಾಗದಂತೆ ಇಬ್ಬರೂ ಕಾಪಾಡಿಕೊಂಡಿದ್ದಾರೆ. ಶತಮಾನದ ಇತಿಹಾಸ ಉಳ್ಳ ಕಾಂಗ್ರೆಸ್‌ಗೆ ಮುಂದಿನ ಚುನಾವಣೆಯಲ್ಲೂ ನಾಯಕತ್ವ ನೀಡಬಲ್ಲ, ಪ್ರತಿಪಕ್ಷ ಬಿಜೆಪಿಗೆ ದೃಢವಾದ ವಿರೋಧ ಒಡ್ಡಬಲ್ಲ ಚರಿಷ್ಮಾವನ್ನು ಸಿದ್ದರಾಮಯ್ಯ ಉಳಿಸಿಕೊಂಡಿದ್ದಾರೆ. ಸಿದ್ದರಾಮಯ್ಯ ಅವರು ಯಾವಾಗಲೂ ಹೇಳುವಂತೆ ಕೊನೆಯ ಪತ್ರಿಕಾಗೋಷ್ಠಿಯಲ್ಲೂ ಬುದ್ಧ, ಬಸವಣ್ಣ, ಗಾಂಧಿ ಇವರ ತತ್ವಸಿದ್ಧಾಂತಗಳ ಮೇಲಿನ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದ್ದಾರೆ. ಇಂಥ ಸೈದ್ಧಾಂತಿಕ ಬದ್ಧತೆಯಿದ್ದೂ ಜನಪರ, ಜನಪ್ರೀತಿಯ ರಾಜಕಾರಣ ಮಾಡುವುದ ಕಷ್ಟ. ಈ ಕಷ್ಟದ ಹಾದಿಯನ್ನು ತುಳಿದ ಕೆಲವೇ ವರ್ಚಸ್ವಿ ನಾಯಕರಲ್ಲಿ ಸಿದ್ದರಾಮಯ್ಯ ಒಬ್ಬರು. ಮುಂಬರಲಿರುವ ಮುಖ್ಯಮಂತ್ರಿಗಳು ಇವರ ಮೇಲ್ಪಂಕ್ತಿ ಅನುಸರಿಸಬಹುದು ಎಂದು ಆಶಿಸೋಣ.

ಸೊಂಪಾದಕೀಯ

ತ್ರೀ ಮಿನಿಟ್ ಡೆಲಿವರಿ

ಭಾರತದಲ್ಲಿ ಡೆಲಿವರಿ ಬಾಯ್‌ಗಳು ಸಾಮಗ್ರಿಯನ್ನು ತಂದೊಪ್ಪಿಸುವ ಸ್ಪೀಡ್ ನೋಡಿ ಉಕ್ರೇನ್ ಇನ್‌ಫ್ಲುಯೆನ್ಸರ್ ಮಹಿಳೆಯೊಬ್ಬಳು ಅವಾಕ್ಕಾಗಿ ಬೆಚ್ಚಿಬಿದ್ದು ಪೋಸ್ಟ್ ಮಾಡಿದ್ದಾಳೆ. ಆಕೆ ಅಡುಗೆ ಮಾಡುತ್ತಿದ್ದಳಂತೆ. ಏನೋ ಒಂದು ಸಾಮಗ್ರಿ ಬೇಕಿತ್ತಂತೆ– ಬಹುಶಃ ಕೊತ್ತಂಬರಿ ಸೊಪ್ಪೇ ಇರಬಹುದು. ಅದು ಆರ್ಡರ್ ಮಾಡಿ ಆರೇ ನಿಮಿಷದಲ್ಲಿ ಬಂತು. ಯುರೋಪಿನಲ್ಲಿ ಇದಕ್ಕೆ ಕನಿಷ್ಠ ಅರ್ಧ ಗಂಟೆ ಬೇಕೆನ್ನುತ್ತಾಳೆ ಅವಳು. ಕೆಲ ದಿನಗಳ ಹಿಂದೆ ವೆಲ್ಸ್‌ನ ಟ್ರಾವಲ್ ವ್ಲಾಗರ್ ಒಬ್ಬಳು ಆಗ್ರಾದಲ್ಲಿ ಹೊರಗೆ ಹೋಗಲು ಸರಿಯಾದ ಬಟ್ಟೆ ಬರೆ ಇಲ್ಲದ್ದನ್ನು ಕಂಡುಕೊಂಡು, ಬ್ಲಿಂಕಿಟ್‌ನಲ್ಲಿ ಟಿಶರ್ಟ್ ಆರ್ಡರ್ ಮಾಡಿದ್ದಳು. ಅದು ಹತ್ತು ನಿಮಿಷ ತೋರಿಸಿದರೂ ಮೂರೇ ನಿಮಿಷದಲ್ಲಿ ಡೆಲಿವರಿ ಕೊಟ್ಟದ್ದನ್ನು ನೋಡಿ ಕಂಗಾಲಾಗಿದ್ದಳು. ಇವರೆಲ್ಲ ಭಾರತವನ್ನು ಏನೆಂದುಕೊಂಡಿದ್ದಾರೋ ಗೊತ್ತಿಲ್ಲ. ಸುಮಾರು ಜನ ಅಡುಗೆ ಶುರು ಮಾಡಿದ ಮೇಲೆಯೇ ಅದಕ್ಕೆ ಬೇಕಾದ ತೊಗರಿಬೇಳೆ ತರಕಾರಿ ಆರ್ಡರ್ ಮಾಡುತ್ತಾರೆ. ಪೂಜೆ ಶುರು ಮಾಡಿದ ಮೇಲೆ ಕರ್ಪೂರ, ಬತ್ತಿ, ಎಣ್ಣೆ ತರಿಸುತ್ತಾರೆ. ಆಫೀಸಿಗೆ ಹೊರಟ ಬಳಿಕವೇ ಸಾಕ್ಸ್ ಆರ್ಡರ್ ಮಾಡುತ್ತಾರೆ. ಮಳೆಗಾಲದಲ್ಲಿ ಮರದ ಕೆಳಗೆ ನಿಂತುಕೊಂಡು ಕೊಡೆ ಆರ್ಡರ್ ಮಾಡುತ್ತಾರೆ. ಬೇಕಿದ್ದರೆ ನೋಡಿ, ಈ ಸಲ ಮಳೆಗಾಲದಲ್ಲಿ ಬೆಂಗಳೂರಿನಲ್ಲಿ ನಿಮ್ಮ ಏರಿಯಾ ಮುಳುಗಿದರೆ ಒಂದು ಬೋಟ್ ಆರ್ಡರ್ ಮಾಡಿ. ಹತ್ತು ನಿಮಿಷದಲ್ಲಿ ಬರದೇ ಹೋದರೆ ಇದು ಸಿಲಿಕಾನ್ ಸಿಟಿಯೇ ಅಲ್ಲ.

ಸಂಪಾದಕರ ಸದ್ಯಶೋಧನೆ

ಪ್ಯಾನ್-ಪ್ಯಾನ್ ಎಂದರೇನು?

ಮೊನ್ನೆ ಬೆಂಗಳೂರಿನಿಂದ ಭುವನೇಶ್ವರಕ್ಕೆ ಹೊರಟ ಆಕಾಶ ಏರ್ ವಿಮಾನ ಹವಾಮಾನ ವೈಪರೀತ್ಯದಿಂದಾಗಿ, ಅಲ್ಲಿ ಇಳಿಯಲಾಗದಿದ್ದಾಗ, ಪೈಲಟ್ ಲಖನೌದ ಚೌಧುರಿ ಚರಣ್ ಸಿಂಗ್ ವಿಮಾನ ನಿಲ್ದಾಣದಲ್ಲಿ ಇಳಿಯಲು ನಿರ್ಧರಿಸಿದ. ಆಗ ಪೈಲಟ್ 'ಪ್ಯಾನ್-ಪ್ಯಾನ್' ಅಲರ್ಟ್ ಘೋಷಿಸಿದ ಪರಿಣಾಮವಾಗಿ ಲಖನೌ ವಿಮಾನ ನಿಲ್ದಾಣದಲ್ಲಿ ತುರ್ತುಸ್ಥಿತಿ ಘೋಷಿಸಲಾಯಿತು. ಅಂದು ಯಾವ ಅವಘಡ ಸಂಭವಿಸದೇ, ಎಲ್ಲವೂ ಸುಖಾಂತ್ಯವಾಗಿದ್ದು ಬೇರೆ ಮಾತು. ಹಾಗಾದರೆ ಪ್ಯಾನ್ ಪ್ಯಾನ್ ಅಲರ್ಟ್ ಎಂದರೇನು? 'ಪ್ಯಾನ್-ಪ್ಯಾನ್' ಎಂಬ ಪದವು ಫ್ರೆಂಚ್ ಭಾಷೆಯ 'Panne' ಎಂಬ ಪದದಿಂದ ಬಂದಿದೆ, ಇದರರ್ಥ 'ಬ್ರೇಕ್‌ಡೌನ್' ಅಥವಾ 'ಯಾಂತ್ರಿಕ ವೈಫಲ್ಯ'. ರೇಡಿಯೋ ಸಂವಹನದಲ್ಲಿ ಇದನ್ನು ಸತತವಾಗಿ ಮೂರು ಬಾರಿ (Pan-Pan, Pan-Pan, Pan-Pan) ಉಚ್ಚರಿಸಲಾಗುತ್ತದೆ. ಇದು ವಿಮಾನದಲ್ಲಿ ತುರ್ತು ಪರಿಸ್ಥಿತಿ ಇದೆ, ಆದರೆ ಅದು ತಕ್ಷಣದ ಜೀವಾಪಾಯಕ್ಕೆ ಕಾರಣವಾಗಿಲ್ಲ ಎಂಬುದನ್ನು ಸೂಚಿಸುತ್ತದೆ. ಅಂದರೆ, ವಿಮಾನವು ನಿಯಂತ್ರಣದಲ್ಲಿದೆ ಮತ್ತು ತಕ್ಷಣವೇ ಪತನವಾಗುವ ಸ್ಥಿತಿಯಲ್ಲಿಲ್ಲ, ಆದರೆ ಪರಿಸ್ಥಿತಿಯು ಗಂಭೀರವಾಗಿದೆ ಎಂದು ಇದರ ಅರ್ಥ. ರೇಡಿಯೋ ಸಂವಹನ ಆರಂಭವಾದ ಕಾಲದಲ್ಲಿ, ಶಬ್ದದ ಅಸ್ಪಷ್ಟತೆಯ ನಡುವೆಯೂ ತುರ್ತು ಸಂದೇಶಗಳು ಸ್ಪಷ್ಟವಾಗಿ ಕೇಳಿಸಲಿ ಎಂಬ ಕಾರಣಕ್ಕೆ 'Mayday' (M'aider- ನನಗೆ ಸಹಾಯ ಮಾಡಿ) ಮತ್ತು 'Pan-Pan' ಎಂಬ ಫ್ರೆಂಚ್ ಮೂಲದ ಪದಗಳನ್ನು ಬಳಸಲು ನಿರ್ಧರಿಸಲಾಯಿತು. ವಿಮಾನಯಾನದಲ್ಲಿ ಈ ಅಲರ್ಟ್ ಅನ್ನು ಎರಡು ಪ್ರಮುಖ ಉದ್ದೇಶಗಳಿಗಾಗಿ ಬಳಸಲಾಗುತ್ತದೆ. ವಿಮಾನದ ಯಾಂತ್ರಿಕ ಭಾಗಗಳಲ್ಲಿ ಸಮಸ್ಯೆ ಕಂಡು ಬಂದಾಗ. ಉದಾಹರಣೆಗೆ, ಕಾಕ್‌ಪಿಟ್‌ನ ಕಿಟಕಿ ಬಿರುಕು ಬಿಟ್ಟರೆ ಅಥವಾ ಎರಡು ಎಂಜಿನ್‌ಗಳ ಪೈಕಿ ಒಂದು ಎಂಜಿನ್ ನಿಂತುಹೋದರೆ ಇದನ್ನು ಬಳಸುತ್ತಾರೆ. ವಿಮಾನವು ಒಂದು ಎಂಜಿನ್‌ನಲ್ಲಿ ಹಾರಬಲ್ಲದಾದರೂ, ಅದು ತುರ್ತು ಸ್ಥಿತಿಯೇ ಆಗಿರುತ್ತದೆ. ವಿಮಾನದಲ್ಲಿರುವ ಯಾರಿಗಾದರೂ ತೀವ್ರ ಹೃದಯಾಘಾತ ಅಥವಾ ಪ್ರಾಣಾಪಾಯದ ಸ್ಥಿತಿ ಉಂಟಾದಾಗ ಈ ನಿರ್ದಿಷ್ಟ ಸಂಕೇತ ಬಳಸಲಾಗುತ್ತದೆ. ಈ ಸಂದರ್ಭದಲ್ಲಿ ಎಟಿಸಿ, ವಿಮಾನಕ್ಕೆ 'Priority Landing' (ಆದ್ಯತೆಯ ಇಳಿಯುವಿಕೆ) ನೀಡುತ್ತದೆ. ಅಂತಾರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಸ್ಥೆ (ICAO) ಸಂವಹನವನ್ನು ಎರಡು ವರ್ಗಗಳಾಗಿ ವಿಂಗಡಿಸಿದೆ. ಮೊದಲನೆಯದು, ಮೇ-ಡೇ. ಅಂದರೆ ತಕ್ಷಣದ ಮತ್ತು ಗಂಭೀರ ಅಪಾಯದ ಸ್ಥಿತಿ ಹಾಗೂ ಎರಡನೆಯದು, ಪ್ಯಾನ್-ಪ್ಯಾನ್. ಅಂದರೆ ವಿಮಾನ ಅಥವಾ ವ್ಯಕ್ತಿಯ ಸುರಕ್ಷತೆಗೆ ಸಂಬಂಧಿಸಿದ ಗಂಭೀರ ಸ್ಥಿತಿ, ಆದರೆ ತಕ್ಷಣದ ಅಪಾಯವಿಲ್ಲದ ಸಂದರ್ಭ. ಪೈಲಟ್ 'ಪ್ಯಾನ್-ಪ್ಯಾನ್' ಘೋಷಿಸಿದಾಗ ನಿರ್ದಿಷ್ಟ ಪ್ರಕ್ರಿಯೆಯನ್ನು ಅನುಸರಿಸಲಾಗುತ್ತದೆ. ಮೊದಲು ವಿಮಾನವನ್ನು ಸ್ಥಿರವಾಗಿ ಹಾರಿಸುವುದು, ಸರಿಯಾದ ಹಾದಿಯಲ್ಲಿ ಸಾಗುವುದು ಮತ್ತು ನಂತರವಷ್ಟೇ ಸಂವಹನ ನಡೆಸುವುದು. ಪ್ಯಾನ್-ಪ್ಯಾನ್ ಸಂದೇಶ ಸಿಕ್ಕ ತಕ್ಷಣ, ಎಟಿಸಿ ಕಂಟ್ರೋಲರ್ ಆ ವಿಮಾನಕ್ಕೆ ಇತರ ಎಲ್ಲಾ ವಿಮಾನಗಳಿಗಿಂತ ಆದ್ಯತೆ ನೀಡುತ್ತಾರೆ. ಆ ವಿಮಾನಕ್ಕೆ ಹತ್ತಿರದ ವಿಮಾನ ನಿಲ್ದಾಣಕ್ಕೆ ಹೋಗಲು 'Direct Route' ನೀಡಲಾಗುತ್ತದೆ. ಒಂದು ವೇಳೆ ಪ್ಯಾನ್-ಪ್ಯಾನ್ ಘೋಷಿಸಿದ ನಂತರ ಪರಿಸ್ಥಿತಿ ಕೈಮೀರಿ ಹೋದರೆ, ಪೈಲಟ್ ಅದನ್ನು ತಕ್ಷಣವೇ ಮೇ-ಡೇ (Mayday) ಆಗಿ ಬದಲಾಯಿಸಬಹುದು. ಉದಾಹರಣೆಗೆ, ಇಂಧನ ಕಡಿಮೆಯಿದೆ ಎಂದು ಪ್ಯಾನ್-ಪ್ಯಾನ್ ನೀಡಿದ ನಂತರ, ಎಂಜಿನ್ ಆಫ್ ಆಗುವ ಹಂತಕ್ಕೆ ಬಂದರೆ ಹಾಗೂ ಹವಾಮಾನ ವೈಪರೀತ್ಯದಿಂದ ವಿಮಾನದ ಮೇಲೆ ಹತೋಟಿ ಕಳೆದುಕೊಂಡರೆ ಯಾವುದೇ ಪೈಲಟ್ ಪ್ಯಾನ್-ಪ್ಯಾನ್ ಘೋಷಿಸಲು ಹಿಂಜರಿಯುವುದಿಲ್ಲ. ಏಕೆಂದರೆ, ಸಣ್ಣ ಸಮಸ್ಯೆಯನ್ನು ಮೊದಲೇ ತಿಳಿಸುವುದರಿಂದ ದೊಡ್ಡ ದುರಂತವನ್ನು ತಪ್ಪಿಸಬಹುದು. ವಿಮಾನ ನಿಲ್ದಾಣದ ರನ್‌ವೇ ಬಳಿ ಅಗ್ನಿಶಾಮಕ ವಾಹನಗಳು (Fire Tenders) ಸಿದ್ಧವಾಗಿ ನಿಂತಿರುವುದನ್ನು ನಾವು ಗಮನಿಸಿದರೆ, ಅಲ್ಲಿ ಪ್ಯಾನ್-ಪ್ಯಾನ್ ಅಥವಾ ಮೇ-ಡೇ ಘೋಷಣೆಯಾಗಿದೆ ಎಂದರ್ಥ. ಪ್ಯಾನ್-ಪ್ಯಾನ್ ಎಂಬುದು ಆಕಾಶದಲ್ಲಿ ರಕ್ಷಣಾ ಕವಚದಂತೆ ಕೆಲಸ ಮಾಡುತ್ತದೆ. ಇದು ಆತಂಕದ ಕರೆಗಿಂತ ಹೆಚ್ಚಾಗಿ, 'ಮುನ್ನೆಚ್ಚರಿಕೆಯ ಕರೆ' ಎಂದು ಪರಿಗಣಿಸಲಾಗುತ್ತದೆ. ಪ್ಯಾನ್-ಪ್ಯಾನ್ ಎಂಬುದು ವಿಮಾನಯಾನದಲ್ಲಿ ನಮಗೆ ಸಹಾಯ ಬೇಕು, ಆದರೆ ನಾವು ಇನ್ನೂ ಸುರಕ್ಷಿತವಾಗಿದ್ದೇವೆ ಎಂದು ಹೇಳುವ ಒಂದು ವೃತ್ತಿಪರ ಮಾರ್ಗವಾಗಿದೆ.

ಅಡುಗೆ ಮನೆ ಇನ್ನೊಂದ್ ಚೂರು ದೊಡ್ಡದಿದ್ದಿದ್ದರೆ..!

ಶಿಶಿರಕಾಲ
ಶಿಶಿರ್ ಹೆಗಡೆ
vveditoped@gmail.com

ಅಡುಗೆ ಮನೆ ಇನ್ನೊಂದ್ ಚೂರು ದೊಡ್ಡದಿದ್ದಿದ್ದರೆ..! ಎಲ್ಲಾ ಗೃಹಿಣಿಯರ ಏಕೈಕ, ಸಾಮಾನ್ಯ ಕಂಪ್ಲೆಂಟ್ ಇದು.

ಆ ದಿನ ಬಾಡಿಗೆ ಮನೆ ತೋರಿಸುವ ಏಜೆಂಟ್ ನಮ್ಮನ್ನು ಈ ಜಾಗಕ್ಕೆ ಬನ್ನಿ ಎಂದು ಅಡ್ರೆಸ್ ಕೊಟ್ಟಿದ್ದ. ಅವನು ಕೊಟ್ಟ ಅಡ್ರೆಸ್ ನ್ಯೂಯಾರ್ಕ್‌ನ ಮ್ಯಾನ್ ಹಟ್ಟನ್‌ನ ನನ್ನ ಆಫೀಸಿನಿಂದ ಎರಡೇ ಮೈಲಿ ದೂರದಲ್ಲಿತ್ತು. ನಾನು ಮತ್ತು ನನ್ನ ಹೆಂಡತಿ ಹೇಳಿದ ಸಮಯಕ್ಕೆ ಟ್ಯಾಕ್ಸಿ ಹಿಡಿದು ಅಲ್ಲಿಗೆ ತಲುಪಿದೆವು. ಇಳಿದು ನೋಡಿದರೆ ತುದಿ ಕಾಣದಷ್ಟು ಎತ್ತರದ ಬಿಲ್ಡಿಂಗ್. ಏಜೆಂಟ್ ನಮ್ಮನ್ನು ಉದ್ದದ ಕಾರಿಡಾರು ದಾಟಿ ಬಿಲ್ಡಿಂಗಿನ ಅಂತರ್ಯದೊಳಕ್ಕೆ ಕರೆದುಕೊಂಡು ಹೋದ. ಅಲ್ಲಿದ್ದ ಲಿಫ್ಟಿನೊಳಗೆ ಹೊಕ್ಕಿ ನೋಡಿದಾಗಲೇ ಆ ಕಟ್ಟಡದಲ್ಲಿ ಎಂಬತ್ತು ಮಹಡಿಗಳಿವೆ ಎಂದು ನಮಗೆ ಗೊತ್ತಾಗಿದ್ದು. ನಲವತ್ತೆರಡನೇ ಮಹಡಿಯಲ್ಲಿ ಲಿಫ್ಟ್ ಬಾಗಿಲು ತೆರೆದುಕೊಂಡಿತು. ಅಲ್ಲಿ ಇಪ್ಪತ್ತೈದು ಒಂದೇ ಬಣ್ಣದ, ಕಟ್ಟಿನ ಬಾಗಿಲುಗಳು, ಒಂದರ ಪಕ್ಕ ಇನ್ನೊಂದು. ಮನೆಗಳನ್ನು ಪ್ರತ್ಯೇಕಿಸುತ್ತಿದ್ದುದು ಆ ಬಾಗಿಲುಗಳ ಮೇಲಿದ್ದ ಸಂಖ್ಯೆಗಳು. ಏಜೆಂಟ್ ಈ ಕಟ್ಟಡವಿರುವ ಜಾಗ ಈ ಕಾರಣಕ್ಕೆ ಬಹಳ ವಿಶೇಷ, ಇಲ್ಲಿ ಇಂತಿಂತಹ ಸೌಲಭ್ಯ ಇದೆ ಎಂದು ಹೇಳುತ್ತಿದ್ದರೂ ನಮ್ಮಿಬ್ಬರಿಗೂ ಮನೆ ಹೇಗಿರಬಹುದೆಂಬ ಬಗ್ಗೆಯೇ ಯೋಚನೆ.

ಬಾಗಿಲು ತೆರೆದು ಒಳಕ್ಕೆ ಹೋಗುತ್ತಿದ್ದಂತೆ, ಅದು ನಾವಂದುಕೊಂಡ ರೀತಿಯ ಮನೆಯಾಗಿರಲಿಲ್ಲ. ಇಪ್ಪತ್ತು-ಇಪ್ಪತ್ತು ವಿಸ್ತೀರ್ಣದ ಒಂದು ದೊಡ್ಡ ಕೋಲಿ. ಒಳಹೊಕ್ಕು ಚಪ್ಪಲಿ ತೆಗೆಯಲು ಮುಂದಾದರೆ ಬೇಡವೆಂದು ಏಜೆಂಟ್ ಸನ್ನೆ ಮಾಡಿದ. ಸರಿ ಎಂದು ಒಳಗೆ ಹತ್ತು ಹೆಜ್ಜೆ ಇಟ್ಟಿಲ್ಲ- ಮನೆಯೇ ಮುಗಿದುಹೋಯಿತು. ಒಂದು ದೊಡ್ಡ ಕೋಣೆ, ಅಲ್ಲಿಯೇ ಒಂದು ಮೂಲೆಯಲ್ಲಿ kitchenette& ಅಡುಗೆ ಬಿಸಿ ಮಾಡಿಕೊಳ್ಳಲು ಒಂದು ಚಿಕ್ಕ ಒಂದು ಇಂಡಕ್ಷನ್ ಒಲೆ, ಅಲ್ಲಿಯೇ ಮೇಲ್ಗಡೆ ಒಂದು ಮೈಕ್ರೋವೇವ್, ಕೈ ಅಗಲದ ವಾಶ್ ಬೇಸಿನ್, ಚಿಕ್ಕ ಫ್ರಿಡ್ಜ್. ಎಲ್ಲವೂ ಚಿಕ್ಕದು- ಆದರೆ ಅತ್ಯಾಧುನಿಕ ಸಲಕರಣೆಗಳು. ಆ ಒಂಟಿ ಕೋಲಿಯ ಸ್ಟುಡಿಯೋ ಅಪಾರ್ಟ್ಮೆಂಟ್‌ನ ಒಳಗಿದ್ದದ್ದು ಒಂದೇ ಬಾಗಿಲು- ಅದನ್ನು ತೆರೆದರೆ ಕೈ ಅಗಲಿಸಲಿಕ್ಕಾಗದ ಅಗಲದ ಬಚ್ಚಲುಮನೆ. ಅಷ್ಟೆ. ಏಜೆಂಟ್ ಪ್ರಕಾರ ಇದನ್ನು ಮನೆ, ರೂಮು, ಅಪಾರ್ಟ್ಮೆಂಟು, ಹೋಮು, ವಿಲ್ಲಾ ಏನೆಂದು ಕರೆದರೂ ಈ ಕೋಣೆ ಅದಾಗಬಹುದಿತ್ತು. ಇದು ನ್ಯೂ ಯಾರ್ಕ್ ನಗರದ ಐಷಾರಾಮಿ ವ್ಯವಸ್ಥೆ, ಇದು ನಮಗೆ ಸಿಗುತ್ತಿರುವುದೇ ಜನ್ಮಜನ್ಮಾಂತರದ ಪುಣ್ಯದ ಫಲ ಎಂದು ಏಜೆಂಟ್ ಎಲ್ಲವನ್ನೂ ವಿವರಿಸುತ್ತಿದ್ದ.

ಅಷ್ಟೇ ಅಗಲದ ಕೋಣೆಗೆ ಅವನು ಹೇಳಿದ ಬಾಡಿಗೆ ಕೇಳಿ ಹೊಟ್ಟೆ ತೊಳೆಸಿ ಹೋಯಿತು. ತಿಂಗಳಿಗೆ ಎರಡೂವರೆ ಸಾವಿರ ಡಾಲರ್ ! ನಾವಿಬ್ಬರು ಒಬ್ಬರ ಮುಖ ಒಬ್ಬರು ನೋಡಿಕೊಂಡೆವು. ನಾಲ್ಕು ತಿಂಗಳ ಬಾಡಿಗೆಯಲ್ಲಿ ಊರಿನಲ್ಲಿ ಒಂದು ಚಿಕ್ಕ ಅರಮನೆಯನ್ನೇ ಕಟ್ಟಿಬಿಡಬಹುದು ! ಆದರೆ ಅಲ್ಲಿಯೇ ಬಾಡಿಗೆಗೆ ಒಪ್ಪುವ ಅನಿವಾರ್ಯತೆ ಮೌನದಲ್ಲಿಯೇ ಇಬ್ಬರಿಗೂ ಅರ್ಥವಾಗಿತ್ತು. ಸದ್ಯ ಇಲ್ಲಿಯೇ ಇರೋಣ, ಚಳಿಗಾಲ ಮುಗಿದ ಮೇಲೆ ಬೇರೆ ವ್ಯವಸ್ಥೆ ಮಾಡಿಕೊಂಡರಾಯ್ತು ಎಂದು ಆರು ತಿಂಗಳಿಗೆ ಲೀಸ್ ಸಹಿ ಮಾಡಿದೆವು.

ಸ್ಟುಡಿಯೋ ಅಪಾರ್ಟ್ಮೆಂಟ್‌ನಿಂದ ಕೆಳಕ್ಕಿಳಿದು ಹೊರಬಂದರೆ ಮನುಷ್ಯನ ಮಹತ್ವಾಕಾಂಕ್ಷೆಯನ್ನೇ ಒಂದರ ಮೇಲೆ ಇನ್ನೊಂದು ಇಟ್ಟಂತೆ ಕಟ್ಟಿದ ಕಟ್ಟಡಗಳು. ಅದರ ಅಸಂಖ್ಯ ಗಾಜಿನ ಒಂದೊಂದು ಕಿಟಕಿಯೊಳಗೆ ಒಂದೊಂದು ಕುಟುಂಬಗಳು. ನ್ಯೂಯಾರ್ಕ್‌ನ ಬೀದಿಯಲ್ಲಿ ಎರಡು ನಿಮಿಷ ನಿಂತರೆ ಜಗತ್ತಿನ ಎಲ್ಲಾ ದೇಶಗಳವರೂ ನಮ್ಮನ್ನು ಹಾದು ಹೋಗಿರುತ್ತಾರಂತೆ ! ಬಾರು, ಪಬ್ಬು, ಆಫೀಸ್ ಕಟ್ಟಡಗಳು, ಕಾಫಿ ಶಾಪ್, ಪಾರ್ಕುಗಳು- ಆಧುನಿಕತೆ ಮೈತಳೆದ ಊರು ನ್ಯೂಯಾರ್ಕ್. ಆದರೆ ಮನೆಯೆಂಬುದರೊಳಗೆ ಬಂದರೆ ನಾಲ್ಕು ಗೋಡೆ, ಮತ್ತು ತಾನೇ ಅಡುಗೆಮನೆ ಎನ್ನುವ ಕೋಣೆಯ ಒಂದು ಮೂಲೆ !

ನಾನು ಮತ್ತು ನನ್ನ ಹೆಂಡತಿ ಒಂದೇ ಊರು ಮತ್ತು ಹಿನ್ನೆಲೆಯವರು. ಹಳ್ಳಿಯಲ್ಲಿ ಬೆಳೆದವರು. ಊರಲ್ಲಿ ಅಮ್ಮನ, ಅತ್ತೆಯ ಅಡುಗೆ ಮನೆ ನಮ್ಮಿಡೀ ಮ್ಯಾನ್ ಹಟ್ಟನ್ ಅಪಾರ್ಟ್ಮೆಂಟಿನ ಮನೆಗಿಂತ ದೊಡ್ಡದಿತ್ತು. ಆದರೆ ಇಲ್ಲಿ ವಿಸ್ತೀರ್ಣ ಮಾತ್ರ ಕೊರತೆಯಾಗಿರಲಿಲ್ಲ. ಅದರಾಚೆ ನಮಗಿಬ್ಬರಿಗೂ ಇದ್ದ ಅಡುಗೆ ಮನೆಯೆಂಬ ಕಲ್ಪನೆಗೂ ಈ ಕೋಣೆಯ ಮೂಲೆಯಲ್ಲಿ ಇದ್ದ ಅಡುಗೆಮನೆಗೂ ಅಜ- ಗಜಾಂತರವಿತ್ತು. ಅಡುಗೆಮನೆಯೇ ಇಲ್ಲದ ಮನೆಯನ್ನು ಮನೆಯೆಂದು ಹೇಗೆ ಕರೆಯೋದು?

ಊರಿನ ಮನೆಯಲ್ಲಿ ಅಡುಗೆಮನೆ ಎನ್ನುವುದು ಕೇವಲ ಅಡುಗೆ ಮಾಡುವ ಒಂದು ಕೋಣೆ ಮಾತ್ರ ಆಗಿರಲಿಲ್ಲ. ದಿನಕ್ಕೆ ಮೂರು ಬಾರಿ ಮನೆಯವರೆಲ್ಲ ಸೇರುವ ಜಾಗವಾಗಿತ್ತು. ಈಗ ಯೋಚಿಸಿದರೆ ಹೆಚ್ಚು ಕಡಿಮೆ ಬದುಕು ಸಂಭವಸಿದ್ದೇ ಅಡುಗೆ ಮನೆಯಲ್ಲಿ. ಬದುಕಿನ ಅಷ್ಟೂ ಪ್ರೀತಿ, ವಾದ, ಕೋಪ, ಸಂಧಾನ, ಮಾತುಕತೆ ಎಲ್ಲವೂ ನಡೆದದ್ದು ಅಡುಗೆಮನೆಯಲ್ಲಿಯೇ. ಅಮ್ಮ ಸದಾ ಅಲ್ಲಿ ಇದ್ದೇ ಇರುತ್ತಿದ್ದರು. ಸುಮ್ಮನೆ ನೀರು ಕುಡಿಯಲು ಹೋದರೂ ಅಮ್ಮ, ಅಜ್ಜಿಯ ಜೊತೆ ಅಲ್ಲೊಂದಿಷ್ಟು ಮಾತುಕತೆ ನಡೆಯುತ್ತಿತ್ತು. ನಡುವೆ ಅಜ್ಜ ಅಡುಗೆಮನೆಗೆ ಬಂದರೆ ಆ ಮಾತುಕತೆ ಅಲ್ಲಿಯೇ ಆಕಾರಣ ನಿಂತುಬಿಡುತ್ತಿತ್ತು ! ವಿಷಯಾಂತರವಾಗುತ್ತಿತ್ತು.

ಅಮ್ಮ ಮತ್ತು ಅತ್ತೆ ಇಬ್ಬರಿಗೂ ಗ್ಯಾಸ್ ಸಿಲೆಂಡರ್‌ನಲ್ಲಿ ಅಡುಗೆ ಮಾಡಲು ಅದೇಕೋ ಮನಸ್ಸು ಒಪ್ಪುತ್ತಿರಲಿಲ್ಲ. ಹಾಗಾಗಿ ಅಡುಗೆಮನೆಯ ಆಚೆ ಹಿತ್ತಲಲ್ಲಿ ಎರಡು ಮಣ್ಣಿನ ಒಲೆ ಮಾಡಿಕೊಂಡಿದ್ದರು. ಹೆಚ್ಚಿನ ಶಾಖ ಬೇಡುವ ಕೊಚ್ಚಲಕ್ಕಿ ಇತ್ಯಾದಿ ಅಲ್ಲಿಯೇ ಬೆಂದು ಮೆತ್ತಗಾಗಬೇಕು. ಒಂದಿಷ್ಟು

ಪಾತ್ರೆಗಳು, ಹಾಲು ತಂದು ತೊಳೆದಿಟ್ಟ ಸೆವೆನ್ ಅಪ್ ಬಾಟಲಿ, ಗ್ರೈಂಡರ್, ಮಿಕ್ಸರ್ ಸದ್ದು, ಒಗ್ಗರಣೆಯ ಘಮ, ಗಾಳಿ ಬೀಸಿದಾಗ ಒಳ ಸೇರುವ ಹಿತ್ತಲ ಒಲೆಯ ಕಟ್ಟಿಗೆಯ ಹೊಗೆ. ಹಬ್ಬಗಳು, ತಿಥಿ ಇತ್ಯಾದಿ ಬಂದರಂತೂ ಮನೆಯವರ ಧ್ವನಿ ಮೀರಿಸುವಷ್ಟು ಅಡುಗೆಮನೆಯದೇ ಸದ್ದು. ಸಾಮಾನ್ಯ ದಿನಗಳಲ್ಲಿ ಸಂಬಂಧಿಕರು, ಸ್ನೇಹಿತರು, ಪರಿಚಯದವರು, ಪರಿಚಯವಿಲ್ಲದವರು ಹೀಗೆ ಯಾರುಯಾರೋ ಮನೆಗೆ ಬರುತ್ತಿದ್ದರು. ಬಂದವರಿಗೆಲ್ಲ ಅಮ್ಮ, ಅಜ್ಜಿ ಚಹಾ ತಿಂಡಿ ಮಾಡಿಕೊಡುತ್ತಿದ್ದರು. ಸುಡುಬಿಸಿಲಲ್ಲಿ ಬಂದವರಿಗೆ ತಣ್ಣನೆಯ ಮಜ್ಜಿಗೆ. ಅನುಮಾನವೇ ಬೇಡ- ಬದುಕು ಸಂಭವಿಸುತ್ತಿದ್ದುದೇ ಅಡುಗೆಮನೆಯಲ್ಲಿ.

ನಮ್ಮ ಮನೆ ಎಂದಲ್ಲ, ಎಲ್ಲರ ಮನೆಯ ಬದುಕು ಆವಿರ್ಭವಿಸುವುದು ಅಲ್ಲಿಯೇ. ನಮ್ಮೂರ ಅಡುಗೆಮನೆಯಲ್ಲಿ ಯಾವತ್ತೂ ಏಕಾಂತವಿರಲಿಲ್ಲ. ಆದರೆ ಜಗತ್ತಿನ ಅತ್ಯಾಧುನಿಕ ಕಟ್ಟಡದ ಅತ್ಯಾಧುನಿಕ ಅಡುಗೆಮನೆಯಲ್ಲಿ ಒಂದೂವರೆ ಜನರಿಗಿಂತ ಹೆಚ್ಚಿಗೆ ನಿಲ್ಲಲಿಕ್ಕಾಗುತ್ತಿರಲಿಲ್ಲ. ಆ ನ್ಯೂಯಾರ್ಕ್‌ನ ಅಡುಗೆಮನೆ ಆ ದಿನ ಚಿಕ್ಕದೆಂದು ಕಾಣಿಸಿದ್ದರ ಹಿನ್ನೆಲೆ ವಿಸ್ತೀರ್ಣದಾಚೆಯ ಅದರ ವಿಸ್ತಾರದ್ದಾಗಿತ್ತು. ಅತ್ಯಾಧುನಿಕ ಎಲೆಕ್ಟ್ರಿಕ್ ಕುಕರ್, ಬೆಂಕಿಯೇ ಇಲ್ಲದ ಇಂಡಕ್ಷನ್ ಒಲೆ, ಹೊಗೆ ಬರುವುದಕ್ಕಿಂತ ಮೊದಲೇ ಹಬೆಯನ್ನೂ ಒಳಗೆಳೆದುಕೊಳ್ಳುವ ನಿಷ್ಕಾಸ- ಎಕ್ಸಾಸ್ಟ್ ಫ್ಯಾನ್, ಪೋರ್ಸಲಿನ್ ಪಾತ್ರೆ ಪಗಡೆ, ಇಂಚಿಂಚೂ ಲೆಕ್ಕಾಚಾರದ ಅಡುಗೆ ಕಟ್ಟೆ. ಎಲ್ಲವೂ ಇದ್ದರೂ ಅದನ್ನು ಅಡುಗೆಮನೆಯೆಂದು ಒಪ್ಪಲಿಕ್ಕೆ ನಮಗೆ ಅಲ್ಲಿರುವವರೆಗೂ ಸಾಧ್ಯವೇ ಆಗಲಿಲ್ಲ !

ಮಾನವಶಾಸ್ತ್ರಜ್ಞರು ಹೇಳುವಂತೆ ಬೆಂಕಿಯ ನಿಯಂತ್ರಣ ತಿಳಿದ ನಂತರ, 'ಅಡುಗೆ ಮಾಡುವುದು' ಎಂಬ ಕ್ರಿಯೆ ಮನುಷ್ಯನ ಮುಂದಿನ ವಿಕಸನವನ್ನು ನಿರ್ದೇಶಿಸಿತಂತೆ. ಆದರೆ ಒಂದಂತೂ ಸತ್ಯ- ಮನುಷ್ಯ ನಾಗರೀಕತೆ ಬೆಳೆಯುವಾಗ ಮನೆಗಿಂತ ಮೊದಲು ಅಡುಗೆಮನೆ ರೂಪಗೊಂಡಿತು. ಎಲ್ಲ ಶುರುವಾಗಿದ್ದು ಮೊದಲು ಬೆಂಕಿಯಿಂದ. ಗುಡಿಸಲು, ಗುಹೆಯಾಚೆ- ಮನುಷ್ಯ ಪಂಗಡಗಳು ಮುಸ್ಸಂಜೆ ಈ ಬೆಂಕಿಯ ಎದುರು ಬಯಲಿನಲ್ಲಿ ಜೊತೆ ಸೇರುತ್ತಿದ್ದರು. ಇವತ್ತಿಗೂ ಇದೇ ಗುಣವನ್ನು ಅಮೆಜಾನ್, ಅಂಡಮಾನ್ ಬುಡಕಟ್ಟು ಜನಾಂಗಗಳಲ್ಲಿ ನೋಡಬಹುದು. ಆ ಬೆಂಕಿಯ ಎದುರೇ ಮನುಷ್ಯನ ಮೊದಲ ಕೆಲವು ಗುಣವಿಶೇಷಗಳು ಹುಟ್ಟಿಕೊಂಡದ್ದು. ಒಟ್ಟಾಗಿ ಕಾಯುವುದು, ಹಂಚಿಕೊಳ್ಳುವುದು, ಉದ್ದೇಶವೇ ಇಲ್ಲದೆ ಒಂದಿಷ್ಟು ಹೊತ್ತು ಜೊತೆಯಲ್ಲಿ ಕಳೆಯುವುದು, ಸುರಕ್ಷೆಯ ಭಾವ ಇದೆಲ್ಲ, ಅಡುಗೆಮನೆಯ ಮೂಲ ರೂಪ ಜನರು- ಹತ್ತಿರದವರು ಒಟ್ಟುಗೂಡುವ ಜಾಗವಾಗಿತ್ತು. ಆ ಜಾಗವೇ ಮುಂದೊಂದು ದಿನ ಬಯಲಿನ ಅಡುಗೆಮನೆಯಾದದ್ದು. ಅಲ್ಲಿಯೇ ಅಂದೊಂದು ದಿನ ಮೊದಲ ಅಡುಗೆ ತಯಾರಾದದ್ದು. ಅಲ್ಲಿ ಗೋಡೆಗಳಿರಲಿಲ್ಲ, ಅಲ್ಲಿದ್ದದ್ದು ಬೆಂಕಿ, ಹೊಗೆ, ಹಸಿವು ಮತ್ತು ಮನುಷ್ಯ ಸಂಬಂಧಗಳು. ಆ ಬಯಲು ಅಡುಗೆಮನೆಯ ಅಗ್ನಿಯ ಸುತ್ತ ಮೊದಲ ತೊದಲ ಭಾಷೆ, ಒಡನಾಟ, ಪರಸ್ಪರ ಒಪ್ಪಂದ, ಸಹಕಾರ, ನಂಬಿಕೆ, ಮೋಸ, ಕ್ರಮೇಣ ಸ್ವಾರ್ಥ, ಪರ ಭಾವ, ಅಹಂ ಎಲ್ಲವೂ ಹುಟ್ಟಿದ್ದು. ಆಹಾರ ಮತ್ತು ಮನುಷ್ಯ ಮೆತ್ತಗಾಗಿದ್ದು. ಚಾಪಲ್ಯ ಬೆಳೆದದ್ದು. ಅದೇ ಅಗ್ನಿ ಇದೆಲ್ಲದಕ್ಕೂ ಸಾಕ್ಷಿ. 'ಅಗ್ನಿಸಾಕ್ಷಿ'ಯ ಮಹತ್ವದ ಮೂಲ ಅಲ್ಲಿಂದಲೇ ಬೆಳೆದು ಬಂದದ್ದೇ? ಇರಬಹುದು.

ಒಟ್ಟಾರೆ ಜಗತ್ತಿನ ಪ್ರತಿಯೊಂದು ಸಂಸ್ಕೃತಿಗೂ ಈ ಅಗ್ನಿ ಅಲ್ಲಿಂದಿಲ್ಲಿಯವರೆಗೂ ಉರಿಯುತ್ತಲೇ ಸಾಕ್ಷಿಯಾಯಿತು ಎನ್ನುವುದಂತೂ ಸತ್ಯ. ಇವತ್ತಿಗೂ- ಒಟ್ಟಾಗಿ ಅಡುಗೆಮನೆಯಲ್ಲಿ ಸೇರಿದಾಗ, ಊಟ ಮಾಡುವಾಗ ಅದೇನೋ ಒಂದು ಬೆಚ್ಚನೆಯ, ಸುರಕ್ಷಿತ ಭಾವ ಎಲ್ಲರಲ್ಲೂ ಹುಟ್ಟುತ್ತದೆ. ಅದೇ ಮೂಲ ಗುಣಗಳು ಮತ್ತೆ ಮೂರ್ತ ರೂಪ ಪಡೆಯುತ್ತವೆ. ಇವತ್ತಿಗೂ ಅಡುಗೆ ಮನೆ, ಮನೆಯ ಭಾವ ಕೇಂದ್ರ. ಇವತ್ತಿಗೂ ಯಾವುದೇ ಮನೆಯ ಅಸಲಿ ಶ್ರೀಮಂತಿಕೆ ವ್ಯಕ್ತವಾಗುವುದು ಚಾವಡಿಯ ಪೀಠೋಪಕರಣಗಳಲ್ಲಲ್ಲ, ಅಡುಗೆಮನೆಯಲ್ಲಿ ತಯಾರಾಗುವ ಪ್ರೀತಿಯಲ್ಲಿ.

ಅಡುಗೆ ಮನೆಯೆಂದರೆ ಮನೆಯೊಳಗಿನ ಇನ್ನೊಂದು ಜಗತ್ತು ! ಅಮೆರಿಕಾದ ಯಾವುದೇ ರಾಜ್ಯಕ್ಕೆ ಹೋದರೂ ಅಲ್ಲಿನ ಅಡುಗೆ ಮನೆ ಹೆಚ್ಚು ಕಡಿಮೆ ಒಂದೇ ರೀತಿ ಇರುತ್ತದೆ. ಅಲ್ಲಿ ತಯಾರಾಗುವ ಅಡುಗೆ ಪಿಜ್ಜಾ, ಬರ್ಗರ್ ಇತ್ಯಾದಿ ಕೂಡ ಹೆಚ್ಚು ಕಡಿಮೆ ಒಂದೇ ತೆರನಾಗಿರುತ್ತದೆ. ಆದರೆ ಭಾರತದಲ್ಲಿ ಹಾಗಲ್ಲ. ಮಲೆನಾಡಿನ ಅಡುಗೆಮನೆಯೇ ಬೇರೆ ಬಂಗಾಳದ ಅಡುಗೆಮನೆಯೇ ಬೇರೆ. ಬಯಲು ಸೀಮೆಯ ಅಡುಗೆ ಮನೆಗೂ ರಾಜಸ್ಥಾನದ ಅಡುಗೆಮನೆಗೂ ಎಲ್ಲೆಲ್ಲೋ ಸಾಮ್ಯತೆ. ಕರಾವಳಿಯ ಅಡುಗೆಮನೆಯಲ್ಲಿ ತೆಂಗಿನ ಎಣ್ಣೆಯ ಒಗ್ಗರಣೆ ಘಮಘಮಿಸಿದರೆ ಪಂಜಾಬಿನ ಅಡುಗೆಮನೆಯಲ್ಲಿ ಗೋಧಿ, ಬೆಣ್ಣೆ ಮತ್ತು ಸಾಸಿವೆ ಎಣ್ಣೆಯ ಘಮ. ಎಷ್ಟೊಂದು ವೈವಿಧ್ಯ. ಹಳ್ಳಿಗಳಲ್ಲಿ ಹೊಗೆ ಹಿಡಿದ ಗೋಡೆ, ಪಾತ್ರೆಗಳು, ಅವುಗಳ ಮೇಲೆ ಕೆತ್ತಿದ ಹೆಸರುಗಳು, ಎಲ್ಲವೂ ತಲಗಳಿ ನೆನಪುಗಳಾಗಿ ಕುಟುಂಬದಲ್ಲಿ ಪ್ರವಹಿಸುತ್ತವೆ. ನಮ್ಮ ದೇಶದಲ್ಲಿ ಅಡುಗೆಮನೆ ಅಡುಗೆಯಾಚೆ, ಸಾಂಸ್ಕೃತಿಕ ಹೆಗ್ಗುರುತು. ನಮ್ಮಲ್ಲಿ ಆಹಾರವೇ ಪ್ರತ್ಯೇಕ ಸಂಸ್ಕೃತಿ. ಇದೆಲ್ಲ ಅತಿವಿಶೇಷವೆನಿಸುವುದು ಬೇರೆ ಹೊರದೇಶಗಳನ್ನು ಕಂಡಾಗ ಮಾತ್ರ.

ವಿಕಸನದ ದಾರಿಯಲ್ಲಿ- ಸೂಕ್ಷ್ಮತೆ ಮತ್ತು ಕೌಶಲ್ಯದ ಕಾರಣಕ್ಕೆ ಅಡುಗೆಯೆಂಬ ಮಹತ್ವದ ಜವಾಬ್ದಾರಿಯನ್ನು ಸಮಾಜ ಸಕಾರಣ ಹೆಣ್ಣಿಗೆ ವಹಿಸಿದ್ದಿರಬಹುದು. ಮುಂದೆ ಹೋದಂತೆ ಹೆಣ್ಣಿನ ಬದುಕಿನ ಮುಖ್ಯ ಭಾಗವೇ ಆಯಿತು ಎನ್ನುವುದು ಸುಳ್ಳಲ್ಲ. ಶತಮಾನಗಳ ಕಾಲ ಅಡುಗೆಮನೆ ಮಹಿಳೆಯರ ಜೀವನದ ಜೊತೆ ಆಳವಾಗಿ ಬೆಸೆದುಕೊಂಡಿತು. ಲಕ್ಷಾಂತರ ತಾಯಂದಿರು ಮತ್ತು ಅಜ್ಜಿಯರು ತಮ್ಮ ಪ್ರೀತಿಯನ್ನು ಅವಿರತ ಶ್ರಮದ ಮೂಲಕ ಇಲ್ಲಿಯೇ ವ್ಯಕ್ತಪಡಿಸಿದರು- ಬೆಳಗಿನ ಜಾವ ಎದ್ದು ಮನೆಯವರೆಲ್ಲರಿಗೂ ಅಡುಗೆ ಮಾಡುವುದು, ರಾತ್ರಿ ಕೊನೆಯಲ್ಲಿ ತಾವು ಊಟ ಮಾಡಿ ಕೊನೆಯಲ್ಲಿ ಮಲಗುವುದು. ಕ್ರಮೇಣ ಮಹಿಳೆಯರಿಗೆ ಅಡುಗೆಮನೆ ಒಂದು ಬಂಧನದ ಸಂಕೇತವೆಂಬ ಭಾವವೂ ಹುಟ್ಟಿದ್ದು ಕೂಡ ಸರಿ. ಏಕೆಂದರೆ ಮಹಿಳೆಯರ ಕನಸುಗಳು ಮನೆಯ ಗೋಡೆಗಳ ಒಳಗೆ ಮಾತ್ರ ಸೀಮಿತವಾಗಿಬಿಟ್ಟವು. ಹೀಗಾಗಿ ಅಡುಗೆಮನೆ ಒಂದು ಕಡೆ ಕಾಳಜಿ ಮತ್ತು ಮಮತೆಯ ಸ್ಥಳವಾಗಿದ್ದರೆ, ಮತ್ತೊಂದು ಕಡೆ ತ್ಯಾಗದ ಪ್ರತೀಕವೂ ಆಯಿತು.

ಆದರೆ ಆಧುನಿಕ ಜೀವನ ಅಡುಗೆಮನೆಗಳನ್ನು ಸಂಪೂರ್ಣವಾಗಿ ಬದಲಿಸಿದೆ.

ಇಂದು ಅಡುಗೆಮನೆಗಳು ಒಂದು ಪ್ರತಿಷ್ಠೆಯ ಸಂಕೇತವಾಗಿವೆ. ಮಾರ್ಬಲ್ ಕೌಂಟರ್‌ಗಳು, ಡಿಸೈನರ್ ಲೈಟಿಂಗ್, ವಿದೇಶಿ ಉಪಕರಣಗಳು, ಓಪನ್ ಲೇಔಟ್‌ಗಳು- ಇವೆಲ್ಲವೂ ಆಧುನಿಕ ಮನೆಯ ಗುರುತುಗಳಾಗಿ ಪರಿಣಮಿಸಿವೆ. ಇವುಗಳಿಗೆ ಹೆಸರಿಡುವಷ್ಟು ಕನ್ನಡವೇ ಬೆಳೆದಿಲ್ಲ. ಸಾಮಾಜಿಕ ಜಾಲತಾಣಗಳು ಅಡುಗೆಮನೆಗಳನ್ನು ಬದುಕಿನ ಭಾಗಕ್ಕಿಂತ ಪ್ರದರ್ಶನದ ವಸ್ತುವಾಗಿ ಮಾಡಿಬಿಟ್ಟಿವೆ. ಅಪಾರ್ಟ್ಮೆಂಟ್ ಬ್ರೋಷರ್‌ಗಳಲ್ಲಿ ಅಡುಗೆಮನೆಗೆ ಎಲ್ಲಿಲ್ಲದ ಆಡಂಬರ, ಮಹತ್ವ. ವಿಚಿತ್ರವೆಂದರೆ, ಈಗೀಗ ಹಲವರು ಅಡುಗೆ ಮಾಡುವುದಕ್ಕಿಂತ ಅಡುಗೆಮನೆ ಅಲಂಕರಿಸಲು ಹೆಚ್ಚು ಹಣ ಖರ್ಚು ಮಾಡುತ್ತಾರೆ. ಅಷ್ಟು ಮಾಡಿ ಆಮೇಲೆ ಫುಡ್ ಡೆಲಿವರಿ ಆ್ಯಪ್‌ಗಳಲ್ಲಿ ಆಹಾರವನ್ನು ತರಿಸಿಕೊಳ್ಳುತ್ತಾರೆ. ಈಗ ಬೆಂಗಳೂರಿನಂತಹ ಊರುಗಳಲ್ಲಿ ಅಡುಗೆಮನೆ ಮೈಕ್ರೋವೇವ್ ಓವನ್‌ಗಳು ಬಿಸಿಮಾಡಿಕೊಳ್ಳಲಿಕ್ಕಷ್ಟೆ ಸೀಮಿತವಾಗುತ್ತಿವೆ.

ಆದರೂ ಅಡುಗೆ ಮನೆಯೆಂಬ ಭಾವ ಮಾತ್ರ ನಮ್ಮೆಲ್ಲರಲ್ಲೂ ಇವತ್ತಿಗೂ ಹಾಗೆಯೇ ಉಳಿದುಕೊಂಡಿದೆ. ಇವತ್ತಿಗೂ ನೋಡಿ, ಒಂದು ಕುಟುಂಬ ಯಾವುದೇ ಸಂಕಷ್ಟ ಎದುರಿಸುವಾಗ ಒಂದಾಗುವುದು, ಮಾತುಕತೆ ಎಲ್ಲವೂ ನಡೆಯುವುದು ಮತ್ತದೇ ಅಡುಗೆಮನೆಯಲ್ಲಿ. ಇವತ್ತಿಗೂ ಕುಟುಂಬವನ್ನು ಸಮಾಧಾನ ಮಾಡುವುದು ಮತ್ತದೇ ಅಡುಗೆಮನೆ.

ಕೊರೊನಾ ಮಹಾಮಾರಿಯ ಸಮಯದಲ್ಲಿ ಏನಾಯಿತೆಂದು ನಮಗೆಲ್ಲ ನೆನಪಿರಬಹುದು. ಕೋವಿಡ್ ಹರಡುತ್ತಿದ್ದಂತೆ ಎಲ್ಲರೂ ಮನೆಯಲ್ಲಿ ಜೊತೆಯಾಗಿದ್ದು ಎಲ್ಲಿ? ನೆನಪಿಸಿಕೊಳ್ಳಿ. ಚಾವಡಿಯಲ್ಲಲ್ಲ, ಅಡುಗೆಮನೆಯಲ್ಲಿ. ಲಕ್ಷಾಂತರ ಜನರು ಅಡುಗೆ ಮಾಡುವುದನ್ನು ಒಂದು ಥೆರಪಿ ಎಂದರು. ಕುಟುಂಬಗಳು ಮತ್ತೆ ಊಟದ ಮೇಜಿನ ಸುತ್ತ ಕೂತವು. ಹಳೆಯ ರೆಸಿಪಿಗಳು ನೆನಪಾದವು, ಅವುಗಳೇ ರೀಲ್ಸ್‌ಗಳಾದವು. ಆಗ ಆಧುನಿಕ ಜೀವನದಲ್ಲಿ ನಿಧಾನವಾಗಿ ಮರೆಯಾಗುತ್ತಿರುವ ಅಡುಗೆಮನೆ ಎಂಬ ನೆಲೆಯ ಭಾವ ಮತ್ತೆ ಅವಶ್ಯಕತೆಯೆನಿಸಿತು. ಅಡುಗೆ ಮನೆಯಲ್ಲಿಯೇ ಕೂತು ಸಾಂಕ್ರಾಮಿಕವನ್ನು ಜಗತ್ತು ಎದುರಿಸಿತು.

ಅಮ್ಮ ಇವತ್ತಿಗೂ ಫೋನ್ ಮಾಡಿದಾಗ 'ಐ ಲವ್ ಯು' ಎಂದು ಹೇಳುವುದಿಲ್ಲ. ಅದನ್ನೇ 'ಊಟ ಆಯ್ತಾ, ತಿಂಡಿ ಆಯ್ತಾ?' ಎಂದು ಪರೋಕ್ಷವಾಗಿ ಕೇಳುತ್ತಾರೆ. ಅಮ್ಮ ಹೋಂವರ್ಕ್ ಮಾಡುವಾಗ ಹಣ್ಣು ಕತ್ತರಿಸಿ ತಂದಿಟ್ಟು ಹೋಗುವುದು. ತಡ ರಾತ್ರಿ ಕಂಪ್ಯೂಟರಿನಲ್ಲಿ ಕೆಲಸ ಮಾಡುವಾಗ ಅಪ್ಪ ಚಹಾ ಮಾಡಿ ತಂದು ಕೊಡುವುದು, ಸಂಗಾತಿ ಇಷ್ಟದ ಅಡುಗೆ ಮಾಡಿ ಬಡಿಸುವುದು. ನಮ್ಮ ಸುತ್ತಲಿನ ಬಹುತೇಕ ಪ್ರೀತಿ ವ್ಯಕ್ತವಾಗುವುದು ಆಹಾರದಿಂದ. ಆ ಪ್ರೀತಿ ತಯಾರಾಗಿ ಬರುವುದು ಅದೇ ಅಡುಗೆಮನೆಯಿಂದ.

ಭವಿಷ್ಯದಲ್ಲಿ ತಂತ್ರಜ್ಞಾನ ಅಡುಗೆಮನೆಗಳನ್ನು ಸಂಪೂರ್ಣವಾಗಿ ಬದಲಾಯಿಸಬಹುದು- ರೋಬೋಟ್‌ಗಳು, ಕೃತಕ ಬುದ್ಧಿಮತ್ತೆ, ಸ್ಮಾರ್ಟ್ ಉಪಕರಣಗಳು ಎಲ್ಲವೂ ಬರಬಹುದು. ಈಗಾಗಲೇ ಅಂತಹ ವ್ಯವಸ್ಥೆ ಕೆಲವು ದೇಶಗಳಲ್ಲಿ ಬಂದಾಗಿದೆ. ಆದರೆ ಒಂದು ಮಜವೆಂದರೆ ಅಮೆರಿಕಾದಂತಹ ದೇಶಗಳ ಅಡುಗೆಮನೆಗಳಲ್ಲಿ ಅಡುಗೆ ತಯಾರಾಗುವುದು ಈಗ ಹೆಚ್ಚು ಕಡಿಮೆ- ಸಂಪೂರ್ಣ ನಿಂತುಬಿಟ್ಟಿದೆ. ಅಲ್ಲಿ ಏನಿದ್ದರೂ ಫ್ರೋಜನ್ ಸಿದ್ಧ ಅಡುಗೆಗಳು. ಅಮೆರಿಕನ್ನರು ಸೇವಿಸುವ ಶೇ. 55ರಷ್ಟು ಆಹಾರಗಳು ಫ್ಯಾಕ್ಟರಿಯಲ್ಲಿ ತಯಾರಾಗಿ ಬರುತ್ತವೆ. ಬಿಸಿ ಮಾಡಿದರಾಯ್ತು- ತಿಂದರಾಯ್ತು. ಅದು ಬೇಸರವಾದರೆ ಫುಡ್ ಡೆಲಿವರಿ ಮಾಡಿಸಿಕೊಂಡರಾಯ್ತು ! ಇಂತಹ ಎಡವಟ್ಟುಗಳು ಪಾಶ್ಚಾತ್ಯದಲ್ಲಿ ಮಾತ್ರ ಉಳಿದಿಲ್ಲ, ಅವು ಕ್ರಮೇಣ ಬೆಂಗಳೂರಿನ ಅಪಾರ್ಟ್ಮೆಂಟುಗಳನ್ನೂ ಸದ್ದಿಲ್ಲದೆ ಪ್ರವೇಶಿಸಿವೆ. ಆದರೂ ಅಡುಗೆಮನೆಯೆಂಬ ಭಾವ ಮಾತ್ರ ಸಾರ್ವತ್ರಿಕ, ಇಂದಿಗೂ ಎಲ್ಲೆಡೆಯೂ ಜಾಗೃತವಾಗಿದೆ. ಏಕೆಂದರೆ ಅದು ಅಡುಗೆಯಾಚೆಯ ನಮ್ಮ ಸಂಬಂಧದ ಹಸಿವಿನ ಅವಶ್ಯಕತೆ. ಅಡುಗೆ ಮನೆ- ಕೇವಲ ಅಡುಗೆ ತಯಾರಾಗುವ ಜಾಗವಷ್ಟೇ ಅಲ್ಲ. ಮನುಷ್ಯ ಬಾಕಿ ಪ್ರಾಣಿಗಳಿಂದ ಪ್ರತ್ಯೇಕವಾಗಿದ್ದು, ಮನುಷ್ಯನಾಗಿದ್ದು ಅಡುಗೆ ಮನೆಯಲ್ಲಿ, ಇವತ್ತಿಗೂ ಮನುಷ್ಯ ಮನುಷ್ಯನಾಗುವುದು ಅದೇ ಅಡುಗೆಮನೆಯಲ್ಲಿ.

ಅಮ್ಮ ಯಾವತ್ತೂ ಅಪ್ಪನಲ್ಲಿ ಅಡುಗೆ ಮನೆ ಸ್ವಲ್ಪ ಚಿಕ್ಕದು, ದೊಡ್ಡದಿರಬೇಕಿತ್ತು ಎನ್ನುತ್ತಿದ್ದಳು. ಆದರೆ ಈಗ ಅಮ್ಮ ಹಾಗನ್ನುವುದಿಲ್ಲ, ಇರೋದು ನಾವಿಬ್ಬರು, ಅಡುಗೆ ಮನೆ ದೊಡ್ಡದಾಯಿತು, ಚಿಕ್ಕದಿರಬೇಕಿತ್ತು ಎನ್ನುತ್ತಾಳೆ. ಸ್ವಲ್ಪ ಹೊತ್ತು ಸುಮ್ಮನಿದ್ದು- ಇಲ್ಲ, ಮೊದಲೇ ಅಡುಗೆ ಮನೆ ದೊಡ್ಡದಿತ್ತು, ಈಗ ನೀವ್ಯಾರೂ ಇಲ್ಲದೆ ಅಡುಗೆ ಮನೆ ಚಿಕ್ಕದೆನಿಸುತ್ತದೆ ಎನ್ನುತ್ತಾಳೆ.

ತ್ರಿವಳಿ ಸವಾಲಿನ ನಡುವೆಯೂ ಬೆಳೆಯುತ್ತಿದೆ ಭಾರತದ ಆರ್ಥಿಕತೆ!

ಮನಿಮೈಂಡೆಡ್
ಕೇಶವ ಪ್ರಸಾದ್ ಬಿ.
vveditoped@gmail.com

ನಮ್ಮ ದೇಶದಲ್ಲಿ ವಾಕ್ ಸ್ವಾತಂತ್ರ್ಯ, ಸ್ವತಂತ್ರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಅನುಕೂಲ ಎಷ್ಟು ಚೆನ್ನಾಗಿದೆ ಎಂದರೆ, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಪತಿ ಡಾ. ಪರಕಾಲ ಪ್ರಭಾಕರ್ ಅವರೇ ದೇಶದ ಆರ್ಥಿಕ ನೀತಿಗಳ ಬಗ್ಗೆ ಹಲವಾರು ಬಾರಿ ಬಹಿರಂಗವಾಗಿ ತೀವ್ರವಾಗಿ ಟೀಕಿಸಿದ್ದಾರೆ. ನಾರ್ವೆಯ ಪತ್ರಕರ್ತೆಗೆ ಇದೆಲ್ಲ ತಿಳಿದಿದೆಯೋ, ಇಲ್ಲವೋ. ಭಾರತದಲ್ಲಿ ಪತ್ನಿ ದೇಶದ ಹಣಕಾಸು ಮಂತ್ರಿಯಾಗಿದ್ದರೂ, ಖುದ್ದು ಪತಿಯೇ ಸರಕಾರದ ಆರ್ಥಿಕ ನೀತಿಗಳನ್ನು ಪ್ರತಿಪಕ್ಷಗಳನ್ನೂ ಮೀರಿಸುವ ರೀತಿಯಲ್ಲಿ ಟೀಕಿಸುತ್ತಾರೆ. ಅಮಿತ್ ಶಾ ಆಗಲಿ, ಮೋದಿಯವರಾಗಲಿ ಈ ಬಗ್ಗೆ ಯಾವತ್ತೂ ಚಕಾರವೆತ್ತಿಲ್ಲ. ಗಂಡ ಮತ್ತು ಹೆಂಡತಿ ಒಂದೇ ರೀತಿಯ ರಾಜಕೀಯ ಅಥವಾ ಆರ್ಥಿಕ ಅಭಿಪ್ರಾಯ ಹೊಂದಿರಬೇಕು ಎಂಬ ನಿಯಮವಿಲ್ಲ. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರಿಗೂ ತಮ್ಮದೇ ಆದ ವೈಯಕ್ತಿಕ ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯವಿದೆ ಎಂದು ಈ ಭಿನ್ನಾಭಿಪ್ರಾಯಗಳನ್ನು ಗೌರವಿಸಿದ್ದಾರೆ. ಆದರೆ ಟೀಕೆಗಳು ರಚನಾತ್ಮಕವಾಗಿರಬೇಕು. ವಸ್ತುನಿಷ್ಠವಾಗಿರಬೇಕು.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಇತ್ತೀಚೆಗೆ ಭಾರತದ ಆರ್ಥಿಕ ಬೆಳವಣಿಗೆಗೆ ಎದುರಾಗಿರುವ ಸವಾಲುಗಳು ಮತ್ತು ಇಕಾನಮಿಯ ಬಲಾಬಲಗಳ ಬಗ್ಗೆ ಮಾತನಾಡಿದ್ದಾರೆ. ಜತೆಗೆ 'ಆರ್ಥಿಕತೆ ಕುಸಿಯುತ್ತಿದೆ, ಎಲ್ಲವೂ ಕೈಮೀರಿ ಹೋಗುತ್ತಿದೆ' ಎಂದು ಬಿಂಬಿಸುತ್ತಿರುವ ನಕಾರಾತ್ಮಕವಾದಿಗಳಿಗೆ, 'ನಿರಾಶಾದಾಯಕ ಮತ್ತು ಭೀತಿ ಹುಟ್ಟಿಸುವ ಅಂತೆ-ಕಂತೆಗಳು ಅಗತ್ಯವಿಲ್ಲ' ಎಂದು ಖಡಕ್ ಆಗಿಯೇ ಹೇಳಿದ್ದಾರೆ. ಭಾರತದ ಆರ್ಥಿಕತೆಯು ಇಂದಿಗೂ ಸಕಾರಾತ್ಮಕ ಮತ್ತು ಚೇತೋಹಾರಿಯಾಗಿದೆ. ದೇಶದ ಸಾಮಾನ್ಯ ಜನರು ಮತ್ತು ಉದ್ಯಮಿಗಳು ಮಾಡುತ್ತಿರುವ ಸಾಧನೆಗಳನ್ನು ಮರೆತು, ಕೇವಲ ಭಯದ ವಾತಾವರಣ ಸೃಷ್ಟಿಸುವುದು ಸರಿಯಲ್ಲ. ಭಾರತಕ್ಕೆ ಈಗ ಇಂತಹ ನಕಾರಾತ್ಮಕ ನರೇಟಿವ್‌ಗಳ ಅಗತ್ಯವಿಲ್ಲ, ಬದಲಿಗೆ ಜನರಲ್ಲಿ ಆತ್ಮವಿಶ್ವಾಸ ತುಂಬುವ ಮಾತು ಮತ್ತು ಕೆಲಸಗಳ ಅಗತ್ಯವಿದೆ ಎಂದಿದ್ದಾರೆ. ಸ್ಮಾಲ್ ಇಂಡಸ್ಟ್ರೀಸ್ ಡೆವಲಪ್ಮೆಂಟ್ ಬ್ಯಾಂಕ್ ಆಫ್ ಇಂಡಿಯಾದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ದೇಶದ ಆರ್ಥಿಕ ಪರಿಸ್ಥಿತಿಯ ವಾಸ್ತವವನ್ನು ವಿವರಿಸಿದ್ದಾರೆ.

ಈಗ ಎದುರಾಗಿರುವ ಆರ್ಥಿಕ ಸವಾಲುಗಳು ಭಾರತ ಸ್ವತಃ ಸೃಷ್ಟಿಸಿಕೊಂಡಿದ್ದಲ್ಲ. ಬದಲಿಗೆ ಇವು ಸಂಪೂರ್ಣವಾಗಿ ಬಾಹ್ಯ ಸವಾಲುಗಳಾಗಿವೆ ಎಂದು ಸ್ಪಷ್ಟಪಡಿಸಿದ್ದಾರೆ. ಪಶ್ಚಿಮ ಏಷ್ಯಾ ಬಿಕ್ಕಟ್ಟು, ರೆಡ್ಸೀ ಮತ್ತು ಹಾರ್ಮುಜ್ ಜಲಸಂಧಿಯ ಭಾಗದಲ್ಲಿ ಉಂಟಾಗಿರುವ ತೊಂದರೆಗಳು ಜಾಗತಿಕ ಸಪ್ಲೈ ಚೈನ್ ಮೇಲೆ ಪ್ರತಿಕೂಲ ಪರಿಣಾಮ ಬೀರಿವೆ. ಇದರಿಂದಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ, ರಸಗೊಬ್ಬರ, ಮತ್ತು ಚಿನ್ನದ ಬೆಲೆಗಳು ಗಗನಕ್ಕೇರಿವೆ.

ಸದ್ಯದ ಜಾಗತಿಕ ಪರಿಸ್ಥಿತಿಯಲ್ಲಿ ಭಾರತವು ಪ್ರಮುಖವಾಗಿ ಮೂರು ಸವಾಲುಗಳ ಬಗ್ಗೆ ಹೆಚ್ಚಿನ ಗಮನ ಹರಿಸಬೇಕಾಗಿದೆ. ಅವುಗಳೆಂದರೆ- ಇಂಧನ, ರಸಗೊಬ್ಬರ ಮತ್ತು ವಿದೇಶಿ ವಿನಿಮಯ ಸಂಗ್ರಹ (ಫೊರೆಕ್ಸ್). ಈ ಮೂರಕ್ಕೂ ನಾವು ವಿದೇಶಿ ವಿನಿಮಯದಲ್ಲೇ, ಮುಖ್ಯವಾಗಿ ಡಾಲರ್‌ಗಳಲ್ಲಿ ಹಣ ಪಾವತಿ ಮಾಡಬೇಕಿರುವುದರಿಂದ ಜಾಗತಿಕ ಮಟ್ಟದ ಬಿಕ್ಕಟ್ಟುಗಳು ನಮ್ಮ ಮೇಲೂ ಪ್ರಭಾವ ಬೀರುತ್ತಿವೆ. ಆದರೆ ಇದನ್ನು ಎದುರಿಸಿಯೂ ಭಾರತದ ಆರ್ಥಿಕತೆ ಸದೃಢವಾಗಿದೆ. ಜನತೆಗೆ ಇಂಧನ ಬೆಲೆ ಏರಿಕೆಯಾಗದಂತೆ ತಡೆಯಲು ಸರ್ಕಾರ ಈಗಾಗಲೇ ಸಾಕಷ್ಟು ಶ್ರಮಿಸಿದೆ. ಅಬಕಾರಿ ಸುಂಕವನ್ನು ಕಡಿತಗೊಳಿಸುವ ಮೂಲಕ ವಾರ್ಷಿಕವಾಗಿ ಸುಮಾರು 1 ಲಕ್ಷ ಕೋಟಿ ರೂಪಾಯಿ ಆದಾಯ ನಷ್ಟವನ್ನು ತಾನೇ ಭರಿಸಿಕೊಳ್ಳಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಈಗ ಆಗುತ್ತಿರುವ ಬೆಲೆ ಏರಿಕೆಯು ಅಂತರರಾಷ್ಟ್ರೀಯ ಮಟ್ಟದಲ್ಲಿ ತೈಲ ಕಂಪನಿಗಳು ಖರೀದಿಸುವ ದರಕ್ಕೆ ಅನುಗುಣವಾಗಿ ಆಗುತ್ತಿದೆ ಎಂದು ಅವರು ವಿವರಿಸಿದ್ದಾರೆ. ಸುಳ್ಳು ವದಂತಿಗಳಿಗೆ ಅಥವಾ ನಕಾರಾತ್ಮಕ ಚರ್ಚೆಗಳಿಗೆ ಕಿವಿಗೊಡಬೇಡಿ ಎಂದು ಹಣಕಾಸು ಸಚಿವರು ಕರೆ ನೀಡಿದ್ದಾರೆ.

ಆತ್ಮವಿಶ್ವಾಸವನ್ನು ತುಂಬಿಕೊಳ್ಳಲು ಎಂಬತ್ತರ ದಶಕದಿಂದ ಇಲ್ಲಿಯವರೆಗಿನ ಆರ್ಥಿಕ ಬೆಳವಣಿಗೆಯ ಅಂಕಿ ಅಂಶಗಳೇ ಸಾಕು, ಗಮನಿಸಿ. 1980-81ರಿಂದ 1989-90ರ ತನಕ ವಾರ್ಷಿಕ ಸರಾಸರಿ 5.7 ಪರ್ಸೆಂಟ್ ಜಿಡಿಪಿ ಬೆಳವಣಿಗೆ ಆಗಿತ್ತು. 1990-91ರಿಂದ 1999-2000 ತನಕ 5.8 ಪರ್ಸೆಂಟ್, 2000-01ರಿಂದ 2009-10 ತನಕ 6.3 ಪರ್ಸೆಂಟ್, 2010-11ರಿಂದ 2019-20 ತನಕ 6.6 ಪರ್ಸೆಂಟ್, 2022-23ರಿಂದ 2025-26 ತನಕ 7.7 ಪರ್ಸೆಂಟ್ ಜಿಡಿಪಿ ಬೆಳವಣಿಗೆ ದಾಖಲಾಗಿದೆ! ತಲಾ ಆದಾಯವೂ ಇದೇ ಅವಧಿಯಲ್ಲಿ 3.5 ಪರ್ಸೆಂಟ್‌ನಿಂದ 6.7 ಪರ್ಸೆಂಟ್‌ಗೆ ಏರಿಕೆಯಾಗಿದೆ. ಸವಾಲುಗಳ ಎದುರು ಕುಗ್ಗದೆಯೇ ಭಾರತದ ಆರ್ಥಿಕತೆ ಬೆಳವಣಿಗೆಯಾಗುತ್ತಿದೆ. ಪ್ರಪಂಚದಲ್ಲಿಯೇ ಇವತ್ತು ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಭಾರತ ಹೊರಹೊಮ್ಮಿದೆ. ಇದನ್ನು ಹೆಮ್ಮೆಯಿಂದ, ಅಭಿಮಾನದಿಂದ ಹೇಳಬಹುದು. ಆದರೂ ಅತಿಯಾದ ನಿರಾಶೆಯ ನೆಗೆಟಿವ್ ನರೇಟಿವ್ ಬಿತ್ತುವವರನ್ನು ಏನೆಂದು ಕರೆಯಬೇಕು?

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ಭಾರತ ಸೇರಿದಂತೆ ಏಷ್ಯಾ, ಯುರೋಪ್ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಅಲ್ಲೋಲಕಲ್ಲೋಲವಾಗಿದೆ. ಇಂಧನ ಬಿಕ್ಕಟ್ಟು ತಾರಕಕ್ಕೇರಿದೆ. ಫೆಬ್ರವರಿ ಅಂತ್ಯಕ್ಕೆ ಆರಂಭವಾದ ಇರಾನ್ ಯುದ್ಧ ಇನ್ನೂ ನಿಂತಿಲ್ಲ. ಹೀಗಿದ್ದರೂ 2026ರ ಏಪ್ರಿಲ್‌ನಲ್ಲಿ ಭಾರತದ ಆರ್ಥಿಕತೆ ಸಕ್ರಿಯವಾಗಿತ್ತು. ಇಂಡಸ್ಟ್ರಿಯಲ್ ಮತ್ತು ಸರ್ವೀಸ್ ಸೆಕ್ಟರ್‌ನಲ್ಲಿ ಚಟುವಟಿಕೆಗಳು ಪ್ರಬಲವಾಗಿತ್ತು. ಆಹಾರದ ಬೆಲೆಗಳ ಏರಿಕೆಯಿಂದಾಗಿ ಏಪ್ರಿಲ್‌ನಲ್ಲಿ ಚಿಲ್ಲರೆ ಹಣದುಬ್ಬರ 3.5 ಪರ್ಸೆಂಟ್‌ಗೆ ಏರಿತ್ತಾದರೂ, ಆರ್‌ಬಿಐ ಮಾನದಂಡದ ಪ್ರಕಾರ ಸುರಕ್ಷಿತ ಮಟ್ಟದಲ್ಲಿಯೇ ಇದೆ. ಮಾರ್ಚ್‌ನಲ್ಲಿ ನಿವ್ವಳ ವಿದೇಶಿ ನೇರ ಬಂಡವಾಳ ಹೂಡಿಕೆ ಪಾಸಿಟಿವ್ ಆಗಿತ್ತು. ದುರದೃಷ್ಟವಶಾತ್ ಜಾಗತಿಕ ಆರ್ಥಿಕ ಪರಿಸ್ಥಿತಿಯು ಇಂದಿಗೂ ಸೂಕ್ಷ್ಮ ಹಾಗೂ ಅಸ್ಥಿರವಾಗಿದೆ. ನಾನಾ ದೇಶಗಳಲ್ಲಿ ಉಂಟಾಗಿರುವ ತಲ್ಲಣಗಳು, ಗಗನಕ್ಕೇರಿರುವ ಇಂಧನ ವೆಚ್ಚಗಳು ಸವಾಲಾಗಿ ಪರಿಣಮಿಸಿದೆ.

ಆರ್ಥಿಕ ಬೆಳವಣಿಗೆ ಹಾಗೂ ಹಣದುಬ್ಬರದ ಭವಿಷ್ಯದ ಬಗೆಗಿನ ಅನಿಶ್ಚಿತತೆಯು ಜಗತ್ತನ್ನು ಆವರಿಸಿಕೊಂಡಿದೆ. ಪಶ್ಚಿಮ ಏಷ್ಯಾದ ಸಂಘರ್ಷಗಳು ಜಾಗತಿಕ ಮಾರುಕಟ್ಟೆ, ವ್ಯಾಪಾರ ಮತ್ತು ಸರಬರಾಜು ಸಪ್ಲೈ ಚೈನ್ ಮೇಲೆ ನಿರಂತರ ಒತ್ತಡ ಹೇರುತ್ತಿವೆ. ಇದು ಹಣಕಾಸು ಮಾರುಕಟ್ಟೆಯಲ್ಲಿ ಏರಿಳಿತಗಳಿಗೆ ಕಾರಣವಾಗಿದೆ. ಆದರೆ, ಇಂತಹ ಕಠಿಣ ಜಾಗತಿಕ ಸನ್ನಿವೇಶದಲ್ಲೂ, ಭಾರತವು ಅತ್ಯಂತ ಸದೃಢವಾದ ಆರ್ಥಿಕ



ಬಲದೊಂದಿಗೆ ಬೆಳೆಯುತ್ತಿದೆ. ದೇಶೀಯ ಬೇಡಿಕೆಯೂ ಸದೃಢವಾಗಿದೆ. ಸೇವಾ ಕ್ಷೇತ್ರ ಚುರುಕಾಗಿದೆ. ದೇಶಕ್ಕೆ 11 ತಿಂಗಳಿನ ಇಡೀ ಆಮದು ವೆಚ್ಚಕ್ಕೆ ಸಾಕಾಗುವಷ್ಟು ವಿದೇಶಿ ವಿನಿಮಯ ಸಂಗ್ರಹ ಇದೆ. 2025-26ರಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯ ಪ್ರಮಾಣವು 2024-25ಕ್ಕಿಂತಲೂ ವೃದ್ಧಿಸಿದೆ.

ಹೀಗಿದ್ದರೂ, ಇಂಧನ ಸಮಸ್ಯೆ ಇದೆಯಲ್ಲವೇ, ಅದರ ಆಯಾಮಗಳು ಹಲವು. ಕಚ್ಚಾ ತೈಲ ಮತ್ತು ಬಂಗಾರದ ಆಮದು ಕುರಿತ ಬಿಲ್ ಹೆಚ್ಚಳವಾಗಿದೆ. ವ್ಯಾಪಾರ ಕೊರತೆ ಕಾಡುತ್ತಿದೆ. ಸ್ಟಾಕ್ ಮಾರುಕಟ್ಟೆಯಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಷೇರುಗಳನ್ನು ಮಾರುತ್ತಿದ್ದರೂ, ದೇಶೀಯ ಹೂಡಿಕೆದಾರರು ಭರ್ಜರಿ ಹೂಡಿಕೆ ಮಾಡುತ್ತಿದ್ದಾರೆ.

ಭಾರತದ ಆರ್ಥಿಕ ಬೆಳವಣಿಗೆಯ ಬಗ್ಗೆ ಈಕ್ವಿಟಿ ಹೂಡಿಕೆದಾರರು ಎಷ್ಟು ಆತ್ಮ ವಿಶ್ವಾಸ ಹೊಂದಿದ್ದಾರೆ ಎಂಬುದನ್ನು ಅಂಕಿ ಅಂಶಗಳೇ ಬಿಂಬಿಸುತ್ತವೆ. ಇದು ಅತ್ಯಂತ ಭರವಸೆದಾಯಕವಾಗಿದೆ. ಭಾರತೀಯ ಮ್ಯೂಚುವಲ್ ಫಂಡ್ ಅಸೋಸಿಯೇಷನ್ ಬಿಡುಗಡೆ ಮಾಡಿರುವ ಇತ್ತೀಚಿನ (2026ರ ಆರಂಭದ) ಅಂಕಿ-ಅಂಶಗಳ ಪ್ರಕಾರ, ಸದ್ಯಕ್ಕೆ ದೇಶದಲ್ಲಿ ಪ್ರತಿ ತಿಂಗಳು ಸಿಪ್ (SIP) ಮೂಲಕ ಸರಾಸರಿ 25,000 ಕೋಟಿ ರೂಪಾಯಿ ಮಾರುಕಟ್ಟೆಗೆ ಹೂಡಿಕೆಯಾಗುತ್ತಿದೆ. ಸಕ್ರಿಯವಾಗಿರುವ ಒಟ್ಟು ಸಿಪ್ ಖಾತೆಗಳ ಸಂಖ್ಯೆ ಸುಮಾರು 8.5ರಿಂದ 9 ಕೋಟಿಯನ್ನು ದಾಟಿದೆ. ಸರಾಸರಿಯಾಗಿ ಒಬ್ಬ ಹೂಡಿಕೆದಾರ ತಿಂಗಳಿಗೆ 2,500 ರುಪಾಯಿಗಳಿಂದ 3,000 ರುಪಾಯಿ ತನಕ ಸಿಪ್ ಮೂಲಕ ಹೂಡಿಕೆ ಮಾಡುತ್ತಿದ್ದಾನೆ. ಜಾಗತಿಕ ಏರಿಳಿತಗಳ ನಡುವೆಯೂ ಭಾರತದ ಮಾರುಕಟ್ಟೆ ಸ್ಥಿರವಾಗಿರಲು ಈ ದೇಶೀಯ ಸಿಪ್ ಹೂಡಿಕೆಯೇ ಪ್ರಮುಖ ಕಾರಣವಾಗಿದೆ. ಭಾರತದಲ್ಲಿ CDSL ಮತ್ತು NSDL ಸೇರಿ ಒಟ್ಟು ಡಿಮ್ಯಾಟ್ ಖಾತೆಗಳ ಸಂಖ್ಯೆ 16 ಕೋಟಿಯ ಗಡಿ ದಾಟಿದೆ. ಪ್ರತಿ ತಿಂಗಳು ಹೊಸದಾಗಿ 25 ರಿಂದ 30 ಲಕ್ಷ ಹೊಸ ಡಿಮ್ಯಾಟ್ ಖಾತೆಗಳು ಸೇರ್ಪಡೆಯಾಗುತ್ತಿವೆ. ಕಾರ್ಪೊರೇಟ್ ವಲಯ, ಉದ್ದಿಮೆಗಳ ಪ್ರಗತಿಯನ್ನು ಇದು ಬಿಂಬಿಸಿದೆ. ಇದು ಮಾತ್ರವಲ್ಲದೆ, ಚಿಲ್ಲರೆ ಹೂಡಿಕೆದಾರರು ನೇರವಾಗಿ ಷೇರು ಮಾರುಕಟ್ಟೆಯಲ್ಲಿ ಪ್ರತಿ ತಿಂಗಳು ಸರಾಸರಿ 15,000 ಕೋಟಿಯಿಂದ 20,000 ಕೋಟಿ ರೂಪಾಯಿ ಹೂಡಿಕೆ ಮಾಡುತ್ತಿದ್ದಾರೆ ಎಂದು ಮಾರುಕಟ್ಟೆ ವಿಶ್ಲೇಷಕರು ಅಂದಾಜಿಸುತ್ತಾರೆ.

ಕೆಲವರು ಭಾರತದ ಸಾಲ ಅತಿ ಆಯಿತು. ಅಪಾಯದ ಮಟ್ಟದಲ್ಲಿದೆ ಎಂದು ಆರೋಪಿಸುತ್ತಾರೆ. ಆದರೆ ವಾಸ್ತವವಾಗಿ ಭಾರತದ ಸಾಲದ ಮಟ್ಟ ಅಪಾಯಕಾರಿ ಮಟ್ಟದಲ್ಲಿ ಇಲ್ಲವೇ ಇಲ್ಲ. ಆತಂಕ ಪಡಬೇಕಿಲ್ಲ. ಕೇಂದ್ರ ಸರ್ಕಾರದ ಒಟ್ಟು ಸಾಲ ಮತ್ತು ಇತರ ಹೊಣೆಗಾರಿಕೆಗಳು ಸುಮಾರು 197.18 ಲಕ್ಷ ಕೋಟಿ (2025-26ರ ಪರಿಷ್ಕೃತ ಅಂದಾಜು) ದಾಟಿದ್ದು, ಇದು 2026-27ರ ಅಂತ್ಯಕ್ಕೆ ಸುಮಾರು 214.82 ಲಕ್ಷ ಕೋಟಿ ತಲುಪಬಹುದು ಎಂದು ಅಂದಾಜಿಸಲಾಗಿದೆ. ಸಾಲ ಮತ್ತು ಜಿಡಿಪಿ ಅನುಪಾತ (Debt- to- GDP Ratio) ಗಮನಿಸಿದರೆ ಆತಂಕಕ್ಕೆ ಕಾರಣವಿಲ್ಲ. ಏಕೆಂದರೆ ಆರ್ಥಿಕತೆಯಲ್ಲಿ ಸಾಲದ ಪ್ರಮಾಣವನ್ನು ಅಳೆಯಲು ಇದನ್ನು ಪ್ರಮುಖವಾಗಿ ಬಳಸಲಾಗುತ್ತದೆ. ಭಾರತದ ಸಾಲ ಮತ್ತು ಜಿಡಿಪಿ ಅನುಪಾತವು ಪ್ರಸ್ತುತ 55.6 ಪರ್ಸೆಂಟ್‌ನಷ್ಟಿದೆ. (2026-27ರ ಬಜೆಟ್ ಅಂದಾಜು). ಇದು ಕಳೆದ ವರ್ಷ (56.1%) ಕ್ಕಿಂತ ಕಡಿಮೆಯಾಗಿರುವುದು ಸಕಾರಾತ್ಮಕ ಅಂಶವಾಗಿದೆ.

ಸಾರ್ವಜನಿಕ ಬ್ಯಾಂಕ್‌ಗಳ ಒಟ್ಟು ಎನ್‌ಪಿಎ 2018ರ ಸುಮಾರಿಗೆ ಸುಮಾರು 14.6%ರಷ್ಟು ಅತ್ಯಂತ ಕಳವಳಕಾರಿ ಮಟ್ಟಕ್ಕೆ ತಲುಪಿತ್ತು. ಆದರೆ, ಸರಕಾರದ ಮತ್ತು ಆರ್‌ಬಿಐ ನಿಕಟ ಉಸ್ತುವಾರಿಯಿಂದಾಗಿ ಪ್ರಸ್ತುತ ಇದು 2.8 ಪರ್ಸೆಂಟ್ ಆಸುಪಾಸಿಗೆ ಇಳಿಕೆಯಾಗಿದೆ. ಇದು ಕಳೆದ ಒಂದು ದಶಕದಲ್ಲೇ ಅತ್ಯಂತ ಕನಿಷ್ಠ ಮಟ್ಟವಾಗಿದೆ. ಒಂದೊಮ್ಮೆ ನಷ್ಟದಲ್ಲಿದ್ದ ದೇಶದ ಸಾರ್ವಜನಿಕ ವಲಯದ ಬ್ಯಾಂಕುಗಳು ಈಗ ಸತತವಾಗಿ ಬಂಪರ್ ಲಾಭವನ್ನು ಗಳಿಸುತ್ತಿವೆ. ಬ್ಯಾಂಕುಗಳ ಬಳಿ ವಸೂಲಾಗದ ಸಾಲದ ಹೊರೆ ಕಡಿಮೆಯಾದಾಗ, ಹೊಸದಾಗಿ ಸಾಲ ನೀಡಲು ಅವರ ಬಳಿ ಹೆಚ್ಚಿನ ಹಣ ಲಭ್ಯವಿರುತ್ತದೆ. ಪ್ರಸ್ತುತ ಬ್ಯಾಂಕುಗಳು ಉದ್ಯಮಿಗಳಿಗೆ, ಸಣ್ಣ ಉದ್ದಿಮೆ ಮತ್ತು ಜನಸಾಮಾನ್ಯರಿಗೆ (ಮನೆ, ವಾಹನ, ಶಿಕ್ಷಣ ಸಾಲ) ಮುಕ್ತವಾಗಿ ಸಾಲ ನೀಡುತ್ತಿವೆ. ಇದು ಮಾರುಕಟ್ಟೆಯಲ್ಲಿ ಹಣದ ಚಲಾವಣೆಯನ್ನು ಹೆಚ್ಚಿಸಿದೆ. ದೇಶದ ಆರ್ಥಿಕತೆ ಗಮನಾರ್ಹವಾಗಿ ಬೆಳೆಯುತ್ತಿದೆ ಎನ್ನಲು ಇನ್ನೂ ಹಲವಾರು ನಿದರ್ಶನಗಳು ಇವೆ. ಇವು ಸ್ಯಾಂಪಲ್ ಅಷ್ಟೇ.

ಭಟ್ಟರ್ ಸ್ಕಾಚ್

- **ಶೀಲಾ ಒಂಟಿಕೊಪ್ಪಲು, ಮೈಸೂರು**
ಭಟ್ಟರು ಹುಡುಗಿಯರ ಪ್ರಶ್ನೆಗಳಿಗೆ ಬಹಳವಾಗಿ ಮುನಿಸಿಕೊಳ್ಳುತ್ತಾರಂತೆ ನಿಜವೇ?
– **ಮುನಿಸೆಲ್ಲಿ ಬಂತು? ಅವರ ಪ್ರಶ್ನೆಗಳು ಭಟ್ಟರಿಗೆ ತಿನಿಸು ಇದ್ದಂತೆ!**

- **ಘಂಟಿ ರಾಮಾಚಾರ್ಯ, ಮೈಸೂರು**
ಭಟ್ರೇ, ಶ್ಮಶಾನದಲ್ಲಿ ಅಪ್ಪಿತಪ್ಪಿಯೂ ಬರೆಸಬಾರದ ಬರಹ ಯಾವುದು?
– **ಹೋಗಿ ಬನ್ನಿ ನಮಸ್ಕಾರ!**

- **ರಾಘಣ್ಣ, ಮೈಸೂರು**
ಭಟ್ರೇ, ಆಕಾಶವಾಣಿಯವರು ತಮ್ಮ ಶ್ರೋತೃಗಳನ್ನು ರೇಡಿಯೋ ಬಳಿಯಲ್ಲೇ ಹಿಡಿದಿಟ್ಟುಕೊಳ್ಳಲು ಹೂಡುವ ತಂತ್ರ ಯಾವುದು?
– **'ನಮ್ಮ ಮುಂದಿನ ಕಾರ್ಯಕ್ರಮ ಇನ್ನು ಕೆಲವೇ ಕ್ಷಣಗಳಲ್ಲಿ ಪ್ರಾರಂಭವಾಗುವುದು' ಅಂತ ಪದೇ ಪದೇ ಅನೌನ್ಸ್ ಮಾಡುವುದು!**

- **ಕಿರಣ್, ಜಯನಗರ**
ಭಟ್ರೇ, ಯಾವ ಉದ್ಯಮ ಪ್ರಾರಂಭಿಸಲಿ ಅಂತ ಜ್ಯೋತಿಷಿಗಳನ್ನ ಕೇಳಿದ್ದಕ್ಕೆ ನಿನ್ನ ಹೆಸರಿಗೆ ಅನುರೂಪವಾದ್ದನ್ನು ಹುಡುಕಿಕೋ ಅಂತ ಹೇಳಿಬಿಟ್ಟರಲ್ಲ?
– **ಕಿರಾಣಿ ಅಂಗಡಿ ಹಾಕಿಕೋ ಅನ್ನುವುದು ಅವರ ಅಭಿಪ್ರಾಯ ಇರಬಹುದು!**

- **ವಿನೋದ ಸಿ ರಾಜ್, ಬೆಂಗಳೂರು**
ಭಟ್ರೇ, ವೆಲ್ಡಿಂಗ್ ಉದ್ಯಮ ಪ್ರಾರಂಭಿಸಬೇಕೆಂದಿದ್ದೇನೆ. ಉದ್ಯಮ ಯಶಸ್ಸಿಗೆ ನನ್ನ ಫೋನಿಗೆ ಒಳ್ಳೆ ಕಾಲರ್ ಟ್ಯೂನ್ ಸೂಚಿಸುವಿರಾ?
– **ಬೆಸುಗೆ... ಬೆಸುಗೆ...ಸುಂದರ ಬೆಸುಗೆ!**

- **ಮಾಲಾ, ಡಾಲರ್ಸ್ ಕಾಲೋನಿ**
ಭಟ್ರೇ, ಆಫೀಸ್ ಇಂದ ಬರ್ತಾ ಮೆಲೋಡಿ ಚಾಕಲೇಟ್ ಹಿಡ್ಕೊಂಡು ಬನ್ನಿ ಅಂದ್ರೆ ಏನನ್ನೋ ತಂದು ಮೂಡ್ ಹಾಳುಮಾಡಿಬಿಟ್ರಲ್ಲ ಪತಿರಾಯ?
– **ಮೆಲೋಡಿ ಬದಲು ಮಾಲಾ ಡಿ ಗುಳಿಗೆಗಳನ್ನು ತಂದರಾ?!**

- **ಪ್ರದ್ಯುಮ್ನ, ಬನಶಂಕರಿ 3ನೇ ಹಂತ**
ಭಟ್ಟರು ಮನಿಲಾಗೆ ಹೋಗೇ ಇರಲಿಲ್ಲ ಅಂತ ಇಲ್ಲೊಬ್ಬ ಹುಚ್ಚಾಪಟ್ಟೆ ವಾದಿಸುತ್ತಿದ್ದನಲ್ಲ?
– **ಹೋಗದೇ ಮನೇಲಿ ಇದ್ರು ಎಂಬುದು ಅವನ ಅಭಿಪ್ರಾಯವೇ?**

- **ಅರುಂಧತಿ ಎಸ್. ಹೆಗಡೆ, ಶಿರಸಿ**
ಭಟ್ರೇ, ಸಾಲಕ್ಕೂ, ಜೀವನಕ್ಕೂ ಏನು ವ್ಯತ್ಯಾಸ?
– **ಬ್ಯಾಂಕಿನವರಿಂದ ಸಾಲ ಪಡೆದರೆ ನಮಗೆ ನಿದ್ರೆ ಬರೋದಿಲ್ಲ, ಅದೇ ಸಾಲ ತೀರಿಸದಿದ್ದರೆ ಬ್ಯಾಂಕಿನವರಿಗೆ ನಿದ್ರೆ ಬರೋದಿಲ್ಲ!**

- **ಕೆ.ವಿನಯ್, ಬಂಗಾರಪೇಟೆ**
ಭಟ್ರೇ, ಅತ್ತೆಗೂ ಮತ್ತು ಇಂಟರ್ನೆಟ್ ವೇಗಕ್ಕೂ ಇರುವ ಸಂಬಂಧವೇನು?
– **ಎರಡೂ ಚೆನ್ನಾಗಿದ್ದರೆ ಸಂಸಾರ ಸುಗಮ, ಸ್ವಲ್ಪ ಸ್ಲೋ ಆದರೂ ಮನೆಯಲ್ಲಿ ಕಿರಿಕಿರಿ ಶುರು!**

ಬಾನಿನಿಂದ ಸುರಿವ ಮಳೆಹನಿಯೇ! ಬೇಗ ಬಾ!

ಶಶಾಂಕಣ

ಶಶಿಧರ ಹಾಲಾಡಿ
vveditoped@gmail.com

ಬೀಚಿಯವರು ಹಿಂದೊಮ್ಮೆ ಹೇಳಿದ್ದರಂತೆ – ಅವರ ಊರಿನಲ್ಲಿ ಎರಡೇ ಕಾಲ – ಬೇಸಿಗೆ ಮತ್ತು ಬಿರುಬೇಸಿಗೆ. ಅದು ನಿಜವೂ ಹೌದು. ಆದರೆ ಮಲೆನಾಡಿನ ಅಂಚಿನಲ್ಲಿರುವ ನಮ್ಮೂರಿನಲ್ಲಿ ಸ್ಪಷ್ಟವಾಗಿ ಮೂರು ಕಾಲಗಳು: ಬೇಸಿಗೆ ಕಾಲ, ಮಳೆಗಾಲ, ಚಳಿಗಾಲ. ಇದರಲ್ಲಿ ಮಳೆಗಾಲ ಮಾತ್ರ ಬಲು ವಿಶೇಷ, ವಿಭಿನ್ನ, ವಿಶಿಷ್ಟ, ನೋಸ್ಟಾಲ್ಜಿಕ್, ವಿಸ್ಮಯಕಾರಿ. ಒಂದೊಂದು ವರ್ಷ ನಮ್ಮ ಹಳ್ಳಿಯಲ್ಲಿ ದಿನದ 24 ಗಂಟೆ, ವಾರದ ಏಳೂ ದಿನ ಸತತವಾಗಿ ಮಳೆ ಸುರಿದದ್ದೂ ಉಂಟು! ಜೂನ್ ಮೊದಲನೆಯ ವಾರ ಆರಂಭವಾದ ಮಳೆಗಾಲ, ಅಕ್ಟೋಬರ್ ಆದರೂ ಬಿಡದೆ, ಸದಾ ಸುರಿದು, ಊರನ್ನೆಲ್ಲಾ ಥಂಡಿಯ ಮೂಟೆಯಲ್ಲಿ ಮುಳುಗಿಸಿದ್ದುಂಟು! ಆದರೆ, ಮಲೆನಾಡು ದಾಟಿ ಒಂದೈವತ್ತು ಕಿಮೀ ಪೂರ್ವಕ್ಕೆ ಬಂದರೆ, 'ಮಳೆಗಾಲ ಹಾಗಿರುತ್ತಾ?' ಎಂದು ಅಚ್ಚರಿಪಡುವವರುಂಟು.

ನಾಲ್ಕು ದಶಕಗಳ ಹಿಂದೆ, ಹಾಲಾಡಿಯ ನಮ್ಮ ಊರಿನಿಂದ ಬಯಲು ಸೀಮೆಗೆ ಕೆಲಸ ಹುಡುಕಿಕೊಂಡು ಹೊರಟೆ. ಮೊದಲಿಗೆ ಅರಸಿಕೆರೆ ಸನಿಹದ ಹಳ್ಳಿಯೊಂದರಲ್ಲಿ ಕೆಲವು ವರ್ಷಗಳ ವಾಸ. ನಮ್ಮ ಹಳ್ಳಿಯಲ್ಲಿ ಮಳೆಗಾಲದ ರಭಸ, ಸೊಗಸು, ಮಾಯೆಗಳನ್ನು ನೋಡಿ ಬಂದಿದ್ದ ನನಗೆ, ಆ ಹಳ್ಳಿಯವರಿಗೆ ಮಳೆಗಾಲ ಎಂಬ ಅರಿವು, ಪರಿಕಲ್ಪನೆಯೇ ಇಲ್ಲದ್ದನ್ನು ಕಂಡು ಅಚ್ಚರಿ. ನಮ್ಮೂರಿನಲ್ಲಿ ಜುಲೈ ತಿಂಗಳಲ್ಲಿ ದಿನದ 24 ಗಂಟೆ ಮಳೆ ಬರುವುದುಂಟು ಎಂದು ನಾನು ಹೇಳಿದರೆ, ನಾನು ಬುರುಡೆ ಬಿಡುತ್ತಿದ್ದೇನೆಂದೇ ಅಲ್ಲಿನವರು ಮುಖಭಾವದಲ್ಲಿ ವ್ಯಕ್ತಪಡಿಸುತ್ತಿದ್ದರು! ಆ ಹಳ್ಳಿಯ ಆಗಸದಲ್ಲಿ ಕಪ್ಪನೆ ಮೋಡಗಳು ಸಂಚರಿಸಿದರೆ ಆಷಾಢ! ಒಂದು ತಿಂಗಳಲ್ಲಿ ಮೂರು ಅಥವಾ ನಾಲ್ಕು ಬಾರಿ ಅರ್ಧ ಗಂಟೆ ಮಳೆ ಸುರಿದರೆ, 'ಒಳ್ಳೆಯ ಮಳೆ' ಎಂದು ಅವರು ಆಗಸ ನೋಡಿ, ಮಳೆರಾಯನಿಗೆ ನಮಸ್ಕರಿಸುತ್ತಿರುವುದನ್ನು ಕಂಡು ನನಗೆ ಸೋಜಿಗ. ನಾಲ್ಕಾರು ದಿನ ಎಡೆಬಿಡದೇ ಜಡಿಮಳೆ ಸುರಿದಾಗ ಮಾತ್ರ 'ಒಳ್ಳೆ ಮಳೆ ಮಾರಾಯ್ರೆ' ಎನ್ನುತ್ತಿದ್ದ ನಮ್ಮ ಹಳ್ಳಿಯಿಂದ, ಈ ಬಯಲಸೀಮೆಯ ಬೆಂಗಾಡಿಗೆ ಬಂದಿಳಿದಿದ್ದ ನನಗೆ, ಅವರ ನಡವಳಿಕೆಗಳು ಅಚ್ಚರಿಗಳ ಸರಮಾಲೆ.

ಈ ರೀತಿ, ಉದ್ಯೋಗ ನಿಮಿತ್ತವೋ, ಮದುವೆಯಾಗಿಯೋ ದೂರದ ಬೇರೊಂದು ಊರಿನಲ್ಲಿ ನೆಲೆಸಿದಾಗಲೇ, ಮಳೆಗಾಲದ ನೆನಪು ಬಿಡದೇ ಕಾಡುವುದು. ಬಯಲುಸೀಮೆಯಲ್ಲೋ, ಬೀಚಿ ಹೇಳಿದ ಬಳ್ಳಾರಿಯಂತಹ ಬೆಂಗಾಡಿನಲ್ಲೋ, ಹೊತ್ತು-ಗೊತ್ತು-ಋತು-ಮಾಸಗಳ ವ್ಯತ್ಯಾಸವನ್ನೇ ಮರೆಯಿಸಿ ಬಿಡುವಂತಹ ಬೆಂಗಳೂರಿನಂತಹ ಮಹಾನಗರಗಳಲ್ಲೋ ನೆಲೆಸಿರುವವರಿಗೆ ಅಚ್ಚರಿ ಎನಿಸಬಹುದು – ನಮ್ಮ ಹಳ್ಳಿಯಲ್ಲಿ ಮೇ 28 ಮತ್ತು ಜೂನ್ 2ರ ನಡುವೆ ಪ್ರತಿವರ್ಷ ಮಳೆಗಾಲ ಪ್ರಾರಂಭವಾಗುತ್ತಿತ್ತು. ಈಗಲೂ ಬಹುಮಟ್ಟಿಗೆ ಆ ಕ್ಯಾಲೆಂಡರ್ ಚಾಲ್ತಿಯಲ್ಲಿದೆ. ಈಗೇನೋ ಮುಂಗಾರು ಕೇರಳವನ್ನು ಪ್ರವೇಶಿಸುವ ವಿದ್ಯಮಾನವನ್ನು ಹವಾಮಾನ ಇಲಾಖೆಯವರು ಹೇಳುತ್ತಿರುವರು. ನನ್ನ ಬಾಲ್ಯದ ದಿನಗಳಲ್ಲಿ, ಮೇ 28ರ ಸಮಯದಲ್ಲಿ ಗುಡುಗು, ಮಿಂಚು, ಸಿಡಿಲು ಮಿಶ್ರಿತ ಮಳೆ ಬರುವುದಂತೂ ಪ್ರತಿವರ್ಷದ ವಿದ್ಯಮಾನ. ಅದಕ್ಕೆ ಸರಿಯಾಗಿ ಹಳ್ಳಿಯವರು ತಮ್ಮ ತಮ್ಮ ಶಕ್ತ್ಯನುಸಾರ, ಮಳೆಗಾಲದ ತಯಾರಿಯನ್ನು ಒಂದೆರಡು ತಿಂಗಳುಗಳ ಹಿಂದಿನಿಂದಲೇ ಮಾಡಿಕೊಳ್ಳುತ್ತಿದ್ದರು. ಮುಂದಿನ ಮೂರು ತಿಂಗಳುಗಳಿಗಾಗುಷ್ಟು ಸೌದೆ ಸಂಗ್ರಹ, ಹಟ್ಟಿಯಲ್ಲಿರುವ ಗಂಟಿ ಕಾಲಡಿಗೆ ಹಾಕುವ ದರಲೆ ಸಂಗ್ರಹ, ಒಂದೆರಡು ಮೂಟೆ ಉಪ್ಪಿನ ಸಂಗ್ರಹ, ಆಹಾರ ಧಾನ್ಯ ಮತ್ತು ಇತರ ತಿನಿಸುಗಳ ಸಂಗ್ರಹ, ಹಪ್ಪಳ ತಯಾರಿ ಎಲ್ಲವೂ ಮೇ 25ರ ಒಳಗೆ ಮುಗಿಯಲೇಬೇಕು.

ಏಕೆಂದರೆ ಜೂನ್ ಮೊದಲ ವಾರ ಆರಂಭವಾಗುವ ಜಡಿಮಳೆಯು, ಆ ಸುತ್ತಲಿನ ಇಡೀ ಜಗತ್ತನ್ನೇ ನೀರಿನ ಲೋಕದಲ್ಲಿ ಅದ್ದಿ, ತೋಯಿಸಿ, ಕೆಲವು ಬಾರಿ ತೇಲಿಸಿ, ತನ್ನ ಪ್ರತಾಪವನ್ನು ಕಡಿಮೆ ಮಾಡುವುದು ಮೂರು ತಿಂಗಳು ಕಳೆದ ಮೇಲೆ ಮಾತ್ರ. ಆ ಮೂರು ತಿಂಗಳುಗಳಲ್ಲಿ ಬೀಳುವ ಮಳೆಯ ಸ್ವರೂಪ, ದರ್ಶನ, ನರ್ತನವಾದರೂ ಅದೆಂತಹದ್ದು! ಆರಂಭದ ದಿನಗಳಲ್ಲಿ ಗಾಳಿ, ಕಪ್ಪನೆಯ ಮೋಡ, ಗುಡುಗಳ ಆರ್ಭಟ. ಮೇ ತಿಂಗಳ ಕೊನೆಯಲ್ಲಿ ಎಲ್ಲೆಡೆ ಸೆಕೆಯು ಬೆವರಿಳಿಸಿ, ಬೇಯಿಸುತ್ತಿರುವಾಗ ಬೀಸಿ ಬರುವ ಗಾಳಿಯು ಆ ಒಂದು ದಿನ ಮೂಡಿಸುವ ತಂಪು ಅದೆಷ್ಟು ಆಪ್ಯಾಯಮಾನ! ಆ ಗಾಳಿಯ ಜತೆಯಲ್ಲೇ ಗುಟುರುಹಾಕಿ ಬರುವ ಕಪ್ಪನೆಯ ಮೋಡಗಳು ಆಗಸವನ್ನೆಲ್ಲಾ ತುಂಬಿ ಬಿಡುತ್ತಿದ್ದವು. ದಪ್ಪನೆಯ, ಕಪ್ಪನೆಯ ಕಾಡುಕೋಣಗಳಂತೆ ಆಕಾಶದಲ್ಲಿ ಅವು ಓಡುವ ಸೊಗಸೇ ಸೊಗಸು. ಆ ಕಪ್ಪನೆಯ ಗೂಳಿಗಳು ಪರಸ್ಪರ ಡಿಕ್ಕಿ ಹೊಡೆದು, ಗುಡುಗಿ, ಘರ್ಜಿಸಿ, ಕೋಲ್ಮಿಂಚನ್ನು ಝಳಪಿಸಿ ಮಳೆ ಸುರಿಸಲು ಆರಂಭಿಸಿದವೆಂದರೆ, ಮನೆ ಮುಂದಿನ ಗದ್ದೆ ಬೈಲಿನ ತುಂಬಾ ನೀರು ತುಂಬಿದ ನಂತರವೇ, ತುಸು ವಿರಾಮ. ಗದ್ದೆಯಂಚಿನುದ್ದಕ್ಕೂ ಸಾಗುವ ತೋಡು, ತೊರೆಗಳಲ್ಲಿ ಕೆಂಪನೆಯ ನೀರು ರಭಸದಿಂದ ಒಡಲುಪಕ್ರಮಿಸಿದ್ದೇ ತಡ, ಕಪ್ಪೆಗಳ ವಾದ್ಯಗೋಷ್ಠಿಗೆ ಬಿಡುವೇ ಇರದು!

ಕೇವಲ ಒಂದೆರಡು ವಾರಗಳ ಹಿಂದೆ ಇಡೀ ಭೂಮಿಯನ್ನೇ ಬಿಸಿ ಮಾಡಿದ್ದ ಸುಡುಸುಡು ಬಿಸಿಲಿನ ದಿನಗಳಲ್ಲಿ ಈ ಕಪ್ಪೆಗಳು ಅಡಗಿ ಕುಳಿತಿದ್ದಾದರೂ ಎಲ್ಲಿ? ಇತ್ತ ಆಗಸದಲ್ಲಿ ಗುಡುಗು, ಮಿಂಚಿನಿಂದೊಡಗೂಡಿದ ಮಳೆ ಮೋಡಗಳ ಪರಿಶೆ ಸೇರಿದ ಕೂಡಲೆ, ನೆಲದಾಳದ ತಮ್ಮ ಠಾವಿನಿಂದ ಹೊರಬಂದು, ಒಂದೇ ಸಮನೆ ವಟಗುಟ್ಟತೊಡಗುತ್ತವೆ. ನಮ್ಮ ಮನೆ ಮುಂದಿನ ಅಗೇಡಿಯಲ್ಲಿ ಎರಡು ಇಂಚು ನೀರು ನಿಂತಿದ್ದೇ ತಡ, ನೂರಾರು ಕಪ್ಪೆಗಳು ರಾತ್ರಿಯಿಡೀ ಕೂಗಲು ಆರಂಭಿಸುತ್ತವೆ! ಅವುಗಳ ವಟವಟ ಸದ್ದು ಅದೆಷ್ಟು ನಿರಂತರ ಮತ್ತು ಏಕತಾನತೆಯನ್ನು ತುಂಬುತ್ತದೆಂದರೆ, ತಲೆಚಿಟ್ಟು ಹಿಡಿಸಿ, ರೇಜಿಗೆ ಹುಟ್ಟಿಸುವಷ್ಟು! ಜತೆಗೆ ಇಷ್ಟೊಂದು ದೊಡ್ಡ ದನಿಯಲ್ಲಿ ಒಂದೇ ಸವನೆ ಕೂಗಲು ಆ ನೂರಾರು ಕಪ್ಪೆಗಳಿಗೆ ಹೇಳಿಕೊಟ್ಟವರು ಯಾರು ಎಂಬ ವಿಸ್ಮಯ!

ಆದರೆ, ಮಾಯಕದಿಂದ ಅವತರಿಸಿದ ಮಳೆಗಾಲವು ನಮ್ಮೂರಿನ ಇಳೆಗೆ ಮಾಡುವ ಮೋಡಿಯನ್ನು ಕಂಡಾಗ ಮಾತ್ರ, ಅಂತಹ ಸಣ್ಣ ಪುಟ್ಟ ರೇಜಿಗೆಗಳೆಲ್ಲ ಮಾಯ! ಮೊದಲ ಮಳೆಯೊಂದಿಗೆ ಬೀಸುವ ಗಾಳಿಯಿಂದಾಗಿ, ಮನೆ ಹಿಂದಿನ ಕಾಟು ಮಾವಿನ ಮರದ ತುದಿಯಲ್ಲಿದ್ದ ನೂರಾರು ಹಣ್ಣುಗಳು ಕೆಳಗೆ ಉದುರಿಬಿದ್ದು, ಅವನ್ನು ಬುಟ್ಟಿ ತುಂಬಾ ತುಂಬಿಸಿಕೊಂಡು ಮನೆಗೆ ತರುವ ಕೆಲಸ ಮಕ್ಕಳದ್ದು. ಆ ಹಣ್ಣುಗಳನ್ನು ಹಿಂಡಿ, ರಸ ತೆಗೆದು ಮಾವಿನ ರಸದ 'ಹಣ್‌ಚಟ್' ಮಾಡಿ, ಅಕಸ್ಮಾತ್ ಬಿಸಿಲು ಬಂದರೆ ಒಣಗಿಸಿ, ಬಿಸಿಲಿಲ್ಲದಿದ್ದರೆ ಒಲೆ ಮೇಲ್ಭಾಗದ ಹಲಗೆಯ ಮೇಲಿಟ್ಟು ಗರಂ ಮಾಡಿ, ಒಣ ದೂಪದ ಎಲೆಯಲ್ಲಿ ಕಟ್ಟಿಡುವ ಕೆಲಸ ಅಮ್ಮಮ್ಮನದ್ದು. ಜಿರಾಪತಿ ಮಳೆ ಸುರಿವ ಆಷಾಡದಲ್ಲಿ ಆ 'ಹಣ್‌ಚಟ್'ನ್ನು ಅರೆದು, ಚಟ್ನಿ ಅಥವಾ ಸಾಸಿವೆ ಮಾಡುವ ಕೈರುಚಿ ಅಮ್ಮನದ್ದು!

ಮೊದಲ ಒಂದೆರಡು ದಿನ ಮಳೆ ಬಿದ್ದ ಕೂಡಲೆ, ಮನೆ ಹಿಂದಿನ ಹಾಡಿಯಲ್ಲಿ ನೂರಾರು ಮೊಳಕೆಗಳು. ನೆಲದಲ್ಲಿ ಮುದುಡಿ ಮಲಗಿದ್ದ ಅದೆಷ್ಟೋ ಬೀಜಗಳು, ಪುಟಾಣಿ ಎಲೆಯನ್ನು ಒಡಮೂಡಿಸಿಕೊಂಡು, ಮೇಲಕ್ಕೆದ್ದು ಚಿಮ್ಮುವ ಆ ಜೀವನೋತ್ಸಾಹವನ್ನು ವರ್ಣಿಸುವುದಾದರೂ ಹೇಗೆ! ಅವುಗಳ ನಡುವೆ, ಎರಡು ದೊಡ್ಡ ಪಕಳೆಗಳನ್ನು ಅಂಟಿಸಿಕೊಂಡು, ಒಂದಿಂಚು ಎತ್ತರದ ಪುಟ್ಟ ಗಿಡವಾಗಿ ಪ್ರತ್ಯಕ್ಷವಾಗುವ ಗೋಡಂಬಿ ಬೀಜವನ್ನು ಕಂಡ ಮಕ್ಕಳು, ಗೋಡಂಬಿ ಪಕಳೆಯನ್ನು ಆರಿಸಿ ಸ್ವಾಹಾ ಮಾಡುವುದುಂಟು. ಇಳೆಗೆ ಸುರಿದ ಮಳೆಯ ಸೇಚನದಿಂದ ಮನೆ ಸುತ್ತಲಿನ ನೆಲ, ಹಾಡಿ, ಹಕ್ಕಲು, ಕಾಡು ಎಲ್ಲೆಡೆ ಒಮ್ಮೆಗೇ ಹಸಿರಿನ ಸಿರಿಯೇ ಪ್ರತ್ಯಕ್ಷವಾಗುತ್ತದೆ – ಒಂದೊಂದು ಗಿಡದ ಚಿಗುರು ಒಂದೊಂದು ಬಣ್ಣ – ಹಸಿರು, ಎಲೆಹಸಿರು, ತಿಳಿಹಸಿರು, ಕಡು ಹಸಿರು – ಇವುಗಳ ಮಧ್ಯೆ, ದೊಡ್ಡದಾದ ಬಿಳಿ ಎಲೆ ಬಿಡುವ ಗುಳಸೊಪ್ಪಿನ ಬಳ್ಳಿಯೂ, ದೂರದಿಂದಲೇ ಹಸಿರು ಕಾಡಿಗೆ ಬಿಳಿಯ ಎಲೆಗಳ ತೋರಣಕಟ್ಟಿದಂತೆ ಕಾಣುತ್ತವೆ. ಜೂನ್‌ನಲ್ಲಿ ನಿರಂತರ ಸುರಿವ ಮಳೆಯು ಆ ಎಳೆಯ ಚಿಗುರುಗಳಿಗೆ ಕಿರಿಕಿರಿ ಮಾಡುವುದೂ ನಿಜ. ಆದರೆ ಬಿರು ಬೇಸಗೆಯ ಬೆನ್ನ ಹಿಂದೆಯೇ ಸುರಿವ ಸೋನೆ ಮಳೆಯನ್ನು ಗಿಡಗಂಟಿಗಳು, ಸಸ್ಯಕೋಟಿಯು ಸಂಭ್ರಮದಿಂದ ಸ್ವಾಗತಿಸುವ ಪರಿಯೇ ಅದ್ಭುತ!

ಗದ್ದೆ, ಬಯಲು, ತೊರೆ, ತೋಡು, ಹಾಡಿ,

ಕಾಡು, ಬಾವಿಗಳಲ್ಲಿ ಒಮ್ಮೆಗೇ ತುಂಬಿದ ಮಳೆನೀರನ್ನು ಕಂಡು, ಪ್ರಾಣಿ-ಕೀಟ ಪ್ರಪಂಚ ಸಂಭ್ರಮಿಸುವ ಪರಿ ಬೇರೊಂದೇ ಮಜಲಿನದು. ಅಷ್ಟು ದಿನ ಕಾಣದ, ದೂರದ ಮಾಯದ ಲೋಕದಲ್ಲೆಲ್ಲೋ ಅಡಗಿ ಕುಳಿತಿದ್ದ ಮಿಣುಕುಹುಳಗಳು, ಮಳೆಗಾಲದ ರಾತ್ರಿಗಳಲ್ಲಿ ತಮ್ಮ ಸಭೆಯನ್ನು ನಡೆಸುವ ಶೈಲಿಗೆ ಆ ಭೂರಮೆಯೇ ಸಂತಸದಿಂದ ನರ್ತಿಸತೊಡಗಬಹುದು! ಸಂಜೆ ಎಂಟು ಗಂಟೆಯ ಸಮಯದಲ್ಲಿ ತೋಡಿನ ಅಂಚಿನ ಮರವೊಂದನ್ನು ಮುತ್ತಿ ಕೂರುವ ಮಿಣುಕುಹುಳಗಳು, ಸೀರಿಯಲ್ ಸೆಟ್ ಬೆಳಕಿನಂತೆ ಆಗಾಗ ಹೊಮ್ಮಿಸುವ ಬೆಳಕು, ಆ ಕತ್ತಲ ಲೋಕದಲ್ಲಿ ಚಿನ್ನದ ಪ್ರಭೆಯನ್ನು ತುಂಬುತ್ತದೆ. ಝಗ್ ಎಂದು ನೂರಾರು ಕೀಟಗಳು ತಮ್ಮ ಬಾಲದಿಂದ ಒಟ್ಟಾಗಿ ಬೀರುವ ಬೆಳಕು, ನಿರಂತರವಾಗಿ ಒಂದೆರಡು ಗಂಟೆಗಳ ಕಾಲ ಮುಂದುವರಿದು, ಅಲ್ಲೊಂದು ಅಲೌಕಿಕ ಜಗತ್ತನ್ನೇ ಸೃಷ್ಟಿಸುತ್ತದೆ. ಮರವನ್ನು ಆತು ಕೂತ ಮಿಣುಕುಹುಳಗಳ ಸಂಗಾತಿಗಳು ಒಮ್ಮೊಮ್ಮೆ ಆಚೀಚೆ ಹಾರಾಡುತ್ತಾ, ಬೆಳಕು ಬೀರಿ, 'ನೀ ಸುರಿವ ರಭಸಕ್ಕೆ ನಾವು ಹೆದರುವುದಿಲ್ಲ' ಎಂದು ಆ ಕತ್ತಲರಾತ್ರಿಯಲ್ಲಿ ಮಳೆರಾಯನಿಗೇ ಸವಾಲು ರೀತಿ ತುಸು ಕಾವ್ಯಾತ್ಮಕ!

ಒಂದೆರಡು ವಾರ ಮಳೆ ಸುರಿದ ನಂತರ, ರೈತರು ಬತ್ತದ ಗದ್ದೆಯಲ್ಲಿ ಹೂಟಿ ಮಾಡಲು ಆರಂಭಿಸುತ್ತಾರೆ. ಕಂಬಳಿ ಕೊಪ್ಪೆಯನ್ನು ತಲೆಗೆ ಸಿಕ್ಕಿಸಿಕೊಂಡು ಸುರಿಮಳೆಯಲ್ಲೇ ಕೋಣಗಳ ಹಿಂದೆ ಗದ್ದೆಯಲ್ಲಿ ಸುತ್ತುತ್ತಾ, ಗದ್ದೆಯನ್ನು ಕೆಸರು ಮಾಡಿ, ನಾಟಿಗೆ ಹಸನುಗೊಳಿಸುವ ಈ ರೈತನನ್ನು ಕಂಡೇ ಅಲ್ಲವೇ ಕುವೆಂಪು ಉದ್ಗರಿಸಿದ್ದು –'ಉಳುವಾ ಯೋಗಿಯ ನೋಡಲ್ಲಿ!' ನೆರೆ ಬಂದರೂ, ಗದ್ದೆ ಉಳುವ ನೇಗಲ ಯೋಗಿಯು, 'ಓ ಓ' ಎಂದು ಏರುದಿನದಲ್ಲಿ ಒಳಲು ಹಾಕುತ್ತಿರುವಾಗಲೇ, ಮಹಿಳೆಯರು ಬೆತ್ತದ ಬುಟ್ಟಿ ಹಿಡಿದು ಏಡಿ ಸಂಗ್ರಹಿಸಲು ತೋಡಿನಲ್ಲಿ ಓಡಾಡುವುದುಂಟು. ಇಕ್ಕಳದ ಹಿಡಿತದ ಏಡಿಗಳೂ ಅಷ್ಟೆ – ಬೇಸಿಗೆಯಲ್ಲಿ ಭೂಮಿಯ ಆಳದಲ್ಲೆಲ್ಲೋ ಅಡಗಿ ಕುಳಿತು, ತೋಡಿನಲ್ಲಿ ನೀರು ಹರಿಯಲು ಆರಂಭಿಸಿದ ಕೂಡಲೇ ಹೊರಬಂದು, ಗದ್ದೆಯಂಚಿನಲ್ಲಿ ಬಿಲ ತೋಡುವ ತಮ್ಮ ಕರಾಮತ್ತು ಆರಂಭಿಸುತ್ತವೆ. ಅವುಗಳ ನಡುವೆಯೇ, ಗದ್ದೆಯ ನೀರಿನಲ್ಲಿ, ಅಂಚಿನಲ್ಲಿ ತೆವಳುವ ಜಾಗಟೆ ಹುಳಗಳ (ಬಸವನ ಹುಳ) ಮೆರವಣಿಗೆ, ಇವುಗಳನ್ನು ಹಿಡಿದು ಪದಾರ್ಥ ಮಾಡುವುದೆಂದರೆ, ಕೃಷಿಕ ಮಹಿಳೆಯ ನೆಚ್ಚಿನ ಹವ್ಯಾಸ. ಮಳೆಗಾಲದಲ್ಲಿ, ತರಕಾರಿ ದೊರಕದ ದಿನಗಳಲ್ಲಿ ಜಾಗಟೆಯಂತಹ ಮೃದ್ವಂಗಿಗಳನ್ನು ರುಚಿಕರ ಪದಾರ್ಥ (ಸಾಂಬಾರು) ಮಾಡುವುದು ಕೆಲವರಿಗೆ ಅನಿವಾರ್ಯವೂ ಹೌದು.

ಈ ನೀರಿನ ಜಗತ್ತಿನಲ್ಲಿ ಸಂಭ್ರಮದಿಂದ ಈಜಾಡುವ ಮತ್ತೊಂದು ಜೀವ ಸಂಕುಲವೆಂದರೆ 'ಒಳ್ಳೆ ಹಾವು'ಗಳು. ತೋಡು, ಗದ್ದೆಗಳ ನಡುವೆ ಹರಿದು, ತೆವಳಿ, ನೆಗೆದು, ಈಜಿ ಓಡಾಡುವ ಈ ಒಳ್ಳೆ ಹಾವುಗಳು ನಿಜಕ್ಕೂ ಒಳ್ಳೆಯವೇ – ಅಂದರೆ, ಅವು ಅಕಸ್ಮಾತ್ ಕಚ್ಚಿದರೂ ವಿಷವಿಲ್ಲ! ಗದ್ದೆಯಲ್ಲಿ ಒಳ್ಳೆ ಹಾವು ಹರಿದು ಬಂದರೆ, ಕಾಲಿನಿಂದಲೇ ನೀರು ಚಿಮ್ಮಿಸಿ ಅದನ್ನು ಬೆದರಿಸಿ, ಓಡಿಸಿ, ತನ್ನ ಉಳುಮೆಯನ್ನು ಮುಂದುವರೆಸುತ್ತಾನೆ ನಮ್ಮೂರಿನ ಉಳುವಾ ಯೋಗಿ. ಕೆಸರು ತುಂಬಿದ ಗದ್ದೆಯಲ್ಲಿ ಈ ಹಿಂದೆ ನಾಟಿ ಮಾಡಿದ್ದ, ಗದ್ದೆ ಅಂಚಿನಲ್ಲಿ ಆಗಾಗ ಹುಲ್ಲು ಕತ್ತರಿಸುತ್ತಿದ್ದ ನಮ್ಮ ಅಮ್ಮಮ್ಮನಿಗೆ ಎರಡು ಬಾರಿ ಒಳ್ಳೆ ಹಾವು ಕಚ್ಚಿತ್ತಂತೆ! 'ಸ್ವಲ್ಪ ನಂಜು, ತುರಿಕೆ ಬಿಟ್ಟರೆ ಬೇರೇನೂ ಆಗಿಲ್ಲ' ಎಂದು ಹಾವು ಕಚ್ಚಿದ ಜಾಗವನ್ನು ತೋರಿಸುತ್ತಾ, ಆಗಾಗ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು.

ಒಂದೆರಡು ವಾರ ಸುರಿವ ಮಳೆಯಲ್ಲೇ ಕೃಷಿ ಕೆಲಸ ಮಾಡಿ, ಗದ್ದೆ ನಾಟಿ ಮಾಡಿದ ನಂತರ ನಮ್ಮೂರಿನ ಎಲ್ಲರಿಗೂ ಬಿಡುವು. ಆದರೆ ಮಳೆರಾಯನಿಗೆ ಮಾತ್ರ ಬಿಡುವಿಲ್ಲ, ಮುಂದಿನ ಎರಡು ಮೂರು ತಿಂಗಳು ಮಳೆಯದೇ ರಾಜ್ಯ – ಒಮ್ಮೊಮ್ಮೆ ನಾಲ್ಕಾರು ದಿನ ಹೊಳ ಕಂಡರೂ, ಮತ್ತೆ ಆರಂಭವಾಗುವ ಮಳೆಯು, ಆಷಾಢದಲ್ಲಿ ಚಳಿ ಸುಳಿಯನ್ನೇ ತಂದಿಟ್ಟು ಬಿಡುತ್ತದೆ. ಮಳೆ ಸುರಿದ ನಂತರ ಹಸಿರಾಗುವ ಭೂರಮೆಯ ಚಂದವೇನೋ ಅದ್ಭುತ, ಅನನ್ಯ ಎನಿಸಬಹುದು. ಆದರೆ ನಿರಂತರ ಮಳೆಯ ಆಷಾಢದ ದಿನಗಳು, ನಮ್ಮ ಹಳ್ಳಿಯವರಿಗೆ ಸಂಕಷ್ಟಗಳನ್ನು ತಂದಿಡುವ ಕಾಲವೂ ಹೌದು. ಜ್ವರ, ಕೆಮ್ಮು, ನೆಗಡಿಗಳ ಕಾಟ ಒಂದೆಡೆಯಾದರೆ, ವಯಸ್ಸಾದವರಿಗೆ ಅವೇ ಮಾರಣಾಂತಿಕವಾಗುವುದೂ ಉಂಟು. ಕೃಷಿ ಕಾರ್ಮಿಕರಿಗೆ ಕೂಲಿ ದೊರೆಯದೇ, ಕಷ್ಟಗಳು ಎದುರಾಗುವ ದಿನಗಳೂ ಮಳೆಗಾಲದಲ್ಲಿ ಎದುರಾಗುವುದುಂಟು. ಅಂತಹ ದಿನಗಳಲ್ಲಿ ಗುಡ್ಡೆಗಳಲ್ಲಿ ಬೆಳೆದ ಅಣಬೆ ಸಂಗ್ರಹಿಸಿ, ಕೆಸು ಮುಂತಾದ ತಮ್ಮಷ್ಟಕ್ಕೇ ಬೆಳೆಯುವ ಎಲೆಗಳನ್ನು, ಬೇಸಿಗೆಯಲ್ಲಿ ಒಣಗಿಸಿಟ್ಟ ಗೆಣಸು, ಹಲಸಿನ ಬೀಜವನ್ನು ಬೇಯಿಸಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ಕುಟುಂಬಗಳೂ ಇದ್ದವು. ಈಗ ಅಂತಹ ಕಡು ಕಷ್ಟದ ಸಂದರ್ಭ ಕಡಿಮೆ – ಸರಕಾರ ನೀಡುವ ರೇಷನ್ ಕೃಪೆಯಿಂದಾಗಿ.

ಅಂದಹಾಗೆ, ಜಿರ್ ಎನ್ನುತ್ತಾ ಜಿರಾಪತಿ ಮಳೆ ಸುರಿವಾಗ, ನಮ್ಮ ಹಳ್ಳಿಮನೆ ಮುಂದಿನ ಗದ್ದೆ ಸಾಲನ್ನು ಅದರಾಚೆಯ ಹಾಡಿ, ಕಾಡನ್ನು ನೋಡುವ ಅನುಭವವೇ ಬಹು ಆಪ್ಯಾಯಮಾನ. ಬೇಸಿಗೆಯಲ್ಲಿ ಮಾಡಿಟ್ಟ ಹಲಸಿನ ಹಪ್ಪಳವನ್ನು ಸುಟ್ಟು, ಅದರ ಮೇಲೆ ಸುಟ್ಟ ಗೋಡಂಬಿಯನ್ನಿಟ್ಟುಕೊಂಡು ತಿನ್ನುತ್ತಾ, ಸೋನೆ ಮಳೆಯ ನಿರಂತರ ಗಾನವನ್ನು ಕೇಳುವ, ವೀಕ್ಷಿಸುವ ಆ ಕ್ಷಣಗಳ ಅನುಭೂತಿಗೆ, ಬೇರೆಲ್ಲಿದೆ ಹೋಲಿಕೆ! ಆ ಒಂದು ಭಾವಪ್ರಪಂಚವನ್ನು ನಾನಿಂದು ಶಾಶ್ವತವಾಗಿ ಕಳೆದುಕೊಂಡಿದ್ದೇನೆ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಸಾರ್ಥಕತೆ ಮೆರೆದ ಮದುವೆ

ಪುಸ್ತಕಂ ಹಸ್ತ ಭೂಷಣಂ' ನಾವು ಚಿಕ್ಕವರಾಗಿದ್ದಾಗ ಪಠ್ಯಪುಸ್ತಕ, ಕಥೆ ಕಾದಂಬರಿ, ದಿನಪತ್ರಿಕೆ ಓದುವುದೆಂದರೆ ಒಂದು ಘನತೆಯ ಸಂಕೇತವಾಗಿತ್ತು. ಆದರೆ, ಇಂದಿನ ಯುವಜನತೆ ಕಾದಂಬರಿಗಳಿರಲಿ ದಿನಪತ್ರಿಕೆಯನ್ನೂ ಓದುವುದಿಲ್ಲ. ಕೇಳಿದರೆ ಮೊಬೈಲ್ ಇಲ್ಲವೇ, ಅದರಲ್ಲಿ ಎಲ್ಲವೂ ಸಿಗುತ್ತೆ ಎನ್ನುತ್ತಾರೆ! ಹಾಗಾಗಿ ಪುಸ್ತಕ ಪ್ರೀತಿ, ಓದುವ ಹವ್ಯಾಸ ಮಂಗಮಾಯವಾಗಿದೆ. ಇಂತಹ ಸಂದರ್ಭದಲ್ಲಿ ಕಾರ್ಕಳದಲ್ಲಿ ಇತ್ತೀಚೆಗೆ ನಡೆದ ಒಂದು ವಿಶಿಷ್ಟ ವಿವಾಹ ಸಮಾರಂಭ ಅಚ್ಚರಿ ಹಾಗೂ ಹೆಮ್ಮೆ ಮೂಡಿಸಿದೆ. ಕಾರ್ಕಳದ ಪ್ರಗತಿಪರ ಯುವ ಲೇಖಕಿ ಹಾಗೂ ಕವಯಿತ್ರಿ ಚೈತ್ರ ಕಬ್ಬಿನಾಲೆ ಮತ್ತು ಜನಪ್ರಿಯ ಯೂಟ್ಯೂಬರ್ ನಿತಿನ್ ಪೂಜಾರಿ ಇವರ ವಿವಾಹ ಸಮಾರಂಭದಲ್ಲಿ ಚೈತ್ರರವರ ಸ್ವರಚಿತ ಕವನ ಸಂಕಲನ ಕಾಲ್ಗೆಜ್ಜೆ ಪುಸ್ತಕವನ್ನು ಬಿಡುಗಡೆಗೊಳಿಸಿ ತಮ್ಮ ಕನ್ನಡ ಸಾಹಿತ್ಯದ ಕುರಿತ ಅಪಾರ ಪ್ರೇಮವನ್ನು ತೋರಿದ್ದಾರೆ. ಪುಸ್ತಕಗಳು ಕೇವಲ ಜ್ಞಾನಾರ್ಜನೆಗೆ ಮಾತ್ರವಲ್ಲ, ಜೀವನದ ಅವಿಭಾಜ್ಯ ಅಂಗವೂ ಹೌದು ಸಾಹಿತ್ಯ ಮತ್ತು ಬದುಕು ಜೀವನದಲ್ಲಿ ಸಮ್ಮಿಳಿತಗೊಂಡಿರಬೇಕು ಎಂದು ಸಾರಿದ್ದಾರೆ. ಇವರ ವಿವಾಹ ಮಹೋತ್ಸವ ಅದರ ವಿಶಿಷ್ಟತೆಯಿಂದ ಹಲವು ವರ್ಷಗಳ ಕಾಲ ನೆನಪಿನಲ್ಲಿ ಉಳಿಯುವುದು ಖಂಡಿತ! ವಧುವರರಿಗೆ ಧನ್ಯವಾದಗಳು.

– ಕೆ. ಶ್ರೀನಿವಾಸರಾವ್, ಹರಪನಹಳ್ಳಿ

ನಿಜಕ್ಕೂ ಸರ್ಜರಿ ಅವಶ್ಯಕ!

ಭಾರತದ ಡೆಮಾಕ್ರಸಿಗೆ ಸರ್ಜರಿ ಬೇಕಾಗಿದೆ ಅನ್ನೋ ಅವರ ಮಾತು ಅಕ್ಷರಶ: ನಿಜ. ದೇಶದ ಪ್ರಧಾನಿಯೊಬ್ಬರು ಪ್ರಜೆಗಳ ಒಳಿತಿಗಾಗಿ, ಉಜ್ವಲ ಭವಿಷ್ಯಕ್ಕಾಗಿ, ಸ್ವಾವಲಂಬಿ ಭಾರತ ನಿರ್ಮಿಸುವಲ್ಲಿ ಅನುಕೂಲವಾಗಲಿ ಅಂತ ಕೆಲ ಉಳಿತಾಯ ಸೂತ್ರ-ಸಲಹೆ ನೀಡಿದರೆ, ಅದನ್ನು ಒಪ್ಪಿ ಪಾಲನೆ ಮಾಡದೇ, ಗೇಲಿ ಮಾಡಿ ನಗುವ ಕೆಲ ದುಷ್ಟ ಶಕ್ತಿಗಳಿಗೆ ಅನುಕೂಲ ಮಾಡಿಕೊಟ್ಟ ಈ ಪ್ರಜಾಪ್ರಭುತ್ವದ ವಾಕ್ ಸ್ವಾತಂತ್ರ್ಯಕ್ಕೆ ನಿಜಕ್ಕೂ ಸರ್ಜರಿ ಅವಶ್ಯಕ.

ಉದ್ಯೋಗ ಸೃಷ್ಟಿ ಮಾಡುವ ಉದ್ಯಮಿ, ಜೀವ ಉಳಿಸುವ ವೈದ್ಯ, ಸದಾಕಾಲ ಸಮಾಜದ ಒಳಿತಿಗಾಗಿ ದುಡಿಯುವ ನಿಸ್ವಾರ್ಥಿ, ಹಾಗೂ ಒಬ್ಬ ಕಳ್ಳ – ಖದೀಮ, ದೇಶದ್ರೋಹಿ, ಇವರೆಲ್ಲರಿಗೂ ಪ್ರಜಾಪ್ರಭುತ್ವದಲ್ಲಿ ಸಿಕ್ಕಿದ್ದು ಒಂದೇ ವೋಟಿನ ಸಮಾನ ಅವಕಾಶ-ಅಧಿಕಾರ! ಹೌದಲ್ಲ? ಲೇಖಕರು ಬಹಳ ಆಳವಾಗಿ ಯೋಚಿಸಿ, ಲೋಪ-ದೋಷ ಹುಡುಕಿ, ಪ್ರತಿಯೊಬ್ಬ ಮತದಾರನಿಗೆ ಆತನ ಸಮಾಜದಲ್ಲಿನ ಸ್ಥಾನ, ಯೋಗ್ಯತೆಗೆ ತಕ್ಕಂತೆ ಸಾಮಾಜಿಕ ಅಂಕನೀಡುವ ವ್ಯವಸ್ಥೆ (Social Point System) ಯಾಕೆ ಜಾರಿಗೆ ಬರಬಾರದು ಅಂತ ಪ್ರಶ್ನಿಸಿದ್ದಾರೆ. ಇಂದಿನ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಒಬ್ಬನ ಕ್ರೆಡಿಟ್ ಸ್ಕೋರ್ (CIBIL) ಆತನಿಗೆ ನೀಡುವ ಸಾಲಕ್ಕೆ ಆಧಾರವಾಗಿರುವಾಗ, ಚುನಾವಣೆಯಲ್ಲಿ ಒಬ್ಬ ನೀಡುವ ಮತಕ್ಕೆ ಆತನ ವ್ಯಕ್ತಿತ್ವ ಅಳತೆಗೋಲಾಗಿರಲಿ ಅನ್ನೋದು ತಪ್ಪಲ್ಲ. ಚಿಂತನೆಗೆ ಪ್ರೇರೇಪಿಸುವ ಮತ್ತು ಜಾರಿಗೆ ತರಲು ಯೋಗ್ಯ ಸಲಹೆ ನೀಡಿದ ಈ ಲೇಖನ ಬರೆದ ಅಂಕಣಕಾರ, ಮತ್ತು ಪ್ರಕಟಿಸಿದ ಪತ್ರಿಕೆಗೆ ನನ್ನ ಧನ್ಯವಾದಗಳು..

– ಲಕ್ಷ್ಮೀಕಾಂತ ಪಾಟೀಲ, ಮೈಸೂರು

ಪ್ರಸ್ತುತ

ಡಾ. ಜಗದೀಶ ಮಾನೆ

ಹೃದಯ ಗೆದ್ದ ಆದರ್ಶ ಗುರು

ಶಿಕ್ಷಣವೆಂದರೆ ಕೇವಲ ಪದವಿ ನೀಡುವ ವ್ಯವಸ್ಥೆಯಲ್ಲ; ಅದು ವ್ಯಕ್ತಿತ್ವ ರೂಪಿಸುವ ಮಹೋನ್ನತ ಸಾಮಾಜಿಕ ಪ್ರಕ್ರಿಯೆ. ಒಬ್ಬ ಆದರ್ಶ ಶಿಕ್ಷಕ ಸಾವಿರಾರು ವಿದ್ಯಾರ್ಥಿಗಳ ಬದುಕನ್ನು ಬೆಳಗಬಲ್ಲ. ಕೆಲ ಶಿಕ್ಷಕರು ತಮ್ಮ ಪ್ರಾಮಾಣಿಕತೆ, ಸಮಯಪ್ರಜ್ಞೆ, ವಿದ್ಯಾರ್ಥಿಗಳ ಮೇಲಿನ ಕಾಳಜಿ ಮತ್ತು ಮಾನವೀಯತೆಯ ಮೂಲಕ ಶಿಕ್ಷಕ ವೃತ್ತಿಯ ಘನತೆಯನ್ನು ಉಳಿಸಿಕೊಂಡಿದ್ದಾರೆ. ಅಂತಹ ಆದರ್ಶ ಶಿಕ್ಷಕರ ಸಾಲಿನಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ. ಎಂ.ಜಿ. ಖಾನ್ ಪ್ರಮುಖರು. ಅವರು ತಮ್ಮ ಬೋಧನೆ, ಬದುಕು, ವ್ಯಕ್ತಿತ್ವದ ಮೂಲಕ ಶಿಕ್ಷಕ ವೃತ್ತಿಯ ಗೌರವವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ದಿದ್ದಾರೆ.

ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳ ವ್ಯಕ್ತಿತ್ವ ನಿರ್ಮಾಣ ಮಾಡುವ ಶಿಕ್ಷಕರ ಪ್ರಮಾಣ ವಿರಳ. ಅನೇಕ ಕಡೆ ಪ್ರಾಧ್ಯಾಪಕರು ಸರಿಯಾಗಿ ತರಗತಿ ತೆಗೆದುಕೊಳ್ಳುವುದಿಲ್ಲ. ಕೆಲವರು ತಮ್ಮ ಕರ್ತವ್ಯದ ಭಾರವನ್ನು ಸಂಶೋಧನಾ ವಿದ್ಯಾರ್ಥಿಗಳ ಮೇಲೆ ಹಾಕಿ, ತಾವು ವಾರಕ್ಕೊಮ್ಮೆ ಅಥವಾ ಹದಿನೈದು ದಿನಕ್ಕೊಮ್ಮೆ ಬಂದು ಒಂದೆರಡು ತರಗತಿ ತೆಗೆದು ಹೋಗುತ್ತಾರೆ. ಕೆಲವರು ತಿಂಗಳುಗಳಾದರೂ ವಿಭಾಗದ ಕಡೆ ಮುಖ ಮಾಡುವುದಿಲ್ಲ, ಕೆಲವೆಡೆ ಸಂಶೋಧನಾ ವಿದ್ಯಾರ್ಥಿಗಳಿಂದ ಹಣ ವಸೂಲಿ, ಜಾತಿ ಆಧಾರಿತ ತಾರತಮ್ಯ, ಅಧಿಕಾರದ ದುರುಪಯೋಗ ಆರೋಪಗಳಿವೆ.

ಇಂತಹ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳ ಭವಿಷ್ಯ ಯಾವ ದಿಕ್ಕಿಗೆ ಸಾಗುತ್ತಿದೆ ಎಂಬ ಪ್ರಶ್ನೆ ಸಹಜ. ಇನ್ನೂ ಈ ವ್ಯವಸ್ಥೆಯನ್ನು ಪ್ರಶ್ನಿಸುವ ಧೈರ್ಯವನ್ನೇ ವಿದ್ಯಾರ್ಥಿಗಳು ಕಳೆದುಕೊಂಡಿದ್ದಾರೆ. ಶಿಕ್ಷಕರು ತರಗತಿಗೆ ಬಾರದಿದ್ದರೂ, ಪಾಠ ಸರಿಯಾಗಿ ಮಾಡದಿದ್ದರೂ ಅದನ್ನು ಪ್ರಶ್ನಿಸಲು ಅವರು ಹಿಂದೇಟು ಹಾಕುತ್ತಾರೆ. ಇದರ ಹಿಂದೆ ಆಂತರಿಕ ಅಂಕಗಳ ಭಯ, ನಿರಾಸಕ್ತಿ ಮತ್ತು ವ್ಯವಸ್ಥೆಯ ಮೇಲಿನ ನಂಬಿಕೆ ಕುಸಿತ ಪ್ರಮುಖ ಕಾರಣ. ಪ್ರಶ್ನಿಸುವ ಮನಸ್ಸನ್ನು ಬೆಳೆಸಬೇಕಾದ ಶಿಕ್ಷಣ ಸಂಸ್ಥೆಗಳಲ್ಲೇ ಪ್ರಶ್ನಿಸುವ ವಿದ್ಯಾರ್ಥಿಗಳನ್ನು ಅಸಹ್ಯದಿಂದ ನೋಡುವ ಪರಿಸ್ಥಿತಿ ನಿರ್ಮಾಣವಾಗಿರುವುದು ಶಿಕ್ಷಣದ ಆತ್ಮವನ್ನೇ ಕುಗ್ಗಿಸುವ ಬೆಳವಣಿಗೆ.

ಇಂದಿಗೂ ಅನೇಕ ಪ್ರಾಮಾಣಿಕ ಶಿಕ್ಷಕರು ಶಿಕ್ಷಣದ ದೀಪ ಆರದಂತೆ ಕಾಪಾಡುತ್ತಿದ್ದಾರೆ. ಅಂತಹವರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಡಾ. ಎಂ.ಜಿ. ಖಾನ್ ಪ್ರಮುಖರು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅವರ ಹೆಸರನ್ನು ಅಪಾರ ಗೌರವದಿಂದ ಉಚ್ಚರಿಸಲಾಗುತ್ತದೆ. ಅವರದು ನಿಜಕ್ಕೂ ಕೆಸರಿನ ಮಧ್ಯೆ ಅರಳಿದ ಕಮಲದಂತ ವ್ಯಕ್ತಿತ್ವ. ಅವರನ್ನು ಕಂಡಾಗಲೇ ವಿದ್ಯಾರ್ಥಿಗಳಲ್ಲಿ ಹೊಸ ಉತ್ಸಾಹ ಮೂಡುತ್ತಿತ್ತು. ಅವರ ತರಗತಿ ಆರಂಭವಾಗುತ್ತಿದ್ದಂತೆಯೇ ವಿದ್ಯಾರ್ಥಿಗಳು ತಮ್ಮ ಸಹಪಾಠಿಗಳನ್ನು ಬೇಗ ಬನ್ನಿ, ಖಾನ್ ಸರ್ ಕ್ಲಾಸ್ ಶುರುವಾಗಿದೆ! ಎಂದು ಕರೆಯುತ್ತಿದ್ದರು. ಅದು ಅವರ ಬೋಧನೆಯ ಪ್ರಭಾವಕ್ಕೆ ಸಾಕ್ಷಿ.

ಅವರ ಬೋಧನೆ ಪಠ್ಯಪುಸ್ತಕಕ್ಕೆ ಸೀಮಿತವಾಗಿರಲಿಲ್ಲ; ಜೀವನ ಮೌಲ್ಯಗಳನ್ನೂ ಒಳಗೊಂಡಿತ್ತು. ಸಮಯಪ್ರಜ್ಞೆ, ಶಿಸ್ತು, ಪ್ರಾಮಾಣಿಕತೆ ಮತ್ತು ಮಾನವೀಯತೆಯನ್ನು ತಮ್ಮ ಬದುಕಿನ ಮೂಲಕವೇ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದರು. ಒಂದು ನಿಮಿಷವೂ ತಡಮಾಡದೆ ತರಗತಿಗೆ ಆಗಮಿಸುತ್ತಿದ್ದರು. ಗೌರವವನ್ನು ಹುದ್ದೆಯಿಂದ ಪಡೆಯಲು ಸಾಧ್ಯವಿಲ್ಲ; ಅದನ್ನು ವ್ಯಕ್ತಿತ್ವದಿಂದ ಸಂಪಾದಿಸಬೇಕು. ಅದನ್ನು ಸಾಧಿಸಿದವರು ಡಾ. ಖಾನ್. ಹಣಬಲ, ಜಾತಿಬಲ ಮತ್ತು ರಾಜಕೀಯ ಪ್ರಭಾವದಿಂದ ದೊಡ್ಡವರಾಗುವವರು ಅನೇಕರು. ಆದರೆ ಎಂ.ಜಿ. ಖಾನ್ ಜಾತಿ, ಧರ್ಮ, ಅಧಿಕಾರದ ಗಡಿಗಳನ್ನು ಮೀರಿ ಪ್ರಾಮಾಣಿಕತೆ, ಮಾನವೀಯತೆ ಮತ್ತು ಕರ್ತವ್ಯನಿಷ್ಠೆಯಿಂದ ವಿದ್ಯಾರ್ಥಿಗಳ ಹೃದಯ ಗೆದ್ದಿದ್ದಾರೆ. ಆದ್ದರಿಂದಲೇ ಖಾನ್ ಗುರುಗಳು ನಿಜಕ್ಕೂ ಪೂಜನೀಯ ಆದರ್ಶ ಶಿಕ್ಷಕರು.

ಭಾರತ ಫೈಲ್ ನೋಡುತ್ತಿರುವಾಗ ಚೀನಾ ಫ್ಲೈಓವರ್ ಮುಗಿಸಿತು!

ಅಮೃತಕಾಲ

ಲೀನಾ ಜೋಶಿ
vveditoped@gmail.com

ನಾನು ಚೀನಾಗೆ ಹೋಗಿ ಬಂದಾಗಲೆಲ್ಲಾ ನನ್ನೊಳಗೆ ಪ್ರತಿಬಾರಿ ಒಂದು ಪ್ರಶ್ನೆ ಮೌನವಾಗಿ ಏಳುತ್ತದೆ. ದಶಕಗಳು ಕಳೆದರೂ, ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದಿದೆ. ಭಾರತ ಮತ್ತು ಚೀನಾ, ನೆರೆಹೊರೆ ದೇಶಗಳು. 1947ರಲ್ಲಿ ಭಾರತ ಸ್ವಾತಂತ್ರ್ಯ ಪಡೆಯಿತು. 1949ರಲ್ಲಿ ಚೀನಾದಲ್ಲಿ ಹೊಸ ಕಮ್ಯುನಿಸ್ಟ್ ಸರಕಾರ ಸ್ಥಾಪನೆಯಾಯಿತು. ಒಂದೇ ಕಾಲಘಟ್ಟದಲ್ಲಿ ತಮ್ಮ ಹೊಸ ಜೀವನ ಪ್ರಾರಂಭಿಸಿದ ಎರಡು ದೇಶಗಳು ಒಂದೊಂದು ದಿಕ್ಕಿನಲ್ಲಿ ಇಷ್ಟು ದೂರ ಹೇಗೆ ಹೋಗಿಬಿಟ್ಟವು? ವಿಮಾನ ಚೀನಾದ ನೆಲಕ್ಕೆ ಇಳಿದ ಕ್ಷಣದಿಂದಲೇ ಒಂದು ವಿಚಿತ್ರ ಅನುಭವ ಶುರುವಾಗುತ್ತದೆ. ಎಲ್ಲವೂ ದೊಡ್ಡದಾಗಿ ಕಾಣುತ್ತದೆ. ರಸ್ತೆಗಳು ಕೇವಲ ರಸ್ತೆಗಳಲ್ಲ – ಅವು ಒಂದು ರಾಷ್ಟ್ರದ ಆತ್ಮವಿಶ್ವಾಸದಂತೆ ಕಾಣುತ್ತವೆ. ರೈಲುಗಳು ಕೇವಲ ವೇಗದಲ್ಲಿಲ್ಲ – ಅವು ಸಮಯದ ಮೇಲಿನ ಗೌರವದಂತೆ ಕಾಣುತ್ತವೆ. ನಗರಗಳು ಕೇವಲ ಕಟ್ಟಡಗಳ ಗುಂಪಲ್ಲ – ಅವು ಒಂದು ದೇಶದ ದೀರ್ಘ ಕಾಲದ ಚಿಂತನೆಯ ಪ್ರತಿರೂಪದಂತೆ ಕಾಣುತ್ತವೆ. ಅಲ್ಲಿ ನಿಂತಾಗಲೆಲ್ಲ ನನಗೆ ಅನಿಸಿದ್ದು, ಇದು ಕೇವಲ ಹಣದಿಂದ ನಿರ್ಮಾಣವಾದ ದೇಶ ಅಲ್ಲ. ಇದು ಶಿಸ್ತಿನಿಂದ ನಿರ್ಮಾಣವಾದ ದೇಶ. ಅಲ್ಲಿ ಸಾಮಾನ್ಯ ಮನುಷ್ಯ ಕೂಡ ತನ್ನ ಕೆಲಸವನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಾನೆ. ರಸ್ತೆಯಲ್ಲಿ ಕಸ ಹಾಕದಿರುವುದು ಕಾನೂನಿನ ಭಯದಿಂದಲ್ಲ; ಇದು ನನ್ನ ದೇಶ ಎಂಬ ಭಾವನೆಯಿಂದ. ಯಾರೂ ಅನವಶ್ಯಕವಾಗಿ ಜೋರಾಗಿ ಮಾತನಾಡುವುದಿಲ್ಲ. ಪ್ರತಿಯೊಬ್ಬರೂ ತಮ್ಮ ಕೆಲಸದಲ್ಲಿ ತೊಡಗಿರುವಂತೆ ಕಾಣುತ್ತಾರೆ.

ನನ್ನ ದೇಶ, ಅಪಾರ ಪ್ರತಿಭೆಯ ದೇಶ, ಭಾವನೆಗಳ ದೇಶ, ಆಧ್ಯಾತ್ಮದ ದೇಶ, ಬುದ್ಧಿವಂತರ ದೇಶ. ಆದರೆ ಎಲ್ಲೋ ಒಂದು ಕಡೆ ನಾವು ಚದುರಿಕೊಂಡೆವು. ಚೀನಾ ಒಂದು ರಾಷ್ಟ್ರವಾಗಿ ಒಂದೇ ಗುರಿ ಹಿಡಿದು ಓಡಿತು. ಭಾರತದಲ್ಲಿ ಪ್ರತಿಯೊಬ್ಬರೂ ತಮ್ಮದೇ ದಿಕ್ಕಿನಲ್ಲಿ ಓಡಿದರು. ನಾವು ಧರ್ಮದಲ್ಲಿ ವಿಭಜಿತವಾದೆವು, ಜಾತಿಗಳಲ್ಲಿ ಸಿಲುಕಿಕೊಂಡೆವು, ಭಾಷೆಗಾಗಿ ಜಗಳವಾಡಿದೆವು, ರಾಜಕೀಯದಲ್ಲಿ ಭಾವನೆಗಳನ್ನು ಮಾರಿಕೊಂಡೆವು. ಚೀನಾ ಕಾರ್ಖಾನೆಗಳನ್ನು ನಿರ್ಮಿಸುತ್ತಿದ್ದಾಗ, ನಾವು ಪರಸ್ಪರ ಯಾರು ಶ್ರೇಷ್ಠ ಎಂದು ಜಗಳವಾಡುತ್ತಿದ್ದೆವು. ಅವರು ಜಗತ್ತಿಗೆ ವಸ್ತುಗಳನ್ನು ಮಾರುತ್ತಿದ್ದರು. ನಾವು ಇನ್ನೂ ಮೂಲಭೂತ ವ್ಯವಸ್ಥೆಗಳನ್ನು ಸರಿಪಡಿಸಿಕೊಳ್ಳುತ್ತಿದ್ದೆವು.

ನಾನು ಚೀನಾದಲ್ಲಿ ಗಮನಿಸಿದ ದೊಡ್ಡ ವಿಷಯ, ಅವರು ಸಮಯ ವ್ಯರ್ಥ ಮಾಡಲ್ಲ. ಅಲ್ಲಿ ಒಂದು ಕೆಲಸಕ್ಕೆ 5 ದಿನ ಬೇಕೆಂದರೆ, 5 ದಿನದಲ್ಲೇ ಮುಗಿಸುತ್ತಾರೆ. ನಮ್ಮಲ್ಲಿ? ಒಂದು ಸಣ್ಣ ಸರಕಾರಿ ಕೆಲಸಕ್ಕೂ ಕಡತಗಳು, ಅನುಮತಿಗಳು, ಕಾಯುವಿಕೆ, ಭ್ರಷ್ಟಾಚಾರ, ರಾಜಕೀಯ.

ಚೀನಾ ಶಿಸ್ತನ್ನು ಅಭ್ಯಾಸ ಮಾಡಿತು. ಭಾರತ ಜುಗಾಡ್ ಅನ್ನು ಅಭ್ಯಾಸ ಮಾಡಿತು.ಅವರು ವ್ಯವಸ್ಥೆ ಕಟ್ಟಿದರು. ನಾವು ವ್ಯವಸ್ಥೆಯನ್ನು ತಪ್ಪಿಸಿಕೊಂಡು ಬದುಕುವುದನ್ನು ಕಲಿತೆವು. ಅಲ್ಲಿ ಟ್ರಾಫಿಕ್‌ನಲ್ಲಿ ಕೂಡ ಒಂದು ಕ್ರಮ ಇದೆ. ಇಲ್ಲಿ ಪ್ರತಿಯೊಬ್ಬರೂ ಮೊದಲು ಹೋಗಬೇಕೆಂದು ಪ್ರಯತ್ನಿಸುತ್ತಾರೆ. ಇದು ಕೇವಲ ಟ್ರಾಫಿಕ್ ವ್ಯತ್ಯಾಸವಲ್ಲ – ಇದು ಸಮಾಜದ ಮನಸ್ಥಿತಿಯ ವ್ಯತ್ಯಾಸ. ಚೀನಾ 'ನಾವು' ಎಂದು ಯೋಚಿಸಿತು. ಭಾರತದಲ್ಲಿ 'ನಾನು' ಹೆಚ್ಚು ದೊಡ್ಡದಾಯಿತು.

ಆದರೆ ನಾನು ಚೀನಾವನ್ನು ನೋಡಿ ಸಂಪೂರ್ಣವಾಗಿ ಮಾರುಹೋಗಲಿಲ್ಲ. ಏಕೆಂದರೆ ಅಲ್ಲಿ ಸಮೃದ್ಧಿಯ ಜೊತೆ ಒಂದು ಭಯವೂ ಇದೆ. ಅಲ್ಲಿ ಜನರು ಸರಕಾರದ ವಿರುದ್ಧ ಮುಕ್ತವಾಗಿ ಮಾತನಾಡುವುದಿಲ್ಲ. ಸ್ವಾತಂತ್ರ್ಯಕ್ಕೆ ಗಡಿಗಳಿವೆ. ಚೀನಾ ವೇಗವನ್ನು ಆಯ್ಕೆ ಮಾಡಿಕೊಂಡಿತು. ಭಾರತ ಸ್ವಾತಂತ್ರ್ಯವನ್ನು ಆಯ್ಕೆ ಮಾಡಿಕೊಂಡಿತು. ಒಂದು ದೇಶ ಯಂತ್ರದಂತೆ ಬೆಳೆಯಿತು. ಇನ್ನೊಂದು ದೇಶ ಆತ್ಮದಂತೆ ಬದುಕಿತು. ಭಾರತ ನಿಧಾನ. ಕೆಲವೊಮ್ಮೆ ಅಸಹನೀಯವಾಗಿ ನಿಧಾನ. ಭಾರತದೊಳಗೆ ಒಂದು ಜೀವಂತ ಗದ್ದಲವಿದೆ. ಚಹಾ ಅಂಗಡಿಯಲ್ಲಿ ರಾಜಕೀಯ ಚರ್ಚೆ ಮಾಡುವ ಸಾಮಾನ್ಯ ಮನುಷ್ಯನ ಧ್ವನಿಯಿದೆ. ವಿಭಿನ್ನ ಅಭಿಪ್ರಾಯಗಳ ನಡುವೆ ಬದುಕುವ ಸಾಮರ್ಥ್ಯವಿದೆ. ಆದರೆ ನಮ್ಮ ದುರ್ಬಲತೆಗಳನ್ನು ಮರೆಮಾಚಲು ಸಾಧ್ಯವಿಲ್ಲ.

ನಮ್ಮ ದೊಡ್ಡ ಸಮಸ್ಯೆ ಸರಕಾರ ಮಾತ್ರವಲ್ಲ. ನಮ್ಮ ಮನೋಭಾವವೂ. ನಾವು ನಿಯಮ ಉಲ್ಲಂಘಿಸಿ ಹೆಮ್ಮೆಪಡುತ್ತೇವೆ, ಸಾರ್ವಜನಿಕ ಆಸ್ತಿಯನ್ನು ಗೌರವಿಸುವುದಿಲ್ಲ, ಸಮಯವನ್ನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಪ್ರತಿಭೆಗಿಂತ ಪರಿಚಯಕ್ಕೆ ಬೆಲೆ ಕೊಡುತ್ತೇವೆ, ದೇಶದ ಬಗ್ಗೆ ಮಾತನಾಡುವುದರಲ್ಲಿ ಹೆಚ್ಚು, ಕೆಲಸ ಮಾಡುವುದರಲ್ಲಿ ಕಡಿಮೆ. ಒಂದು ರಾಷ್ಟ್ರವನ್ನು ಹಿಂದುಳಿಸುವುದು ಬಡತನವಲ್ಲ, ಅವ್ಯವಸ್ಥಿತ ಮನೋಭಾವ. ಚೀನಾದ ಸಮೃದ್ಧಿ ಕೇವಲ ಹಣದಿಂದ ಬಂದಿಲ್ಲ, ಅದು ದೀರ್ಘಕಾಲದ ಚಿಂತನೆ, ಶಿಸ್ತು, ಉತ್ಪಾದನೆ, ರಾಷ್ಟ್ರೀಯ ಗುರಿ, ಮತ್ತು ಕಾರ್ಯಗತಗೊಳಿಸುವಿಕೆಯ ಫಲ. ಭಾರತ ಇನ್ನೂ ತನ್ನ ಒಳಗಿನ ಸಂಘರ್ಷಗಳಲ್ಲಿ ಸಿಲುಕಿಕೊಂಡಿದೆ. ಈ ದೇಶದಲ್ಲಿ ಇನ್ನೂ ಕನಸುಗಳು ಜೀವಂತವಾಗಿವೆ. ಒಬ್ಬ ಚಿಕ್ಕ ಹಳ್ಳಿಯ ಹುಡುಗ ಜಗತ್ತಿನ ದೊಡ್ಡ ಕಂಪನಿಯ ಅಧಿಕಾರಿಯಾಗುವ ಸಾಧ್ಯತೆ ಇಲ್ಲಿದೆ. ಒಬ್ಬ ಸಾಮಾನ್ಯ ಕುಟುಂಬದ ಮಗು ಅಂತರಿಕ್ಷ ವಿಜ್ಞಾನಿಯಾಗುವ ಅವಕಾಶ ಇಲ್ಲಿದೆ. ಭಾರತದ ಸಮಸ್ಯೆ ಪ್ರತಿಭೆಯ ಕೊರತೆ ಅಲ್ಲ, ಒಗ್ಗಟ್ಟಿನ ಕೊರತೆ. ನಾವು ಭಾರತೀಯರು ಶಿಸ್ತನ್ನು ಸ್ವೀಕರಿಸಿ, ಸಾರ್ವಜನಿಕ ಜವಾಬ್ದಾರಿಯನ್ನು ಅರ್ಥಮಾಡಿಕೊಂಡು, ಕೆಲಸವನ್ನು ಪೂಜೆಯಂತೆ ನೋಡಿಕೊಂಡು, ದೇಶವನ್ನು ಯಾರೋ ಸರಕಾರ ಎಂದಲ್ಲ, ನಮ್ಮದು ಎಂದು ನೋಡಲು ಪ್ರಾರಂಭಿಸಿದರೆ, ಈ ದೇಶವನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ.

1950ರ ದಶಕದಲ್ಲಿ, ಅಂತರರಾಷ್ಟ್ರೀಯ ತಜ್ಞರು ಭಾರತ ಮತ್ತು ಚೀನಾವನ್ನು ಒಂದೇ ಮಟ್ಟದ ಅಭಿವೃದ್ಧಿಶೀಲ ರಾಷ್ಟ್ರಗಳೆಂದು ನೋಡುತ್ತಿದ್ದರು. ಎರಡೂ ದೇಶಗಳು ಒಂದು ಕಾಲದಲ್ಲಿ ಬಡತನ, ನಿರುದ್ಯೋಗ, ಹಸಿವು ಮತ್ತು ಹಿಂದುಳಿದ ಸ್ಥಿತಿಯನ್ನು ಎದುರಿಸುತ್ತಿದ್ದವು. 1950ರ ದಶಕದಿಂದ 2020ರ ದಶಕದ ಆರಂಭದವರೆಗೆ, ಚೀನಾ ಭಾರತಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ನಿರಂತರವಾಗಿ ಕಾಯ್ದುಕೊಂಡಿತ್ತು. 1980ರಲ್ಲಿ ಚೀನಾ ತನ್ನ ಕಟ್ಟುನಿಟ್ಟಾದ ಒಂದು ಮಗು ನೀತಿಯನ್ನು ಜಾರಿಗೆ ತಂದಿತು, ಇದರಿಂದಾಗಿ ಅದರ ಒಟ್ಟು ಫಲವತ್ತತೆ ದರ ಗಮನಾರ್ಹವಾಗಿ ಕುಸಿಯಿತು. 1981ರಲ್ಲಿ ಚೀನಾ 100 ಕೋಟಿ ಜನಸಂಖ್ಯೆಯ ಗಡಿಯನ್ನು ದಾಟಿತು, ಭಾರತ 1997ರಲ್ಲಿ ಅದೇ ಮೈಲಿಗಲ್ಲನ್ನು ತಲುಪಿತು. 2022ರಲ್ಲಿ, ಭಾರತವು ಅಧಿಕೃತವಾಗಿ ಚೀನಾವನ್ನು ಹಿಂದಿಕ್ಕಿ ವಿಶ್ವದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶವಾಯಿತು. ಚೀನಾದ ಜನಸಂಖ್ಯೆಯು ಅದರ ಐತಿಹಾಸಿಕ ಉತ್ತುಂಗದಿಂದ ಇಳಿಯುತ್ತಲೇ ಇದೆ. ಎರಡೂ ರಾಷ್ಟ್ರಗಳು ಜನಸಂಖ್ಯೆಯ ಗಾತ್ರದಲ್ಲಿ ಸಮಾನಾಂತರ ಏರಿಕೆ ಅನುಭವಿಸಿದವು, ಆದರೆ ಬೆಳವಣಿಗೆಯ ಪಥ ವ್ಯತಿರಿಕ್ತವಾಗಿವೆ. ಇಂದು ಚೀನಾ ವಿಶ್ವದ ಎರಡನೇ ಅತಿ ದೊಡ್ಡ ಆರ್ಥಿಕ ಶಕ್ತಿಯಾಗಿದೆ. ಉತ್ಪಾದನೆ, ಮೂಲಸೌಕರ್ಯ, ರಫ್ತು, ತಂತ್ರಜ್ಞಾನ ಮತ್ತು ಜಾಗತಿಕ ವ್ಯಾಪಾರದಲ್ಲಿ ಬಹಳ ಮುಂದೆ ಸಾಗಿದೆ. ಭಾರತ ಚೀನಾದಷ್ಟು ವೇಗದಲ್ಲಿ ಸಾಗಲಿಲ್ಲ. ಇದರ ಹಿಂದೆ ಸಂಪನ್ಮೂಲಗಳ ವ್ಯತ್ಯಾಸವಲ್ಲ; ಆಡಳಿತದ ದೃಷ್ಟಿಕೋನ ಮತ್ತು ರಾಷ್ಟ್ರೀಯ ಆದ್ಯತೆಗಳ ವ್ಯತ್ಯಾಸವೂ ದೊಡ್ಡ ಕಾರಣವಾಗಿದೆ.

ಚೀನಾ ಕಮ್ಯುನಿಸ್ಟ್ ದೇಶ. ಅಲ್ಲಿ ಸರಕಾರದ ನಿರ್ಧಾರಗಳು ಬಹಳ ವೇಗವಾಗಿ ಜಾರಿಗೆ ಬರುತ್ತವೆ. ದೀರ್ಘಕಾಲದ ಯೋಜನೆಗಳನ್ನು ರಾಜಕೀಯ ವಿರೋಧಗಳಿಲ್ಲದೆ ಜಾರಿಗೆ ತರುವ ಸಾಮರ್ಥ್ಯ ಚೀನಾಕ್ಕಿದೆ. ಒಂದು ರಸ್ತೆ, ಬಂದರು, ಕೈಗಾರಿಕಾ ವಲಯ ಅಥವಾ ನಗರ ನಿರ್ಮಿಸಲು ಅವರು ದಶಕಗಳ ಕಾಲ ಚರ್ಚೆ ಮಾಡುವುದಿಲ್ಲ; ನೇರವಾಗಿ ಕೆಲಸ ಆರಂಭಿಸುತ್ತಾರೆ. ಕಳೆದ 40 ವರ್ಷಗಳಲ್ಲಿ ಉತ್ಪಾದನೆ, ಕೈಗಾರಿಕೆ, ರಫ್ತು ಮತ್ತು ಮೂಲಸೌಕರ್ಯಕ್ಕೆ ಅತ್ಯಂತ ಹೆಚ್ಚಿನ ಆದ್ಯತೆ ನೀಡಿದರು. ಅದರ ಫಲವಾಗಿ ಇಂದು ಮೇಡ್ ಇನ್ ಚೀನಾ ವಿಶ್ವದ ಎಲ್ಲೆಡೆ ಕಾಣುತ್ತದೆ. ನಮ್ಮ ಸುತ್ತಲಿನ ನಗರ ಜೀವನವನ್ನೇ ಒಮ್ಮೆ ಗಮನಿಸಿ ನೋಡಿ. ಎಲ್ಲೆಡೆ ನಿರ್ಮಾಣ ಕಾಮಗಾರಿ. ಇಂದು ರಸ್ತೆ ಅಗೆಯಲಾಗುತ್ತದೆ, ನಾಳೆ ಮತ್ತೆ ಅದೇ ರಸ್ತೆ ಕೇಬಲ್‌ಗಾಗಿ ಅಗೆಯಲಾಗುತ್ತದೆ. ಅದರ ನಂತರ ಒಳಚರಂಡಿ ಕಾಮಗಾರಿ, ಮತ್ತೆ ನೀರಿನ ಪೈಪ್‌ಲೈನ್, ನಂತರ ಮೆಟ್ರೋ ಕಾಮಗಾರಿ, ಮತ್ತೆ ಗ್ಯಾಸ್ ಲೈನ್, ನಂತರ ಯುಟಿಲಿಟಿ ಕಾರಿಡಾರ್. ಹೀಗೆ ಒಂದೇ ರಸ್ತೆಯನ್ನು ವರ್ಷದಲ್ಲಿ ಹಲವಾರು ಬಾರಿ ಅಗೆಯುವುದು ನಮ್ಮ ದೇಶದಲ್ಲಿ ಸಾಮಾನ್ಯ ದೃಶ್ಯವಾಗಿದೆ.

ವಾಸ್ತವವಾಗಿ, ನಮ್ಮ ದೇಶದಲ್ಲಿ ಅಭಿವೃದ್ಧಿ ಒಂದು ಮುಗಿಯದ ಪ್ರಕ್ರಿಯೆಯಾಗಿ ಪರಿಣಮಿಸಿದೆ. ಒಂದು ಕಾಮಗಾರಿ ಪೂರ್ಣಗೊಂಡರೆ ಮತ್ತೊಂದು ಆರಂಭವಾಗುತ್ತದೆ. ಪುನರ್ನಿರ್ಮಾಣ ನಮ್ಮ ವ್ಯವಸ್ಥೆಯಲ್ಲಿ ಒಂದು ದೊಡ್ಡ ಉದ್ಯಮವಾಗಿದೆ. ರಸ್ತೆ ಒಮ್ಮೆ ಚೆನ್ನಾಗಿ ನಿರ್ಮಾಣವಾದರೆ ಮುಂದಿನ 20 ವರ್ಷ ಕೆಲಸ ಇರದು. ಆದರೆ ಪ್ರತಿವರ್ಷ ದುರಸ್ತಿ ಮಾಡಿದರೆ ಮಾತ್ರ ಹೊಸ ಟೆಂಡರ್‌ಗಳು ಬರುತ್ತವೆ. ಹೊಸ ಟೆಂಡರ್ ಎಂದರೆ ಹೊಸ ಅನುದಾನ, ಹೊಸ ಕಮಿಷನ್, ಹೊಸ ಲಾಭ. ಹೀಗಾಗಿ ಶಾಶ್ವತ ಪರಿಹಾರಕ್ಕಿಂತ ನಿರಂತರ ಕಾಮಗಾರಿ ಹೆಚ್ಚು ಲಾಭದಾಯಕವಾಗುತ್ತದೆ.

ಭಾರತ ಪ್ರಜಾಪ್ರಭುತ್ವ ರಾಷ್ಟ್ರ. ಇಲ್ಲಿ ವೈವಿಧ್ಯತೆ ಹೆಚ್ಚು. ಇವೆಲ್ಲವೂ ದೇಶದ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಪ್ರಭಾವಿಸುತ್ತವೆ. ಜಾತಿ ಆಧಾರಿತ ಅಸಮಾನತೆ, ಧಾರ್ಮಿಕ ಸಂಘರ್ಷಗಳು, ಬಡತನ, ಶಿಕ್ಷಣದ ಕೊರತೆ, ಪ್ರಾಂತೀಯ ರಾಜಕೀಯ, ಉಚಿತ ಯೋಜನೆಗಳ ರಾಜಕೀಯ, ಸಾಮಾಜಿಕ ಸಮತೋಲನ – ಇವೆಲ್ಲವು ಅಗತ್ಯವಾದ ವಿಷಯಗಳೇ ಆಗಿದ್ದರೂ, ದೇಶದ ಸಂಪೂರ್ಣ ಶಕ್ತಿಯನ್ನು ಕೈಗಾರಿಕೆ ಮತ್ತು ಆರ್ಥಿಕ ಅಭಿವೃದ್ಧಿಯ ಕಡೆಗೆ ಕೇಂದ್ರೀಕರಿಸಲು ಸಾಧ್ಯವಾಗಲಿಲ್ಲ. ಭಾರತೀಯರು ಚೀನೀಯರಿಗಿಂತ ಕಡಿಮೆ ಬುದ್ಧಿವಂತರೇ? ಖಂಡಿತವಾಗಿಯೂ ಅಲ್ಲ. ಭಾರತೀಯರು ಜಗತ್ತಿನಾದ್ಯಂತ ತಮ್ಮ ಪ್ರತಿಭೆಯನ್ನು ಸಾಬೀತುಪಡಿಸಿದ್ದಾರೆ. ಸಮಸ್ಯೆ ಜನರ ಬುದ್ಧಿವಂತಿಕೆಯಲ್ಲಿಲ್ಲ; ವ್ಯವಸ್ಥೆಯ ಆದ್ಯತೆಯಲ್ಲಿ ಮತ್ತು ದೀರ್ಘಕಾಲದ ರಾಷ್ಟ್ರೀಯ ದೃಷ್ಟಿಯಲ್ಲಿತ್ತು. ಚೀನಾ ತನ್ನ ಜನರನ್ನು ಉತ್ಪಾದನಾ ಶಕ್ತಿಯಾಗಿ ರೂಪಿಸಿತು. ಭಾರತ ತನ್ನ ಸಾಮಾಜಿಕ ಸಮತೋಲನವನ್ನು ಕಾಯ್ದುಕೊಳ್ಳುವ ಹೋರಾಟದಲ್ಲಿ ಹೆಚ್ಚು ಸಮಯ ಕಳೆಯಿತು. ಚೀನಾದಲ್ಲಿ ಸರಕಾರದ ಗಮನ ಮುಖ್ಯವಾಗಿ- ಕೈಗಾರಿಕೆ, ರಫ್ತು, ಮೂಲಸೌಕರ್ಯ, ಜಾಗತಿಕ ವ್ಯಾಪಾರದೆಡೆ. ಭಾರತದಲ್ಲಿ ಸರಕಾರಗಳು ಹೆಚ್ಚಾಗಿ – ಚುನಾವಣೆ, ಜಾತಿ ಸಮೀಕರಣ, ಧಾರ್ಮಿಕ ರಾಜಕೀಯ, ಉಚಿತ ಯೋಜನೆ, ಒಳರಾಜಕೀಯಗಳಲ್ಲಿ ಸಿಲುಕಿಕೊಂಡಿದ್ದವು.

ಇದರರ್ಥ ಪ್ರಜಾಪ್ರಭುತ್ವ ಕೆಟ್ಟದ್ದು ಅಥವಾ ಕಮ್ಯುನಿಸಂ ಉತ್ತಮ ಎನ್ನುವುದಲ್ಲ. ಪ್ರಜಾಪ್ರಭುತ್ವದಲ್ಲಿ ಜನರಿಗೆ ಸ್ವಾತಂತ್ರ್ಯ, ಅಭಿವ್ಯಕ್ತಿ ಮತ್ತು ಹಕ್ಕುಗಳು ಹೆಚ್ಚು. ಆದರೆ ನಿರ್ಧಾರಗಳನ್ನು ವೇಗವಾಗಿ ಜಾರಿಗೆ ತರುವುದು ಕೆಲವೊಮ್ಮೆ ಕಷ್ಟ. ಚೀನಾದಲ್ಲಿ ಅಭಿವೃದ್ಧಿಯ ವೇಗ ಹೆಚ್ಚು, ಆದರೆ ವ್ಯಕ್ತಿಗತ ಸ್ವಾತಂತ್ರ್ಯದ ಮಿತಿಗಳು ಕೂಡ ಇವೆ. ಭಾರತ ತನ್ನ ಒಳಗಿನ ವಿಭಜನೆಗಳನ್ನು ಕಡಿಮೆ ಮಾಡಿ, ಜಾತಿ-ಧರ್ಮ ರಾಜಕೀಯಕ್ಕಿಂತ ಶಿಕ್ಷಣ, ಉದ್ಯೋಗ, ಉತ್ಪಾದನೆ ಮತ್ತು ತಂತ್ರಜ್ಞಾನಕ್ಕೆ ಹೆಚ್ಚು ಆದ್ಯತೆ ನೀಡಿದರೆ, ಮುಂದಿನ ದಶಕಗಳಲ್ಲಿ ಭಾರತವೂ ವಿಶ್ವದ ಪ್ರಮುಖ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಬಹುದು. ಯಾಕೆಂದರೆ ಭಾರತದ ಬಳಿ ಇರುವ ದೊಡ್ಡ ಶಕ್ತಿ ಅದರ ಯುವಜನತೆ ಮತ್ತು ಪ್ರತಿಭೆ. ಆ ಪ್ರತಿಭೆ ಒಂದೇ ದಿಕ್ಕಿನಲ್ಲಿ ಕೇಂದ್ರೀಕೃತವಾದ ದಿನ, ಭಾರತವನ್ನು ತಡೆಯುವುದು ಯಾರಿಗೂ ಸುಲಭವಲ್ಲ.

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue: 133

ಸಮಾಚಾರ ಸಣ್ಣದಲ್ಲ

ಗಂಗಾನದಿ ದೋಣಿ ಮುಳುಗಿ: 2 ಸಾವು

ಪಟನಾ: ಬಿಹಾರದಲ್ಲಿನ ಪ್ರವಾಹ ಪೀಡಿತ ಪಟನಾ ನಗರ ಸಮೀಪದ ಉಮಾನಾಥ್ ಗಂಗಾ ಘಾಟ್ ಬಳಿ ಗಂಗಾ ನದಿಯಲ್ಲಿ 14 ಮಂದಿ ಸಾಗುತ್ತಿದ್ದ ದೋಣಿ ನೀರಿನ ಮಟ್ಟ ಏರಿದ್ದರಿಂದ ಹಾಗೂ ಬಲವಾದ ಗಾಳಿ ಬೀಸಿದ್ದರಿಂದ ಗುರುವಾರ ಬೆಳಗ್ಗೆ ಮುಳುಗಿದ್ದು, ಇಬ್ಬರು ಸಾವನ್ನಿದ್ದಾರೆ. ಮೃತದೇಹಗಳನ್ನು ನೀರಿನಿಂದ ಹೊರತೆಗೆಯಲಾಗಿದೆ. ನೀಲಂ ಕುಮಾರಿ(30), ಕಾಶಿ ಕುಮಾರ್(15) ಮೃತರು. ಮುಳುಗಿದ್ದ ದೋಣಿಯಲ್ಲಿದ್ದ 7 ಮಂದಿಯನ್ನು ಎಸ್‌ಡಿಆರ್‌ಎಫ್ ತಂಡ ಸ್ಥಳೀಯರ ನೆರವಿನಿಂದ ರಕ್ಷಿಸಿದೆ. ಐವರು ನಾಪತ್ತೆಯಾಗಿದ್ದು, ಶೋಧ ಕಾರ್ಯ ನಡೆದಿದೆ. ದೋಣಿಯ ಸಾಮರ್ಥ್ಯಕ್ಕಿಂತ ಹೆಚ್ಚಿನ ಜನರಿದ್ದುದು, ರಕ್ಷಣಾ ಕವಚಗಳಿಲ್ಲದ ಕಾರಣ ಇಬ್ಬರು ಜೀವ ಕಳೆದುಕೊಳ್ಳುವಂತಾಯಿತು ಎಂದು ಹೇಳಲಾಗಿದೆ.

ಪ.ಬಂ ಟಿಎಂಸಿ ಸಂಸದೆ ಕಾಕೋಲಿ ರಾಜೀನಾಮೆ

ಕೋಲ್ಕತ್ತ: ಪಶ್ಚಿಮ ಬಂಗಾಲದ ಬರಾಸತ್ ಕ್ಷೇತ್ರದಿಂದ 4 ಬಾರಿ ಸಂಸದೆಯಾಗಿರುವ ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷದ ಕಾಕೋಲಿ ಘೋಷ್ ದಸ್ತಿದಾರ್ ಪಕ್ಷದ ಎಲ್ಲಾ ಸಾಂಸ್ಥಿಕ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದಾರೆ. ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರ ಆಡಳಿತಾತ್ಮಕ ಸಭೆಯಲ್ಲಿ ಭಾಗವಹಿಸದಂತೆ ಪಕ್ಷ ಸೂಚಿಸಿದ್ದರೂ ಕಾಕೋಲಿ ಪಾಲ್ಗೊಂಡಿದ್ದರು. ಅದರ ಬೆನ್ನಲ್ಲೇ ಟಿಎಂಸಿ ಮಹಿಳಾ ಘಟಕದ ರಾಷ್ಟ್ರೀಯ ಅಧ್ಯಕ್ಷೆ ಮತ್ತು ಪಕ್ಷದ ಬಂಗಾ ಜನನಿ ಕಾರ್ಯಕ್ರಮದ ಪದಾಧಿಕಾರಿ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದಾರೆ. ಕೆಲವು ದಿನಗಳ ಹಿಂದೆ ಪಕ್ಷದ ನಾಯಕತ್ವದ ಬಗ್ಗೆ ಸಾರ್ವಜನಿಕವಾಗಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು. ಟಿಎಂಸಿ ರಾಜ್ಯಾಧ್ಯಕ್ಷೆ ಸುಬ್ರತಾ ಬಕ್ಷಿ ಅವರಿಗೆ ಕಾಕೋಲಿ ಪತ್ರ ಬರೆದು ಎಲ್ಲಾ ಸಾಂಸ್ಥಿಕ ಜವಾಬ್ದಾರಿಗಳಿಗೆ ರಾಜೀನಾಮೆ ನೀಡಿರುವುದಾಗಿ ತಿಳಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇಂಡಿಗೊ ವಿಮಾನಗಳ ಹಾರಾಟ ಶೇ.10 ಕಡಿತ

ದೆಹಲಿ: ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಕಾರಣ ಇಂಧನ ದರ ಏರಿಕೆ ಒಂದೆಡೆಯಾದರೆ, ಮತ್ತೊಂದು 'ಅನಗತ್ಯ ಪ್ರವಾಸವನ್ನು ಕಡಿಮೆ ಮಾಡಿ' ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ಕರೆ. ಇದೇ ಕಾರಣವಾಗಿ ಪ್ರಯಾಣಿಕರ ಸಂಖ್ಯೆ ತಗ್ಗಿರುವ ಹಿನ್ನೆಲೆ ಇಂಡಿಗೊ ಮತ್ತು ಏರ್ ಇಂಡಿಯ ಎಕ್ಸ್‌ಪ್ರೆಸ್ ಸಂಸ್ಥೆ ಸೇರಿದಂತೆ ಭಾರತದ ವಿಮಾನಯಾನ ಸಂಸ್ಥೆಗಳು ದೇಶೀ ಮಾರ್ಗಗಳಲ್ಲಿನ ವಿಮಾನ ಸಂಚಾರವನ್ನು ಕಡಿತಗೊಳಿಸಲು ನಿರ್ಧರಿಸಿವೆ. ಇಂಡಿಗೊ ದೇಶೀ ವಿಮಾನ ಹಾರಾಟವನ್ನು ತ್ರೈಮಾಸಿಕ ಆಧಾರದಲ್ಲಿ ಶೇ.10-13ರಷ್ಟು ಕಡಿತಗೊಳಿಸುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

4 ರಾಜ್ಯ ಘಟಕಗಳಿಗೆ ಬಿಜೆಪಿ ಅಧ್ಯಕ್ಷ ನೇಮಕ

ದೆಹಲಿ: ಕೇಂದ್ರದ ಎನ್‌ಡಿಎ ಸರಕಾರದಲ್ಲಿ ಸಹಾಯಕ ಸಚಿವರಾಗಿರುವ ಹರ್ಷ್ ಮಲ್ಹೋತ್ರಾ, ಅವರನ್ನು ದೆಹಲಿ ಬಿಜೆಪಿ ರಾಜ್ಯಾಧ್ಯಕ್ಷರಾಗಿ ನೇಮಿಸಲಾಗಿದೆ. ದೆಹಲಿಯಲ್ಲಿ ಪಕ್ಷದ ಸಂಘಟನೆ ಬಲಪಡಿಸಲು, ಸ್ಥಳೀಯ ಕಾರ್ಯಕರ್ತರ ಜತೆ ಸಮನ್ವಯ ಸಾಧಿಸಲು ಮತ್ತು ಮುಂದಿನ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳಲೆಂದೇ ಮಲ್ಹೋತ್ರಾ ಅವರ ನಾಯಕತ್ವದ ಮೇಲೆ ಪಕ್ಷ ವಿಶ್ವಾಸ ವ್ಯಕ್ತಪಡಿಸಿದೆ. ಪಂಜಾಬ್ ರಾಜ್ಯದಲ್ಲಿ ಬಿಜೆಪಿ ಸಂಘಟನೆ ದುರ್ಬಲವಾಗಿದೆ. ಹಾಗಾಗಿ ರಾಜ್ಯ ಘಟಕಕ್ಕೆ ಶಕ್ತಿ ತುಂಬುವ ಸಲುವಾಗಿ ರಾಜ್ಯಾಧ್ಯಕ್ಷರಾಗಿ ಸರ್ದಾರ್ ಕೇವಲ್ ಸಿಂಹ ಡಿಲ್ಲೋ ಅವರನ್ನು ನೇಮಿಸಲಾಗಿದೆ. ಈಶಾನ್ಯ ಭಾರತದ ಚಿಕ್ಕ ರಾಜ್ಯ ತ್ರಿಪುರದಲ್ಲಿ ಬಿಜೆಪಿ ಅದಾಗಲೇ ತನ್ನ ಹಿಡಿತ ಬಲಪಡಿಸಿಕೊಂಡಿದೆ. ಶಾಸಕ ಅಭಿಷೇಕ್ ದೇಬ್ ರಾಯ್ ಅವರನ್ನು ಹೊಸ ಬಿಜೆಪಿ ರಾಜ್ಯಾಧ್ಯಕ್ಷರಾಗಿ ನೇಮಿಸಲಾಗಿದೆ. ಕೃಷಿ, ಕೈಗಾರಿಕೆ ಪ್ರಧಾನ ರಾಜ್ಯವಾದ ಹರಿಯಾಣದ ಬಿಜೆಪಿ ಘಟಕ ಅಧ್ಯಕ್ಷೆಯಾಗಿ ಡಾ. ಅರ್ಚನಾ ಗುಪ್ತಾ ಅವರನ್ನು ನೇಮಿಸಲಾಗಿದೆ. ಆ ಮೂಲಕ ಮಹಿಳಾ ನಾಯಕತ್ವಕ್ಕೆ ಪಕ್ಷ ಪ್ರೋತ್ಸಾಹ ನೀಡುತ್ತಿರುವುದನ್ನು ತೋರಿಸಿಕೊಟ್ಟಿದೆ.

ಸಿಕ್ಕಿಂ ಪೂರ್ಣ ಸಾಕ್ಷರ

ಗ್ಯಾಂಗ್ಟಕ್: ಈಶಾನ್ಯ ಭಾರತದ ಪುಟ್ಟ ರಾಜ್ಯ 'ಸಿಕ್ಕಿಂ' ಸಂಪೂರ್ಣ ಸಾಕ್ಷರತಾ ರಾಜ್ಯ ಎಂದು ಕೇಂದ್ರ ಸರಕಾರ 'ಉಲ್ಲಾಸ್' ಉಪಕ್ರಮದಲ್ಲಿ ಘೋಷಣೆ ಮಾಡಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಉಪಸ್ಥಿತಿಯಲ್ಲಿ ಸಿಕ್ಕಿಂ ವಿವಿ ಘಟಿಕೋತ್ಸವದಲ್ಲಿ ಸಿಕ್ಕಿಂ ರಾಜ್ಯದ ಮುಖ್ಯಮಂತ್ರಿ ಪ್ರೇಮ್‌ಸಿಂಗ್ ತಮಾಂಗ್ ಈ ವಿಷಯವನ್ನು ಪ್ರಕಟಿಸಿದರು. ರಾಜ್ಯ ಎಲ್ಲಾ ವಯೋಮಾನದ ಜನರೂ ಓದಲು-ಬರೆಯಲು ಕಲಿತಿದ್ದಾರೆ. ಕೆಲವು ಹಿರಿಯರು ಇದೇ ಮೊದಲ ಬಾರಿಗೆ ಅಕ್ಷರ ಕಲಿತಿದ್ದಾರೆ. ಸಂಪೂರ್ಣ ಸಾಕ್ಷರ ರಾಜ್ಯ ಎನಿಸಿಕೊಳ್ಳಲು ಕಾರಣವಾಗಿದ್ದಕ್ಕೆ ರಾಜ್ಯದ ಜನತೆಗೆ ಧನ್ಯವಾದ ಮತ್ತು ಅಭಿನಂದನೆ ಎಂದು ಸಿಎಂ ಹೇಳಿದರು.

{ **ಯೋಗೇಂದ್ರ ಯಾದವ್** } ಅರ್ಜಿದಾರ

'ಎಸ್‌ಐಆರ್' ಪ್ರಕ್ರಿಯೆ ಕುರಿತ ಸುಪ್ರೀಂ ಕೋರ್ಟ್ ತೀರ್ಪು, ಮತದಾರರ ಪಟ್ಟಿ ಮೇಲೆ ಚುನಾವಣಾ ಆಯೋಗಕ್ಕೆ ವ್ಯಾಪಕ ಅಧಿಕಾರ ನೀಡಿದೆ. ಎಸ್‌ಐಆರ್ ಸಾಂವಿಧಾನಿಕತೆ ಪರಿಶೀಲನೆಯಿಂದ ಪೀಠ ದೂರ ಸರಿದಿದೆ. ಈ ಫಲಿತಾಂಶ ಪೂರ್ವನಿರ್ಧರಿತ. ಆಡಳಿತಾರೂಢ ಬಿಜೆಪಿ ಯಾರು ಮತ ಚಲಾಯಿಸಬಹುದು ಮತ್ತು ಯಾರು ಮತ ಚಲಾಯಿಸಬಾರದು ಎಂದು ನಿರ್ಧರಿಸುತ್ತದೆ.



15,000 ಕೋಟಿ ರು. 'ಎಎಂಸಿಎ' ಯೋಜನೆಗೆ 3 ಸಂಸ್ಥೆಗಳಿಗೆ ಆಹ್ವಾನ | ದೇಶದಲ್ಲೇ ಅತ್ಯಾಧುನಿಕ ಯುದ್ಧ ವಿಮಾನಗಳ ತಯಾರಿಕೆಗೆ ಮುಂದಡಿ | ಎಎಂಸಿಎ: ಅಮೆರಿಕ, ರಷ್ಯಾ, ಚೀನಾ ಸಾಲಿಗೆ ಸೇರಿಕೊಳ್ಳಲಿರುವ ಭಾರತ | ಟೆಂಡರ್ ಪ್ರಕ್ರಿಯೆಯಿಂದ ಎಚ್‌ಎಎಲ್ ದೂರ

5ನೇ ತಲೆಮಾರಿನ ಎಎಂಸಿಎ ಹೊಂದಲಿರುವ ಹಿಂದೂಸ್ಥಾನ್

ದೆಹಲಿ: ಅಮೆರಿಕದ ಬಳಿ ಇರುವ ಎಫ್-22 ಮತ್ತು ಎಫ್-35, ಚೀನಾದಲ್ಲಿನ ಜೆ-20 ಮತ್ತು ರಷ್ಯಾದಲ್ಲಿರುವ ಎಸ್‌ಯು-57 ರೀತಿಯ 5ನೇ ತಲೆಮಾರಿನ ರಹಸ್ಯ ಕಾರ್ಯಾಚರಣೆಗಳ 'ಮಧ್ಯಮ ಶ್ರೇಣಿ ಅತ್ಯಾಧುನಿಕ ಯುದ್ಧ ವಿಮಾನ'ಗಳಾಗಿವೆ. ಇದೇ ಬಗೆಯ 'ಅಡ್ವಾನ್ಸ್ಡ್ ಮೀಡಿಯಂ ಕಾಂಬಾಟ್ ಏರ್‌ಕ್ರಾಫ್ಟ್'(ಎಎಂಸಿಎ) ನಿರ್ಮಾಣಕ್ಕೆ ಭಾರತ ಸರಕಾರವೂ ಮುಂದಾಗಿದೆ.

ದೇಶದಲ್ಲಿಯೇ 'ಎಎಂಸಿಎ'ಗಳ ತಯಾರಿಕೆಗೆ ಮುಂದಡಿ ಇಟ್ಟಿರುವ ಭಾರತ ಸರಕಾರ, ದೇಶದ ರಕ್ಷಣಾ ಪರಿಕರಗಳ ಉದ್ಯಮದಲ್ಲಿ ಆತ್ಮನಿರ್ಭರತೆಗೆ ಒತ್ತು ನೀಡಿದೆ. ದೇಶದ ಮೊದಲ ಸ್ವದೇಶಿ 'ಎಎಂಸಿಎ' ತಯಾರಿಕೆಗಾಗಿ 15,000 ಕೋಟಿ ರು.ಗಳ ಯೋಜನೆಯ ರೂಪುರೇಷೆ ಸಿದ್ಧಪಡಿಸಿದೆ. ಅದರಲ್ಲಿ ಭಾಗಿಯಾಗಿ ಟೆಂಡರ್ ಸಲ್ಲಿಸುವಂತೆ ಖಾಸಗಿ ಸಂಸ್ಥೆಗಳಾದ 'ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್' ಹಾಗೂ 'ಎಲ್ ಅಂಡ್ ಟಿ-ಬಿಇಎಲ್ ಡೈನೊಮೆಟಿಕ್ ಕನ್ಸೋರ್ಟಿಯಂ' ಹಾಗೂ 'ಭಾರತ್ ಫೋರ್ಜ್-ಬಿಇಎಂಎಲ್ ಡೇಟಾ ಪ್ಯಾಟರ್ನ್ಸ್ ಕನ್ಸೋರ್ಟಿಯಂ' ಸಂಸ್ಥೆಗಳಿಗೆ ಈಗ ಆಹ್ವಾನ ನೀಡಲಾಗಿದೆ. ಮೊದಲಿಗೆ ಹಾರಾಡಬಲ್ಲ 5 ಎಎಂಸಿಎ ಮಾದರಿಗಳನ್ನೂ ಹಾಗೂ 1 ಸ್ಟ್ರಕ್ಚರಲ್ ಟೆಸ್ಟ್ ಮಾದರಿ ವಿಮಾನವನ್ನೂ ತಯಾರಿಸಿಕೊಡುವಂತೆ ರಕ್ಷಣಾ ಸಚಿವಾಲಯ ಸೂಚನೆ ನೀಡಿದ್ದು, ಈ ಸಂಬಂಧ 'ರಿಕ್ವೆಸ್ಟ್ ಫಾರ್ ಪ್ರೊಪೋಸಲ್'(ಆರ್‌ಎಫ್‌ಪಿ)ಗೆ ಆಹ್ವಾನ ನೀಡಿದೆ.

'ಏರೊನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿ'(ಎಡಿಎ) ಮತ್ತು 'ಡಿಫೆನ್ಸ್ ರೀಸರ್ಚ್ ಅಂಡ ಡೆವಲಪ್‌ಮೆಂಟ್ ಆರ್ಗನೈಸೇಷನ್'(ಡಿಆರ್‌ಡಿಒ)ಗೆ ಸಂಬಂಧಿಸಿದ ಈ ಅತ್ಯಾಧುನಿಕ ಯುದ್ಧ ವಿಮಾನಗಳ ತಯಾರಿಕೆ ಯೋಜನೆಯ ಭಾಗವಾಗಲು ಆಸಕ್ತಿ ತೋರಿ 7 ಖಾಸಗಿ ಸಂಸ್ಥೆಗಳು 2025ರ ಮಧ್ಯ ಭಾಗದಲ್ಲಿ 'ಬಿಡ್'ಗಳನ್ನು ಕಳುಹಿಸಿದ್ದವು. ಫೆಬ್ರವರಿಯಲ್ಲಿ ತಾಂತ್ರಿಕ ವಿಭಾಗದ ಮೌಲ್ಯಮಾಪನ ಪ್ರಕ್ರಿಯೆ ನಂತರ ಐದರಲ್ಲಿ ಮೂರು ಸಂಸ್ಥೆಗಳನ್ನು ಅಂತಿಮ ಸುತ್ತಿಗೆ ಆಯ್ಕೆ ಮಾಡಲಾಗಿದೆ. ಮತ್ತೆ ಸವಿವರವಾದ ಬಿಡ್‌ಗಳನ್ನು ಸಲ್ಲಿಸಲು ಸೂಚಿಸಿ ಮೂರೂ ಖಾಸಗಿ ಸಂಸ್ಥೆಗಳಿಗೆ 2-3 ತಿಂಗಳ ಕಾಲಾವಕಾಶ ನೀಡಲಾಗಿದೆ. ಎಲ್-1 ಆಯ್ಕೆ ಮತ್ತು ಒಪ್ಪಂದವನ್ನು 2027ರ ಮಾರ್ಚ್‌ಗೆ ಮುನ್ನ ಪೂರ್ಣಗೊಳಿಸಬೇಕಿದೆ. 'ಎಎಂಸಿಎ' ಯುದ್ಧ ವಿಮಾನದ ಮೂಲಮಾದರಿಯ ತಯಾರಿಕೆ ಮತ್ತು ಮೊದಲ ಹಾರಾಟವನ್ನು 2028-32ರ ಅವಧಿಯಲ್ಲಿ ನಿರೀಕ್ಷಿಸಬಹುದಾಗಿದೆ. 2035ರಲ್ಲಿ ಎಎಂಸಿಎ ಯುದ್ಧ ವಿಮಾನಗಳ ಸರಣಿಯೋಪಾದಿ ತಯಾರಿಕೆ ನಿರೀಕ್ಷಿತವಾಗಿದೆ.

ಇದೆಲ್ಲವೂ ಅಂದುಕೊಂಡಂತೆ ಕೈಗೂಡಿದಲ್ಲಿ ಭಾರತ 5ನೇ ತಲೆಮಾರಿನ ಯುದ್ಧವಿಮಾನಗಳನ್ನು ಹೊಂದಿದ ದೇಶಗಳ ಪಟ್ಟಿಗೆ ಸೇರುತ್ತದೆ. ಪ್ರಸ್ತುತ ಅಮೆರಿಕ, ಚೀನಾ ಮತ್ತು ರಷ್ಯಾ ಮಾತ್ರ ಇಂಥ ಅತ್ಯಾಧುನಿಕ ಯುದ್ಧ ವಿಮಾನಗಳನ್ನು ತಯಾರಿಸುತ್ತಿವೆ.

ಶಸ್ತ್ರಾಸ್ತ್ರಗಳನ್ನು ಒಡಲೊಳಗೂ ಇಟ್ಟುಕೊಂಡಿರುವ ಅಮೆರಿಕದ ಎಫ್-35 ಯುದ್ಧ ವಿಮಾನ

ಭಾರತ ಸಿದ್ಧಪಡಿಸಲಿರುವ 'ಎಎಂಸಿಎ' ಮಾದರಿ ಚಿತ್ರ

ಚೀನಾದ ಎಎಂಸಿಎ ಮಾದರಿ ಜೆ-20

ಒಳ-ಹೊರಗೂ ಶಸ್ತ್ರಾಸ್ತ್ರ ಸಂಗ್ರಹ

ಅಮೆರಿಕದ ಎಫ್-22, ಎಫ್-35 ಮತ್ತು ರಷ್ಯಾದ ಎಸ್‌ಯು-57ನಂತಹ ಸುಧಾರಿತ ಯುದ್ಧ ವಿಮಾನಗಳು 55 ಸಾವಿರ ಅಡಿಗಳಷ್ಟು ಎತ್ತರದಲ್ಲಿಯೂ ಕಾರ್ಯಾಚರಣೆ ನಡೆಸಬಲ್ಲವಾಗಿವೆ. ಒಬ್ಬರೇ ಪೈಲಟ್‌ಗೆ ಆಸನ ವ್ಯವಸ್ಥೆ ಮಿತವಾಗಿದ್ದರೂ ಎಂಜಿನ್‌ಗಳು ಮಾತ್ರ 2 ಇರುತ್ತವೆ. ಅಲ್ಲದೇ 6,500 ಕೆಜಿ ಇಂಧನ ತುಂಬಿಕೊಳ್ಳುವಷ್ಟು ಸಾಮರ್ಥ್ಯವಿದ್ದು, ದೀರ್ಘ ಕಾಲದ ಹಾರಾಟಕ್ಕೆ ಅವಕಾಶವಿರಲಿದೆ. ಸಾಮಾನ್ಯವಾಗಿ ಯುದ್ಧ ವಿಮಾನಗಳಲ್ಲಿ ಕ್ಷಿಪಣಿ, ಬಾಂಬ್‌ಗಳನ್ನು ವಿಮಾನದ ರೆಕ್ಕೆಗಳ ತಳಭಾಗದಲ್ಲಿ ಜೋಡಿಸಲಾಗಿರುತ್ತದೆ. ಆದರೆ ಈ 'ಎಎಂಸಿಎ'ಗಳು 'ಇಂಟರ್ನಲ್ ಅಮ್ಯುನಿಷನ್ ಬೇ'ಗಳನ್ನು ಹೊಂದಿರುತ್ತವೆ. ಇವು ವಿಮಾನದ ಹೊರಗಷ್ಟೇ ಅಲ್ಲದೇ, ವಿಮಾನದ ಒಳಗೂ ಪ್ರತ್ಯೇಕ ವಿಭಾಗದಲ್ಲಿ ಒಟ್ಟು 1,500 ಕೆಜಿ ತೂಕದ ಅಣ್ವಸ್ತ್ರಗಳನ್ನು ಇಟ್ಟುಕೊಂಡು ಸಾಗಬಲ್ಲವಾಗಿವೆ. ವಿಮಾನದ ಹೊರಭಾಗದಲ್ಲಿ 5,500 ಕೆಜಿಗೂ ಅಧಿಕ ಭಾರದ ಕ್ಷಿಪಣಿ ಮತ್ತು ಬಾಂಬ್‌ಗಳನ್ನು ಹೊತ್ತು ಸಾಗಬಲ್ಲವು. ಇದೇ ಮಾದರಿ ಎಎಂಸಿಎಗಳನ್ನು ಹೊಂದುವುದು ಭಾರತದ ಇಚ್ಛೆಯಾಗಿದೆ.

ಎಎಂಸಿಎ ಪ್ರಕ್ರಿಯೆ: 'ಎಚ್‌ಎಎಲ್'ಗಿಲ್ಲ ಅವಕಾಶ

ಎಎಂಸಿಎ ವಿಮಾನಗಳ ತಯಾರಿಕೆಯಂಥ ದೊಡ್ಡ ಅವಕಾಶವನ್ನು ಪಡೆಯಲಿರುವ ಖಾಸಗಿ ಕಂಪನಿ, ಆಂಧ್ರಪ್ರದೇಶದ ಪುಟ್ಟಪರ್ತಿಯಲ್ಲಿ 650 ಎಕರೆ ವಿಸ್ತಾರದಲ್ಲಿ ಹೊಸದಾಗಿ ನಿರ್ಮಾಣಗೊಂಡಿರುವ ಗ್ರೀನ್ ಫೀಲ್ಡ್ ಸೌಲಭ್ಯದಲ್ಲಿ 'ಎಎಂಸಿಎ' 5 ಮೂಲ ಮಾದರಿಗಳನ್ನು ತಯಾರಿಸಿಕೊಡಬೇಕಿದೆ. ಆದರೆ, ಅಚ್ಚರಿ ಎಂಬಂತೆ, ದೇಶದ ರಕ್ಷಣಾ ಕ್ಷೇತ್ರದ ಅತಿ ಪ್ರಮುಖ ಯುದ್ಧ ವಿಮಾನ ತಯಾರಿಕೆ ಯೋಜನೆಯಿಂದ ಸರಕಾರಿ ಸ್ವಾಮ್ಯಕ್ಕೆ ಒಳಪಟ್ಟ 'ಹಿಂದೂಸ್ತಾನ್ ಏರೋನಾಟಿಕ್ಸ್ ಲಿ.'(ಎಚ್ ಎಎಲ್) ಸಂಸ್ಥೆಯನ್ನೇ ಹೊರಗಿಡಲಾಗಿದೆ. ಸರಕಾರದ ಇಂಥ ನಡೆ ಇದೇ ಮೊದಲು. ಈ ನಡೆ ಭಾರೀ ಚರ್ಚೆಗೆ ಅವಕಾಶ ಮಾಡಿಕೊಟ್ಟಿದೆ. ಎಎಂಸಿಎ ವಿಮಾನ ನಿರ್ಮಾಣದ ಹೊಣೆಯನ್ನು ಖಾಸಗಿ ವಲಯಕ್ಕೆ ವಹಿಸಿದಲ್ಲಿ ವೇಗವಾಗಿ ಪೂರ್ಣಗೊಳ್ಳುವ ಸಾಧ್ಯತೆ ಇದೆ. ಇದರಿಂದ ಅತ್ಯಾಧುನಿಕ ಏರೋಸ್ಪೇಸ್ ತಂತ್ರಜ್ಞಾನ ವಿಭಾಗದಲ್ಲಿ ಭಾರತದ ಸ್ವಾವಲಂಬನೆಗೆ ಆದ್ಯತೆ ನೀಡುತ್ತದೆ ಎಂಬುದೇ ಕೇಂದ್ರ ಸರಕಾರದ ಈ ನಡೆಗೆ ಕಾರಣವಾಗಿದೆ ಎಂದು ವಿಶ್ಲೇಷಿಸಲಾಗಿದೆ.

ರಷ್ಯಾದ ವಿಶಿಷ್ಟ ಎಸ್‌ಯು-35 ಎಎಂಸಿಎ

ಬಾಂಗ್ಲಾ ಗಡಿಯಲ್ಲಿ ಕಾದು ಕುಳಿತ ಅಕ್ರಮ ವಲಸಿಗರು

ಕೋಲ್ಕತ್ತ: ಅಕ್ರಮವಾಗಿ ನುಸುಳಿಕೊಂಡು ಬಂದು ಪಶ್ಚಿಮ ಬಂಗಾಳದಲ್ಲಿ ನೆಲೆ ಕಂಡುಕೊಂಡಿದದ ಬಾಂಗ್ಲಾದೇಶದ ಮುಸ್ಲಿಮರು ಮತ್ತು ಮ್ಯಾನ್ಮಾರ್‌ನಿಂದ ನುಸುಳಿಕೊಂಡ ಬಂದಿದ್ದ ರೊಹಿಂಗ್ಯಾ ಮುಸ್ಲಿಮರು ದೊಡ್ಡ ಸಂಖ್ಯೆಯಲ್ಲಿ ಭಾರತ-ಬಾಂಗ್ಲಾದೇಶ ಗಡಿಯತ್ತ ಧಾವಿಸುತ್ತಿದ್ದಾರೆ. ಪಶ್ಚಿಮ ಬಂಗಾಳ ಸರಕಾರ 'ಡಿಟೆಕ್ಟ್, ಡಿಲಿಟ್, ಡಿಪೋರ್ಟ್'(ಅಕ್ರಮ ವಲಸಿಗರ ಪತ್ತೆ, ದಾಖಲೆಗಳಿಂದ ಹೆಸರು ರದ್ದು, ಬಳಿಕ ಗಡಿಪಾರು) ಕ್ರಮ ಕೈಗೊಂಡಿದ್ದರೆ, ಕೇಂದ್ರ ಸರಕಾರ, ಅಕ್ರಮ ವಲಸಿಗರನ್ನು ಬಂಧಿಸುವಂತೆ ಆದೇಶಿಸಿದೆ. ಈ ಸುದ್ದಿ ತಿಳಿದ ಬಳಿಕ ದೇಶದ ಗಡಿ ಭಾಗದತ್ತ ದಾವಿಸುವ ಬಾಂಗ್ಲಾದೇಶಿ ಅಕ್ರಮ ವಲಸಿಗರ ಸಂಖ್ಯೆ ಹೆಚ್ಚಿದೆ. ಆದರೆ, ಬಾಂಗ್ಲಾದೇಶದ ಗಡಿ ಭದ್ರತಾ ಪಡೆ ಇವರನ್ನು ತನ್ನ ದೇಶದೊಳಕ್ಕೆ ಬಿಟ್ಟುಕೊಳ್ಳಲು ಸಿದ್ಧವಿರದ ಕಾರಣ ಹೆಚ್ಚಿನವರು ಗಡಿ ಸಮೀಪದ ಹಕೀಂಪುರ ಭಾಗದಲ್ಲಿ ಅಲ್ಲಲ್ಲಿ ತಂಗಿದ್ದಾರೆ. ಭಾರತದ ಗಡಿ ಭದ್ರತಾ ಪಡೆ ಅಧಿಕಾರಿಗಳು, ಈ ಸಂಬಂಧ ಬಾಂಗ್ಲಾದೇಶದ ಗಡಿಭದ್ರತಾ ಪಡೆ ಅಧಿಕಾರಿಗಳ ಜತೆ ಹಲವು ಸುತ್ತಿನ ಮಾತುಕತೆ ನಡೆಸುತ್ತಿದ್ದಾರೆ ಎಂದು ವರದಿಯಾಗಿದೆ.

ರಾಹುಲ್‌ಗೀಗ ತೃಪ್ತಿ ಆಗಿರುತ್ತದೆ: ಇ.ಡಿ ದಾಳಿ ಬಗ್ಗೆ ಪಿಣರಾಯಿ ಕಿಡಿ

ತಿರುವನಂತಪುರಂ: ನಮ್ಮ ನಿವಾಸ ಮತ್ತು ಕಚೇರಿಗಳ ಮೇಲೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ದಾಳಿ ಮಾಡಿರುವುದರಿಂದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಈ ದಾಳಿಯಿಂದ ಮಾನಸಿಕ ತೃಪ್ತಿ ಸಿಕ್ಕಿರಬಹುದು ಎಂದು ಕೇರಳ ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅಸಮಾಧಾನ ಹೊರಹಾಕಿದ್ದಾರೆ.

ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ವಿಜಯನ್, 'ಕೇರಳ ಸಿಎಂ ಆಗಿದ್ದಾಗ ನನ್ನ ನಿವಾಸದಲ್ಲೇಕೆ ಶೋಧ ನಡೆದಿಲ್ಲ, ವಿಜಯನ್‌ರನ್ನು ಏಕೆ ಈವರೆಗೂ ಬಂಧಿಸಿಲ್ಲ ಎಂದು ರಾಹುಲ್ ಗಾಂಧಿ ಪದೇ ಪದೇ ಪ್ರಶ್ನಿಸುತ್ತಿದ್ದರು. ಈಗ ನನ್ನ ಮತ್ತು ಮಗಳ ಮನೆ-ಕಚೇರಿಗಳಲ್ಲಿ ಇ.ಡಿ ತಂಡ ಶೋಧ ನಡೆಸಿದೆ. ಹಾಗಾಗಿ ರಾಹುಲ್‌ಗೆ ಈಗ ತೃಪ್ತಿಯಾಗಿರಬಹುದು ಎಂದು ವಿಜಯನ್ ವ್ಯಂಗ್ಯವಾಗಿ ಪ್ರತಿಕ್ರಿಯಿಸಿದ್ದಾರೆ. ಅಕ್ರಮ ಹಣ ವರ್ಗಾವಣೆ ಪ್ರಕರಣವೊಂದರಲ್ಲಿ ಬೇಕರಿ ಜಂಕ್ಷನ್‌ನಲ್ಲಿರುವ ಪಿಣರಾಯಿ ವಿಜಯನ್ ಅವರ ಬಾಡಿಗೆ ಮನೆ ಮತ್ತು ಪುತ್ರಿ ಟಿ.ವೀಣಾ ಮನೆ -ಕಚೇರಿಗಳಲ್ಲಿ ಬುಧವಾರ ಹಲವು ಗಂಟೆಗಳ ಇ.ಡಿ ತಂಡ ಶೋಧ ನಡೆಸಿತ್ತು. ಈ ಸಂದರ್ಭ ವಿಜಯನ್ ಅವರ ಬೆಂಬಲಿಗರು ಇ.ಡಿ ಅಧಿಕಾರಿಗಳ ವಾಹನಗಳ ಮೇಲೆ ದಾಳಿ ಮಾಡಿದ್ದರು. ಪ್ರತಿಪಕ್ಷಗಳ ನಾಯಕರ ವಿರುದ್ಧ ಕೇಂದ್ರ ತನಿಖಾ ಸಂಸ್ಥೆಗಳನ್ನು ಬಳಸವುದು ಹೆಚ್ಚಿದೆ. ನನ್ನ ವಿರುದ್ಧದ ಇ.ಡಿ. ಕ್ರಮವೂ ಅದೇ ತಂತ್ರದ ಭಾಗ. ಕಾಂಗ್ರೆಸ್ ಮೌನ ವಹಿಸಿದೆ ಎಂದು ಅಸಮಾಧಾನ ಹೊರಹಾಕಿದರು.

ಬಕ್ರೀದ್‌ಗೆ ಬಲಿಯಾಗುವುದು ಕೊನೆ ಕ್ಷಣ ತಪ್ಪಿತು

ಬಾಂಗ್ಲಾದೇಶ ಮೃಗಾಲಯದ ವಶಕ್ಕೆ ಟ್ರಂಪ್ ಹೋಲಿಕೆ ಎಮ್ಮೆ

ಢಾಕಾ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಹೋಲುವಂತಹ ಮುಖಚಹರೆ, ತಲೆಗೂದಲು ವಿನ್ಯಾಸ, ಕಣ್ಣುಗಳಿರುವ ಎಮ್ಮೆಯ ಫೋಟೊ-ವೀಡಿಯೊ ಜಾಲತಾಣದಲ್ಲಿ ಭಾರೀ ವೈರಲ್ ಆಗಿತ್ತು. ಈ ಹೋಲಿಕೆ ಕಾರಣಕ್ಕೆ ಎಮ್ಮೆಯ ಮಾಲೀಕ ಜಿಯಾ ಉದ್ದೀನ್ ಅದಕ್ಕೆ 'ಟ್ರಂಪ್' ಎಂದೇ ಹೆಸರಿಟ್ಟಿದ್ದರು. ಆದರೆ, ಈ ಎಮ್ಮೆ ಗುಣದಲ್ಲಿ ಟ್ರಂಪ್‌ರನ್ನು ಹೋಲುವುದಿಲ್ಲ. ಅಲ್ಬಿನೊ ಥಳಿಯ ಎಮ್ಮೆ ಬಹಳ ಶಾಂತ ಮತ್ತು ಸೌಮ್ಯ ಸ್ವಭಾವದ್ದಾಗಿದೆ ಎನ್ನಲಾಗಿದೆ.



ಜೋಳ, ಸೋಯಾಬಿನ್ ಮತ್ತು ಹೊಟ್ಟಿನ ಪೌಷ್ಟಿಕ ಆಹಾರ ಸೇವಿಸುವ ಕಾರಣಕ್ಕೆ ಎಮ್ಮೆ ದಷ್ಟಪುಷ್ಟವಾಗಿದೆ. 700 ಕೆ.ಜಿ ತೂಗುವ ಎಮ್ಮೆಯು 3 ಲಕ್ಷ ರು.ಗೆ ಮಾರಾಟವಾಗಿತ್ತು. 4 ವರ್ಷದ ಪ್ರಾಯದ ಈ ಎಮ್ಮೆಯನ್ನು ಬಕ್ರೀದ್ ಬಲಿ ಕೊಡಲು ಮತ್ತೊಮ್ಮೆ ಮುಸ್ಲಿಮ್ ಖರೀದಿಸಿದ್ದರು. ಆದರೆ, ಕೊನೆ ಕ್ಷಣದಲ್ಲಿ ಎಮ್ಮೆ ಬಲಿಯಾಗುವುದು ತಪ್ಪಿದೆ. ಎಮ್ಮೆಯನ್ನು ರಕ್ಷಿಸಿ ಬಾಂಗ್ಲಾದೇಶದ ರಾಷ್ಟ್ರೀಯ ಮೃಗಾಲಯಕ್ಕೆ ಹಸ್ತಾಂತರಿಸಲಾಗಿದೆ. ಸರಕಾರದ ಅಧಿಕಾರಿಗಳು ಮಧ್ಯಪ್ರವೇಶಿಸಿ ಎಮ್ಮೆಯನ್ನು ಢಾಕಾದಲ್ಲಿನ ರಾಷ್ಟ್ರೀಯ ಮೃಗಾಲಯಕ್ಕೆ ಸ್ಥಳಾಂತರಿಸಿದರು. ಅಲ್ಲಿ ಟ್ರಂಪ್ ಹೋಲಿಕೆ ಎಮ್ಮೆಯನ್ನು ಸಾರ್ವಜನಿಕ ಪ್ರದರ್ಶನಕ್ಕೆ ಇಡಲಾಗುತ್ತದೆ ಎಂದು ಹೇಳಿದ್ದಾರೆ.

25,530 ಕೋಟಿ ರು. ಯೋಜನೆಗೆ ಕೇಂದ್ರ ಸಂಪುಟ ಸಮಿತಿ ಸಮ್ಮತಿ

ಸಾರ್ಥಕ್-ಪಿಡಿಎಸ್ 5 ವರ್ಷ ವಿಸ್ತರಣೆ

ದೆಹಲಿ: ದೇಶಾದ್ಯಂತದ ಉಚಿತ ಪಡಿತರ ವಿತರಣೆ ವ್ಯವಸ್ಥೆಯಲ್ಲಿ ಸುಧಾರಣೆ ತರುವುದಕ್ಕಾಗಿ ತಂತ್ರಜ್ಞಾನದ ಅಳವಡಿಕೆ ಮಾಡಿಕೊಂಡು ಆಹಾರ ಧಾನ್ಯ ಕಳವಾಗುವುದನ್ನು ತಡೆಯುವ ಉದ್ದೇಶದಿಂದಲೇ ಕೇಂದ್ರ ಸರಕಾರ 'ಸಾರ್ಥಕ್-ಪಿಡಿಎಸ್' ಯೋಜನೆ ಜಾರಿಗೆ ತಂದಿದ್ದು, ಅದನ್ನು ಮತ್ತೂ 5 ವರ್ಷಗಳ ಕಾಲ ಮುಂದುವರಿಸಲಾಗುವುದು ಎಂಬ ಮಹತ್ವದ ನಿರ್ಧಾರವನ್ನು ಕೇಂದ್ರದ ಸಚಿವ ಸಂಪುಟ ತೆಗೆದುಕೊಂಡಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಬುಧವಾರ ಆಯೋಜಿತವಾಗಿದ್ದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯ ಸಭೆಯಲ್ಲಿ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ. ಇದರಿಂದಾಗಿ 25,530 ಕೋಟಿ ರು.ಗಳ ಪಡಿತರ ವಿತರಣೆ ವ್ಯವಸ್ಥೆಯ ಯೋಜನೆ 2031ರ ಮಾರ್ಚ್‌ವರೆಗೂ ಜಾರಿಯಲ್ಲಿರಲಿದೆ ಎಂದು ಕೇಂದ್ರದ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದ್ದಾರೆ. ಅದಲ್ಲದೇ, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ ಆಹಾರ ಧಾನ್ಯಗಳ ಸಾಗಣೆ-ನಿರ್ವಹಣೆಗಾಗಿ ಕೇಂದ್ರ ಸರಕಾರದಿಂದ ನೀಡಲಾಗುತ್ತಿರುವ ಆರ್ಥಿಕ ನೆರವಿನ ನಿಯಮಗಳ ಪರಿಷ್ಕರಣೆಗೆ ಮತ್ತು ನ್ಯಾಯಬೆಲೆ ಅಂಗಡಿಗಳ ಮಾಲೀಕರಿಗೆ ನೀಡುತ್ತಿರುವ ಗೌರವ ಧನದ ಮೊತ್ತವನ್ನೂ ಹೆಚ್ಚಿಸಲು ಸಂಪುಟ ಸಮಿತಿ ಸಭೆ ಅನುಮೋದನೆ ನೀಡಿದೆ. ಇದರಿಂದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮೇಲಿನ ಆರ್ಥಿಕ ಹೊರೆ ತಗ್ಗಲಿದೆ. ನ್ಯಾಯಬೆಲೆ ಅಂಗಡಿ ಮಾಲೀಕರಿಗೆ ಹೆಚ್ಚಿನ ಹಣ ಸಿಗಲಿದೆ ಎಂದು ಸಚಿವರು

ಕಳವು-ದುರ್ಬಳಕೆ ತಡೆಗಟ್ಟಲು 'ಎ.ಐ'

ಸುಧಾರಿತ ಯೋಜನೆಯಲ್ಲಿ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ (ಎ.ಐ-ಕೃತಕ ಬುದ್ಧಿಮತ್ತೆ) ಅಳವಡಿಸಿಕೊಳ್ಳಲಾಗುತ್ತದೆ. ಇದರಿಂದ 'ನಿರ್ಮಲ್'(ರಿಯಲ್ ಟೈಮ್ ಬೆನಿಫಿಷಿಯರಿ ಡೇಟಾಬೇಸ್-ಫಲಾನುಭವಿಯ ಗುರುತು-ಮಾಹಿತಿ ತಕ್ಷಣವೇ ಲಭ್ಯ), 'ಆಶಾ'(ಎಐ ಆಧರಿಸಿ ಗ್ರಾಹಕರ ದೂರು ಇತ್ಯರ್ಥ ವ್ಯವಸ್ಥೆ) ಮತ್ತು 'ಸಕ್ಷಮ್'(ಚಾಣಾಕ್ಷ ಪೂರೈಕೆ ವ್ಯವಸ್ಥೆ ಮತ್ತು ಧಾನ್ಯ ಸಾಗಣೆ ವಾಹನಗಳು ಕಾಣೆಯಾಗದಂತೆ ನಿಗಾ ಇಡುವುದು) ಜಾರಿಯಲ್ಲಿರುತ್ತವೆ ಎಂದು ಸಚಿವರು ವಿವರಿಸಿದರು.

ಪ್ರಧಾನಿ ನರೇಂದ್ರ ಮೋದಿ ಭೇಟಿ ವೇಳೆ ಸಿಎಂ ವಿಜಯ್ ಮನವಿ

ಮೇಕೆದಾಟು ಯೋಜನೆಗೆ ಕೇಂದ್ರ ಅವಕಾಶ ನೀಡದಿರಲಿ

ದೆಹಲಿ: ಮಾಸಾರಂಭದಲ್ಲಿ ತಮಿಳುನಾಡು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ದೆಹಲಿಗೆ ಮೊದಲ ಅಧಿಕೃತ ಭೇಟಿ ನೀಡಿರುವ ಸಿ.ಜೋಸೆಫ್ ವಿಜಯ್, ಗುರುವಾರ ಬೆಳಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ 20 ನಿಮಿಷ ಮಾತುಕತೆ ನಡೆಸಿದರು. ರಾಜ್ಯಕ್ಕೆ ಸಂಬಂಧಿಸಿದ ಅಭಿವೃದ್ಧಿ ವಿಷಯಗಳ ಪಟ್ಟಿ ಉಲ್ಲೇಖಿಸಿ, ಪರಿಗಣಿಸುವಂತೆ ಮನವಿ ಮಾಡಿದರು.

ಮೇಕೆದಾಟು ವಿವಾದ ಪ್ರಸ್ತಾಪಿಸಿ, ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳ ನಡುವಿನ ಗಡಿ ಸಮೀಪವೇ ಹೊಸದಾಗಿ ಅಣೆಕಟ್ಟು ನಿರ್ಮಿಸಲು ಕರ್ನಾಟಕ ಸರಕಾರ ಏಕಪಕ್ಷೀಯ ನಿರ್ಧಾರ ಕೈಗೊಂಡಿದೆ. ಇದು ಕಾವೇರಿ ಜಲ ನ್ಯಾಯಮಂಡಳಿ ಮತ್ತು ಸುಪ್ರೀಂ ಕೋರ್ಟ್ ತೀರ್ಪಿಗೆ ವಿರುದ್ಧವಾಗಿದೆ. ಇಂಥ ಯೋಜನೆಗೆ ಕೇಂದ್ರ ಸರಕಾರದ ಅನುಮತಿ ಅಗತ್ಯವಿದೆ. ಹಾಗಾಗಿ, ಅಣೆಕಟ್ಟು ನಿರ್ಮಿಸಲು ಕರ್ನಾಟಕಕ್ಕೆ ಅವಕಾಶ ನೀಡದಂತೆ ಜಲಶಕ್ತಿ ಸಚಿವಾಲಯಕ್ಕೆ ಸೂಚಿಸುವಂತೆ ಸಿಎಂ ವಿಜಯ್, ಪ್ರಧಾನಿ ಮೋದಿ ಅವರಲ್ಲಿ ಮನವಿ ಮಾಡಿದರು. ಪ್ರಧಾನಿ ಇತ್ತೀಚಿನ ವಿದೇಶ ಪ್ರವಾಸದ ವೇಳೆ, ಚೋಳರ ಕಾಲದ ಪ್ರಾಚೀನ ತಾಮ್ರಫಲಕಗಳನ್ನು ದೇಶಕ್ಕೆ ಮರಳಿ ತಂದಿದ್ದಕ್ಕೆ ವಿಜಯ್ ಧನ್ಯವಾದ ಅರ್ಪಿಸಿದರು. ರಾಜ್ಯದಲ್ಲಿನ ಸರಕಾರಿ ಕಾರ್ಯಕ್ರಮಗಳ ಆರಂಭದಲ್ಲಿ ತಮಿಳು ನಾಡಗೀತೆ 'ಥಾಯ ವಾಳ್ತು'ವನ್ನೇ ಮೊದಲಿಗೆ ನುಡಿಸಲು ಅವಕಾಶ ನೀಡಬೇಕು ಎಂದು ವಿಜಯ್ ವಿನಂತಿಸಿದರು.

ಪ್ರಸ್ತುತ ಬಂಗಾಳಿ ಕವಿ ಬಂಕಿಮ್ ಚಂದ್ರರ 'ವಂದೇ ಮಾತರಂ', ಬಳಿಕ ರಾಷ್ಟ್ರಗೀತೆ, ಕೊನೆಗೆ ನಾಡಗೀತೆ ನುಡಿಸಲಾಗುತ್ತಿದೆ. 'ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ'(ಡಿಆರ್‌ಡಿಒ)ಯ ವಾಯುಗಾಮಿ ವ್ಯವಸ್ಥೆಗಳ ಕೇಂದ್ರವನ್ನು ದಕ್ಷಿಣ ರಾಜ್ಯದಲ್ಲಿ ಸ್ಥಾಪಿಸಲು ಕ್ರಮ ಕೈಗೊಳ್ಳುವಂತೆ ಪ್ರಧಾನಿ ಮೋದಿ ಅವರಿಗೆ ಮನವಿ ಮಾಡಿದರು.

ದೆಹಲಿಯಲ್ಲಿನ ಪ್ರಧಾನಿ ನಿವಾಸದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ತಮಿಳುನಾಡು ಸಿಎಂ ಜೋಸೆಫ್ ವಿಜಯ್ ಮೊದಲ ಬಾರಿಗೆ ಗುರುವಾರ ಭೇಟಿ ಮಾಡಿ ಪುಷ್ಪಗುಚ್ಛ ಅರ್ಪಿಸಿದರು.

'ಲಕ್ಷ್ಮಿ ಭಂಡಾರ್' 30 ಲಕ್ಷ ಜನ ಅನರ್ಹರು

ಕೋಲ್ಕತ್ತ: ಪಶ್ಚಿಮ ಬಂಗಾಳ ರಾಜ್ಯದಲ್ಲಿ ಹಿಂದಿನ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷದ ಸರಕಾರ ಜಾರಿಗೊಳಿಸಿದ್ದ 'ಲಕ್ಷ್ಮಿ ಭಂಡಾರ್' ಯೋಜನೆಯಲ್ಲಿ 30 ಲಕ್ಷ ಫಲಾನುಭವಿಗಳು ಅನರ್ಹರು ಎಂಬುದು ದಾಖಲೆಗಳ ಪರಿಶೀಲನೆ ವೇಳೆ ಕಂಡುಬಂದಿದೆ. ಈ 30 ಲಕ್ಷ ಫಲಾನುಭವಿಗಳು ಭಾರತೀಯರೇ ಅಲ್ಲ. ಅಲ್ಲದೇ ಇವರೆಲ್ಲರ ಹೆಸರೂ ರಾಜ್ಯದ ಮತದಾರರ ಪಟ್ಟಿಯಿಂದ ಹೊರ ಹಾಕಲ್ಪಟ್ಟಿದೆ ಎಂದು ಮುಖ್ಯಮಂತ್ರಿ ಸುವೇಂದು ಅಧಿಕಾರಿ ಗುರುವಾರ ಹೇಳಿದ್ದಾರೆ.

ಸರಕಾರದ ಸಚಿವಾಲಯ ಭವನ 'ನಬನ್ನಾ'ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿಎಂ, ನಿಯಮಗಳ ಪ್ರಕಾರ ಯೋಜನೆಗೆ ಅರ್ಹರಲ್ಲದಿದ್ದರೂ ಈ 30 ಲಕ್ಷ ಫಲಾನುಭವಿಗಳು ಈವರೆಗೂ ಸೌಲಭ್ಯ ಪಡೆದಿದ್ದಾರೆ. ಸರಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡುತ್ತಿದ್ದ ಈ ಯೋಜನೆಯನ್ನು ಸ್ಥಗಿತಗೊಳಿಸಿ, ಬಿಜೆಪಿ ಪ್ರಸ್ತಾಪಿಸಿದ್ದ 'ಅನ್ನಪೂರ್ಣ ಭಂಡಾರ್' ಯೋಜನೆ ಜಾರಿಗೊಳಿಸಲಾಗಿದ್ದು, ಅರ್ಹ ಮಹಿಳೆಯರಿಗೆ ತಿಂಗಳಿಗೆ 3 ಸಾವಿರ ರು. ನೀಡಲಾಗುತ್ತದೆ. ಪೌರತ್ವ ದಾಖಲೆ ಉಳ್ಳವರು ಮಾತ್ರವೇ ಹೊಸ ಯೋಜನೆಯ ಫಲಾನುಭವಿಗಳಾಗಲು ಅರ್ಹರು ಎಂದು ಸ್ಪಷ್ಟಪಡಿಸಿದ್ದಾರೆ. ಲಕ್ಷ್ಮಿ ಭಂಡಾರ್ ಯೋಜನೆಯಲ್ಲಿ ಸಾಮಾನ್ಯ ವರ್ಗದ ಮಹಿಳೆಗೆ ಮಾಸಿಕ 1,500 ರು. ಹಾಗೂ ಎಸ್‌ಸಿ/ಎಸ್‌ಟಿ ಮಹಿಳೆಗೆ 1700 ರು. ನೀಡಲಾಗುತ್ತಿತ್ತು.

ತ್ವಿಷಾ ಅತ್ತೆ, ನಿವೃತ್ತ ನ್ಯಾಯಾಧೀಶೆ ಗಿರಿಬಾಲಾರನ್ನು ಬಂಧಿಸಿದ ಸಿಬಿಐ

ಭೋಪಾಲ್: ಮಧ್ಯಪ್ರದೇಶದ ಭೋಪಾಲ್‌ನಲ್ಲಿನ ರೂಪದರ್ಶಿ-ನಟಿ ತ್ವಿಶಾ ಶರ್ಮಾ ನಿಗೂಢ ಸಾವಿನ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿರುವ ನಿವೃತ್ತ ಜಿಲ್ಲಾ ನ್ಯಾಯಾಧೀಶೆ, ತ್ವಿಶಾ ಅತ್ತೆಗೆ ವಿಚಾರಣಾ ಸೆಷನ್ಸ್ ನ್ಯಾಯಾಲಯ ನೀಡಿದ್ದ ನಿರೀಕ್ಷಣಾ ಜಾಮೀನನ್ನು ಮಧ್ಯಪ್ರದೇಶ ಹೈಕೋರ್ಟ್ ಗುರುವಾರ ರದ್ದುಗೊಳಿಸಿದೆ.

ಹೈಕೋರ್ಟ್ ಜಾಮೀನು ರದ್ದುಗೊಳಿಸಿದ ಆದೇಶ ಹೊರಬಿದ್ದ ಬೆನ್ನಲ್ಲೇ ಸಿಬಿಐ ಅಧಿಕಾರಿಗಳ ತಂಡ ನಿವೃತ್ತ ಜಿಲ್ಲಾ ನ್ಯಾಯಾಧೀಶೆ ಗಿರಿಬಾಲಾ ಅವರನ್ನು ಬಂಧಿಸಿದೆ.

ಮೃತದೇಹದ ಮೇಲೆ ಹಲವು ಗಾಯದ ಗುರುತುಗಳಿರುವುದು ಕಂಡುಬಂದಿದೆ ಎಂದು ತ್ವಿಶಾ ಮರಣೋತ್ತರ ಪರೀಕ್ಷೆ ವರದಿಯಲ್ಲಿದೆ ಎಂದು ಸಿಬಿಐ ತನಿಖಾಧಿಕಾರಿ ಹೈಕೋರ್ಟ್ ಗಮನಕ್ಕೆ ತಂದಿದ್ದಾರೆ. ಹಾಗಾಗಿ, ಗಿರಿಬಾಲಾ ಅವರ ಜಾಮೀನು ರದ್ದುಗೊಳಿಸಿ ಹೈಕೋರ್ಟ್ ನ್ಯಾಯಮೂರ್ತಿ ದೇವನಾರಾಯಣ್ ಮಿಶ್ರಾ ಅವರು 17 ಪುಟಗಳ ಕಠಿಣ ಆದೇಶ ಗುರುವಾರ ಪ್ರಕಟಿಸಿದರು.

ಅಲ್ಲದೇ, ಆರೋಪಿಗಳು ತನಿಖೆಗೆ ಸಹಕರಿಸುತ್ತಿಲ್ಲ. ಇಬ್ಬರೂ ಪ್ರಭಾವಿಗಳಾಗಿದ್ದು, ಪ್ರಕರಣದ ಸಾಕ್ಷ್ಯಗಳನ್ನು ತಿರುಚುವ ಸಾಧ್ಯತೆ ಹೆಚ್ಚಿದೆ ಎಂದೂ ಸಿಬಿಐ ವಾದಿಸಿದೆ.

ಮೇ 12ರಂದು ತ್ವಿಶಾ ಶರ್ಮಾ ತಮ್ಮ ಮನೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದರು. ತ್ವಿಶಾ ಮೇಲೆ ಪತಿ ಶರ್ಮಾ ಮತ್ತು ಅತ್ತೆ ಗಿರಿಬಾಲಾ ಅವರು ವರದಕ್ಷಿಣೆ ಕಿರುಕುಳ ನೀಡಿ ಕೊಲೆ ಮಾಡಿದ್ದಾರೆ. ಗರ್ಭಪಾತ ಮಾಡಿಸಿಕೊಳ್ಳುವಂತೆ ನಿತ್ಯ ಒತ್ತಡ ಹೇರುತ್ತಿದ್ದರು ಎಂದು ತ್ವಿಶಾ ಪೋಷಕರು ಆರೋಪಿಸಿದ್ದಾರೆ. ಕೆಳ ನ್ಯಾಯಾಲಯ ಪ್ರಕರಣದ ಗಂಭೀರತೆ ಅರಿಯುವುದರಲ್ಲಿ ವಿಫಲವಾಗಿ ಜಾಮೀನು ಆದೇಶ ಹೊರಡಿಸಿದೆ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಸೈಪ್ರಸ್‌ನಲ್ಲಿ ಉಕ್ರೇನ್ ವಿದೇಶಾಂಗ ಸಚಿವರ ಭೇಟಿ ಮಾಡಿದ ಜೈಶಂಕರ್

ನಿಕೋಸಿಯ: ಪ್ರಸ್ತುತ ಸೈಪ್ರಸ್ ಪ್ರವಾಸದಲ್ಲಿರುವ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಉಕ್ರೇನ್‌ನ ವಿದೇಶಾಂಗ ಸಚಿವ ಆಂಡ್ರಿ ಸಿಬಿಹಾ ಅವರನ್ನು ಭೇಟಿ ಗುರುವಾರ ಬೆಳಗ್ಗೆ ಮಾಡಿ ದ್ವಿಪಕ್ಷೀಯ ಮಾತುಕತೆ ನಡೆಸಿದರು.

ಇಬ್ಬರೂ ವಿದೇಶಾಂಗ ಸಚಿವರ ಮಾತುಕತೆ 4 ವರ್ಷಗಳಿಂದ ನಡೆಯುತ್ತಿರುವ ರಷ್ಯಾ-ಉಕ್ರೇನ್ ಯುದ್ಧದ ವಿಚಾರವಾಗಿ ಕೇಂದ್ರೀಕೃತವಾಗಿತ್ತು. ಸಂಘರ್ಷ ಕೊನೆಗೊಳಿಸಿ ಶಾಂತಿ ಸ್ಥಾಪನೆ ಮಾಡುವುದಕ್ಕೆ ಇರುವ ಅವಕಾಶಗಳ ಬಗ್ಗೆ ಇಬ್ಬರೂ ಗಂಭೀರ ಚರ್ಚೆ ನಡೆಸಿದರು.

ಸೈಪ್ರಸ್‌ನಲ್ಲಿ ಆಯೋಜಿತವಾಗಿದ್ದ ಯುರೋಪ್ ಒಕ್ಕೂಟ ದೇಶಗಳ ವಿದೇಶಾಂಗ ಸಚಿವರ ವಿಶೇಷ ಸಭೆಯ ಬಳಿಕ ಜೈಶಂಕರ್-ಸಿಬಿಹಾ ಪ್ರತ್ಯೇಕವಾಗಿ ಮಾತುಕತೆ ನಡೆಸಿದ್ದಾರೆ. ಈ ಸಂದರ್ಭ ಉಕ್ರೇನ್‌ನ ಪ್ರಮುಖ ನಗರ ಕೀವ್ ಮೇಲೆ ರಷ್ಯಾ ಸೇನಾಪಡೆಗಳು ಇತ್ತೀಚೆಗೆ ಭಾರಿ ಪ್ರಮಾಣದ ದಾಳಿ ನಡೆಸಿವೆ. ಆದರೆ, ಉಕ್ರೇನ್ ಅದಕ್ಕೆ ಅಂಜಿಲ್ಲ. ಬಲು ದೃಢವಾಗಿದೆ. ನಿಧಾನವಾಗಿಯಾದರೂ ಚೇತರಿಸಿಕೊಳ್ಳುತ್ತಿದೆ. ಯುದ್ಧ ಕೊನೆಗೊಂಡ ಶಾಂತಿ ಸ್ಥಾಪನೆಯಾಗಲಿ ಎಂಬುದೇ ಉಕ್ರೇನ್ ಬಯಕೆ. ಈ ದಿಶೆಯಲ್ಲಿ ಭಾರತ ಗಟ್ಟಿ ದನಿ ತೆಗೆಯಬೇಕಿದೆ ಎಂದು ಸಿಬಿಹಾ ಹೇಳಿಕೊಂಡಿದ್ದಾರೆ.

ಅಲ್ಲದೇ, ಭಾರತ-ಉಕ್ರೇನ್ ನಡುವಿನ ಪರಸ್ಪರ ಸಹಕಾರ ವೃದ್ಧಿಯ ಕುರಿತೂ ಚರ್ಚಿಸಿದರು. ಸಭೆಯ ಬಳಿಕ ಜೈಶಂಕರ್ ಅವರು, ಮಾತುಕತೆ ಉಪಯುಕ್ತವಾಗಿತ್ತು ಎಂದು 'ಎಕ್ಸ್' ಸಂದೇಶದಲ್ಲಿ ತಿಳಿಸಿದ್ದರೆ, ಸಿಬಿಹಾ ಅವರು 'ಅರ್ಥಪೂರ್ಣ ಮಾತುಕತೆ' ಎಂದು 'ಎಕ್ಸ್'ನಲ್ಲಿ ಬರೆದಿದ್ದಾರೆ.



ಸೈಪ್ರಸ್‌ನಲ್ಲಿ ಉಕ್ರೇನ್ ಮತ್ತು ಭಾರತ ವಿದೇಶಾಂಗ ಸಚಿವರಾದ ಆಂಡ್ರಿ ಸಿಬಿಹಾ-ಜೈಶಂಕರ್.

ಸಮಾಚಾರ ಸಣ್ಣದಲ್ಲ

ಡಿಕೆಶಿಗೆ ನೊಣವಿನಕೆರೆ ಅಜ್ಜಯ್ಯನ ಸೂಚನೆ

ತುಮಕೂರು: ಮಾತು ಆಡಿದರೆ ಮುತ್ತು ಒಡೆದು ಹೋಗಲಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್‌ಗೆ ನೊಣವಿನಕೆರೆ ಅಜ್ಜಯ್ಯ ಸಲಹೆ ಕೊಟ್ಟಿದ್ದಾರೆ. ಅಜ್ಜಯ್ಯನ ಸೂಚನೆಯಂತೆ ಡಿಕೆ ಶಿವಕುಮಾರ್ ಮೌನ ವಹಿಸಿದ್ದಾರೆ. ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವವರೆಗೂ ಯಾವುದೇ ಮಾತನಾಡದಂತೆ ನೊಣ ವಿನಕೆರೆ ಕರಿವೃಷಭ ದೇಶಿಕೇಂದ್ರ ಶಿವಯೋಗೀಶ್ವರ ಶ್ರೀಗಳು ಎಚ್ಚರಿಕೆ ಕೊಟ್ಟಿದ್ದಾರೆ. ಮಾತಾಡಿದರೆ ಮುತ್ತು ಒಡೆದು ಹೋಗಲಿದೆ. ಅರ್ಥಾತ್ ಕೆಲಸ ಕೆಡಲಿದೆ ಎಂಬ ಸಂದೇಶವನ್ನು ಶ್ರೀಗಳು ಡಿಕೆಶಿಗೆ ಕೊಟ್ಟಿದ್ದಾರೆ. ಹಾಗಾಗಿ ಡಿಕೆಶಿ ಬೆಂಬಲಿಗರಿಗೂ ಯಾವುದೇ ಹೇಳಿಕೆ ಕೊಡದಂತೆ ತಾಕೀತು ಮಾಡಲಾಗಿದೆ. ಈ ಹಿನ್ನೆಲೆ ಡಿಸಿಎಂ ಡಿಕೆಶಿ ಬ್ರೇಕ್‌ಫಾಸ್ಟ್ ಸಭೆ ಬಳಿಕ ಮಾಧ್ಯಮಗಳಿಗೆ ಯಾವುದೇ ಪ್ರತಿಕ್ರಿಯೆ ನೀಡದೇ ತೆರಳಿದ್ದಾರೆ. ಇದಕ್ಕೂ ಮೊದಲು ದೆಹಲಿಗೆ ಹೋಗುವ ಮುನ್ನ ಡಿಸಿಎಂ ಡಿಕೆಶಿ ಒಂದೇ ದಿನ ಎರಡು ಬಾರಿ ನೊಣವಿನಕೆರೆ ಕಾಡಸಿದ್ದೇಶ್ವರ ಮಠಕ್ಕೆ ಭೇಟಿ ನೀಡಿ ಅಜ್ಜಯ್ಯನ ದರ್ಶನ ಪಡೆದು ಆಶೀರ್ವಾದ ಪಡೆದಿದ್ದರು. ಅಜ್ಜಯ್ಯನ ಅಪ್ಪಣೆ ಪಡೆಯದೇ ನಾನು ಯಾವ ಕೆಲಸವನ್ನೂ ಮಾಡಲ್ಲ ಎಂದು ಈ ಹಿಂದೆ ಡಿಕೆಶಿ ಹಲವು ಬಾರಿ ಹೇಳಿದ್ದರು.

ಪ್ರಮಾಣವಚನಕ್ಕೆ ಭರ್ಜರಿ ಸಿದ್ಧತೆ?

ಬೆಂಗಳೂರು: ಸಿಎಂ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ಪ್ರಕಟಿಸುತ್ತಿದ್ದಂತೆ ಇತ್ತ ಡಿ.ಕೆ. ಶಿವಕುಮಾರ್ ಪಟ್ಟಾಭಿಷೇಕಕ್ಕೆ ಭರ್ಜರಿ ತಯಾರಿ ಆರಂಭವಾಗಿದೆ. ಸಿಎಂ ವಾಸ್ತವ್ಯ ಹಾಗೂ ಗೃಹ ಕಚೇರಿ ಕಾವೇರಿ ಹಾಗೂ ಕೃಷ್ಣಾದಲ್ಲಿ ಬಿರುಸಿನ ರಾಜಕೀಯ ಚಟುವಟಿಕೆ ನಡೆಯುತ್ತಿರುವಾಗಲೇ ಡಿ.ಕೆ.ಶಿವಕುಮಾರ್ ಅವರ ಸದಾಶಿವನಗರದಲ್ಲಿರುವ ಮನೆ ಬಳಿ ಜನಜಂಗುಳಿಯ ಜಾತ್ರೆಯಾಗಿ ಪರಿವರ್ತನೆಯಾಗಿತ್ತು. ಕಾರ್ಯಕರ್ತರು, ಮುಖಂಡರು, ಸಚಿವ ಸ್ಥಾನ ಸೇರಿದಂತೆ ವಿವಿಧ ಹುದ್ದೆಗಳ ಆಕಾಂಕ್ಷಿಗಳ ದಂಡೇ ನೆರೆದಿತ್ತು. ಡಿ.ಕೆ.ಶಿವಕುಮಾರ್ ಅವರಿಗೆ ಅಭಿಮಾನದ ಅಭಿನಂದನೆಗಳ ಮಹಾಪೂರವೇ ಕಂಡು ಬಂದಿತ್ತು. ಕನಕಪುರ ಸೇರಿದಂತೆ ರಾಜ್ಯದ ಹಲವು ಭಾಗಗಳಿಂದ ಬಂದಿದ್ದ ಡಿಕೆ ಅಭಿಮಾನಿಗಳು ಪಟಾಕಿ ಸಿಡಿಸಿ ಸಂಭ್ರಮಿಸಿದರಲ್ಲದೆ, ಜೈಕಾರ ಹಾಕಿದರು. ಡಿ.ಕೆ. ಶಿವಕುಮಾರ್ ಮುಂದಿನ ಮುಖ್ಯಮಂತ್ರಿ ಎಂದು ಘೋಷಿಸುತ್ತಿದ್ದಂತೆ ಅಲ್ಲಿಯವರೆಗೂ ಸಿದ್ದರಾಮಯ್ಯ ಅವರ ಸುತ್ತಾಮುತ್ತ ಠಳಾಯಿಸುತ್ತಿದ್ದ ನಾಯಕರು, ಮುಖಂಡರು ಏಕಾಏಕಿ ಡಿ.ಕೆ.ಶಿವಕುಮಾರ್ ಅವರ ಮನೆಯತ್ತ ವಾಲಿದರು. ಡಿ.ಕೆ.ಶಿವಕುಮಾರ್ ಅಪಾರ ದೈವ ಭಕ್ತರಾಗಿದ್ದು, ಪ್ರತಿ ಯೊಂದು ಹಂತದಲ್ಲೂ ಶುಭಗಳಿಗೆ, ಶುಭ ಮುಹೂರ್ತ ಆಧರಿಸಿಯೇ ಮುಂದಿನ ಹೆಜ್ಜೆ ಇಡುತ್ತಾರೆ. ಮುಖ್ಯಮಂತ್ರಿ ಯಾಗುವ ಮಹತ್ವದ ಗಳಿಗೆಯಲ್ಲಿ ಶುಭ ಮುಹೂರ್ತಕ್ಕಾಗಿ ತಮ್ಮ ಕುಟುಂಬದ ಜ್ಯೋತಿಷಿ ಅವರನ್ನು ಸಂಪರ್ಕಿಸಿದ್ದಾರೆ ಎನ್ನಲಾಗಿದೆ. ಅಜ್ಜಯ್ಯನ ಪೀಠಕ್ಕೆ ಹೋಗಿ ಆಶೀರ್ವಚನ ಪಡೆದ ಬಳಿಕ ಮುಹೂರ್ತ ನಿಗದಿಪಡಿಸಲಿದ್ದಾರೆ ಎಂದು ತಿಳಿದು ಬಂದಿದೆ.

ಸೋಮವಾರ ಪ್ರಮಾಣವಚನ?

ಬೆಂಗಳೂರು: ರಾಜ್ಯಪಾಲರು ರಾಜೀನಾಮೆ ಅಂಗೀಕರಿಸುತ್ತಿದ್ದಂತೆ, ಹೊಸ ಸರಕಾರದ ರಚನೆ ಪ್ರಕ್ರಿಯೆ ಆರಂಭಗೊಳ್ಳಲಿದೆ. ಶುಕ್ರವಾರ (ಮೇ 29) ಉಪರಾಷ್ಟ್ರಪತಿ ಬೆಂಗಳೂರಿಗೆ ಆಗಮಿಸುತ್ತಿದ್ದು, ರಾಜ್ಯಪಾಲರು ಕಾರ್ಯದ ಒತ್ತಡದಲ್ಲಿದ್ದಾರೆ. ಶುಕ್ರವಾರ ಸಂಜೆಯೊಳಗೆ ರಾಜೀನಾಮೆ ಅಂಗೀಕಾರವಾಗಬೇಕಿದೆ. ಶನಿವಾರ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆಯುವ ಸಾಧ್ಯತೆಗಳಿವೆ. ಸಿಎಲ್‌ಪಿ ನಾಯಕರಾಗಿ ಡಿಕೆಶಿ ಆಯ್ಕೆಯಾಗುವುದು ಬಹುತೇಕ ಖಚಿತವಾಗಿದೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಸೋಮವಾರ ಸಂಜೆ ಗೋದೂಳಿ ಮುಹೂರ್ತದಲ್ಲಿ ಡಿಕೆಶಿ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆಗಳಿವೆ. ವಿಧಾನಸೌಧದ ಮೆಟ್ಟಿಲುಗಳ ಮೇಲೆ ಇಲ್ಲವೇ ಕಂಠೀರವ ಸ್ಟೇಡಿಯಂನಲ್ಲಿ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆಗಳಿವೆ. ದೊಡ್ಡ ಪ್ರಮಾಣದಲ್ಲಿ ಜನರನ್ನು ಸೇರಿಸಿ ಪದಗ್ರಹಣ ನಡೆಸಲು ಸಿದ್ಧತೆ ನಡೆಸಲಾಗಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ ಪ್ರಲ್ಹಾದ್ ಜೋಶಿ } ಕೇಂದ್ರ ಸಚಿವ

ರಾಹುಲ್ ಗಾಂಧಿ ಅವರು ಸಿದ್ದರಾಮಯ್ಯ ಅವರನ್ನು ಎಟಿಎಂ ರೀತಿ ಬಳಸಿಕೊಂಡರು. ಹಿಂದುಳಿದ ವರ್ಗದ ಮುಖ್ಯಮಂತ್ರಿಯನ್ನು ಕಾಂಗ್ರೆಸ್ ಪಕ್ಷ ನಡೆಸಿಕೊಂಡ ರೀತಿ ಅಸಹನೀಯ. ರಾಜೀವ್ ಗಾಂಧಿಯವರು ಅಂದಿನ ರಾಜ್ಯದ ಮುಖ್ಯಮಂತ್ರಿಯಾಗಿದ್ದ ವೀರೇಂದ್ರ ಪಾಟೀಲರನ್ನು ನಡೆಸಿಕೊಂಡಂತೇ ಇಂದು ಸಿದ್ದರಾಮಯ್ಯರನ್ನು ನಡೆಸಿಕೊಂಡಿದೆ.

ಸಿದ್ದರಾಮಯ್ಯ ಪದತ್ಯಾಗದ ಬಗ್ಗೆ ಬಿಜೆಪಿ ನಾಯಕರ ಟೀಕೆ

ಕಾಂಗ್ರೆಸ್ ಸರಕಾರವೇ ಬದಲಾಗಲಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಖ್ಯಮಂತ್ರಿ ಸ್ಥಾನದಿಂದ ಸಿದ್ದರಾಮಯ್ಯ ಪದತ್ಯಾಗವಾದ ಪ್ರಕ್ರಿಯೆ ಬಗ್ಗೆ ಟೀಕಿಸಿರುವ ರಾಜ್ಯ ಬಿಜೆಪಿ, ಕರ್ನಾಟಕಕ್ಕೆ ಇಂದು ಬೇಕಿರುವುದು ಕೇವಲ ಮುಖ್ಯಮಂತ್ರಿ ಬದಲಾವಣೆ ಅಲ್ಲ. ಈ ಜನವಿರೋಧಿ ಕಾಂಗ್ರೆಸ್ ಸರಕಾರದ ಸಂಪೂರ್ಣ ಬದಲಾವಣೆ ಎಂದಿದೆ.

ಈ ಸಂಬಂಧ ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯಿಸಿರುವ ಪ್ರತಿಪಕ್ಷ ನಾಯಕ ಆರ್.ಅಶೋಕ, 2023ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ದಿನ ದಿಂದಲೂ ರಾಜ್ಯದಲ್ಲಿ ಆಡಳಿತ ಎನ್ನುವುದು ಸಂಪೂರ್ಣ ಮರೀಚಿಕೆಯಾಗಿದೆ. ಅಭಿವೃದ್ಧಿ, ಜನಸಮಸ್ಯೆ, ರೈತರ ಸಂಕಷ್ಟ, ಯುವಕರ ಭವಿಷ್ಯ, ಇವೆಲ್ಲವೂ ಗೌಣವಾಗಿದೆ, 'ಕುರ್ಚಿ ಯಾರಿಗೆ?' ಎನ್ನುವ ಒಂದೇ ಪ್ರಶ್ನೆ ಸರಕಾರವನ್ನು ನುಂಗಿಬಿಟ್ಟಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಧಿಕಾರ ಹಂಚಿಕೆ ಎಂಬ ಪ್ರಹಸನ ಈಗ ಬೀದಿ ನಾಟಕದ ಮಟ್ಟಕ್ಕೆ ಇಳಿದಿದೆ. ಎಗ್ಗಿಲ್ಲದೇ ನಡೆಯುತ್ತಿರುವ ಕುರ್ಚಿ ಕದನ ಇಡೀ ಕರ್ನಾಟಕದ ಮಾನವನ್ನು ದೇಶದ ಮುಂದೆ ಹರಾಜು ಹಾಕುತ್ತಿದೆ. ಪ್ರಜಾಸೌಧದಲ್ಲಿ ಆಡಳಿತದ ಚರ್ಚೆ ಇಲ್ಲ. ಬರಿ ಅಧಿಕಾರದ ಲೆಕ್ಕಾಚಾರ ಮಾತ್ರ ಎನ್ನುವಂತಾಗಿದೆ. ಕನ್ನಡಿಗರು ಅರ್ಥ ಮಾಡಿಕೊಳ್ಳಬೇಕಾದ ಸತ್ಯ ಒಂದೇ. ಸಿದ್ದರಾಮಯ್ಯನವರೇ ಮುಂದುವರಿಯಲಿ, ಡಿ.ಕೆ. ಶಿವಕುಮಾರ್ ಬರಲಿ ಅಥವಾ ಮತ್ತೊಬ್ಬರನ್ನು ಕೂರಿಸಲಿ ಈ ದಿವಾಳಿ ಕಾಂಗ್ರೆಸ್ ಸರ್ಕಾರದಿಂದ ಕನ್ನಡಿಗರಿಗೆ ನಯಾ ಪೈಸೆ ಪ್ರಯೋಜನವಿಲ್ಲ ಎಂದು ಟೀಕಿಸಿದ್ದಾರೆ.

ಏಕೆಂದರೆ ಇವರಿಗೆ ರಾಜ್ಯದ ಅಭಿವೃದ್ಧಿಯ ಬಗ್ಗೆ ದೃಷ್ಟಿಯಿಲ್ಲ. ರೈತರ ಕಣ್ಣೀರಿನ ಬಗ್ಗೆ ಕಾಳಜಿಯಿಲ್ಲ. ಯುವಕರ ಭವಿಷ್ಯದ ಬಗ್ಗೆ ಚಿಂತೆಯಿಲ್ಲ. ಜನರ ಸಮಸ್ಯೆಗಳ ಬಗ್ಗೆ ಉತ್ತರದಾಯಿತ್ವವೇ ಇಲ್ಲ. ಇವರಿಗೆ ಇರುವುದು ಒಂದೇ ಅಜೆಂಡಾ. ಕುರ್ಚಿ, ಅಧಿಕಾರ, ಲೂಟಿ ಮತ್ತು ಸ್ವಾರ್ಥ ರಾಜಕಾರಣ. ಕರ್ನಾಟಕದ ಜನರ ಸಹನೆಯನ್ನು ಕಾಂಗ್ರೆಸ್ ದುರ್ಬಲತೆ ಎಂದು ಭಾವಿಸಬಾರದು. ಕನ್ನಡಿಗರು ಎಲ್ಲವನ್ನೂ ಗಮನಿಸುತ್ತಿದ್ದಾರೆ. ರಾಜ್ಯದ ಅಭಿವೃದ್ಧಿಯನ್ನು ಬಲಿಕೊಟ್ಟು ಒಳಜಗಳದಲ್ಲಿ ಮುಳುಗಿರುವ ಈ ಜನವಿರೋಧಿ ಕಾಂಗ್ರೆಸ್ ಪಕ್ಷಕ್ಕೆ ಕನ್ನಡಿಗರು ತಕ್ಕ ಉತ್ತರ ನೀಡುವ ದಿನ ದೂರವಿಲ್ಲ ಎಂದಿದ್ದಾರೆ.

ಒಬಿಸಿಗೆ ರಾಹುಲ್ ಕೊಟ್ಟ ಬಳುವಳಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜಿನಾಮೆ ಒಬಿಸಿ ವರ್ಗಕ್ಕೆ ರಾಹುಲ್ ಗಾಂಧಿ ಕೊಟ್ಟ ಬಳುವಳಿ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾಗತನಾಡಿ, ದಿನ ಬೆಳಗಾದರೆ ಒಬಿಸಿ ಎಂದು ಬೊಬ್ಬೆ ಹೊಡೆಯುತ್ತಿದ್ದವರು ಇಂದು ಅದೇ ವರ್ಗದ ಸಿಎಂ ಅನ್ನು ಕೆಳಗಿಳಿಸಿ ಅಪಮಾನಿಸಿದ್ದಾರೆ ಎಂದು ಆರೋಪಿಸಿದರು. ಕಾಂಗ್ರೆಸ್ ಆಡಳಿತದ 4 ರಾಜ್ಯಗಳ ಪೈಕಿ ಮೂರು ರಾಜ್ಯಗಳಲ್ಲಿ ಮೇಲ್ವರ್ಗದವರು ಸಿಎಂ ಇದ್ದಾರೆ. ಕರ್ನಾಟಕದಲ್ಲಿ ಮಾತ್ರ ಒಬಿಸಿ ಸಿಎಂ ಇದ್ದರು. ಈಗ ಇದ್ದೊಬ್ಬ ಒಬಿಸಿ ಸಿಎಂ ಅನ್ನು ಕಾಂಗ್ರೆಸ್ ಅಸ್ಥಿರಗೊಳಿಸಿದೆ. ಕಾಂಗ್ರೆಸ್ ಪಕ್ಷ ನೆಪಕ್ಕಷ್ಟೇ ಒಬಿಸಿ ಜಪ ಮಾಡುತ್ತದೆ. ಆದರೆ, ನಡೆದುಕೊಳ್ಳುವ ರೀತಿಯೇ ಬೇರೆ. ಒಬಿಸಿ ವರ್ಗದವರನ್ನು ಯಾವತ್ತೂ ಕಡೆಗಣಿಸುತ್ತಲೇ ಇದೆ ಎಂದು ದೂರಿದರು. ಅರಾಜಕತೆ, ಅಸ್ಥಿರತೆ, ಅವಿಶ್ವಾಸ, ಗೊಂದಲದ ವಾತಾವರಣವೇ ಕಾಂಗ್ರೆಸ್ ಪಕ್ಷದ ಗ್ಯಾರೆಂಟಿ. ಕರ್ನಾಟಕದಲ್ಲಿ ಕಳೆದ ಮೂರು ವರ್ಷಗಳಿಂದ ಆಂತರಿಕ ಗೊಂದಲ, ಅರಾಜಕತೆ, ಅಸ್ಥಿರತೆ ಪರಾಕಾಷ್ಠೆ ತಲೆದೋರಿದೆ. ಕಾಂಗ್ರೆಸ್ ಒಂದು ಅರಾಜಕತೆಯ ಪಕ್ಷ. ಅಪ್ಪ ರಾಜೀವಗಾಂಧಿ ಅಂದು ವೀರೇಂದ್ರ ಪಾಟೀಲರನ್ನು ನಡೆಸಿಕೊಂಡಂತೆ ಮಗ ರಾಹುಲ್ ಗಾಂಧಿ ಇಂದು ಸಿದ್ದರಾಮಯ್ಯ ಅವರನ್ನು ನಡೆಸಿಕೊಂಡಿದ್ದಾರೆ. ರಾಜೀವ್ ಗಾಂಧಿ ವೀರೇಂದ್ರ ಪಾಟೀಲರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸಿ ಅಪಮಾನಿಸಿದರು. ಅಂತೆಯೇ ಮಗ ರಾಹುಲ್ ಗಾಂಧಿ ಸಹ ಸಿದ್ದರಾಮಯ್ಯರನ್ನು ಸಿಎಂ ಕುರ್ಚಿಯಿಂದ ಕೆಳಗಿಳಿಸಿ ಅವಮಾನಿಸಿದ್ದಾರೆ ಎಂದರು.

ಕಾಂಗ್ರೆಸ್‌ನಿಂದ ಹಿಂದುಳಿದವರಿಗೆ ನಂಬಿಕೆ ದ್ರೋಹ: ಸಿದ್ದರಾಮಯ್ಯ ಸಿಎಂ ಸ್ಥಾನಕ್ಕೆ ರಾಜೀ ನಾಮೆ ಕೊಟ್ಟಿರುವುದು ಕಾಂಗ್ರೆಸ್ ಪಕ್ಷದ ಮೇಲೆ ಹಾಗೂ ಕರ್ನಾಟಕದ ಚುನಾವಣಾ ರಾಜಕಾರಣದ ಮೇಲೆ ಪರಿಣಾಮ ಬೀರಲಿದೆ. ಕಾಂಗ್ರೆಸ್ ನಿಂದ ಹಿಂದುಳಿದವರಿಗೆ ನಂಬಿಕೆ ದ್ರೋಹವಾಗಿದ್ದು, ಹಿಂದುಳಿದ ವರ್ಗ ಕಾಂಗ್ರೆಸ್ ವಿರುದ್ಧ ತಿರುಗಿ ಬೀಳಲಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯ ಪಟ್ಟಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿರುವ ಅವರು, ಕಾಂಗ್ರೆಸ್ ಪಕ್ಷದಿಂದ ಹಿಂದುಳಿದವರಿಗೆ ನಂಬಿಕೆ ದ್ರೋಹ ಮಾಡಿದಂತಾಗಿದೆ. ವಿಶೇಷವಾಗಿ ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿ ಒಬಿಸಿ ಪರವಾಗಿ ಪ್ರಚಾರ ಮಾಡುತ್ತಾರೆ. ಆದರೆ, ಒಬಿಸಿ ಮುಖ್ಯಮಂತ್ರಿಯನ್ನು ಕಿತ್ತು ಹಾಕಿದ್ದಾರೆ. ಹಿಂದುಳಿದ ವರ್ಗಗಳ ಬಗ್ಗೆ ಅವರು ಮೊಸಳೆ ಕಣ್ಣೀರು ಸುರಿಸುವುದು ಈಗ ಬಹಿರಂಗವಾಗಿದೆ. ಇದರಿಂದ ಹಿಂದುಳಿದ ವರ್ಗದವರು ಬೇಸರಗೊಂಡಿದ್ದು, ಅವರು 2028 ರ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸುವುದಾಗಿ ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತಿದ್ದಾರೆ.

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಆಡಳಿತ ಪಕ್ಷವನ್ನು ಅಶಕ್ತಗೊಳಿಸಿದ್ದು, ಬಿಜೆಪಿ ಇನ್ನಷ್ಟು ಬಲಿಷ್ಠವಾಗಿ ನಮ್ಮದೇ ಆದ ಶಕ್ತಿಯೊಂದಿಗೆ 2028ಕ್ಕೆ ರಾಜ್ಯದಲ್ಲಿ ಅಧಿಕಾರಕ್ಕೆ ಬರುತ್ತೇವೆ ಎಂದಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಹೈಕಮಾಂಡ್‌ಗೆ ಹೊಸ ಎಟಿಎಂ ಗೇಟ್ ಕೀಪರ್ ಬಂದಿದ್ದಾರೆ. ಕಾಂಗ್ರೆಸ್ ಹೈ ಕಮಾಂಡ್‌ಗೆ ತಮ್ಮ ಭ್ರಷ್ಟಾಚಾರ ಇನ್ನು ಮುಂದೆ ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ ಎಂಬದು ಅರಿವಾದಂತಿದೆ. ಜೊತೆಗೆ ತಮ್ಮ ವೈಫಲ್ಯ ಸ್ವೀಕರಿಸಿದಂತಿದೆ. ಆದರೆ, ಹೊಸ ಮದ್ಯವನ್ನು ಅದೇ ಹಳೇ ಬಾಟಲಿಯಲ್ಲಿ ಹಾಕಿದರೆ ಏನಾದರೂ ಸಕಾರಾತ್ಮಕ ಬದಲಾವಣೆ ಆಗಲು ಸಾಧ್ಯವೇ?

–**ಬಿ.ವೈ.ವಿಜಯೇಂದ್ರ**, ಬಿಜೆಪಿ ರಾಜ್ಯಾಧ್ಯಕ್ಷ

ಕನಕಪುರ ಶಾಸಕ ಡಿ.ಕೆ.ಶಿವಕುಮಾರ್‌ಗೆ ಸಿಎಂ ಪಟ್ಟಾಭಿಷೇಕ ಸನ್ನಿಹಿತ

ರಾಮನಗರ ಜಿಲ್ಲೆಯ 5ನೇ ಸಿಎಂ ಡಿಕೆಶಿ

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಪ್ರಕ್ರಿಯೆ ಅಂತಿಮಗೊಂಡಿದ್ದು, ಜಿಲ್ಲೆಯವರೇ ಆದ ಕನಕಪುರ ಕ್ಷೇತ್ರದ ಶಾಸಕ ಡಿ.ಕೆ.ಶಿವಕುಮಾರ್ ಅವರ ಸಿಎಂ ಪಟ್ಟಾಭಿಷೇಕಕ್ಕೆ ಕಾಲ ಕೂಡಿಬಂದಿದೆ. ಎಲ್ಲವೂ ಅಂದುಕೊಂಡಂತೆ ನಡೆದು ಶಿವಕುಮಾರ್ ಅಧಿಕಾರ ಸ್ವೀಕರಿಸಿದರೆ, ಅವರು ರಾಮನಗರ ಜಿಲ್ಲೆಯಿಂದ (ಪ್ರಸ್ತುತ ಬೆಂಗಳೂರು ದಕ್ಷಿಣ) ಮುಖ್ಯಮಂತ್ರಿ ಹುದ್ದೆಗೇರಿದ 5ನೇ ರಾಜಕಾರಣಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಲಿದ್ದಾರೆ. ಅಲ್ಲದೆ, ದೇಶದ ಅತ್ಯಂತ ಹಳೆಯ ಪಕ್ಷವಾದ ಕಾಂಗ್ರೆಸ್‌ನಿಂದ ಸಿಎಂ ಸ್ಥಾನಕ್ಕೇರಿದ ಜಿಲ್ಲೆಯ 2ನೇ ನಾಯಕ ಇವರಾಗಲಿದ್ದಾರೆ.

ಮೊದಲ ಸಿಎಂ ಕೆಂಗಲ್ ಹನುಮಂತಯ್ಯ: ಕರ್ನಾಟಕದ ಮೊದಲ ಚುನಾಯಿತ ಮುಖ್ಯಮಂತ್ರಿ ಎಂಬ ಜಾಗತಿಕ ಖ್ಯಾತಿ ಹೊಂದಿರುವ ಕೆಂಗಲ್ ಹನುಮಂತಯ್ಯ ಅವರು ಮೂಲತಃ ರಾಮನಗರ ತಾಲೂಕಿನವರು. ಅಂದಿನ ಮೈಸೂರು ರಾಜ್ಯದಲ್ಲಿ 1952 ಮತ್ತು 1957ರ ಚುನಾವಣೆಗಳಲ್ಲಿ ರಾಮನಗರ ಕ್ಷೇತ್ರದಿಂದಲೇ ಸ್ಪರ್ಧಿಸಿ ಜಯಭೇರಿ ಬಾರಿಸಿದ್ದರು. ಇಂದಿನ ಭವ್ಯ ಆಡಳಿತ ಸೌಧವಾದ ವಿಧಾನಸೌಧ ನಿರ್ಮಿಸಿದ ಹೆಗ್ಗಳಿಕೆಯ ಇವರದು. 1952ರ ಮೊದಲ ವಿಧಾನಸಭೆಯಲ್ಲಿ ಮುಖ್ಯಮಂತ್ರಿಯಾಗಿ 4 ವರ್ಷ 5 ತಿಂಗಳುಗಳ ಕಾಲ ಅತ್ಯುತ್ತಮ ಆಡಳಿತ ನೀಡಿದ್ದರು.

2ನೇ ಸಿಎಂ ರಾಮಕೃಷ್ಣ ಹೆಗಡೆ: ರಾಜ್ಯದಲ್ಲಿ 1983ರಲ್ಲಿ ಮೊದಲ ಬಾರಿಗೆ ಕಾಂಗ್ರೆಸ್ಸೇತರ ಜನತಾ ಪರಿವಾರ ಸರಕಾರ ಅಸ್ತಿತ್ವಕ್ಕೆ ಬಂದಾಗ ರಾಮಕೃಷ್ಣ ಹೆಗಡೆ ಅವರಿಗೆ ಸಿಎಂ ಆಗುವ ಯೋಗ ಒದಗಿ ಬಂದಿತ್ತು. ಆಗ ಅವರು ಯಾವುದೇ ಸದನದ ಸದಸ್ಯರಾಗಿ ರಲಿಲ್ಲ. ಈ ವೇಳೆ ಕನಕಪುರ ಕ್ಷೇತ್ರದಿಂದ ಗೆದ್ದಿದ್ದ ಪಿ.ಜಿ.ಆರ್.ಸಿಂಧ್ಯ ಅವರು ಹೆಗಡೆ ಅವರಿ ಗಾಗಿ ತಮ್ಮ ಸ್ಥಾನವನ್ನು ತ್ಯಾಗ ಮಾಡಿದ್ದರು. ಆ ಬಳಿಕ ನಡೆದ ಉಪಚುನಾವಣೆಯಲ್ಲಿ ಇದೇ ಕನಕಪುರದಿಂದ ಸ್ಪರ್ಧಿಸಿ ಗೆದ್ದ ಹೆಗಡೆ ಅವರು ಒಂದು ವರ್ಷದ ಕಾಲ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಿದ್ದರು.



3ನೇ ಸಿಎಂ ಎಚ್.ಡಿ.ದೇವೇಗೌಡ: ಮಣ್ಣಿನ ಮಗ ಎಚ್.ಡಿ.ದೇವೇಗೌಡ ಅವರು 1994ರ ಐತಿಹಾಸಿಕ ಚುನಾವಣೆಯಲ್ಲಿ ಮೊದಲ ಬಾರಿಗೆ ರಾಮನಗರ ಕ್ಷೇತ್ರದಿಂದ ಸ್ಪರ್ಧಿಸಿ ಶಾಸಕರಾಗಿ ಆಯ್ಕೆಯಾಗಿದ್ದರು. ಆಗ ಜನತಾ ದಳ 115 ಸ್ಥಾನಗಳ ಪ್ರಚಂಡ ಬಹುಮತ ಪಡೆದ ಹಿನ್ನೆಲೆಯಲ್ಲಿ ಗೌಡರು ಮುಖ್ಯಮಂತ್ರಿಯಾದರು. ಕೇವಲ 17 ತಿಂಗಳು ಮುಖ್ಯಮಂತ್ರಿಯಾಗಿ ಭರ್ಜರಿ ಆಡಳಿತ ನಡೆಸಿದ ಅವರು, ಬದಲಾದ ದೇಶದ ರಾಜಕೀಯ ವಿದ್ಯಮಾನಗಳಿಂದಾಗಿ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿ ಪ್ರಧಾನಮಂತ್ರಿ ಹುದ್ದೆಗೇರಿ ಇತಿಹಾಸ ಸೃಷ್ಟಿಸಿದರು.



4ನೇ ಸಿಎಂ ಕುಮಾರಸ್ವಾಮಿ: ತಮ್ಮ ತಂದೆಯ ಅದೃಷ್ಟದ ಕ್ಷೇತ್ರವಾದ ರಾಮನಗರದಿಂದಲೇ 2004ರಲ್ಲಿ ಸ್ಪರ್ಧಿಸಿ ಮೊದಲ ಬಾರಿಗೆ ಶಾಸಕರಾದ ಎಚ್.ಡಿ. ಕುಮಾರಸ್ವಾಮಿ ಅವರು ಜಿಲ್ಲೆಯಿಂದ ಎರಡು ಬಾರಿ ಸಿಎಂ ಆದ ಅಪರೂಪದ ದಾಖಲೆ ಹೊಂದಿದ್ದಾರೆ. 12ನೇ ವಿಧಾನ ಸಭೆಯಲ್ಲಿ ಜೆಡಿಎಸ್–ಬಿಜೆಪಿ ಸಮ್ಮಿಶ್ರ ಸರಕಾರದಲ್ಲಿ 20 ತಿಂಗಳು ಮುಖ್ಯಮಂತ್ರಿಯಾಗಿದ್ದರು.

2018ರ ಚುನಾವಣೆಯಲ್ಲಿ ರಾಮನಗರ ಮತ್ತು ಚನ್ನಪಟ್ಟಣ ಎರಡರಲ್ಲೂ ಗೆದ್ದು, ಬಳಿಕ ಚನ್ನಪಟ್ಟಣ ಉಳಿಸಿಕೊಂಡರು. ರಾಜ್ಯ ದಲ್ಲಿ ಅತಂತ್ರ ಸ್ಥಿತಿ ನಿರ್ಮಾಣವಾದಾಗ ರಚನೆಯಾದ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರಕಾರದಲ್ಲಿ ಮತ್ತೆ ಮುಖ್ಯಮಂತ್ರಿಯಾಗಿ 14 ತಿಂಗಳು ಅಧಿಕಾರ ಚಲಾಯಿಸಿದ್ದರು.

ಡಿವೈಎಸ್‌ಪಿ ಆಗಿ ಬಡ್ತಿ ಪಡೆದ ದಿನವೇ ನೇಣಿಗೆ ಶರಣು

ಸಿಪಿಐ ಶ್ರೀಶೈಲ ಚೌಗಲಾ ಆತ್ಮಹತ್ಯೆ

ಬೆಳಗಾವಿ: ರಾಜ್ಯ ವಿಪತ್ತು ನಿರ್ವಹಣಾ ದಳ (ಎಸ್‌ಡಿಆರ್‌ಎಫ್) ಬೆಳಗಾವಿ ಘಟಕದ ಸಿಪಿಐ ಆಗಿದ್ದ ಶ್ರೀಶೈಲ ಪರಪ್ಪಾ ಚೌಗಲಾ (37) ಅವರು ತಮ್ಮ ನಿವಾಸದಲ್ಲಿ ಬುಧವಾರ ರಾತ್ರಿ ನೇಣಿಗೆ ಶರಣಾಗಿದ್ದಾರೆ. ಅವರಿಗೆ ಪತ್ನಿ, ಮಗ, ಮಗಳು, ತಂದೆ, ತಾಯಿ ಇದ್ದಾರೆ.

ಎಂದಿನಂತೆ ರಾತ್ರಿ ಊಟ ಮಾಡಿದ ಶ್ರೀಶೈಲ ಅವರು ತಮ್ಮ ಕೋಣೆಗೆ ತೆರಳಿದ್ದರು. ಅವರು ಮಲಗಿರಬಹುದೆಂದು ಮನೆಯವರು ಭಾವಿಸಿದ್ದರು. ಬಹಳಷ್ಟು ಹೊತ್ತು ಬಾಗಿಲು ತೆರೆಯದಿದ್ದಾಗ ಪತ್ನಿ ಕೋಣೆಯ ಬಾಗಿಲು ಬಡಿದರು. ಒಳಗಿನಿಂದ ಚಿಲಕ ಹಾಕಿದ್ದರಿಂದ ಸಂಶಯಗೊಂಡು ಪೊಲೀಸ್ ಸಿಬ್ಬಂದಿಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಧಾವಿಸಿದ ಪೊಲೀಸರು ಬಾಗಿಲು ಮುರಿದು ನೋಡಿದಾಗ ಶ್ರೀಶೈಲ ನೇಣು ಹಾಕಿಕೊಂಡಿದ್ದು ಗೊತ್ತಾಯಿತು. ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಅಷ್ಟೊತ್ತಿಗೆ ಕೊನೆಯುಸಿರೆಳೆದಿದ್ದಾಗಿ ವೈದ್ಯರು ದೃಢಪಡಿಸಿ ದರು. ಸ್ವಗ್ರಾಮ ಖವಟಕೊಪ್ಪದಲ್ಲಿ ಗುರುವಾರ ಮಧ್ಯಾಹ್ನ 1.30ರ ಸುಮಾರಿಗೆ ಸಕಲ ಸರಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಿತು. 'ಸಾವಿಗೆ ನಿಜವಾದ ಕಾರಣ ಏನೆಂದು ತನಿಖೆ ಮಾಡಿದ ಬಳಿಕ ಗೊತ್ತಾಗಲಿದೆ. ಸ್ಥಳದಲ್ಲಿ ಯಾವುದೇ ಪತ್ರ ಸಿಕ್ಕಿಲ್ಲ. ಕೆಲವು ತಿಂಗಳಿನಿಂದ ಅವರು ಆರ್ಥಿಕತೆಗೆ ಸಂಬಂಧಿಸಿದಂತೆ ಖಿನ್ನತೆಗೆ ಒಳಗಾಗಿದ್ದರು ಎಂಬುದಾಗಿ ಕುಟುಂಬಸ್ಥರು ದೂರಿನಲ್ಲಿ ಉಲ್ಲೇಖಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪದೋನ್ನತಿ ಪಡೆದ ದಿನವೇ ನಿಧನ

ಅಥಣಿ ತಾಲೂಕಿನ ಖವಟಕೊಪ್ಪ ಮೂಲದವರಾದ ಶ್ರೀಶೈಲ ಅವರು, ಬೆಂಗಳೂರು, ಶಿಗ್ಗಾವಿಯಲ್ಲಿ ಸೇವೆ ಸಲ್ಲಿಸಿ ಕಳೆದ ಮೂರು ವರ್ಷಗಳಿಂದ ಬೆಳಗಾವಿಯ ಎಸ್‌ಡಿಆರ್‌ಎಫ್‌ನಲ್ಲಿ ಸಿಪಿಐ ಆಗಿದ್ದರು. ಬುಧವಾರ ಡಿವೈಎಸ್‌ಪಿ ಆಗಿ ಪದೋನ್ನತಿ ಪಡೆದವರ ಪಟ್ಟಿಯಲ್ಲಿ ಅವರ ಹೆಸರು ಪ್ರಕಟವಾಗಿದ್ದು, ಗುರುವಾರ ಕೌನ್ಸಲಿಂಗ್‌ಗೆ ಹಾಜರಾಗಬೇಕಿತ್ತು. ಕರ್ತವ್ಯ ನಿಷ್ಠೆಗೆ 2025ರ ನವೆಂಬರ್ 1ರಂದು ಅವರು ಮುಖ್ಯಮಂತ್ರಿ ಪದಕ ಕೂಡ ಪಡೆದಿದ್ದರು.

ರಾಜ್ಯಪಾಲರ ಆಟಕ್ಕೂ ಬಗ್ಗದ ಸಿದ್ದು

← ಮೊದಲಪುಟದಿಂದ

ಆದರೆ ಪಕ್ಷದ ಹೈಕಮಾಂಡ್‌ಗೆ ಕೊಟ್ಟಿರುವ ಮಾತು ಹಾಗೂ ರಾಜೀನಾಮೆ ನೀಡುವುದು ತಡವಾದಷ್ಟು ಕರ್ನಾಟಕದಲ್ಲಿ ಉದ್ಭವಿಸ ಬಹುದಾದ ಗೊಂದಲ, ಗದ್ದಲವನ್ನು ಊಹಿಸಿ ಕಾರ್ಯದರ್ಶಿಗೆ ರಾಜೀನಾಮೆ ಸಲ್ಲಿಸಿದ್ದಾರೆ.

ಸಿದ್ದರಾಮಯ್ಯ ಅವರ ಈ ನಡೆ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗುತ್ತಿದೆ. ಸಾಮಾನ್ಯವಾಗಿ ರಾಜೀನಾಮೆ ನೀಡಬೇಕು ಎನ್ನುವ ವಿಷಯ ಬಂದಾಗ, ಯಾವುದಾದರೂ ಪಿಳ್ಳೆ ನೆಪ ಹೇಳಿಕೊಂಡು ರಾಜೀನಾಮೆ ನೀಡದೇ ಬಹುತೇಕ ರಾಜಕಾರಣಿಗಳು ಓಡಾಡುತ್ತಾರೆ. ಆದರೆ ರಾಜ್ಯಪಾಲರ ಗೈರಿನಲ್ಲಿ ರಾಜೀನಾಮೆ ನೀಡಲು, ಅಂಗೀಕರಿಸಲು ಸಾಧ್ಯವಿಲ್ಲ ಎನ್ನುವ ಅರಿವಿದ್ದರೂ, ರಾಜಕೀಯವಾಗಿ ತಾವು ನುಡಿದಂತೆ ನಡೆಯುತ್ತೇನೆ. ಪಕ್ಷದ ಹೈಕಮಾಂಡ್‌ಗೆ ನೀಡಿದ್ದ ಮಾತನ್ನು ಉಳಿಸಿಕೊಳ್ಳಬೇಕು ಎನ್ನುವ ಕಾರಣಕ್ಕೆ ಕಾರ್ಯದರ್ಶಿಗೆ ರಾಜೀನಾಮೆ ಸಲ್ಲಿಸುವ ಮೂಲಕ, ರಾಜಕೀಯ ಮುತ್ಸದ್ದಿತನ ತೋರಿದ್ದಾರೆ. ಈ ಮೂಲಕ ಕರ್ನಾಟಕ ಕಾಂಗ್ರೆಸ್‌ನಲ್ಲಿ ಉದ್ಭವಿಸಬಹುದಾಗಿದ್ದ ಬಹುದೊಡ್ಡ ಬಂಡಾಯವನ್ನು ಆರಂಭದಲ್ಲಿಯೇ ಹೊಸಕಿಹಾಕಿದ್ದಾರೆ.

ಮತ್ತೆ ದೆಹಲಿಗೆ ತೆರಳಿದ್ದು ದೊಡ್ಡತನ: ರಾಜೀನಾಮೆ ನೀಡುವಂತೆ ರಾಹುಲ್ ಗಾಂಧಿ ಹೇಳಿದ್ದರಿಂದಲೇ ರಾಜ್ಯಕ್ಕೆ ವಾಪಸಾಗಿ ರಾಜೀನಾಮೆ ನೀಡಿದ್ದ ಸಿದ್ದರಾಮಯ್ಯ ಅವರು, ಪುನಃ ದೆಹಲಿಗೆ ತೆರಳಿದ್ದು ಅನೇಕರ ಅಚ್ಚರಿಗೆ ಕಾರಣವಾಗಿತ್ತು. ದೆಹಲಿಯಿಂದ ಮರಳುವಾಗಲೇ ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಧನ್ಯವಾದ ಸಲ್ಲಿಸಿದ್ದರು. ರಾಜೀನಾಮೆ ನೀಡಿದ ಬಳಿಕ ಬೆಂಗಳೂರಿನಲ್ಲಿಯೇ ಉಳಿಯಬಹುದಾಗಿತ್ತು. ಹೆಚ್ಚೆಂದರೆ ಮಾಧ್ಯಮದ ಮೂಲಕವೋ, ಸಾಮಾಜಿಕ ಜಾಲತಾಣದಲ್ಲಿಯೋ ಹೈಕಮಾಂಡ್‌ಗೆ ಧನ್ಯವಾದ ಸಲ್ಲಿಸಬಹುದಾಗಿತ್ತು. ಆದರೆ ಅದನ್ನು ಮಾಡದೇ, ಎರಡು ಬಾರಿ ಮುಖ್ಯಮಂತ್ರಿ ಮಾಡಿದ್ದ, ಪ್ರತಿಪಕ್ಷ ನಾಯಕರನ್ನಾಗಿ ಆಯ್ಕೆ ಮಾಡಿದ್ದ ರಾಹುಲ್ ಹಾಗೂ ಸೋನಿಯಾ ಅವರನ್ನು ವೈಯಕ್ತಿಕವಾಗಿ ಭೇಟಿಯಾಗಿ ಧನ್ಯವಾದ ಸಲ್ಲಿಸಿ, ರಾಜಕೀಯ ಮುತ್ಸದ್ದಿತನ ತೋರಿದ್ದಾರೆ ಎನ್ನುವ ಮಾತುಗಳು ಕಾಂಗ್ರೆಸ್ ವಲಯದಲ್ಲಿ ಕೇಳಿಬರುತ್ತಿದೆ.

ಸಿದ್ದು ನಡೆಗೆ ಸುರ್ಜೇವಾಲಗೂ ಶಾಕ್

ಸಿದ್ದರಾಮಯ್ಯ ಅವರು ರಾಜೀನಾಮೆ ನೀಡುವುದಾಗಿ ಹೇಳಿ ದೆಹಲಿಯಿಂದ ಹೊರಟರೂ ರಾಜ್ಯಕ್ಕೆ ಆಗಮಿಸಿದ ಬಳಿಕ ಬೆಂಬಲಿಗರ ಒತ್ತಡಕ್ಕೆ ಮಣಿದು ಮನಸ್ಸು ಬದಲಿಸಬಹುದೆಂಬ ಆತಂಕ ಹೈಕಮಾಂಡ್‌ಗೆ ಇತ್ತು. ಈ ಅಂದಾಜಿನೊಂದಿಗೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಬೆಂಗಳೂರಿಗೆ ಆಗಮಿಸಿದ್ದರು. ಬುಧವಾರ ಸಂಜೆ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದ್ದರು. ಆದರೆ ಸಿದ್ದರಾಮಯ್ಯ ಅವರು ತಾವು ಪಕ್ಷದ ಲಕ್ಷ್ಮಣ ರೇಖೆ ದಾಟುವುದಿಲ್ಲವೆಂದು ಹೇಳಿ ಅದೇ ರೀತಿ ನಡೆದುಕೊಂಡರು. ಸುರ್ಜೇವಾಲ ಗುರುವಾರ ಇಡೀ ದಿನ ಹೋಟೆಲ್ ಕೋಣೆಯಲ್ಲೇ ಉಳಿದುಕೊಂಡರು. ಸಂಜೆ ಸಿದ್ದರಾಮಯ್ಯ ಅವರ ವಿಶೇಷ ವಿಮಾನದಲ್ಲಿಯೇ ದೆಹಲಿ ತಲುಪಿದರು ಎನ್ನಲಾಗಿದೆ.

75 ವಸಂತಗಳ ಸಂಭ್ರಮದಲ್ಲಿ ಯುಬಿಡಿಟಿ

ದಾವಣಗೆರೆ: ನಗರದ ಯುಬಿಡಿಟಿ ಎಂಜಿನಿಯರಿಂಗ್ ಕಾಲೇಜಿಗೆ 75 ವರ್ಷಗಳ ತುಂಬಿದ ಹಿನ್ನೆಲೆ ಮೇ 29 ಮತ್ತು 30ರಂದು ಎರಡು ದಿನಗಳ ಕಾಲ ಕಾಲೇಜಿನ ಅಮೃತ ಮಹೋತ್ಸವವನ್ನು ವಿಶ್ವವಿದ್ಯಾಲಯದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ಹೇಳಿದರು. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮಕ್ಕೆ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಹಾಗೂ ರಾಜ್ಯಪಾಲ ಥಾರ್ವಚಂದ್ ಗೆಹ್ಲೋತ್ ಭಾಗವಹಿಸಲಿದ್ದಾರೆ ಎಂದರು.

ಬೆಳಗ್ಗೆ 11 ಗಂಟೆಗೆ ಉದ್ಘಾಟನೆ ನಡೆಯಲಿದ್ದು, ಉಪ ರಾಷ್ಟ್ರಪತಿಗಳ ಜತೆಗೆ ರಾಜ್ಯದ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ನಿರ್ಮಲಾನಂದನಾಥ ಶ್ರೀ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಬಂಡಾಯ ಮಾತಿಗೆ ಸಿದ್ದು ಬ್ರೇಕ್

← ಮೊದಲಪುಟದಿಂದ

ಆದರೆ ಇದ್ಯಾವುದಕ್ಕೂ ಸಿದ್ದರಾಮಯ್ಯ ಉತ್ತರಿಸಿಲ್ಲ ಎನ್ನಲಾಗಿದೆ.

ಗುರುವಾರ ಬೆಳಗ್ಗೆ ಸಿದ್ದರಾಮಯ್ಯ ನಿವಾಸಕ್ಕೆ ಆಗಮಿಸಿದ ಶಾಸಕರು, ಸಚಿವರು ಏಕಾಏಕಿ ರಾಜೀನಾಮೆಯ ತೀರ್ಮಾನ ಕೈಗೊಳ್ಳಬೇಡಿ. 2023ರಲ್ಲಿ ಸರಕಾರ ರಚನೆಯ ವೇಳೆ ಯಾವ ರೀತಿಯಲ್ಲಿ ತಲೆಎಣಿಕೆ ಮಾಡಿ ಮುಖ್ಯಮಂತ್ರಿಗಳ ಆಯ್ಕೆಯಾಗಿತ್ತೋ, ಈಗಲೂ ಅದೇ ರೀತಿ ಶಾಸಕಾಂಗ ಪಕ್ಷದ ಸಭೆ ಕರೆಯಲಿ. ಅಲ್ಲಿ ನಾವು ಮಾತನಾಡೋಣ. ಇಲ್ಲದಿದ್ದರೆ ನಿಮ್ಮ ಪರವಾಗಿ ಎಷ್ಟು ಶಾಸಕರಿದ್ದಾರೆ ಎನ್ನುವುದನ್ನು ಹೈಕಮಾಂಡ್‌ಗೆ ಮನವರಿಕೆ ಮಾಡಿಕೊಡಲು ಸಹಿ ಸಂಗ್ರಹ ಮಾಡೋಣ ಎನ್ನುವ ಸಲಹೆ ನೀಡಿದ್ದಾರೆ.

ಆದರೆ ಆಪ್ತ ಶಾಸಕರ ಈ ಯಾವ ಮಾತಿಗೂ ಸೊಪ್ಪು ಹಾಕದ ಸಿದ್ದರಾಮಯ್ಯ ಅವರು, ಈಗಾಗಲೇ ಹೈಕಮಾಂಡ್ ಬಳಿ ರಾಜೀನಾಮೆ ನೀಡುವುದಾಗಿ ಹೇಳಿ ಬಂದಿದ್ದೇನೆ. ಆದ್ದರಿಂದ ಈ ಹಂತದಲ್ಲಿ ಬಂಡಾಯ, ಸಹಿ ಸಂಗ್ರಹ ಮಾಡುವುದು ಸರಿಯಲ್ಲ. ಆದ್ದರಿಂದ ಶಾಸಕರು, ಸಚಿವರು ಯಾವುದೇ ಕಾರಣಕ್ಕೂ ಈ ರೀತಿಯ ನಿರ್ಧಾರ ಮಾಡಬೇಡಿ. ರಾಜ್ಯಾದ್ಯಂತ ಎಲ್ಲಿಯೂ ಪ್ರತಿಭಟನೆ, ಗಲಾಟೆಯನ್ನು ಮಾಡದಂತೆ ಹೇಳಿದ್ದಾರೆ ಎನ್ನುವ ಮಾತನ್ನು ಆಪ್ತರಿಗೆ ಹೇಳಿದ್ದಾರೆ ಎಂದು ತಿಳಿದುಬಂದಿದೆ.

ಸಿಎಲ್‌ಪಿ ಸಭೆಗೂ ಮೀನಾಮೇಷ

ಸಿದ್ದರಾಮಯ್ಯ ಅವರು ಯಾವುದೇ ರೀತಿ ಗೊಂದಲ ಅಥವಾ ಕಿರಿಕಿರಿ ಮಾಡಿಕೊಂಡು ಅಧಿಕಾರದಿಂದ ಕೆಳಗೆ ಇಳಿಯುವುದು ಬೇಡ ಎನ್ನುವ ಮನಸ್ಥಿತಿಯಲ್ಲಿದ್ದರೂ, ಆಪ್ತ ಶಾಸಕರು, ಸಚಿವರು ಸಿದ್ದರಾಮಯ್ಯ ಅವರನ್ನು ಕೆಳಗೆ ಇಳಿಸುವುದನ್ನು ಪ್ರಶ್ನಿಸುವ ಮನಸ್ಥಿತಿಯಲ್ಲಿದ್ದಾರೆ. ಈ ಕಾರಣಕ್ಕಾಗಿಯೇ ಗುರುವಾರ ಸಂಜೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಕರೆಯುವ ಮಾತುಗಳು ಕೇಳಿಬಂದಿದ್ದರೂ, ಸದ್ಯಕ್ಕೆ ಯಾವುದೇ ರೀತಿಯ ಸಭೆ ಕರೆಯುವುದು ಬೇಡ ಎನ್ನುವ ತೀರ್ಮಾನವನ್ನು ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ತೆಗೆದುಕೊಂಡಿದ್ದಾರೆ. ಸಿದ್ದರಾಮಯ್ಯ ಅವರು ರಾಜೀನಾಮೆ ಸಲ್ಲಿಸಿ, ಅದು ಅಂಗೀಕಾರವಾದ ಬಳಿಕ ಭಾನುವಾರದ ವೇಳೆ ಔಪಚಾರಿಕ ಸಭೆ ನಡೆಸಿ, ಡಿ.ಕೆ. ಶಿವಕುಮಾರ್ ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಲು ತೀರ್ಮಾನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸಿದ್ದು ಪತ್ನಿಗೆ ರಾಜ್ಯಸಭೆ ಆಫರ್!

← ಮೊದಲಪುಟದಿಂದ

ಮೂಲಗಳ ಪ್ರಕಾರ, 'ಮುಖ್ಯಮಂತ್ರಿ ಸ್ಥಾನ ದಿಂದ ಕೆಳಗಿಳಿಯಿರಿ' ಎಂದರೆ ಸಿದ್ದರಾಮಯ್ಯ ಮುನಿಸಿಕೊಂಡು, ಹೈಡ್ರಾಮ ಸೃಷ್ಟಿಸುತ್ತಾರೆ ಎನ್ನುವ ಆತಂಕದಲ್ಲಿ ಪಕ್ಷದ ವರಿಷ್ಠರಿದ್ದರು. ಆದ್ದರಿಂದ ಅವರನ್ನು ರಾಜ್ಯ ಸಭೆಗೆ ಕರೆಸಿಕೊಂಡು, ಮುಖ್ಯಮಂತ್ರಿ ಸ್ಥಾನದ ಮೇಲೆ ಡಿ.ಕೆ.ಶಿವಕುಮಾರ್ ಅವರನ್ನು ಕೂರಿ ಸೋಣ ಎನ್ನುವ ಲೆಕ್ಕಾಚಾರದಲ್ಲಿದ್ದರು. ಆದರೆ ಮೊದಲಿನಿಂದಲು ರಾಷ್ಟ್ರೀಯ ರಾಜಕಾರಣದ ಒಲವಿಲ್ಲದ ಕಾರಣ, ಸಿದ್ದರಾಮಯ್ಯ ಅವರು 'ರಾಜೀನಾಮೆ ನೀಡುವೆ. ಆದರೆ ದೆಹಲಿಗೆ ಬರುವುದಿಲ್ಲ. ರಾಜ್ಯ ರಾಜಕೀಯದಲ್ಲಿಯೇ ಮುಂದುವರಿಯುವೆ' ಎನ್ನುವ ಮಾತನ್ನು ಹೈಕಮಾಂಡ್‌ಗೆ ಸ್ಪಷ್ಟಪಡಿಸಿದ್ದರು. ಯಾವಾಗ ಸಿದ್ದರಾಮಯ್ಯ ಅವರು ದೆಹಲಿಗೆ ಬರುವುದಿಲ್ಲ ಎನ್ನುವುದು ಖಚಿತವಾಯಿತೋ, ಆಗ ಪುತ್ರ ಯತೀಂದ್ರ ಸಿದ್ದರಾಮಯ್ಯ ಅವರು ಈಗಾಗಲೇ ವಿಧಾನಪರಿಷತ್ ಸದಸ್ಯರಾಗಿದ್ದಾರೆ. ಆದ್ದರಿಂದ ಅವರ ಪತ್ನಿ ಪಾರ್ವತಿ ಅವರನ್ನು ಕರ್ನಾಟಕದಿಂದ ರಾಜ್ಯಸಭೆಗೆ ಕಳುಹಿಸಿ ಸಿದ್ದರಾಮಯ್ಯ ಹಾಗೂ ಆಪ್ತರ ಬೇಸರವನ್ನು ತಣಿಸುವ ಲೆಕ್ಕಾಚಾರದಲ್ಲಿ ಹೈಕಮಾಂಡ್ ಇತ್ತು. ಆದರೆ ಈ ವಿಷಯದಲ್ಲಿ ಮುತ್ಸದ್ದಿತನವನ್ನು ತೋರಿರುವ ಸಿದ್ದರಾಮಯ್ಯ ಅವರು, 'ಇಷ್ಟು ದಿನ ನನ್ನ ಪತ್ನಿ ಸಾರ್ವ ಜನಿಕವಾಗಿ ಎಲ್ಲಿಯೂ ಕಾಣಿಸಿಕೊಂಡಿಲ್ಲ. ಹೀಗಿರುವಾಗ ರಾಜ್ಯಸಭೆಗೆ ಆಯ್ಕೆ ಮಾಡುವುದು ಸರಿಯಲ್ಲ. ನಾನು ಪಕ್ಷದ ಹೈಕಮಾಂಡ್ ಮಾತಿಗೆ ಬೆಲೆ ಕೊಟ್ಟು ರಾಜೀನಾಮೆ ನೀಡು ತ್ತೇನೆ. ಪತ್ನಿಗೆ ಯಾವುದೇ ಸ್ಥಾನಮಾನ ಬೇಡ' ಎನ್ನುವ ಸ್ಪಷ್ಟ ಮಾತನ್ನು ರಾಹುಲ್ ಗಾಂಧಿ ಮುಂದೆಯೇ ಆಡಿದ್ದಾರೆ ಎಂದು ಖಚಿತ ಮೂಲಗಳು ತಿಳಿಸಿವೆ.

ಹಾಸನ ನಗರದಲ್ಲಿ ಗುರುವಾರ ಸಂಜೆ ಭಾರೀ ಮಳೆ ಸುರಿಯಿತು.

ಹಾಸನದಲ್ಲಿ ಮಳೆ: ರೈತರಲ್ಲಿ ಸಂತಸ

ಹಾಸನ: ಜಿಲ್ಲೆಯ ವಿವಿಧೆಡೆ ಗುರುವಾರ ಭಾರೀ ಮಳೆಯಾಗಿದೆ. ಒಂದು ಗಂಟೆಗೂ ಹೆಚ್ಚು ಕಾಲ ನಿರಂತರವಾಗಿ ಸುರಿದ ಮಳೆಯಿಂದ ಹಲವಾರು ಅವಾಂತರಗಳು ಸಂಭವಿಸಿ ಜನ ಜೀವನ ಅಸ್ತವ್ಯಸ್ತಗೊಂಡಿದೆ.

ಹಾಸನ, ಅರಸೀಕೆರೆ, ಚನ್ನರಾಯಪಟ್ಟಣ ತಾಲೂಕಿನ ವಿವಿಧೆಡೆ ವರುಣ ಅಬ್ಬರಿಸಿದ್ದು, ಗುಡುಗು, ಸಿಡಿಲು ಸಹಿತ ಸುರಿದ ಮಳೆಗೆ ಜನರು ತತ್ತರಿಸಿದ್ದಾರೆ. ಮಳೆಗೆ ವಾಹನ ಸವಾರರು, ಬೀದಿ ಬದಿ ವ್ಯಾಪಾರಿಗಳು ಪರದಾಡುವಂತಾಗಿತ್ತು. ಕಳೆದ ಮೂರು ದಿನಗಳಿಂದ ನಿರಂತರವಾಗಿ ಮಳೆಯಾಗುತ್ತಿದ್ದು, ಉತ್ತಮ ಮಳೆಯಿಂದ ರೈತರ ಮೊಗದಲ್ಲಿ ಮಂದಹಾಸ ಮೂಡಿದೆ.

ಆದರೆ ಕೃಷಿ ಚಟುವಟಿಕೆಗೂ ಮಳೆ ಬಿಡುವು ನೀಡುತ್ತಿಲ್ಲ. ಮಳೆ ಕೊರತೆಯಿಂದ ಕೆರೆ–ಕಟ್ಟೆಗಳು ಖಾಲಿಯಾಗಿದ್ದು, ಜಾನುವಾರುಗಳಿಗೆ ಕುಡಿಯಲು ನೀರಿಲ್ಲದಂತಾಗಿತ್ತು. ಅಲ್ಲದೇ ಹಸಿರು ಮೇವಿಲ್ಲದೆ ರೈತರು ಸಮಸ್ಯೆ ಎದುರಿಸುತ್ತಿದ್ದರು. ಇದೀಗ ಮೂರು ದಿನಗಳಿಂದ ಸುರಿಯುತ್ತಿರುವ ಮಳೆಯಿಂದ ಕೆರೆ–ಕಟ್ಟೆಗಳು ತುಂಬುತ್ತಿದ್ದು, ಹಸಿರು ಮೇವು ಚಿಗುರುತ್ತಿದ್ದು ರೈತರು ಸಂತಸಗೊಂಡಿದ್ದಾರೆ.



QR CODE ಸ್ಕ್ಯಾನ್ ಮಾಡಿ, ಫೋನ್ ಪೇ / ಗೂಗಲ್ ಪೇ ಮಾಡಿದ ಸ್ಕ್ರೀನ್ ಶಾಟ್ ನೊಂದಿಗೆ ನಿಮ್ಮ ವಿಳಾಸವನ್ನು ಕೆಳಗಿನ ವಾಟ್ಸಪ್ ನಂಬರ್‌ಗೆ ಕಳುಹಿಸಿ. ನಿಮ್ಮ ಮನೆ ಬಾಗಿಲಿಗೆ ಪುಸ್ತಕ ತಲುಪಿಸುತ್ತೇವೆ. 63623 93966

ವಿಶ್ವವಾಣಿ ಬೆಂಗಳೂರು 29-05-2026 ಶುಕ್ರವಾರ @vishwavaninews
ಅನುದಿನವೂ ವಿರಾಮಕ್ಕೆ ಒಂದು ನೆಪ
ವಿರಾಮ

ಭಾವುಕತೆ

ಬಾಗಿಲು

ಒಬ್ಬ ಮನುಷ್ಯ ತನ್ನ ಪ್ರಿಯತಮೆಯ ಮನೆಯ ಬಾಗಿಲು ತಟ್ಟಿದ. ಒಳಗಿಂದ ಧ್ವನಿ ಬಂತು: ಯಾರು? ಅವನು ಹೇಳಿದ: ನಾನು ಬಾಗಿಲು ತೆರೆಯಲಿಲ್ಲ. ಅವನು ದುಃಖದಿಂದ ಹಿಂತಿರುಗಿದ. ದಿನಗಳು ಕಳೆದವು. ಮನಸ್ಸು ಬದಲಾಯಿತು. ಅಹಂಕಾರ ಕರಗಿತು. ಮತ್ತೆ ಬಂದು ಬಾಗಿಲು ತಟ್ಟಿದ. ಒಳಗಿಂದ ಅದೇ ಪ್ರಶ್ನೆ: ಯಾರು? ಈ ಬಾರಿ ಅವನು ಉತ್ತರಿಸಿದ: ನೀನೇ. ಬಾಗಿಲು ತಕ್ಷಣ ತೆರೆಯಿತು. ಇದೊಂದು ಸೂಫಿ ಕತೆ. ನಾನು ಎನ್ನುವ ಅಹಂಕಾರ ಇರುವವರೆಗೆ ದೇವರ ಬಾಗಿಲು ತೆಗೆಯುವುದಿಲ್ಲ. ನಾನು ಕರಗಿದಾಗ, ಪ್ರೀತಿ ಮಾತ್ರ ಉಳಿಯುತ್ತದೆ. ಆಗ ನಾನು ಮತ್ತು ನೀನು ಎನ್ನುವ ಗಡಿ ಮಾಯವಾಗುತ್ತದೆ. ನೀನು ಸಮುದ್ರದ ಒಂದು ಹನಿ ಅಲ್ಲ, ನೀನೇ ಹನಿಯಲ್ಲಿರುವ ಸಮುದ್ರ ಎಂಬುದು ಅದರ ಧ್ವನಿ.

ಸುತ್ತಮುತ್ತ

ಹಾವುಗಳ ಊರು

ಮಹಾರಾಷ್ಟ್ರದ ಶೇತ್‌ಪಾಲ್ ಎಂಬ ಊರು, 'ನಾಗರಹಾವುಗಳ ಊರು' ಎಂದೇ ಪ್ರಸಿದ್ಧವಾಗಿದೆ. ಬೆಂಗಳೂರಿನಲ್ಲಿ ಬೀದಿನಾಯಿಗಳು ನಿರ್ಭಯವಾಗಿ ತಿರುಗಾಡಿಕೊಂಡು ಇರುವಂತೆ, ಈ ಊರಿನಲ್ಲಿ ಹಾವುಗಳು ರಾಜಾರೋಷವಾಗಿ ಸಂಚರಿಸುತ್ತಿರುತ್ತವೆ. ಇಲ್ಲಿನ ಜನರಿಗೂ ಆ ಬಗ್ಗೆ ಅಂಜಿಕೆಯಿಲ್ಲ. ತಲೆಮಾರುಗಳಿಂದ ಇಲ್ಲಿನ ಜನತೆ ಹಾವುಗಳಿಗೆ ಒಗ್ಗಿಕೊಂಡಿದ್ದಾರೆ. ಹಾವುಗಳನ್ನು ತಮ್ಮ ಮನೆಯೊಳಗೆ ಓಡಾಡಲು ಬಿಡುತ್ತಾರೆ. ಹಾವುಗಳು ವಿಶ್ರಮಿಸಲೆಂದೇ ತಂಪಾದ ಕೆಲವು ಜಾಗಗಳನ್ನು ಮನೆಯೊಳಗೆ ಸೃಷ್ಟಿ ಮಾಡಿ ಬಿಟ್ಟು ಬಿಡುತ್ತಾರೆ. ನಾಗರಪಂಚಮಿ ಇಲ್ಲಿನವರಿಗೆ ದೊಡ್ಡ ಹಬ್ಬ. ಕೃಷಿ ಇಲ್ಲಿನ ಜೀವನ ವಿಧಾನ. ಹಾವುಗಳಿಂದ ಜೀವಹಾನಿಯಾದ ಉದಾಹರಣೆ ಇಲ್ಲಿ ಕಡಿಮೆ.

ಹನಿ ಕವಿತೆ

ಪ್ರೇಮಿಯನ್ನು ಕಳೆದುಕೊಂಡ
ಮರುದಿನ ಬರೆದ
ಕವಿತೆಯಲ್ಲಿನ ವಿರಹ
ಅಧಿಕಾರ ಕಳೆದುಕೊಂಡ
ಮರುದಿನದ ವಿಷಾದದಂತೆ

● ನೀತಾ ರಾವ್

ಆಧ್ಯಾತ್ಮಿಕ ಸಾಧನೆಗೆ ಆಲೂಗಡ್ಡೆ ಸಹಕಾರಿ!

ಮೇ 30 ಅಂತಾರಾಷ್ಟ್ರೀಯ ಆಲೂಗಡ್ಡೆ ದಿನ

● ದೀಪಶ್ರೀ ಎಸ್. ಕೂಡ್ಲಿಗಿ

ಆಲೂಗಡ್ಡೆ ಚಿಪ್ಸ್, ಪರೋಟ, ಸಾಗು, ಹಪ್ಪಳ, ಗೋಬಿ ಇತ್ಯಾದಿ ಆಲೂಗಡ್ಡೆಯಿಂದ ಹಲವಾರು ರೆಸಿಪಿಗಳನ್ನು ಮಾಡಬಹುದು. ಈ ತರಕಾರಿಯನ್ನು ಇಷ್ಟಪಡದವರೇ ಇಲ್ಲ. ಮಕ್ಕಳಿಂದ ಹಿಡಿದು ವೃದ್ಧರವರೆಗೂ ಎಲ್ಲರೂ ತಿನ್ನಲು ಬಯಸುತ್ತಾರೆ. ಯುವಕರಿಂದ ಹಿಡಿದು ಮುದುಕರವರೆಗೂ ಮನಮುಟ್ಟುವ ಈ ತರಕಾರಿ ಭಾರತಕ್ಕೆ ಲಗ್ಗೆ ಇಟ್ಟಿದ್ದು 16ನೇ ಶತಮಾನದಲ್ಲಿ. ಪೋರ್ಚುಗೀಸರು ಭಾರತಕ್ಕೆ ಆಲೂಗಡ್ಡೆಯನ್ನು ಪರಿಚಯಿಸಿದರು. ಪ್ರತಿ ವರ್ಷ ಮೇ 30 ರಂದು ಅಂತಾರಾಷ್ಟ್ರೀಯ ಆಲೂಗಡ್ಡೆ ದಿನವನ್ನಾಗಿ ಆಚರಿಸಲಾಗುತ್ತದೆ. ಈ ವರ್ಷದ ಥೀಮ್ 'ಆಲೂಗಡ್ಡೆಯನ್ನು ಎಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತದೆಯೋ ಅಲ್ಲಿ ಜೀವನೋಪಾಯವು ಅಭಿವೃದ್ಧಿ ಹೊಂದುತ್ತದೆ.' ಆಲೂಗಡ್ಡೆ ಬಾಯಿ ರುಚಿಗೆ ಮಾತ್ರ ಸೀಮಿತವಾಗದೆ ದೈವಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಸಮ್ಮಿಳಿತವಾಗಿದೆ.

ಆಲೂಗಡ್ಡೆಯು ಆಧ್ಯಾತ್ಮಿಕತೆಯನ್ನು ಸಂಕೇತಿಸುತ್ತದೆ. ಇದು ಭೂಮಿಯ ಆಳದಲ್ಲಿ ಬೆಳೆಯುವುದರಿಂದ ಭೂಮಾತೆ ಹಾಗೂ ಪ್ರಕೃತಿಯೊಂದಿಗೆ ತಾಯಿ ಹಾಗೂ ಮಗುವಿನ ಬಾಂಧವ್ಯವನ್ನು ತಿಳಿಸುತ್ತದೆ. ಹೆಚ್ಚಿನ ಭಾರತೀಯರು ಆಧ್ಯಾತ್ಮಿಕ ಹಾಗೂ ಧಾರ್ಮಿಕ ಉಪವಾಸದ ಸಮಯದಲ್ಲಿ ಅಂದರೆ ನವರಾತ್ರಿ, ಮಹಾಶಿವರಾತ್ರಿ, ಏಕಾದಶಿ ದಿನಗಳಲ್ಲಿ ಅನ್ನದ ಬದಲಿಗೆ ಆಲೂಗಡ್ಡೆಯನ್ನು ಪ್ರಮುಖ ಆಹಾರವಾಗಿ ಸೇವನೆ ಮಾಡುತ್ತಾರೆ. ಉಪವಾಸದ ಅವಧಿಯಲ್ಲಿ ದೇಹಕ್ಕೆ ಅಗಾಧ ಪ್ರಮಾಣದಲ್ಲಿ ಆಲೂಗಡ್ಡೆ ಶಕ್ತಿ ನೀಡುವ ಮೂಲಕ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಆಚರಣೆಗಳಿಗೆ ನೆರವು ನೀಡುತ್ತದೆ.

ಇತಿಹಾಸವನ್ನು ತಿರುವಿ ಹಾಕಿ ನೋಡಿದಾಗ ಪೆರುದೇಶದ ಇಂಕಾ ಜನಾಂಗದವರು ಆಲೂಗಡ್ಡೆ ಯನ್ನು ಅಕ್ಷೂಮಾಮ (Axomamma) ಎಂಬ ದೇವತೆಯ ಹೆಸರಿನಲ್ಲಿ ಪೂಜಿಸುತ್ತಾರೆ ಎಂಬ ಉಲ್ಲೇಖವಿದೆ. ಆಲೂಗಡ್ಡೆ ಕೃಷಿ ಸಂಸ್ಕೃತಿಯಲ್ಲಿ ದೈವಿಕ ಕೃಪೆಯ ಪ್ರಸಾದವಾಗಿದೆ.

ಆಧ್ಯಾತ್ಮಿಕ ಚಿಂತಕರಾದ ಅಲಾನ್ ವಾಟ್ಸ್ (Alan Watts) ಪ್ರಕಾರ ಝೆನ್ ಆಲೋಚನೆಯಲ್ಲಿ ಆಲೂಗಡ್ಡೆಯನ್ನು ಉದಾಹರಿಸಿದ್ದಾರೆ. ಆಧ್ಯಾತ್ಮಿಕತೆ ಎಂದರೆ ಕೇವಲ ಆಲೋಚನೆಯಲ್ಲ ಬದಲಿಗೆ ಕಾಯಕದಲ್ಲಿ ಸಮಗ್ರವಾಗಿ ವಿಲೀನವಾಗುವುದು ಎಂದಿದ್ದಾರೆ. ಮುಂದುವರೆದು, ಒಂದು ಆಲೂಗಡ್ಡೆ ಸಿಪ್ಪೆ ಸುಲಿಯುವುದನ್ನು ಸಹ ನಾವು ಪೂರ್ಣಪ್ರಜ್ಞೆ ಹಾಗೂ ಏಕಾಗ್ರತೆಯಿಂದ ಮಾಡಿದಾಗ ಮಾತ್ರ ಧ್ಯಾನಸ್ಥ ಸ್ಥಿತಿ ಲಭ್ಯವಾಗುತ್ತದೆ ಎಂದಿದ್ದಾರೆ. (Zen is to be there while the potato gets peeled)

ಆಲೂಗಡ್ಡೆ ನರಗಳನ್ನು ಶಾಂತಗೊಳಿಸುವ ಗುಣ ಹೊಂದಿದ್ದು ಧ್ಯಾನಕ್ಕೆ ಯೋಗ್ಯ ವಾತಾವರಣವನ್ನು ಉಂಟುಮಾಡುತ್ತದೆ. ದೈವಿಕ ಸಾಧನೆಗೆ ಈ ತರಕಾರಿ ಸಹಕಾರಿಯಾಗಿದೆ. ಮನಸ್ಸಿನ ಶಾಂತತೆಗೆ, ಆಲೂವಿನಲ್ಲಿರುವಂತಹ ವಿಟಮಿನ್ ಬಿ6, ಇ, ಪೊಟ್ಯಾಶಿಯಂ ಮಿದುಳಿನ ಆರೋಗ್ಯವನ್ನು ಕಾಪಾಡಿ ಸೂಪ್ತತೆಯನ್ನು ಬಲಪಡಿಸುತ್ತದೆ.

ಆಲೂಗಡ್ಡೆಯು ಪ್ರಕೃತಿಯೊಂದಿಗೆ ವಿನಮ್ರತೆ ಹಾಗೂ ಸರಳತೆಯನ್ನು ಸೂಚಿಸುವ ಸಂಕೇತವಾಗಿದೆ. ಆಯುರ್ವೇದ ಹಾಗೂ ಯೋಗ ಸಂಪ್ರದಾಯದ ಪ್ರಕಾರ ಆಲೂಗಡ್ಡೆಯನ್ನು ಸಾತ್ವಿಕ ತರಕಾರಿ ಎಂದು ಪರಿಗಣನೆ ಮಾಡಲಾಗಿದೆ. ಭಾರತೀಯ ಸಾಂಪ್ರದಾಯಿಕತೆಯಲ್ಲಿ ಕೆಲ ಆಧ್ಯಾತ್ಮಿಕ ಸಾಧಕರು ಕೇವಲ ಆಲೂಗಡ್ಡೆ ಸೇವಿಸಿ ಕಠಿಣ ತಪಸ್ಸನ್ನು ಮಾಡಿದ ನಿದರ್ಶನಗಳಿವೆ. ಧನಾತ್ಮಕ ದೃಷ್ಟಿಯಿಂದ ಆಲೂಗಡ್ಡೆ ಉಪಯುಕ್ತ.

ಆಲೂಗಡ್ಡೆಯ ಮೇಲೆ ಮೊಳಕೆಗಳು ಜನಿಸಿದಾಗ ಅದನ್ನು ದೈವಿಕ ಆಕೃತಿ ಎಂದು ಭಾವಿಸಿ ಪೂಜಿಸುವ ನಂಬಿಕೆಗಳಿವೆ. ಉದಾಹರಣೆಗೆ ನೋಡುವು ದಾದರೆ ಉತ್ತರ ಪ್ರದೇಶ ದಲ್ಲಿ ತುಳಸಿ ಮಾನಸ ದೇವಸ್ಥಾನದಲ್ಲಿ ಆಲೂಗಡ್ಡೆಯ ಮೇಲೆ ಮೊಳಕೆಗಳು ಕಂಡು ಬಂದಾಗ ಭಕ್ತರು ಭಕ್ತಿಯಿಂದ ಪೂಜಿಸುತ್ತಾರೆ. ತಮೋಗುಣವನ್ನು ಹೊಂದಿರುವುದರಿಂದ ಹಬ್ಬ, ಹರಿದಿನ, ಕಾರ್ಯಕ್ರಮ ಇತ್ಯಾದಿಗಳಲ್ಲಿ ಈ ತರಕಾರಿಯನ್ನು ಬಳಸುವುದುಂಟು.

ಒಂದು ಕೊಳೆತ ಆಲೂಗಡ್ಡೆಯನ್ನು ಉತ್ತಮ ಆಲೂಗಡ್ಡೆಯ ಜತೆಯಿಟ್ಟರೆ ಉಳಿದ ಆಲೂಗಡ್ಡೆಗಳು ಕೊಳೆತು ಹೋಗುತ್ತವೆ. ಅಂತೆಯೇ ಆಧ್ಯಾತ್ಮಿಕ ಸಾಧಕರು ದುಷ್ಟರ ಸಹವಾಸ ಹೊಂದಿದರೆ ಅವರ ಬದುಕು ಕೊಳೆತ ಆಲೂಗಡ್ಡೆಯಂತೆ ನಾಶವಾಗುವಲ್ಲಿ ಸಂದೇಹವಿಲ್ಲ ಎಂದು ಗುರುಗಳು ಉಪದೇಶಿಸಿದ್ದಾರೆ.

ಭೂಮಿಯ ಮಗು ಎಂದು ಕರೆಯಲ್ಪಡುವ ಆಲೂ ನಿಸರ್ಗದ ನಿಯಮಗಳನ್ನು ಅರ್ಥೈಸಿಕೊಳ್ಳುವಲ್ಲಿ ಸ್ಫೂರ್ತಿಯ ಸೆಲೆಯಾಗಿದೆ. ಸಾತ್ವಿಕ ಆಹಾರವಾಗಿದ್ದು ಧ್ಯಾನ, ಜಪದ ವೇಳೆಯಲ್ಲಿ ಮಾನಸಿಕ ಏಕಾಗ್ರತೆಯನ್ನು ಹೆಚ್ಚಿಸುತ್ತದೆ.

ಸೂರ್ಯನ ಬೆಳಕಿಲ್ಲದೆ ಕತ್ತಲೆಯಲ್ಲಿ ಮೊಳಕೆಯೊಡೆಯುವ ಆಲೂಗಡ್ಡೆ ಮನುಷ್ಯನಿಗೆ ಜೀವನದ ಸಾಕಷ್ಟು ಹಂತದಲ್ಲಿ ಹೊಸಜೀವನ, ಧೈರ್ಯ ಕಂಡುಕೊಳ್ಳುವ ನವಚೇತನ ನೀಡುತ್ತದೆ. (Dark knight of the soul). ಆಲೂಗಡ್ಡೆಯು ಕೇವಲ ಅಡುಗೆ ಮನೆಗೆ ಮಾತ್ರ ಸೀಮಿತವಾಗದೇ ಅದರಿಂದಾಚೆ ಆಧ್ಯಾತ್ಮಿಕತೆಗೂ ತನ್ನದೇ ಆದ ಕೊಡುಗೆಯನ್ನು ನೀಡುತ್ತಿದೆ.

ಲೇಖಕಿ: ಶಿಕ್ಷಕಿ, ಕಥೆಗಾರ್ತಿ, ಹವ್ಯಾಸಿ ಬರಹಗಾರ್ತಿ

ಶ್ರಮವಿದ್ದರೆ ವಿಜಯ ನಿನ್ನದೇ...

● ರಂಗನಾಥ್ ಗುಡಿಮನಿ, ಸಿದ್ದಾಪುರ

ಜಗತ್ತಿನಲ್ಲಿಯೇ ಅತ್ಯಂತ ಬೆಲೆಬಾಳುವ, ಬೇಡಿಕೆಯುಳ್ಳ ಸಂಗತಿಯೇ ವಿಜಯ. ಇದೊಂದು ಮಾಯಾವಿ ಇದ್ದಂತೆ. ಒಂದೇ ದಿನಕ್ಕೆ ಸಿಗುವುದಿಲ್ಲ. ಆದರೆ, ಒಂದಲ್ಲ ಒಂದು ದಿನ ಸಿಕ್ಕೇ ಸಿಗುತ್ತದೆ. ಇಂತಹ ವಿಜಯಕ್ಕಾಗಿಯೇ ಪ್ರತಿಯೊಬ್ಬರು ಹಗಲಿರುಳೆನ್ನದೆ ಪ್ರತಿಯೊಂದು ಕ್ಷಣ, ನಿಮಿಷ, ದಿನಗಳೆಲ್ಲವನ್ನೂ ಒಂಚೂರು ಎಲ್ಲಿಯೂ ನಾಶವಾಗದಂತೆ ಬಳಸಿಕೊಳ್ಳುವ ಚಾಕಚಕ್ಯತೆ ನಮ್ಮಲ್ಲಿರಲಿ. ನಮ್ಮ ಶ್ರಮವೇ ನಮ್ಮ ವಿಜಯದ ರೂವಾರಿ. ಯಾರಲ್ಲಿ ಅವಿರತ ಶ್ರಮ ಇರುವುದೋ, ಅವರಲ್ಲಿ ವಿಜಯ ರಾರಾಜಿಸುವುದು. ಶ್ರಮವೇ ವಿಜಯಕ್ಕಿರುವ ಮೊಟ್ಟಮೊದಲ ಮೆಟ್ಟಿಲು. ಶ್ರಮವಿಲ್ಲದೇ ಹೋದರೆ ವಿಜಯದ ಕನಸು ಕನಸಾಗಿಯೇ ಉಳಿಯುವುದು. ವಿಜಯಕ್ಕೂ, ಶ್ರಮಕ್ಕೂ ಅವಿನಾಭಾವ ಸಂಬಂಧವಿದೆ. ಇವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. 'ವಿಜಯ' ಎನ್ನುವ ಮಹತ್ವದ ಪುಸ್ತಕದ ಮುನ್ನುಡಿ ಹಾಗೂ ಬೆನ್ನುಡಿಯೇ ಶ್ರಮವಾಗಿದೆ. ಮೇಲಾಗಿ ಶ್ರಮದಿಂದಲೇ ವಿಜಯಕ್ಕೊಂದು ಹೊಸ ವ್ಯಾಖ್ಯಾನವನ್ನು ಬರೆಯಬಹುದು.

ಶ್ರಮಕ್ಕೆ ಸರಿಸಮನಾದ ಶಕ್ತಿ ಮತ್ತೊಂದಿಲ್ಲ. ಶ್ರಮವೇ ನಮ್ಮೆಲ್ಲ ಅಗೋಚರ ಶಕ್ತಿಗಳ ಮೂಲಸ್ಥಾನ. ಶ್ರಮವು ನಮ್ಮೊಳಗಿನ ನಮ್ಮನ್ನು ಕೂಲಂಕಷವಾಗಿ ಪರೀಕ್ಷಿಸಿದರೆ, ವಿಜಯ ನಮ್ಮನ್ನು ಎಲ್ಲರಿಗೂ ಪರಿಚಯಿಸುವುದು. ಪ್ರತಿಯೊಬ್ಬರು ಪ್ರತಿಯೊಂದು ಕ್ಷೇತ್ರಗಳಲ್ಲಿ ತಮ್ಮದೇಯಾದ ಗುರುತರ ಸಾಧನೆ, ಸ್ಥಾನಮಾನ ಪಡೆದುಕೊಳ್ಳಲು ಶ್ರಮವೇ ಬಹುಮುಖ್ಯ ಸಾಧನ. ಇಂದಿನ ಸೋಲನ್ನು ನಾಳಿನ ಗೆಲುವನ್ನಾಗಿ ಪರಿವರ್ತಿಸುವ ತಾಕತ್ತು ಶ್ರಮಕ್ಕಿದೆ. ಶ್ರಮಪಟ್ಟು ಸೋತವ ಇತಿಹಾಸದಲ್ಲಿಯೇ ಸಿಕ್ಕುವುದಿಲ್ಲ. ಅಕಸ್ಮಾತ್ ಸೋತರದು ಸೋಲೇ ಅಲ್ಲ. ಶ್ರಮವನ್ನು ನೆಚ್ಚಿ ಬದುಕಿದರೆ ಯಾವುದೇ, ಎಂಥದೇ ಪ್ರಸಂಗಗಳಲ್ಲಿ ತಲೆ ತಗ್ಗಿಸುವ ಪ್ರಮೇಯವೇ ಬರುವುದಿಲ್ಲ.

ನಾವು ಬೆಳೆಯುವುದು, ಅಳಿಯುವುದು ಎಲ್ಲವೂ ಶ್ರಮದಿಂದಲೇ. ಶ್ರಮವನ್ನು ನಂಬಿ ಬದುಕಿದವರೆಲ್ಲ ಬದುಕೇ ಬದಲಾಗಿ ಹೋಗಿದೆ. 'ಶ್ರಮಯೇವ ಜಯತೇ' (ಶ್ರಮವೇ ಜಯಿಸುತ್ತದೆ)ಎನ್ನುವ ಉದಾತ್ತ ಚಿಂತನೆಯ ಜತೆ ಜತೆಗೆ ಶ್ರಮ ಸಂಸ್ಕೃತಿಯು ನಮ್ಮಲ್ಲಿರಲಿ. ಪ್ರತಿಯೊಂದು ಕೆಲಸ ಕಾರ್ಯಗಳ ಮೇಲೆ ನಾವು ಹಾಕಿದ ಶ್ರಮವು ಎಂದಿಗೂ ವ್ಯರ್ಥವಾಗುವುದಿಲ್ಲ. ಬದುಕಲ್ಲಿ ಬಯಸಿದ್ದು ಸಿಗದೇ ಇರಬಹುದು. ಆದರೆ ಶ್ರಮದಿಂದ ಗಳಿಸಿದ್ದು ತಡವಾದರೂ ಪರವಾಗಿಲ್ಲ ಸಿಕ್ಕೇ ಸಿಗುವುದು. ಅದಕ್ಕೆಂದೇ ಸ್ವಾತಂತ್ರ್ಯ ಹೋರಾಟಗಾರ ಸುಭಾಷ್ ಚಂದ್ರ ಬೋಸ್ ಅವರು–'ಶ್ರಮ ನಮ್ಮ ಆಯುಧವಾದರೆ, ವಿಜಯ ನಮ್ಮ ಗುಲಾಮ' ಎನ್ನುವ ಮಾತು ತುಂಬಾನೇ ಅರ್ಥಪೂರ್ಣ. ಶ್ರಮಪಡುವ ಶ್ರಮಿಕನಿಗೆ ಇಡೀ ಜಗತ್ತು, ಸಮಾಜ, ಮನುಕುಲವೇ ವಂದಿಸಿ ಗೌರವಿಸುವುದು. ಬದುಕು ನಮ್ಮೆದುರು ನೂರಾರು, ಸಾವಿರಾರು ಹಾದಿಗಳನ್ನು ಹಾಸಿದೆ. ಸೂಕ್ತವಾದುದ್ದನ್ನು ಆಯ್ಕೆ ಮಾಡಿಕೊಂಡು ಶ್ರಮ ವಹಿಸುತ್ತ ಮುನ್ನಡೆದರೆ ಬದುಕು ಮತ್ತಷ್ಟು, ಮಗದಷ್ಟು ಸೊಬಗಿನಿಂದ ಕಂಗೊಳಿಸುವುದರಲ್ಲಿ ಸಂದೇಹವಿಲ್ಲ.

ಮರೆಯಬಾರದ ಜೀವನ ಪಾಠ

● ವಿಜಯ್ ಭಾರದ್ವಾಜ್

ಕಷ್ಟದ ದಿನಗಳು ಜೀವನದ ಕತ್ತಲೆಯ ಅಧ್ಯಾಯಗಳಂತೆ ಕಾಣುತ್ತವೆ. ಎಲ್ಲವೂ ನಮ್ಮ ವಿರುದ್ಧ ನಿಂತಂತಾಗುತ್ತದೆ; ಮನಸ್ಸು ಮಳೆಗಾಲದ ಬೂದು ಆಕಾಶದಂತೆ ಭಾರವಾಗುತ್ತದೆ. ಆದರೆ ಸತ್ಯ ಏನೆಂದರೆ, ಸಂತೋಷ ಎನ್ನುವುದು ಯಾವಾಗಲೂ ಹೊರಗಿನ ಬೆಳಕಿನಿಂದ ಹುಟ್ಟುವುದಿಲ್ಲ. ಅದು ಒಳಗಿನ ಚಿಕ್ಕ ದೀಪದಿಂದ ಹುಟ್ಟುತ್ತದೆ. ಬಿರುಗಾಳಿಯ ಮಧ್ಯೆ ನಿಂತ ಮರದಂತೆ, ಮನಸ್ಸು ಕೂಡ ಬೇರುಗಳನ್ನು ಆಳವಾಗಿ ಹಿಡಿದಾಗ ಮಾತ್ರ ಉಳಿಯುತ್ತದೆ. ದುಃಖ ನಮ್ಮನ್ನು ಮುರಿಯಲು ಬರುವುದಿಲ್ಲ; ಅದು ನಮ್ಮೊಳಗಿನ ಶಕ್ತಿಯನ್ನು ಪರಿಚಯಿಸಲು ಬರುತ್ತದೆ. ಕೆಲವೊಮ್ಮೆ ಕಣ್ಣೀರೇ ಆತ್ಮದ ಮೌನ ಪ್ರಾರ್ಥನೆ ಆಗುತ್ತದೆ. ಜೀವನದಲ್ಲಿ ಪ್ರತಿಯೊಂದು ಗಾಯವೂ ಒಂದು ಪಾಠವನ್ನು ಹೊತ್ತು ತರುತ್ತದೆ. ಒಡೆದ ಕನಸುಗಳ ಶಬ್ದದಲ್ಲೂ ಹೊಸ ಆರಂಭದ ಸಂಗೀತ ಅಡಗಿರುತ್ತದೆ. ಸಂತೋಷ ಎಂದರೆ ಸದಾ ನಗು ಅಲ್ಲ. ನೋವಿನ ನಡುವೆ ಕೂಡ ನಾನು ಇನ್ನೂ ಬದುಕಿದ್ದೇನೆ ಎಂದು ಮನಸ್ಸು ಹೇಳಿಕೊಳ್ಳುವ ಧೈರ್ಯ. ಕೆಲವರು ನಮ್ಮನ್ನು ಬಿಟ್ಟು ಹೋಗುತ್ತಾರೆ, ಕೆಲವು ಕನಸುಗಳು ದಾರಿಯಲ್ಲೇ ಕುಸಿದು ಬೀಳುತ್ತವೆ, ಆದರೆ ಆತ್ಮವಿಶ್ವಾಸ ಉಳಿದಿದ್ದರೆ ಜೀವನ ಮತ್ತೆ ಹೂವಾಗುತ್ತದೆ. ನಾವು ನಮ್ಮನ್ನು ಪ್ರೀತಿಸಲು ಕಲಿತ ಕ್ಷಣದಿಂದಲೇ, ಸಂತೋಷ ನಿಧಾನವಾಗಿ ನಮ್ಮ ಹೃದಯದಲ್ಲಿ ಮನೆ ಕಟ್ಟಲು ಆರಂಭಿಸುತ್ತದೆ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಸಂಸ್ಕೃತ ಪಂಡಿತರ ಬಾಯಿಯಲ್ಲಿ ಬಂದಿರುವ ನೆಲ್ಲಿಕಾಯಿ (4)
3. ದೇಶದ ಪ್ರಜೆಯು ಮಧ್ಯೆ ಹಕ್ಕಿಯ ರೆಕ್ಕೆಯನ್ನು ಸಿಕ್ಕಿಸಿಕೊಂಡಿದ್ದಾನೆ (4)
5. ಶಿವನ ಧನುಸ್ಸಿನ ಹೆಸರು (3)
9. ಈ ಬಂಧನದ ಕೊನೆಗೆ ಇನ್ನೊಂದು ಪರ್ವತವೂ ಇದೆ (4)
10. ನಮ್ಮ ಸುತ್ತಲಿನ ಜನ (4)
11. ಆನೆಯ ಮುಖದ ಗಣಪತಿಗೆ ಮತ್ತೊಂದು ಹೆಸರು (4)
12. ಜೈಲಿಗೆ ಮತ್ತೊಂದು ಹೆಸರು ಮಧ್ಯೆ ಹ್ರಸ್ವವಾಗಿ ಬಂದಿದೆ (4)
15. ಒಂದೇ ಸಮನೆ ಮಾಡುವ ಒತ್ತಾಯ (3)
17. ಪೆನ್ನು ಹಿಡಿದು ಬರೆಯುವವನು (4)
18. ನಕ್ಷತ್ರ ಮತ್ತು ಗ್ರಹಗಳ ಸ್ಥಾನದಿಂದ ಉಂಟಾಗುವ ಫಲ (4)

ಮೇಲಿಂದ ಕೆಳಕ್ಕೆ

1. ಭಾರತದ ಪ್ರಾಚೀನ ವೈದ್ಯ ಪದ್ಧತಿ (4)
2. ವಾನರನಿಗೆ ಮತ್ತೊಂದು ಹೆಸರಿದು (2)
3. ಸತ್ತ ನಂತರ ಎಲ್ಲರೂ ಹೋಗಲು ಬಯಸುವ ಸ್ವರ್ಗ (2)
4. ಕೆಂಪು ಬಣ್ಣದ ಕಣಗಿಲೆ ಹೂವು (4)
6. ನೀರು ಹರಿಯುವ ಕಾಲುವೆ (2)
7. ಪರಾಕಾಷ್ಠೆಗೇರು ಎನ್ನುವ ನುಡಿಗಟ್ಟು (5)
8. ಆಳು, ಸೇವಕನಿಗೆ ಮತ್ತೊಂದು ಹೆಸರು (5)
11. ಬಿಲದ ಬಳಿ ಏನು ಗೊಂದಲ (4)
13. ಭೂಮಿಯ ಕೆಳಗಿರುವುದೆಂದು ನಂಬಲಾಗಿರುವ ಲೋಕ (4)
14. ದಾಖಲೆ ಪತ್ರಗಳ ಕೊನೆಯಲ್ಲಿ ಸೇರಿಸುವ ವಿಶೇಷ ಅಂಶ (2)
15. ಮದುವೆಯ ಗಂಡು (2)
16. ತಲೆಕೆಳಗಾದ ಅಜ್ಜ (2)

ಸರಿಯುತ್ತರಗಳು

[illegible]

ಅಯ್ಯೋ ನಮ್ಮ ಕೈಲಿ ಎಲ್ಲಾಗುತ್ತೆ?

● ಶೋಭಾ ಪುರೋಹಿತ್

ಆರೋಗ್ಯದ ವಿಚಾರ ಇರಬಹುದು, ಹಣಕಾಸಿನ ವಿಷಯ ಇರಬಹುದು, ಒಡವೆ ವಸ್ತು, ಮದುವೆ ಮುಹೂರ್ತ ಎಲ್ಲ ವಿಚಾರಗಳಲ್ಲಿ ಈ ಥರ ರಾಗ ಎಳೆಯೋರೇ ಹೆಚ್ಚು. ಅಯ್ಯೋ ನಮ್ಮ ಕೈಲಿ ಎಲ್ಲಾಗುತ್ತೆ? ತುಂಬಾ ಜನರ ಬಾಯಲ್ಲಿ ಈ ಮಾತು ಕೇಳಿರುತ್ತೇವೆ.

ಇಲ್ಲಿ ಹೋಲಿಕೆ ಮಾಡಿಕೊಂಡು ಕೊರಗುವವರೇ ಹೆಚ್ಚು. ಯಾರೋ ವಿದೇಶ ಯಾತ್ರೆ ಮಾಡಿದರೆ, ನಾವು ನಮ್ಮ ಹತ್ತಿರದ ಊರುಗಳಿಗಾದರೂ ಹೋಗಬಹುದು. ಅವರು ವಿಮಾನದಲ್ಲಿ ಹೋದರೆ ಹೋಗಲಿ, ನಾವು ಹಾಯಾಗಿ ಟ್ರೈನ್‌ನಲ್ಲಿ ಹೋಗೋಣ. ಹಾಗೆ ನೋಡಿದರೆ ವಿಮಾನಯಾನ ಸಮಯ ಉಳಿಸಲು ಹೊರತು ಟ್ರೈನ್‌ನಲ್ಲಿ ಇರುವ ಆರಾಮ ಖಂಡಿತಾ ಇಲ್ಲ. ಟ್ರೈನಿನಲ್ಲಿ ಹೋಗುವಾಗ ಹೊರಗಿನ ಪ್ರಕೃತಿ ಸೌಂದರ್ಯ ಆಸ್ವಾದಿಸಬಹುದು. ಹಾಯಾಗಿ ಕಾಲು ಚಾಚಿ ಕುಳಿತುಕೊಳ್ಳಬಹುದು. ನಾವು ತಂದ ತಿಂಡಿ ಮೆಲ್ಲುತ್ತಾ ಬಿಸಿ ಕಾಫಿ ಕುಡಿಯುತ್ತಾ, ಅಕ್ಕ ಪಕ್ಕದವರೊಡನೆ ಹರಟೆ ಹೊಡೆಯುತ್ತಾ, ಬೇಜಾರಾದಾಗ ಎದ್ದು ಅತ್ತಿತ್ತ ಕಾಲಾಡಿಸಬಹುದು. ಇನ್ನು ರಾತ್ರಿಯಾದರೆ ಮನೆಯಂತೆ ಕಾಲು ಚಾಚಿ, ಹೊದಿಕೆ ಹೊದ್ದು ಮಲಗಬಹುದು. ಇನ್ನು ವಿದೇಶಕ್ಕೆ ಹೋಲಿಸಿದರೆ ನಮ್ಮಲ್ಲೇ ಇರುವ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಮುಗಿಸಲು ಒಂದು ಜನ್ಮ ಬೇಕು.

ಯಾರೋ ಕಾರು ಕೊಂಡರು, ನಮಗೆ ಅನುಕೂಲ ಇಲ್ಲ ಅಂತ ಕೊರಗುವವರೇ ಕೇಳಿ ಕಾರು ಇಟ್ಟುಕೊಂಡವರ ಕಷ್ಟ! ಎಲ್ಲ ಕಡೆ ಪಾರ್ಕಿಂಗ್ ಸಮಸ್ಯೆ. ಪೆಟ್ರೋಲ್, ಡೀಸೆಲ್ ಖರ್ಚು. ಗಾಡಿ ಸ್ವಚ್ಛತೆ ಕಾಪಾಡುವ ತಲೆನೋವು. ಸ್ವಂತ ಗಾಡಿ ಇಲ್ಲದವರು ಆರಾಮವಾಗಿ ಟ್ಯಾಕ್ಸಿ, ಆಟೋಗಳಲ್ಲಿ ಹೋಗಬಹುದು; ಯಾವುದೇ ನಿರ್ವಹಣೆ ವೆಚ್ಚ ಇಲ್ಲ.

ಇನ್ನು ಒಡವೆ ವಿಚಾರಕ್ಕೆ ಬಂದರೆ, ಕಳ್ಳ ಕಾಕರ ಭಯ, ಬ್ಯಾಂಕ್ ಲಾಕರ್‌ನಲ್ಲಿಟ್ಟು, ಬೇಕೆಂದಾಗ ತಂದು ಮತ್ತೆ ಕೊಂಡೊಯ್ದು ಇಡುವ ತಲೆನೋವು. ಮೈಮೇಲೊಂದು, ಬೀರುನಲ್ಲೊಂದು ಇದ್ದರೆ ಸಾಕಲ್ಲವೇ?ಸರಳತೆಯಲ್ಲೂ ಸೌಂದರ್ಯವಿದೆ. ನಮ್ಮ ನಡೆ-ನುಡಿಗಳಿಂದಲೇ ಜನರು ಆಕರ್ಷಿತರಾಗುತ್ತಾರೆ ಹೊರತು ಒಡವೆಯಿಂದಲ್ಲ. ಅವರಿಗೆ ಆರೋಗ್ಯ ಕೊಟ್ಟಿದ್ದಾನೆ, ಟೂರ್ ಮಾಡ್ತಾನೇ ಇರ್ತಾರೆ; ಸರಿ ನಾವು ಹತ್ತಿರದ ರೆಸಾರ್ಟ್‌ನಲ್ಲಿ ಆಗಾಗ ತಂಗಿದ್ದು ಬರಬಹುದು. ಮದುವೆ ಮುಂಜಿ ಅಂತ ನೆಂಟರ ಮನೆಗೆ ಹೋದರೂ, ಅದು ಟೂರೇ ಅಲ್ಲವೇ. ಸ್ಥಳ ಬದಲಾವಣೆ, ನೆಂಟರ ಭೇಟಿ ಮನಸ್ಸಿಗೆ ಉಲ್ಲಾಸ ಕೊಡು ವುದಿಲ್ಲವೇ?

ಅವರು ಬಂಗಲೆ ಕಟ್ಟಿಸಲಿ, ನಾವೊಂದು ಚಿಕ್ಕ ಮನೆ ಕಟ್ಟಬಹುದಲ್ಲವೇ? ಅದೂ ಆಗದೇ? ಸೈಟ್ ತೆಗೆದಿಟ್ಟರೆ, ಮಕ್ಕಳ ಕಾಲಕ್ಕೆ ಮನೆ ಆಗುತ್ತದೆ. ಸ್ವಂತ ಮನೆ ಆದರೆ ಅಲ್ಲೇ ಇರಬೇಕು, ಬಾಡಿಗೆ ಮನೆ ಆದರೆ ಬೇರೆ-ಬೇರೆ ಮನೆಗಳಲ್ಲಿ ವಾಸಿಸಬಹುದು ಅಂತ ತಮಾಷೆಯಾಗಿ ಹೇಳುವುದುಂಟು. ಇರುವುದರಲ್ಲೇ ತೃಪ್ತಿ ಇರಲಿ. ಒಳ್ಳೆಯ ಕಾಲದ ನಿರೀಕ್ಷೆ ಇರಲಿ. ನಮ್ಮ ಬಗ್ಗೆಯೇ ಕೀಳರಿಮೆ ಬೇಡ.

ಲಾಗ ಹೊಡೆಯೋ ಮಂಗಣ್ಣ!

● ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ನಮ್ಮ ಪೌರಾಣಿಕ ಕಥೆಗಳಲ್ಲಿ ಹಾಗೂ ರಾಮಾಯಣದಂತಹ ಮಹಾನ್ ಗ್ರಂಥಗಳಲ್ಲಿ ಕಪಿಗಳಿಗೆ ಅಂದರೆ ಮಂಗಗಳಿಗೆ ದೈವಿಕ ಸ್ವರೂಪದ ಪ್ರಾಮುಖ್ಯವಿದೆ . ರಾವಣನಿಂದ ಅಪಹರಿಸಲ್ಪಟ್ಟ ಸೀತೆಯು ಅಶೋಕವನದಲ್ಲಿ ಇದ್ದಾಗ ರಾಮನಿಗಾಗಿ ಅವಳು ಪರಿತಪಿಸುತ್ತಿ ರುವ ಕಷ್ಟದ ಸಮಯದಲ್ಲಿ ರಾಮನ ಭಂಟ ಹನುಮಂತ ರಾಮನ ಮುದ್ರಾ ಉಂಗುರವನ್ನು ಸೀತೆಗೆ ತೋರಿಸಿ ರಾಮ

ಸೀತೆಯರ ಮಧ್ಯೆ ಮಧ್ಯವರ್ತಿ ಯಾಗಿ ಕೆಲಸ ಮಾಡಿದ್ದು ಇದೆ ಹನುಮಂತ. ರಾಮೇಶ್ವರದಿಂದ, ಲಂಕೆಯ ವರೆಗೆ ಸಮುದ್ರದ ಮೇಲೆ ಸೇತುವೆ ನಿರ್ಮಿಸಿದ್ದು ನಮ್ಮ ಮಹಾ ಕಪಿ ಸೈನ್ಯ.

ಆಧುನಿಕ ಕಪಿಗಳ ಗುಂಪುಗಳು ಬಹಳ ಚುರುಕಾಗಿವೆ, ಕಾಡುಗಳು ಕ್ಷೀಣಿಸುತ್ತಿರುವ ಪರಿಣಾಮ ಆಹಾರಕ್ಕಾಗಿ ಪಟ್ಟಣ ಗಳಿಗೆ ದಾಳಿ ಇಡುತ್ತಿರುವ ವಾನರಗಳ ಕಾಟಗಳನ್ನು ತಡೆಯುವುದು ನಮ್ಮಂತ ನರರಿಗೆ ಕಷ್ಟವಾಗುತ್ತಿದೆ. ಒಮ್ಮೆ ನಮ್ಮ ಮನೆಯಲ್ಲಿ ಬೇಕರಿಯಿಂದ ಒಂದು ಪೌಂಡು ಬ್ರೆಡ್ಡನ್ನು ತರಿಸಿದ್ದರು, ಬೆಳಗ್ಗೆ ತಿನ್ನಲು ನೋಡು ತ್ತಾರೆ ಬ್ರೆಡ್ ಕಾಣಿಸುತ್ತಿಲ್ಲ, ಯಾವುದೋ ಮಾಯದಲ್ಲಿ ಮನೆಯೊಳಗೆ ಪ್ರವೇಶಿಸಿದ್ದ ಮಂಗ ಬ್ರೆಡ್ ಅನ್ನು ಮಂಗಮಾಯ ಮಾಡಿತ್ತು! ಈಗಂತೂ ಮನೆಯೊಳಗೆ ಫ್ರಿಡ್ಜ್ ಬಾಗಿಲು ತೆಗೆದು ತಮಗೆ ಬೇಕಾದ ಪದಾರ್ಥಗಳನ್ನು ಕ್ಷಣಾರ್ಧದಲ್ಲಿ ಕದ್ದೊಯ್ಯುವ ಕಲೆ ಈ ಮಂಗಗಳಿಗೆ ಕರಗತವಾಗಿದೆ.

ಇನ್ನು ಮನೆಯ ಮುಂದೆ ತೆಂಗಿನ ಮರ ಇದ್ದರಂತೂ ಮರವೇರಿ ತೆಂಗಿನ ಕಾಯಿಗಳನ್ನು ಅಲ್ಲೇ ಕಿತ್ತು ಅದರೊಳಗಿರುವ ಎಳನೀರನ್ನು ನಿಮಿಷದಲ್ಲಿ ಕುಡಿದು ಬಿಸಾಡುವ ರೀತಿ ಅಬ್ಬಾ ಮಂಗನೇ ಭಲೇ. ಒಮ್ಮೆ ನಮ್ಮ ಮನೆಗೆ ಬಂದಿದ್ದ ಪುಟ್ಟ ಮಕ್ಕಳಿಬ್ಬರು ಅಡುಗೆ ಮನೆಯಲ್ಲಿಯ ಇಟ್ಟಿದ್ದ ದ್ರಾಕ್ಷಿ ಗೋಡಂಬಿಗಳನ್ನು ನೋಡಿ ಆಂಟಿ ನಮಗೆ ಕೊಡಿ ಎಂದು ಕೇಳಿದಾಗ ಗೋಡಂಬಿ ಪ್ರಿಯಳಾಗಿದ್ದ ನಾನು ಗೋಡಂಬಿ ಬದಲಿಗೆ ಒಣದ್ರಾಕ್ಷಿಯನ್ನೇ ಆ ಮಕ್ಕಳಿಗೆ ಕೊಟ್ಟೆ. ಇದಾದ ಮರುದಿನವೇ ಯಾವುದೋ ಮಾಯದಲ್ಲಿ ಒಳಗೆ ಬಂದಿದ್ದ ಗಡವ ಕೋತಿಯೊಂದು ಸಲೀಸಾಗಿ ದ್ರಾಕ್ಷಿ ಗೋಡಂಬಿ ಡಬ್ಬಿಯನ್ನು ತೆಗೆದುಕೊಂಡು ಮುಚ್ಚಳ ತೆಗೆದು ಅದನ್ನು ಕ್ಷಣಾರ್ಧದಲ್ಲಿ ಸ್ವಾಹ ಮಾಡಿ ಡಬ್ಬಿ ಬಿಸಾಡಿ ಹೋಯಿತು.

ಮಕ್ಕಳಿಗೆ ಗೋಡಂಬಿ ಕೊಡದೆ ನನಗೆ ತಿನ್ನಲು ಇರಲಿ ಎಂಬ ನನ್ನ ಸಣ್ಣತನಕ್ಕೆ ಆದ ತಕ್ಕ ಶಾಸ್ತಿ. ವರಕವಿ ಬೇಂದ್ರೆಯವರ ಲಾಗ ಹೊಡೆಯೋ ಮಂಗ ಲಗಾ ಹೊಡೆಯೋ ಎಂಬ ಪದ್ಯ ವಾನರ -ನರರಿಗೂ ಇರುವ ಸಂಬಂಧ ಬಿಂಬಿಸುವಂತಿದೆ. ಏನೇ ಆಗಲಿ ಮಂಗನಿಂದ ಮಾನವ ಎಂಬ ವಿಕಸನ ಸಿದ್ಧಾಂತವನ್ನು ನಾವೆಲ್ಲ ಒಪ್ಪಲೇಬೇಕು.

ತೊಗಲುಗೊಂಬೆಯಾಟಕ್ಕೆ ಜೀವ ತುಂಬಿದ ತಾಯಿ ಭೀಮವ್ವಗೆ ಪದ್ಮಶ್ರೀ

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ರಾಷ್ಟ್ರಪತಿ ಭವನದ ಭವ್ಯವಾದ ದರ್ಬಾರ್ ಹಾಲ್ ಎಷ್ಟೋ ಐತಿಹಾಸಿಕ ಘಟನೆಗಳಿಗೆ ಸಾಕ್ಷಿಯಾಗಿದೆ. ಆದರೆ, ಇತ್ತೀಚೆಗೆ ನಡೆದ ಪದ್ಮ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅನಾವರಣಗೊಂಡ ಆ ದೃಶ್ಯ ಇಡೀ ದೇಶದ ಕಣ್ಣಾಲಿಗಳನ್ನು ತೇವಗೊಳಿಸಿತು; ಭಾರತೀಯ ಸಂಸ್ಕೃತಿಯ ಮತ್ತು ಮಾನವೀಯ ಮೌಲ್ಯಗಳ ಪರಮೋಚ್ಚ ಶಿಖರವನ್ನು ಜಗತ್ತಿಗೆ ಸಾರಿತು. ಅದು ಕೇವಲ ಅಧಿಕೃತ ಪ್ರಶಸ್ತಿ ವಿತರಣೆಯಾಗಿರಲಿಲ್ಲ, ಬದಲಿಗೆ ಅಪ್ಪಟ ಗ್ರಾಮೀಣ ಭಾರತದ ಜನಪದ ಶಕ್ತಿಗೆ ದೆಹಲಿಯ ರಾಜದಂಡವೇ ತಲೆಬಾಗಿ ನಮಸ್ಕರಿಸಿದ ಪರಮ ಪವಿತ್ರ ಕ್ಷಣವಾಗಿತ್ತು. ಆ ಅಪೂರ್ವ ಗೌರವಕ್ಕೆ ಪಾತ್ರರಾದವರು ನಮ್ಮ ಹೆಮ್ಮೆಯ ಕರ್ನಾಟಕದ ಕೊಪ್ಪಳ ಜಿಲ್ಲೆಯ ಮೊರನಾಳ ಗ್ರಾಮದ 96 ವರ್ಷದ ಹಣ್ಣುಜೀವ ಭೀಮವ್ವ ದೊಡ್ಡಬಾಳಪ್ಪ ಶಿಳ್ಳೆಕ್ಯಾತರ.

ಅಕ್ಷರ ಜ್ಞಾನವಿಲ್ಲದ, ಬಡತನದ ಬೇಗೆಯಲ್ಲಿ ಬೆಂದ, ಯಾವುದೇ ಆಧುನಿಕ ಸೌಲಭ್ಯಗಳಿಲ್ಲದ ಹಳ್ಳಿಯೊಂದರಲ್ಲಿ ಹುಟ್ಟಿ ಬೆಳೆದ ಭೀಮವ್ವನವರ ಸಾಧನೆ ಸಾಮಾನ್ಯವಾದುದಲ್ಲ. ಕರ್ನಾಟಕದ ಸಾಂಪ್ರದಾಯಿಕ ಕಲೆಯಾದ ತೊಗಲು ಗೊಂಬೆಯಾಟವನ್ನು ತಮ್ಮ ಉಸಿರಾಗಿಸಿಕೊಂಡು, ಕಳೆದ ಏಳು ದಶಕಗಳಿಗೂ ಹೆಚ್ಚು ಕಾಲ ಅವರು ಈ ನಶಿಸಿ ಹೋಗುತ್ತಿರುವ ಜನಪದ ಕಲೆಯನ್ನು ಜೀವಂತವಾಗಿಟ್ಟಿದ್ದಾರೆ. ಬೆಳಕಿನ ಪರದೆಯ ಹಿಂದೆ ಚರ್ಮದ ಗೊಂಬೆಗಳನ್ನು ಆಡಿಸುತ್ತಾ, ರಾಮಾಯಣ, ಮಹಾಭಾರತಗಳ ಮಹಾಕಾವ್ಯಗಳನ್ನು ಹಳ್ಳಿ-ಹಳ್ಳಿಗಳಲ್ಲಿ ಪ್ರದರ್ಶಿಸುತ್ತಾ, ಸಂಸ್ಕೃತಿಯ ದೀವಟಿಗೆಯನ್ನು ತಲೆಮಾರುಗಳಿಂದ ದಾಟಿಸುತ್ತಾ ಬಂದ ತಾಯಿ ಇವರು. ಇವರ ಈ ನಿಸ್ವಾರ್ಥ ಕಲಾ ಸೇವೆಗೆ ಭಾರತ ಸರಕಾರ ಪದ್ಮಶ್ರೀ ಪ್ರಶಸ್ತಿ ಘೋಷಿಸಿದಾಗ, ಇಡೀ ಜನಪದ ಲೋಕವೇ ಸಂಭ್ರಮಿಸಿತು. ದರ್ಬಾರ್ ಹಾಲ್‌ನಲ್ಲಿ ಪ್ರಶಸ್ತಿ ಪ್ರದಾನದ ಕಟ್ಟುನಿಟ್ಟಿನ ನಿಯಮಗಳಿರುತ್ತವೆ. ಪ್ರಶಸ್ತಿ ಪುರಸ್ಕೃತರು ವೇದಿಕೆಯ ಮೆಟ್ಟಿಲುಗಳನ್ನು ಹತ್ತಿ ನಡೆದು ಬಂದು, ಗೌರವಾನ್ವಿತ ರಾಷ್ಟ್ರಪತಿಗಳು ನಿಂತಿರುವ ಜಾಗದಲ್ಲಿ ಪ್ರಶಸ್ತಿ ಸ್ವೀಕರಿಸಬೇಕು. ಆದರೆ, 96 ವರ್ಷದ ಭೀಮವ್ವನವರು ತಮ್ಮ ಜಾಗದಿಂದ ಎದ್ದು ನಿಂತು ಮೆಟ್ಟಿಲುಗಳತ್ತ ಹೆಜ್ಜೆ ಇಡಲು ಶ್ರಮಪಡುತ್ತಿದ್ದ ಆ ಕ್ಷಣ ಇಡೀ ಸಭಾಂಗಣದ ಉಸಿರು ಬಿಗಿಹಿಡಿಯುವಂತೆ ಮಾಡಿತು.

ಆಗ ಅಲ್ಲಿ ನಡೆದದ್ದು ಇತಿಹಾಸ! ಭೀಮವ್ವನವರ ವಯಸ್ಸು ಮತ್ತು ದೈಹಿಕ ಸ್ಥಿತಿಯನ್ನು ತಕ್ಷಣವೇ ಗ್ರಹಿಸಿದ ಭಾರತದ ಪ್ರಥಮ ಪ್ರಜೆ, ಗೌರವಾನ್ವಿತ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಯಾವುದೇ ಶಿಷ್ಟಾಚಾರದ ಹಂಗಿಗೆ ಬೀಳಲಿಲ್ಲ. ಅವರು ತಾವೇ ಸ್ವತಃ ವೇದಿಕೆಯ ಮೆಟ್ಟಿಲುಗಳನ್ನು ಇಳಿದು ಕೆಳಗೆ ಬಂದರು. ನಡೆದಾಡುವ ಜೀವಂತ ಇತಿಹಾಸದಂತಿದ್ದ ಆ ಅಜ್ಜಿಯ ಬಳಿಗೇ ಬಂದು, ಅತ್ಯಂತ ಮಮತೆ ಮತ್ತು ಗೌರವದಿಂದ ಪದ್ಮಶ್ರೀ ಪದಕ ಹಾಗೂ ಪ್ರಶಸ್ತಿ ಪತ್ರವನ್ನು ಅವರ ಕೈಗಿಟ್ಟರು. ಅಧಿಕಾರದ ಪರಮೋಚ್ಚ ಪೀಠದಲ್ಲಿದ್ದ

ಮಹಿಳೆಯೊಬ್ಬರು, ಹಳ್ಳಿಯ ಕಲಾಮಾತೆಯ ಪಾದದ ಬಳಿ ಬಂದು ನಿಂತ ಆ ದೃಶ್ಯ ಕೇವಲ ಭಾವುಕತೆಯಲ್ಲ, ಅದು ಅಧಿಕಾರವು ಸಂಸ್ಕೃತಿಗೆ ತೋರಿದ ಗೌರವವಾಗಿತ್ತು.

ಗೌರವದ ಈ ಮಹಾಪೂರ ಅಷ್ಟಕ್ಕೇ ನಿಲ್ಲಲಿಲ್ಲ. ಪ್ರಶಸ್ತಿ ಸ್ವೀಕರಿಸಿ ಭೀಮವ್ವನವರು ಮುನ್ನಡೆಯುತ್ತಿದ್ದಾಗ, ಮುಂಚೂಣಿಯಲ್ಲಿದ್ದ ದೇಶದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ತಮ್ಮ ಆಸನದಿಂದ ಎದ್ದು ಬಂದು, ಆ ಹಣ್ಣು ಜೀವದ ಮುಂದೆ ತಲೆಬಾಗಿ, ಅವರ ಪಾದಗಳನ್ನು ಮುಟ್ಟಿ ಸಾಷ್ಟಾಂಗ ನಮಸ್ಕಾರ ಮಾಡಿದರು. ಕರ್ನಾಟಕದ 'ಗೊಂಬೆಯಾಟದ ಅಜ್ಜಿ' ಪ್ರೀತಿಯಿಂದ ಪ್ರಧಾನಿಯವರ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿದರು. ದೆಹಲಿಯ ದೊರೆಗಳೆಲ್ಲರೂ ಹಳ್ಳಿಯ ಅವಿದ್ಯಾವಂತ, ಆದರೆ ಕಲಾ ಶ್ರೇಷ್ಠತೆಯ ಶರಧಿಯಾಗಿದ್ದ ತಾಯಿಯ ಮುಂದೆ ಮಣಿದ ಆ ಕ್ಷಣ, ಭಾರತೀಯ ಸಂಸ್ಕಾರ ಎಂದರೆ ಏನು ಎಂಬುದನ್ನು ಜಗತ್ತಿಗೆ ಮತ್ತೊಮ್ಮೆ ಮನವರಿಕೆ ಮಾಡಿಕೊಟ್ಟಿತು. ತೊಗಲು ಗೊಂಬೆಯಾಟವು ಕೇವಲ ಚರ್ಮದ ಗೊಂಬೆಗಳ ಪ್ರದರ್ಶನವಲ್ಲ; ಅದು ಕರಕುಶಲತೆ, ಸಂಗೀತ, ಸಾಹಿತ್ಯ ಮತ್ತು ಮೌಲ್ಯಗಳ ಸಮ್ಮಿಲನ. ಅದನ್ನು ತಮ್ಮ ಗ್ರಾಮವಾದ ಮೊರನಾಳದಲ್ಲಿ ಇಂದಿಗೂ ಯುವ ಪೀಳಿಗೆಗೆ ಧಾರೆ ಎರೆಯುತ್ತಿರುವ ಭೀಮವ್ವನವರ ಶ್ರಮಕ್ಕೆ ಈ ಪ್ರಶಸ್ತಿ ಮತ್ತು ಸಿಕ್ಕ ಗೌರವ ಅತ್ಯಂತ ಸೂಕ್ತವಾದುದು.

ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ತಮ್ಮ ನೆಚ್ಚಿನ ಕಲೆಗೆ ಜೀವ ತುಂಬುತ್ತಾ ಅದನ್ನು ಮುಂದಿನ ಪೀಳಿಗೆಗೂ ದಾಟಿಸುತ್ತಿರುವ ಸಾವಿರಾರು ಇಂತಹ ಕಲಾಯೋಗಿಗಳು ಭಾರತ ದುದ್ದಕ್ಕೂ ಸಿಗುತ್ತಾರೆ. ಇಂತಹ ಅಪರೂಪದ ಎಲೆಮರೆಕಾಯಿಗಳನ್ನ ಹುಡುಕಿ ಅವರಿಗೆ ಗೌರವ ಸಲ್ಲಿಸುತ್ತಿರುವ ಭಾರತ ಸರಕಾರಕ್ಕೊಂದು ದೊಡ್ಡ ನಮಸ್ಕಾರ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಐಪಿಎಲ್ ಹಬ್ಬ 2026

ಆರೆಂಜ್ ಕ್ಯಾಪ್
ಸೂರ್ಯವಂಶಿ
ರಾಜಸ್ಥಾನ್

ಪರ್ಪಲ್ ಕ್ಯಾಪ್
ಭುವನೇಶ್ವರ್ ಕುಮಾರ್
ಆರ್‌ಸಿಬಿ

IPL T20 2026

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ
Q ಬೆಂಗಳೂರು	14	9	5	18
Q ಗುಜರಾತ್	14	9	5	18
Q ಹೈದರಾಬಾದ್	14	9	5	18
Q ರಾಜಸ್ಥಾನ್	13	7	6	14
ಪಂಜಾಬ್	13	6	6	13
ಕೋಲ್ಕತಾ	13	6	6	13
ಚೆನ್ನೈ	14	6	8	12
ಡೆಲ್ಲಿ	13	6	7	12
ಮುಂಬೈ	12	4	9	8
ಲಖನೌ	13	4	9	8

ಸಮಾಚಾರ ಸಣ್ಣದಲ್ಲ

ಸಿಂಗಾಪುರ್ ಓಪನ್: ಸಿಂಧು ಲಕ್ಷ್ಯಸೇನ್ ಕ್ವಾ. ಫೈನಲ್‌ಗೆ

ಸಿಂಗಾಪುರ: ಸಿಂಗಾಪುರ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಆಟಗಾರರು ಭರ್ಜರಿ ಪ್ರದರ್ಶನ ನೀಡಿದ್ದಾರೆ. ಮಹಿಳಾ ಸಿಂಗಲ್ಸ್‌ನ ಪ್ರಿ-ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಭಾರತದ ಸ್ಟಾರ್ ಆಟಗಾರ್ತಿ ಪಿ.ವಿ. ಸಿಂಧು ಜಪಾನ್‌ನ ರಿಕೊ ಗುಂಜಿ ವಿರುದ್ಧ 21-9, 21-12 ನೇರ ಸೆಟ್‌ಗಳಿಂದ ಸುಲಭ ಜಯ ಸಾಧಿಸಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿದ್ದಾರೆ. ಮುಂದಿನ ಸುತ್ತಿನಲ್ಲಿ ಅವರು ದಕ್ಷಿಣ ಕೊರಿಯಾದ ಬಲಿಷ್ಠ ಆಟಗಾರ್ತಿ ಅನ್ ಸೆ ಯಂಗ್ ಅವರನ್ನು ಎದುರಿಸಲಿದ್ದಾರೆ. ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಭರವಸೆಯ ಆಟಗಾರ ಲಕ್ಷ್ಯ ಸೇನ್ ಕೂಡ ಕ್ವಾರ್ಟರ್‌ಫೈನಲ್ ತಲುಪಿದ್ದಾರೆ.

ಸುಮಿತ್ ವಿಶ್ವದಾಖಲೆ

ಬೆಂಗಳೂರು: ಎರಡು ಬಾರಿಯ ಪ್ಯಾರಾಲಿಂಪಿಕ್ ಚಾಂಪಿಯನ್ ಸುಮಿತ್ ಅಂತಿಕಲ್, ಇಲ್ಲಿ ನಡೆಯುತ್ತಿರುವ 8ನೇ ಇಂಡಿಯನ್ ಓಪನ್ ಇಂಟರ್‌ನ್ಯಾಷನಲ್ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ತಮ್ಮದೇ ಆದ ವಿಶ್ವ ದಾಖಲೆಯನ್ನು ಮುರಿದು ಇತಿಹಾಸ ಸೃಷ್ಟಿಸಿದ್ದಾರೆ. ಪುರುಷರ ಜಾವೆಲಿನ್ ಥ್ರೋ (ಎಫ್64 ವಿಭಾಗ) ಸ್ಪರ್ಧೆಯಲ್ಲಿ ಹರಿಯಾಣವನ್ನು ಪ್ರತಿನಿಧಿಸಿದ ಸುಮಿತ್, 74.82 ಮೀಟರ್ ದೂರ ಜಾವೆಲಿನ್ ಎಸೆಯುವ ಮೂಲಕ ಚಿನ್ನದ ಪದಕದೊಂದಿಗೆ ಹೊಸ ವಿಶ್ವ ದಾಖಲೆ ಬರೆದರು.

ವೈಭವದಾಟಕ್ಕೆ ಕ್ರಿಕೆಟ್ ಲೋಕ ಬೆರಗು

ಸೂರ್ಯವಂಶಿ ಪ್ರಚಂಡ ಆಟಕ್ಕೆ ಕ್ರಿಕೆಟ್ ದಿಗ್ಗಜರ ಪ್ರಶಂಸೆ

ದೆಹಲಿ: ಎಸ್‌ಆರ್‌ಎಚ್ ವಿರುದ್ಧದ ಐಪಿಎಲ್ ಎಲಿಮಿ ನೇಟರ್ ಪಂದ್ಯದಲ್ಲಿ ರಾಜಸ್ಥಾನದ ಯುವ ಬ್ಯಾಟರ್ ವೈಭವ್ ಸೂರ್ಯವಂಶಿ ಸಿಡಿಲಬ್ಬರದ ಬ್ಯಾಟಿಂಗ್ ಮೂಲಕ ಕ್ರಿಕೆಟ್ ಜಗತ್ತಿನ ಗಮನ ಸೆಳೆದಿದ್ದಾರೆ. ಕೇವಲ 29 ಎಸೆತಗಳಲ್ಲಿ 12 ಸಿಕ್ಸರ್ ಹಾಗೂ ಐದು ಬೌಂಡರಿಗಳ ನೆರವಿನಿಂದ 97 ರನ್ ಸಿಡಿಸಿದ ವೈಭವ್, ಈ ಮೂಲಕ ಐಪಿಎಲ್ ಒಂದೇ ಆವೃತ್ತಿಯಲ್ಲಿ ಅತಿ ಹೆಚ್ಚು ಸಿಕ್ಸರ್ ಸಿಡಿಸಿದ್ದ ಕ್ರಿಸ್ ಗೇಲ್ ಅವರ 59 ಸಿಕ್ಸರ್‌ಗಳ ದಾಖಲೆಯನ್ನೂ ಮುರಿದಿದ್ದಾರೆ. ಪ್ರಸಕ್ತ ಸೀಸನ್‌ನಲ್ಲಿ ಅವರು ಈಗಾಗಲೇ 65 ಸಿಕ್ಸರ್ ಸಿಡಿಸಿದ್ದಾರೆ.

ಈ ಬಾರಿಯ ಐಪಿಎಲ್ ಆವೃತ್ತಿಯಲ್ಲಿ 15 ಪಂದ್ಯಗಳ ಬಳಿಕ ಅತಿ ಹೆಚ್ಚು ರನ್ ಗಳಿಸಿದ ಹೆಗ್ಗಳಿಕೆ ಹೊಂದಿರುವ 15ರ ಹರೆಯದ ವೈಭವ್ ಸೂರ್ಯವಂಶಿ ಅವರ ಪ್ರತಿಭೆಯನ್ನು ಇಡೀ ಕ್ರಿಕೆಟ್ ಜಗತ್ತು ಕೊಂಡಾಡುತ್ತಿದೆ. ಎಸ್‌ಆರ್ ಎಚ್ ವಿರುದ್ಧದ ಅವರ ಪ್ರದರ್ಶನದ ಬಗ್ಗೆ ಕ್ರಿಕೆಟ್ ದಿಗ್ಗಜರು ಬೆರಗಾಗಿದ್ದು, ಮುಕ್ತಕಂಠದಿಂದ ಹೊಗಳಿದ್ದಾರೆ.

'ನ್ಯೂ ಸಿಕ್ಸರ್ ಮೆಷಿನ್' ಎಂದ ಕ್ರಿಸ್ ಗೇಲ್: ತಮ್ಮ ಹೆಸರಿನಲ್ಲಿದ್ದ ಅತಿ ಹೆಚ್ಚು ಸಿಕ್ಸರ್‌ಗಳ ಸಾರ್ವಕಾಲಿಕ ದಾಖಲೆಯನ್ನು ಮುರಿದ ಸೂರ್ಯವಂಶಿ ಅವರ ಆಟವನ್ನು ಮನಸಾರೆ ಶ್ಲಾಘಿಸಿರುವ ಕ್ರಿಸ್‌ಗೇಲ್, ವೈಭವ್‌ಗೆ 'ನ್ಯೂ ಸಿಕ್ಸರ್ ಮೆಷಿನ್' ಎಂದು ನಿಕ್ ನೇಮ್ ನೀಡಿ ಅಭಿನಂದಿಸಿದ್ದಾರೆ.

ವೈಭವ್ ಸೂರ್ಯವಂಶಿ ಅವರು ಕ್ರಿಸ್ ಗೇಲ್ ಅವರ ಸಿಕ್ಸರ್‌ಗಳ ದಾಖಲೆ ಮುರಿಯುತ್ತಿದ್ದಂತೆಯೇ ಅವರಿಗೆ ಸಾಮಾಜಿಕ ಜಾಲತಾಣದಲ್ಲಿ ಅಭಿಮಾನಿಗಳು 'ಯೂನಿವರ್ಸಲ್ ಬೇಬಿ ಬಾಸ್' ಎಂದು ಕರೆದು ಸಂತಸ ಹಂಚಿಕೊಂಡಿದ್ದರು. ಇದೀಗ ಈ ಬಾಲಕನ ಬ್ಯಾಟಿಂಗ್ ವೈಭವವನ್ನು ನೋಡಿ 'ಯೂನಿವರ್ಸಲ್ ಬಾಸ್' ಕ್ರಿಸ್ ಗೇಲ್ ಸ್ವತಃ ಅಚ್ಚರಿ, ಸಂತಸ ವ್ಯಕ್ತಪಡಿಸಿದ್ದಾರೆ. ಕ್ರಿಸ್ ಗೇಲ್ ತಮ್ಮ ಎಕ್ಸ್ ಖಾತೆಯಲ್ಲಿ ವೈಭವ್ ಸೂರ್ಯವಂಶಿ ಅವರ ಬ್ಯಾಟಿಂಗ್‌ನ ಎರಡು ಸ್ಕ್ರೀನ್ ಶಾಟ್‌ಗಳನ್ನು ಹಂಚಿಕೊಂಡಿದ್ದು, ವೈಭವ್ ಅವರನ್ನು ಅದ್ಭುತ ಆಟಗಾರ ಎಂದು ಶ್ಲಾಘಿಸಿದ್ದಾರೆ. ಫೋಟೋ ಜೊತೆಗಿನ ಒಕ್ಕಣೆಯಲ್ಲಿ 'ವೈಭವ್ ನಿಜಕ್ಕೂ ಎಂತಹ ಅದ್ಭುತ ಆಟಗಾರ. ನಿನ್ನ ಆಟ ಅತ್ಯುತ್ತಮ ಮನರಂಜನೆ ನೀಡಿತು ಹುಡುಗ! ನೀನು ಹೊಸ ಸಿಕ್ಸ್ ಮೆಷಿನ್', ಎಂದು ಬರೆದುಕೊಂಡಿದ್ದಾರೆ.

ಈ ನಡುವೆ ವೈಭವ್ ಸೂರ್ಯವಂಶಿ, ಗೇಲ್ ಅವರ ಅತ್ಯಂತ ವೇಗದ ಐಪಿಎಲ್ ಶತಕ (30 ಎಸೆತ) ಸಿಡಿಸಿ ಈ ದಾಖಲೆ ಮುರಿಯುವುದನ್ನು ಕೂದಲೆಳೆ ಅಂತರದಲ್ಲಿ ತಪ್ಪಿಸಿಕೊಂಡಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಗೇಲ್, ಇದು ದುರದೃಷ್ಟಕರ, ಆದರೆ ಅವರು ಈ ದಾಖಲೆಯನ್ನು ಮುರಿಯುತ್ತಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಈ ಋತುವಿನಲ್ಲಿ ಸೂರ್ಯವಂಶಿ 15 ಇನ್ನಿಂಗ್ಸ್‌ಗಳಲ್ಲಿ 45.33 ಸರಾಸರಿಯಲ್ಲಿ ಮತ್ತು 242.85 ಸ್ಟ್ರೈಕ್ ರೇಟ್‌ನಲ್ಲಿ 680 ರನ್ ಗಳಿಸಿದ್ದಾರೆ. ಇದರಲ್ಲಿ ಒಂದು ಶತಕ ಮತ್ತು ನಾಲ್ಕು ಅರ್ಧಶತಕಗಳು ಒಳಗೊಂಡಿವೆ. ಅವರು ಎದುರಿಸಿರುವ 280 ಎಸೆತಗಳಲ್ಲಿ 55 ಬೌಂಡರಿ ಮತ್ತು 65 ಸಿಕ್ಸರ್‌ಗಳನ್ನು ಬಾರಿಸಿದ್ದಾರೆ. ಅವರ ಬೌಂಡರಿ ಶಾಟ್‌ಗಳ ಅನುಪಾತ ಶೇ.2.3 ಮತ್ತು ಪ್ರತಿ ಆರು ಎಸೆತಗಳ ಅನುಪಾತವು ಶೇ 4.3 ರಷ್ಟಿದೆ. 2019ರ ಐಪಿಎಲ್‌ನಲ್ಲಿ ಕೋಲ್ಕತಾ ನೈಟ್ ರೈಡರ್ಸ್ ಪರ ಆಂಡ್ರೆ ರಸೆಲ್ 510 ರನ್ ಕಲೆಹಾಕಿದ್ದರು. ಇದರಲ್ಲಿ ಶೇ. 85.5ರಷ್ಟು ಬೌಂಡರಿ ಮತ್ತು ಸಿಕ್ಸರ್‌ಗಳನ್ನು ಬಾರಿಸಿದ್ದರು. ಇತ್ತ ವೈಭವ್ ಶೇ.88.9 ಬೌಂಡರಿ ಹಾಗೂ ಸಿಕ್ಸರ್‌ಗಳನ್ನು ಸಿಡಿಸಿದ್ದಾರೆ.

ತೆಂಡುಲ್ಕರ್ ಮೆಚ್ಚುಗೆ

15 ವರ್ಷದ ಈ ಯುವ ಪ್ರತಿಭೆಯ ಅಬ್ಬರದ ಇನಿಂಗ್ಸ್‌ಗೆ ಮಾಸ್ಟರ್ ಬ್ಲಾಸ್ಟರ್ ಸಚಿನ್ ತೆಂಡೂಲ್ಕರ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ವಿಶೇಷವಾಗಿ ಕಾಲಿನ ಭಾಗವನ್ನು ಗುರಿಯಾಗಿಸಿಕೊಂಡು ಬರುವ ಎಸೆತಗಳನ್ನು ಎದುರಿಸುವ ವೇಳೆ ಸೂರ್ಯವಂಶಿ ತಮ್ಮ ಮುಂದಿನ ಪಾದವನ್ನು ಅತ್ಯಂತ ಚತುರವಾಗಿ ಬಳಸಿಕೊಳ್ಳುತ್ತಿರುವ ಶೈಲಿಯನ್ನು ಸಚಿನ್ ಶ್ಲಾಘಿಸಿದ್ದಾರೆ. ವೈಭವ್ ಸೂರ್ಯವಂಶಿಯವರ ಬ್ಯಾಟ್ ಬೀಸುವ ಶೈಲಿ ಅದ್ಭುತ. ಅದಕ್ಕಿಂತಲೂ ಅವರು ಮುಂದಿನ ಪಾದವನ್ನು ಸುಂದರವಾಗಿ ಕ್ಲಿಯರ್ ಮಾಡಿಕೊಂಡು ತಮ್ಮದೇ ರೀತಿಯಲ್ಲಿ ಮುಕ್ತವಾಗಿ ಬ್ಯಾಟಿಂಗ್ ಮಾಡುವುದೇ ಹೆಚ್ಚು ಗಮನ ಸೆಳೆಯುತ್ತದೆ. ಈ ಇನಿಂಗ್ಸ್ ಅದ್ಭುತಕ್ಕಿಂತ ಕಡಿಮೆಯೇನೂ ಅಲ್ಲ ಎಂದು ಸಚಿನ್ 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.



ಮಾಜಿ ಕ್ರಿಕೆಟಿಗ ಮೊಹಮ್ಮದ್ ಕೈಫ್ ಕೂಡ ಸೂರ್ಯವಂಶಿಯವರ ಆಟವನ್ನು ಕೊಂಡಾಡಿದ್ದು, 'ಇದು ಪವಾಡ. ಭವಿಷ್ಯದ ಸೂಪರ್‌ಸ್ಟಾರ್'ಎಂದು ಅಭಿಪ್ರಾಯಪಟ್ಟಿದ್ದಾರೆ.

ನಾರ್ವೆ ಚೆಸ್: ಕಾರ್ಲ್‌ಸನ್‌ಗೆ ಸೋಲುಣಿಸಿದ ಪ್ರಜ್ಞಾನಂದ

ಓಸ್ಲೋ: ಭಾರತದ ಯುವ ಗ್ರ್ಯಾಂಡ್‌ಮಾಸ್ಟರ್ ಪ್ರಜ್ಞಾನಂದ ಆರ್.(ಪ್ರಾಗ್), ನಾರ್ವೆ ಚೆಸ್ ಟೂರ್ನಿಯ ಮೂರನೇ ಸುತ್ತಿನಲ್ಲಿ ವಿಶ್ವದ ನಂಬರ್ ಒನ್ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ವಿರುದ್ಧ ಐತಿಹಾಸಿಕ ಜಯ ಸಾಧಿಸಿದ್ದಾರೆ. ತೀವ್ರ ಕುತೂಹಲ ಕೆರಳಿಸಿದ್ದ ಈ ಪೈಪೋಟಿಯಲ್ಲಿ ಬಿಳಿ ದಾಳಗಳೊಂದಿಗೆ ಆಡಿದ ಪ್ರಾಗ್, ಹಾಲಿ ಚಾಂಪಿಯನ್ ಕಾರ್ಲ್‌ಸನ್ ಅವರನ್ನು ಮಣಿಸುವ ಮೂಲಕ ಟೂರ್ನಿಯ ಏಕೈಕ 'ಕ್ಲಾಸಿಕಲ್' ಗೆಲುವು ದಾಖಲಿಸಿದರು.

ಮತ್ತೊಂದೆಡೆ, ಭಾರತದ ಮತ್ತೊಬ್ಬ ಯುವ ತಾರೆ ಹಾಗೂ ಹಾಲಿ ವಿಶ್ವ ಚಾಂಪಿಯನ್ ಗುಕೇಶ್ ಡಿ. ಅವರು ಅಲಿರೆಜಾ ಫಿರೌಜಾ ವಿರುದ್ಧದ 'ಅರ್ಮಾಗೆಡ್ಡನ್' ಟೈಬ್ರೇಕರ್‌ನಲ್ಲಿ ಪರಾಭವಗೊಂಡರು. ಪಂದ್ಯದ ಆರಂಭದಲ್ಲಿ ಸ್ಥಳೀಯ ಹೀರೊ ಮ್ಯಾಗ್ನಸ್ ಕಾರ್ಲ್‌ಸನ್ ಗೆಲುವಿನ ಸ್ಪಷ್ಟ ಅವಕಾಶಗಳನ್ನು ಹೊಂದಿದ್ದರು. ಆದರೆ, ಕಾರ್ಲ್‌ಸನ್ ತಮ್ಮ ಮೇಲುಗೈಯನ್ನು ಉಳಿಸಿಕೊಳ್ಳಲು ವಿಫಲರಾದರು. ಈ ಪರಿಸ್ಥಿತಿಯ ಲಾಭ ಪಡೆದ ಭಾರತದ 18 ವರ್ಷದ ಯುವ ಆಟಗಾರ ಪ್ರಾಗ್, ಅದ್ಭುತ ತಂತ್ರಗಾರಿಕೆಯನ್ನು ಪ್ರದರ್ಶಿಸಿ ಪಂದ್ಯವನ್ನು ತಮ್ಮತ್ತ ತಿರುಗಿಸಿಕೊಂಡರು. ಈ ಸೋಲಿನೊಂದಿಗೆ ಕಾರ್ಲ್‌ಸನ್ ಆಡಿದ ಮೂರು ಸುತ್ತುಗಳಲ್ಲಿ ಎರಡನೇ ಸೋಲನ್ನು ಅನುಭವಿಸಿದಂತಾಗಿದೆ.

ಇಂದು ರಾಜಸ್ಥಾನ ಗುಜರಾತ್ ಸೆಮಿಫೈನಲ್

ನಿರ್ಣಾಯಕ ಪಂದ್ಯದಲ್ಲಿ ವೈಭವ್ ಸೂರ್ಯ, ಸಾಯಿ ಸುದರ್ಶನ್, ಗಿಲ್ ಆಟದ ಮೇಲೆ ಎಲ್ಲರ ಕಣ್ಣು

ಮುಲ್ಲನ್‌ಪುರ: ಸಿಕ್ಸರ್ ಮೆಷಿನ್ ವೈಭವ್ ಸೂರ್ಯವಂಶಿ ಅವರ ಸ್ಫೋಟಕ ಆಟದ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಸೋಲಿಸಿ ಪ್ರಶಸ್ತಿ ಗೆಲ್ಲುವ ಕನಸನ್ನು ಜೀವಂತವಾಗಿರಿಸಿಕೊಂಡಿರುವ ರಾಜಸ್ಥಾನ ರಾಯಲ್ಸ್ ತಂಡ ಶುಕ್ರವಾರ ನಡೆಯಲಿರುವ 'ಸೆಮಿಫೈನಲ್' ಮಾದರಿಯ ಎರಡನೇ ಕ್ವಾಲಿಫೈಯರ್‌ನಲ್ಲಿ ಗುಜರಾತ್ ಟೈಟನ್ಸ್ ವಿರುದ್ಧ ಸೆಣಸಲಿದೆ.

19ನೇ ಆವೃತ್ತಿಯ ಎಲಿಮಿನೇಟರ್ ಪಂದ್ಯದಲ್ಲಿ ಎಸ್‌ಆರ್‌ಎಚ್ ಎದುರು 47 ರನ್‌ಗಳ ಗೆಲುವು ದಾಖಲಿಸಿರುವ ರಿಯಾನ್ ಪರಾಗ್ ಬಳಗವು ಶುಕ್ರವಾರದ ಕಾದಾಟದಲ್ಲೂ ವೈಭವ್ ಸೂರ್ಯವಂಶಿ ಅವರಿಂದ ಮತ್ತೊಂದು ಸ್ಫೋಟಕ ಆಟವನ್ನು ನಿರೀಕ್ಷಿಸುತ್ತಿದೆ. ಇದೇ ವೇಳೆ ಗುಜರಾತ್ ತಂಡವು ಕ್ವಾಲಿಫೈಯರ್-2 ಪಂದ್ಯದಲ್ಲಿ ಮತ್ತೊಂದು ಅಗ್ನಿಪರೀಕ್ಷೆಗೆ ಸಿದ್ಧವಾಗಿ ನಿಂತಿದೆ. ಲೀಗ್ ಹಂತ ಮುಕ್ತಾಯದ ವೇಳೆಗೆ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದ ಗುಜರಾತ್ ಟೈಟಾನ್ಸ್ ತಂಡವು ಕ್ವಾಲಿಫೈಯರ್-1 ಪಂದ್ಯದಲ್ಲಿ ಆರ್‌ಸಿಬಿ ಎದುರು ಸೋಲು ಅನುಭವಿಸಿತ್ತು.

ಮೂರನೇ ಮುಖಾಮುಖಿ: ಹಾಲಿ ಆವೃತ್ತಿಯಲ್ಲಿ ಇತ್ತಂಡಗಳ ಮೂರನೇ ಮುಖಾಮುಖಿ ಇದಾಗಿದೆ. ಲೀಗ್ ಹಂತದಲ್ಲಿ ಎರಡು ಬಾರಿ ಮುಖಾಮುಖಿಯಾಗಿದ್ದವು. ಈ ವೇಳೆ ತಲಾ ಒಂದು ಪಂದ್ಯ ಗೆದ್ದಿವೆ. ಇದೀಗ ಮೂರನೇ ಬಾರಿಯ ಸೆಣಸಾಟದಲ್ಲಿ ಯಾರು ಗೆಲ್ಲಲಿದ್ದಾರೆ ಎನ್ನುವುದು ಪಂದ್ಯದ ಕೌತುಕ.

ನ್ಯೂ ಚಂಡೀಗಢದ ಮಹಾರಾಜ ಯಾದವೀಂದ್ರಸಿಂಗ್ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಬುಧವಾರ ರಾತ್ರಿ ನಡೆದಿದ್ದ ಎಲಿಮಿನೇಟರ್ ಪಂದ್ಯಕ್ಕೆ ಯಾವುದೇ ಮಳೆ ಅಡಚಣೆ ಇರಲಿಲ್ಲ. ಇಲ್ಲೇ ನಡೆಯುವ ಕ್ವಾಲಿಫೈಯರ್-2 ಪಂದ್ಯಕ್ಕೂ ಸದ್ಯ ಯಾವುದೇ ಮಳೆ ಭೀತಿ ಇಲ್ಲ. ಒಂದೊಮ್ಮೆ ಅಕಾಲಿಕ ಮಳೆಯಿಂದ ಪಂದ್ಯಕ್ಕೆ ಅಡ್ಡಿಯಾಗಿ ಪಂದ್ಯ ಸಂಪೂರ್ಣವಾಗಿ ರದ್ದಾದರೆ. ಮೀಸಲು ದಿನ ಇರದ ಕಾರಣ ಲೀಗ್ ಹಂತದಲ್ಲಿ ಮುಂದಿದ್ದ ತಂಡವನ್ನು ಜಯಶಾಲಿ ಎಂದು ನಿರ್ಧರಿಸಲಾಗುತ್ತದೆ. ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದ ಗುಜರಾತ್ ಆಗ ಫೈನಲ್ ಪ್ರವೇಶ ಪಡೆಯಲಿದೆ. ನಾಲ್ಕನೇ ಸ್ಥಾನ ಪಡೆದಿದ್ದ ರಾಜಸ್ಥಾನ ಹೊರ ನಡೆಯಬೇಕಾಗುತ್ತದೆ.

ಪಂದ್ಯ ಆರಂಭ: ಗುಜರಾತ್-ಹೈದರಾಬಾದ್ ನಡುವಿನ ಹೈವೋಲ್ಟೇಜ್ ಕ್ವಾಲಿಫೈಯರ್-2 ಪಂದ್ಯ ಭಾರತೀಯ ಕಾಲಮಾನ ಸಂಜೆ 7.30ರಿಂದ ಆರಂಭವಾಗಲಿದೆ. ಈ ಪಂದ್ಯ ಸ್ಟಾರ್ ಸ್ಪೋರ್ಟ್ಸ್ ಹಾಗೂ ಜಿಯೋ ಹಾಟ್‌ಸ್ಟಾರ್‌ನಲ್ಲಿ ನೇರ ಪ್ರಸಾರವಾಗಲಿದೆ. ಟಾಸ್ ಪ್ರಕ್ರಿಯೆ 7 ಗಂಟೆಗೆ ನಡೆಯಲಿದೆ.

ಸಂಭಾವ್ಯ ತಂಡಗಳು: ರಾಜಸ್ಥಾನ್ ರಾಯಲ್ಸ್: ಯಶಸ್ವಿ ಜೈಸ್ವಾಲ್, ವೈಭವ್ ಸೂರ್ಯವಂಶಿ, ಧ್ರುವ್ ಜುರೆಲ್ (ವಿ.ಕೀ.), ರಿಯಾನ್ ಪರಾಗ್ (ನಾಯಕ), ಡೊನೊವನ್ ಫೆರೆರಾ, ದಾಸುನ್ ಶನಕ, ರವೀಂದ್ರ ಜಡೇಜಾ, ಜೋಫ್ರಾ ಆರ್ಚರ್, ನಾಂದ್ರೆ ಬರ್ಗರ್, ಬ್ರಿಜೇಶ್ ಶರ್ಮಾ, ಯಶ್ ರಾಜ್ ಪುಂಜಾ.

ಗುಜರಾತ್ ಟೈಟಾನ್ಸ್: ಸಾಯಿ ಸುದರ್ಶನ್, ಶುಭಮನ್ ಗಿಲ್ (ನಾಯಕ), ಜೋಸ್ ಬಟ್ಲರ್ (ವಿ.ಕೀ/), ವಾಷಿಂಗ್ಟನ್ ಸುಂದರ್, ನಿಶಾಂತ್ ಸಿಂಧು, ಜೇಸನ್ ಹೋಲ್ಡರ್, ರಶೀದ್ ಖಾನ್, ಕುಲ್ವಂತ್ ಖೆಜ್ರೋಲಿಯಾ, ಕಗಿಸೊ ರಬಾಡ, ಮೊಹಮ್ಮದ್ ಸಿರಾಜ್, ಪ್ರಸಿದ್ಧ್ ಕೃಷ್ಣ.

ಆ್ಯಕ್ಷನ್‌ನಲ್ಲಿ ಅಬ್ಬರಿಸಿದ ಸಮಂತಾ

ನಟಿ ಸಮಂತಾ ಅನಾರೋಗ್ಯದಿಂದ ಚೇತರಿಕೊಂಡಿದ್ದು ಮತ್ತೆ ಚಿತ್ರರಂಗದಲ್ಲಿ ಬ್ಯುಸಿಯಾಗಿದ್ದಾರೆ. ಇಂದಿಗೂ ಸಮ್ಮು ಸಾಲು ಸಾಲು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಅದರಲ್ಲಿ ಮಾ ಇಂಟಿ ಬಂಗಾರಂ ಸಿನಿಮಾವೂ ಒಂದು. ಈ ಹಿಂದಿನ ಸಿನಿಮಾಗಳಲ್ಲಿ ಗ್ಲಾಮರ್ ಲುಕ್‌ನಲ್ಲಿ ಕಂಗೊಳಿಸಿ ಮನಗೆದ್ದ ಸಮಂತಾ, ಪುಷ್ಪ ಚಿತ್ರದಲ್ಲಿ ಅಲ್ಲು ಅರ್ಜುನ್ ಜತೆಗೆ ಹಾಟ್ ಅವತಾರದಲ್ಲಿ ಹೆಜ್ಜೆ ಹಾಕಿ ಪ್ರೇಕ್ಷಕರ ಮನಗೆದ್ದಿದ್ದರು. ಈಗ ಅದೇ ಸಮಂತಾ ಹೊಸ ಅವತಾರದಲ್ಲಿ ತೆರೆಗೆ ಎಂಟ್ರಿಕಡೊಡಲು ಸಿದ್ಧವಾಗಿದ್ದಾರೆ. ಈ ಬಾರಿ ಆ್ಯಕ್ಷನ್ ಲುಕ್‌ನಲ್ಲಿ ಸಿನಿಪ್ರಿಯರಿಗೆ ದರ್ಶನ ಕೊಡಲಿದ್ದಾರೆ. ತೆಲುಗಿನ ನಿರೀಕ್ಷಿತ ಸಿನಿಮಾಗಳಲ್ಲಿ ಒಂದಾಗಿರುವ ಮಾ ಇಂಟಿ ಬಂಗಾರಂ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು, ಕುತೂಹಲ ಮೂಡುವಂತೆ ಮಾಡಿದೆ. ಕೌಟುಂಬಿಕ ಕಥೆಯ ಸಿನಿಮಾ ಇದಾಗಿದ್ದು ಅದರೊಂದಿಗೆ ಆ್ಯಕ್ಷನ್ ಕೂಡ ಬೆರೆತಿದೆ.

ದೊಡ್ಡ ಕುಟುಂಬದ ಸೊಸೆಯಾಗಿ ಬರುವ ಸಮ್ಮು, ಮನೆಯಲ್ಲಿ ಮಹಾಲಕ್ಷ್ಮಿಯಂತೆ ಸೈಲೆಂಟ್ ಆಗಿರುತ್ತಾಳೆ. ಆದರೆ ತನ್ನ ಕುಟುಂಬದ ತಂಟೆಗೆ ಬರುವವರನ್ನು ಮಹಾಕಾಳಿಯಾಗಿ ಸದೆಬಡಿಯುತ್ತಾರೆ. ಸಮಂತಾ ಸೀರೆಯುಟ್ಟು ಸಾಹಸ ದೃಶ್ಯಗಳಲ್ಲಿ ಕಾಣಿಸಿಕೊಂಡಿರುವುದು ವಿಶೇಷವಾಗಿದೆ. ಮಹಿಳೆಯರು ತಮ್ಮ ಕುಟುಂಬದಲ್ಲಿ ತೊಂದರೆಗಳನ್ನು ಹೇಗೆ ಎದುರಿಸಬೇಕು ಎಂಬುದನ್ನು ಚಿತ್ರದಲ್ಲಿ ಕಟ್ಟಿಕೊಡಲಾಗಿದೆ. ಮಾ ಇಂಟಿ ಬಂಗಾರಂ ಮಹಿಳಾ ಪ್ರಧಾನ ಕಥೆಯ ಸಿನಿಮಾ ಎಂಬುದು ಟ್ರೇಲರ್‌ನಲ್ಲಿ ತಿಳಿಯುತ್ತದೆ. ಸ್ಯಾಂಡಲ್‌ವುಡ್ ನಟ ದಿಗಂತ್ ನಾಯಕನಾಗಿ ನಟಿಸಿದ್ದಾರೆ. ಸಂತೋಷ್ ನಾರಾಯಣ್ ಸಂಗೀತ ನಿರ್ದೇಶನ ಈ ಚಿತ್ರದ ಮೆರುಗು ಹೆಚ್ಚಿಸಿದೆ. ಬಿ.ವಿ.ನಂದಿನಿ ರೆಡ್ಡಿ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರ ತರಲಾ ಮೂವಿಂಗ್ ಪಿಕ್ಚರ್ಸ್‌ನಲ್ಲಿ ಅದ್ದೂರಿಯಾಗಿ ನಿರ್ಮಾಣವಾಗಿದೆ.

ಸಂದೇಶ ಸಾರಲು ಬಂದ ತಿಕ್ಲು ರಾಮ

ನಿರ್ದೇಶಕ ಮಂಜು ಕವಿ ನಿರ್ದೇಶನದ ತಿಕ್ಲು ಟೈಟಲ್‌ನಲ್ಲಿಯೇ ಸದ್ದು ಮಾಡಿತ್ತು, ಜತೆಗೆ ವಿವಾದಕ್ಕೂ ಸಿಲುಕಿತ್ತು. ಸಿನಿಮಾಗೆ ಇದೇ ಶೀರ್ಷಿಕೆ ಯಾಕೆ ಇಡಲಾಗಿದೆ ಎಂಬುದನ್ನು ಸ್ಪಷ್ಟಪಡಿಸಿರುವ ಚಿತ್ರತಂಡ, ಆ ಮೂಲಕ ಯಾರ ನಂಬಿಕೆಗೂ ಧಕ್ಕೆ ತರುವ ಉದ್ದೇಶವಿಲ್ಲ ಎಂದು ಹೇಳಿದೆ. ತಮ್ಮ ಸಿನಿಮಾದ ಕುರಿತಂತೆ ನಿರ್ದೇಶಕ ಮಂಜುಕವಿ ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ತಿಕ್ಲು ರಾಮ ಕಾಮಿಡಿ ಕಥೆಯ ಚಿತ್ರವೇ?

ಮಂಜಕವಿ : ಚಿತ್ರದಲ್ಲಿ ಎಲ್ಲರಿಗೂ ಅನ್ವಯವಾಗುವ ಸಾಮಾಜಿಕ ಸಂದೇಶ ಅಡಕವಾಗಿದೆ. ಅದಕ್ಕೆ ಹಾಸ್ಯ ಬೆರೆಸಿ ಮನರಂಜನಾತ್ಮಕವಾಗಿ ಕಟ್ಟಿಕೊಡಲಾಗುತ್ತಿದೆ. ತಂದೆಗೆ ತನ್ನ ಮಡದಿ, ಮಗಳೆ ಪ್ರಾಣ ಆದರೆ ಸಂಸಾರದಲ್ಲಿ ಎದಿರಾಗುವ ಏರಿಳಿತಗಳಿಂದ ಬೇಸತ್ತು ಮನೆ ತೊರೆವ ರಾಮ, ನೆಮ್ಮದಿಯ ಬದುಕಿಗಾಗಿ ಹುಡುಕಾಡುತ್ತಾನೆ. ಆಗ ರಾಮನನ್ನು ಪರಿಸರ ಬಾಚಿ ಅಪ್ಪಿಕೊಳ್ಳುತ್ತದೆ. ಸಂಸಾರದಲ್ಲಿ ಕಳೆದುಕೊಂಡ ನೆಮ್ಮದಿಯನ್ನು ಪರಿಸರದಲ್ಲಿ ಕಂಡುಕೊಳ್ಳುತ್ತಾನೆ. ಅದು ಏನು, ಹೇಗೆ ಮನುಷ್ಯನಿಗೆ ಪ್ರಕೃತಿ ಎಷ್ಟು ಮುಖ್ಯ ಎಂಬುದನ್ನು ಸಿನಿಮಾದಲ್ಲಿ ಹೇಳಲಾಗಿದೆ. ಇಲ್ಲಿ ಕಾಮಿಡಿಯ ಜತೆಗೆ ಕೌಟುಂಬಿಕ ಸ್ಟೋರಿಯೂ ಮನಗೆಲ್ಲುತ್ತದೆ.

ಇದೇ ಶೀರ್ಷಿಕೆ ಆಯ್ದುಕೊಂಡಿದ್ದು ಯಾಕೆ ?

ನಟ ರಾಜ್‌ವೀರ್, ತಮ್ಮ ಸುತ್ತಮುತ್ತ ನಡೆದ ಘಟನೆಗಳನ್ನು ಆಧರಿಸಿ ಹೆಣೆದ ಕಥೆ ಇದು. ಈ ಸ್ಟೋರಿ ಓದಿದ ಮೇಲೆ ಅದಕ್ಕೆ ಇದೇ ಶೀರ್ಷಿಕೆಯೆ ಸೂಕ್ತವೆನಿಸಿತು. ನಮ್ಮ ಸಮಾಜದಲ್ಲಿ ಎಲ್ಲವನ್ನೂ ತಾಳ್ಮೆಯಿಂದ ಹೇಳಲು ಹೊರಟರೆ ಬಹುತೇಕರು ಅರ್ಥ ಮಾಡಿಕೊಳ್ಳುವುದೇ ಇಲ್ಲ. ಉದಾಹರಣೆಗೆ ನೀನು ಆ ಜಾಗಕ್ಕೆ ಹೋಗಬೇಡ, ಅಲ್ಲಿ ಅಪಾಯವಿದೆ ಎಂದರೆ ಅದನ್ನು ನಿರ್ಲಕ್ಷಿಸಿ ಅತ್ತ ಹೋಗುವವರೆ ಹೆಚ್ಚು. ಆದರೆ ಅದೇ ಒಬ್ಬ ದರ್ಪಿಷ್ಠ ದಾರಿಯಲ್ಲಿ ಯಾವುದಾದರೂ ಅಸ್ತ್ರ ಹಿಡಿದು ನಿಂತಿದ್ದರೆ ಮುಗೀತು, ಬೇಡ ಎಂದರೂ ಹುಂಬತನದಿಂದ ಹೋದವರು, ಆತನನ್ನು ನೋಡಿದಾಕ್ಷಣ ಕಾಲ್ಕಿತ್ತುತ್ತಾರೆ. ಅದೇ ವಿಚಾರವನ್ನು ಸಿನಿಮಾದಲ್ಲಿ ಹೇಳಲಾಗಿದೆ. ಸೈಲೆಂಟ್ ಆಗಿದ್ದ ರಾಮ ತಿಕ್ಲು ರಾಮನಾಗಿದ್ದು ಯಾಕೆ ಎಂಬುದೇ ಸಿನಿಮಾದ ಸ್ಟೋರಿ.

ಜಹಾಂಗೀರ್ ಅವರ ಪಾತ್ರದ ಬಗ್ಗೆ ಹೇಳುವುದಾದರೆ ?

ಮಂಜುಕವಿ : ಜಹಾಂಗೀರ್ ರಾಮನ ಭಂಟನಾಗಿ ಕಾಣಿಸಿಕೊಂಡಿದ್ದಾರೆ. ಒಂದು ರೀತಿ ಅದು ಹನುಮಂತನ ಪಾತ್ರದಂತೆಯೇ ಎಂದು ಹೇಳಬಹುದು. ಮನೆಬಿಟ್ಟು ಕಾಡಿಗೆ ಬರುವ ರಾಮನ ಜತೆಯಾಗುವ ಜಹಾಂಗೀರ್ ಚಿತ್ರದುದ್ದಕ್ಕೂ ಕಾಮಿಡಿಯಲ್ಲಿ ರಂಜಿಸುತ್ತಾರೆ. ರಾಜ್‌ವೀರ್ ನಾಯಕನಾಗಿ ನಟಿಸಿದ್ದು, ಚೈತ್ರಾ ರಾಮ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ನಿಖಿತಾ ಸ್ವಾಮಿ ಮಗಳ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಹಿರಿಯ ನಟ ಸುಚೇಂದ್ರ ಪ್ರಸಾದ್ ಎಂಎಲ್‌ಎ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.



ತಿಕ್ಲುರಾಮನ ಚಿತ್ರೀಕರಣ ಬಹುತೇಕ ಮುಕ್ತಾಯವಾಗಿದೆ. ಕೊನೆಯ ಹಂತದ ಚಿತ್ರೀಕರಣ ಬಾಕಿಯಿದ್ದು ಇನ್ನೊಂದು ತಿಂಗಳಲ್ಲಿ ಶೂಟಿಂಗ್ ಮುಗಿಸಿ, ಪೋಸ್ಟ್ ಪ್ರೊಡಕ್ಷನ್ ಕೆಸಗಳನ್ನು ಆರಂಭಿಸಲಿದ್ದೇವೆ. ಅಕ್ಟೋಬರ್ ವೇಳೆಗೆ ಚಿತ್ರವನ್ನು ತೆರೆಗೆ ತರುವ ಯೋಜನೆ ಇದೆ.

ಮತ್ತೆ ಒಂದಾಗಲಿದ್ದಾರೆ ಚಂದ್ರು-ಶಿವಣ್ಣ

ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಸಾಲು ಸಾಲು ಸಿನಿಮಾಗಳಲ್ಲಿ ಅಭಿನಯಿಸುತ್ತಿದ್ದಾರೆ. ಕನ್ನಡ ಮಾತ್ರವಲ್ಲ ಪರಭಾಷೆಯ ಸಿನಿಮಾಗಳಲ್ಲಿಯೂ ಶಿವಣ್ಣ ಅವರಿಗೆ ಭರ್ಜರಿ ಬೇಡಿಕೆಯಿದೆ. ಹಾಗಾಗಿ ಶಿವಣ್ಣ ತೆಲುಗು, ತಮಿಳು ಚಿತ್ರಗಳಲ್ಲಿಯೂ ನಟಿಸುತ್ತಿದ್ದಾರೆ. ಕನ್ನಡದಲ್ಲಿ ಡ್ಯಾಡ್ ಸಿನಿಮಾದ ಶೂಟಿಂಗ್ ಮುಗಿಸಿರುವ ಶಿವರಾಜ್‌ಕುಮಾರ್, ಹೇಮಂತ್ ರಾವ್ ನಿರ್ದೇಶನದ 666 ಆಪರೇಷನ್ ಡ್ರೀಮ್ ಥಿಯೇಟರ್ ಚಿತ್ರದಲ್ಲಿ ಬ್ಯುಸಿಯಾಗಿದ್ದಾರೆ. ಇದರ ಜತೆಗೆ ರಾಮ್ ಚರಣ್ ನಾಯಕನಾಗಿ ನಟಿಸಿರುವ ಪೆದ್ದಿ ಚಿತ್ರದಲ್ಲಿ ಗೌರು ನಾಯ್ಡು ಎಂಬ ಪವರ್ ಫುಲ್ ರೋಲ್‌ನಲ್ಲಿ ಕಾಣಿಸಿಕೊಂಡಿದ್ದಾರೆ.

ಈಗ ಶಿವಣ್ಣ ಕಡೆಯಿಂದ ಮತ್ತೊಂದು ಸರ್‌ಪ್ರೈಸ್ ಸಿಕ್ಕಿದೆ. ನಿರ್ದೇಶಕ ಹಾಗೂ ನಿರ್ಮಾಪಕ ಆರ್.ಚಂದ್ರು, ಶಿವಣ್ಣ ಅವರಿಗಾಗಿ ಕಥೆ ಹೆಣೆದಿದ್ದು, ಸಿನಿಮಾ ನಿರ್ದೇಶನ ಮಾಡಲು ಸಿದ್ಧತೆ ನಡೆಸಿದ್ದಾರೆ. ಹಾಗಂತ ಇದು ಕಬ್ಜ 2 ಚಿತ್ರವಲ್ಲ, ಬದಲಾಗಿ ಹೊಸತನದ ಕಥೆಯನ್ನು ಹೊತ್ತುಬರುತ್ತಿದ್ದಾರೆ. 2010ರಲ್ಲಿ ಆರ್. ಚಂದ್ರು, ಶಿವಣ್ಣ ಅಭಿನಯದ ಮೈಲಾರಿ ಚಿತ್ರವನ್ನು ನಿರ್ದೇಶಿಸಿದ್ದರು. ಈ ಸಿನಿಮಾ ಭರ್ಜರಿ ಯಶಸ್ಸು ಕಂಡಿತ್ತು. ಆ ಬಳಿಕ ಕಬ್ಜ ಚಿತ್ರದಲ್ಲಿ ಶಿವಣ್ಣ ಅತಿಥಿ ಪಾತ್ರದಲ್ಲಿ ನಟಿಸಿದ್ದರು. ಈಗ ಬಹು ದಿನಗಳ ಬಳಿಕ ಈ ಜೋಡಿ ಒಂದಾಗುತ್ತಿದ್ದು, ಮತ್ತೊಂದು ಅದ್ಭುತ ಸಿನಿಮಾ ಮೂಡಿಬರುವುದು ಖಚಿತವಾಗಿದೆ. ಕಬ್ಜ ಚಿತ್ರವನ್ನು ನಿರ್ದೇಶನ ಮಾಡಿದ ಬಳಿಕ ಆರ್.ಚಂದ್ರು, ತಮ್ಮದೇ ಆರ್.ಸಿ.ಸ್ಟುಡಿಯೋಸ್ ಬ್ಯಾನರ್ ಸ್ಥಾಪಿಸಿ ತಮ್ಮ ಬ್ಯಾನರ್‌ನಲ್ಲಿ ಹಲವು ಹೈಬಜೆಟ್ ಸಿನಿಮಾಗಳನ್ನು ನಿರ್ಮಾಣ ಮಾಡುತ್ತಿದ್ದಾರೆ. ಈಗಾಗಲೇ ಐದು ಸಿನಿಮಾಗಳನ್ನು ಘೋಷಿಸಿದ್ದು, ಅದರಲ್ಲಿ ಫಾದರ್ ಸಿನಿಮಾ ಶೂಟಿಂಗ್ ಮುಗಿಸಿ ತೆರೆಗೆ ಸಿದ್ಧವಾಗಿದೆ. ಈಗ ಚಂದ್ರು ಮತ್ತೆ ನಿರ್ದೇಶನಕ್ಕೆ ಮರಳುತ್ತಿದ್ದು, ಶಿವಣ್ಣ ಅವರ ಸಿನಿಮಾವನ್ನು ನಿರ್ದೇಶನ ಮಾಡಲಿದ್ದಾರೆ. ಈ ಹೊಸ ಸಿನಿಮಾ ಮಾಸ್ ಕ್ಲಾಸ್ ಆಗಿ ಮೂಡಿಬರಲಿದೆ ಎಂಬ ನಿರೀಕ್ಷೆ ಇದೆ.

ಹೋರಾಟ ಆರಂಭಿಸಿದ ಅಶ್ವಿನಿ

ರಿಪ್ಪನ್ ಸ್ವಾಮಿ ಸೇರಿದಂತೆ ಕನ್ನಡದ ಹಲವು ಸಿನಿಮಾಗಳಲ್ಲಿ ನಟಿಸಿ ಮನಗೆದ್ದ ಕನ್ನಡತಿ ಅಶ್ವಿನಿ ಚಂದ್ರಶೇಖರ್, ಕಾಲಿವುಡ್ ಅಂಗಳಲ್ಲಿ ಸಿನಿಯಾನ ಮುಂದಿವರಿಸಿದ್ದು, ಅಲ್ಲಿ ಹೋರಾಟ ಆರಂಭಿಸಿದ್ದಾರೆ. ಅಯ್ಯೋ ಇದೇನಿದು ಅಂತ ಅಚ್ಚರಿಗೊಳ್ಳಬೇಡಿ. ಅಶ್ವಿನಿ ತಮಿಳಿನ ಕಂಗನಮ್ ಚಿತ್ರದಲ್ಲಿ ಅಭಿನಯಿಸಿದ್ದು, ಮಹಿಳಾಪರ ಹೋರಾಗಾರ್ತಿಯಾಗಿ ತೆರೆಯಲ್ಲಿ ಮಿಂಚಲಿದ್ದಾರೆ. ಹೌದು, ಕಲ್ಯಾಣಿ ಎಂಟರ್‌ಪ್ರೈಸ್ ಪ್ರೊಡಕ್ಷನ್‌ನಲ್ಲಿ ನಿರ್ಮಾಣವಾಗಿರುವ ಕಂಗನಮ್ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಅಶ್ವಿನಿ ತಮ್ಮ ಸಿನಿಮಾ ಹಾಗೂ ಪಾತ್ರದ ಬಗ್ಗೆ ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ಮಹಿಳಾ ಪ್ರಧಾನ ಕಥೆ

ಕಂಗನಮ್ ಮಹಿಳಾ ಪ್ರಧಾನ ಕಥೆಯನ್ನು ಒಳಗೊಂಡಿದ್ದು ಎಲ್ಲರಿಗೂ ಹೊಂದುವ ಅದ್ಭುತ ಸ್ಟೋರಿ ಸಿನಿಮಾದಲ್ಲಿದೆ. ಹಳ್ಳಿಗಾಡಿನಲ್ಲಿ ಸಾಗುವ ಸ್ಟೋರಿ ಇಲ್ಲಿದ್ದು, ಅಶ್ವಿನಿ ಮುಗ್ಧ ಹುಡುಗಿಯಾಗಿ, ಮಹಿಳಾ ಪರ ದನಿ ಎತ್ತುವ ಹೋರಾಟಗಾರ್ತಿಯಾಗಿ ಹೀಗೆ ಡಬ್ಬಲ್ ಶೇಡ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ತಾನು ಮೆಚ್ಚಿದ ಹುಡುಗನನ್ನು ಕೈ ಹಿಡಿಯುವ ನಾಯಕಿ, ಅಲ್ಲಿಂದ ನಾಯಕಿಗೆ ಆರಂಭವಾಗುವ ಸಮಸ್ಯೆಗಳು, ಅದರಿಂದ ಆಕೆ ಹೇಗೆ ಹೊರಗೆ ಬಂದು ಹೊಸ ಬದುಕು ಕಟ್ಟಿಕೊಳ್ಳುತ್ತಾಳೆ ಎಂಬುದನ್ನು ಎಲ್ಲರ ಮನಕ್ಕೆ ಮುಟ್ಟುವಂತೆ ಕಟ್ಟಿಕೊಡಲಾಗಿದೆ. ರಾ ಸ್ಟೈಲ್‌ನಲ್ಲಿ ಸಿನಿಮಾ ಮೂಡಿಬಂದಿರುವುದು ವಿಶೇಷ. ಇದು ಮಹಿಳಾ ಪ್ರಧಾನ ಕಥೆಯ ಸಿನಿಮಾವಾದರೂ ಮಾಸ್ ಎಲಿಮೆಂಟ್ಸ್ ಕೂಡ ಬೆರೆತಿದೆ ಎನ್ನುತ್ತಾರೆ ಅಶ್ವಿನಿ.

ಪ್ರಸ್ತುತತೆಗೆ ಹೊಂದುವ ಕಥೆ

ಕಂಗನಮ್ ಇಂದಿನ ಕಾಲಕ್ಕೆ ಹೊಂದುವ ಕಥೆಯಾಗಿದೆ. ಇಂದು ನಡೆಯುತ್ತಿರುವ ಹೋರಾಟ, ಅದಕ್ಕೆ ಬೆಸೆಯುವ ರಾಜಕೀಯ ನಂಟು ಎಲ್ಲವೂ ಚಿತ್ರದಲ್ಲಿದೆ. ಮಹಿಳಾ ಹಕ್ಕುಗಳಿಗಾಗಿ ನಡೆಯುತ್ತಿರುವ ಹೋರಾಟವನ್ನು ರಾಜಕೀಯ ವ್ಯಕ್ತಿಗಳು ಹೇಗೆ ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಾರೆ ಎಂಬುದನ್ನು ನಿರ್ದೇಶಕರು ತೆರೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಸಿನಿಮಾ ನೋಡುತ್ತಿದ್ದರೆ ಇಂದಿನ ಪರಿಸ್ಥಿತಿಗೆ ಕಥೆ ಹೇಗೆ ಹೊಂದುತ್ತದೆ ಎಂಬುದು ತಿಳಿಯುತ್ತದೆ ಎಂದು ಅಶ್ವಿನಿ ಹೇಳುತ್ತಾರೆ.

ರಿಪ್ಪನ್ ಸ್ವಾಮಿ ಸಿನಿಮಾದ ಬಳಿಕ ಕನ್ನಡದ ಹಲವು ಸಿನಿಮಾಗಳಲ್ಲಿ ನಟಿಸಲು ಅವಕಾಶಗಳು ಅರಸಿ ಬರುತ್ತಿವೆ. ಒಳ್ಳೆಯ ಸ್ಟೋರಿ ಹಾಗೂ ಪಾತ್ರಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇದ್ದರೆ ಖಂಡಿತಾ ನಟಿಸುತ್ತೇನೆ. ಈಗಾಗಲೇ ಹಲವು ಕಥೆಗಳನ್ನು ಕೇಳಿದ್ದೇನೆ. ಅದರಲ್ಲಿ ಕೆಲವು ಕಥೆಗಳು ಮನಸಿಗೆ ಹಿಡಿಸಿವೆ.

ತಮಿಳುನಾಡಿನಲ್ಲಿ ಹೊಸ ರಾಜಕೀಯ ಬಿರುಗಾಳಿ ಬೀಸಿದೆ. ನಮ್ಮ ಕಂಗನಮ್ ಚಿತ್ರದಲ್ಲಿಯೂ ಒಂದಷ್ಟು ಪೊಲಿಟಿಕಲ್ ಸ್ಟೋರಿ ಬೆರೆತಿರುವುದರಿಂದ ಸಿನಿಪ್ರಿಯರಿಗೆ ಈ ಚಿತ್ರ ಹಿಡಿಸುತ್ತದೆ. ಪ್ರೇಕ್ಷಕರು ನಮ್ಮ ಚಿತ್ರವನ್ನು ಕೈಹಿಡಿದು ಗೆಲ್ಲಿಸುತ್ತಾರೆ. ಕಂಗನಮ್ ಸಿನಿಮಾ ನನಗೆ ಬಿಗ್ ಬ್ರೇಕ್ ನೀಡುತ್ತದೆ ಎಂಬ ನಿರೀಕ್ಷೆ ಇದೆ.

ಸಮಾಚಾರ ಸಣ್ಣದಲ್ಲ

3 ಭಾಷಾ ನಿಯಮ: ಸುಪ್ರೀಂ ಸೂಚನೆ

ನವದೆಹಲಿ: ಸಿಬಿಎಸ್‌ಇಯು ಜುಲೈ 1ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗೆ ಜಾರಿಗೆ ತಂದಿರುವ 'ಮೂರು ಭಾಷಾ ನಿಯಮ' ವಿರುದ್ಧದ ಅರ್ಜಿಗೆ ಸಂಬಂಧಿಸಿ ಕೇಂದ್ರ ಸರಕಾರ ಮತ್ತು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ಪ್ರತಿಕ್ರಿಯೆ ಸಲ್ಲಿಸಲು ಸುಪ್ರೀಂ ಕೋರ್ಟ್ ಸೂಚಿಸಿದೆ. ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಎನ್. ಕೋಟೀಶ್ವರ್ ಸಿಂಗ್ ಅವರ ಪೀಠವು ಈ ಅರ್ಜಿಯನ್ನು ವಿಚಾರಣೆ ನಡೆಸಿ, ಕೇಂದ್ರ ಸರಕಾರ, ಸಿಬಿಎಸ್‌ಇ ಹಾಗೂ ಎನ್‌ಸಿಇಆರ್‌ಟಿ ಅವರಿಗೆ ನೋಟಿಸ್ ಜಾರಿ ಮಾಡಿದೆ. ಅರ್ಜಿದಾರರು, ಸಿಬಿಎಸ್‌ಇ ಹೊಸ ಶಿಕ್ಷಣ ನೀತಿ (ಎನ್‌ಇಪಿ-2020) ಆಧಾರವಾಗಿ 9ನೇ ತರಗತಿಯಿಂದ ಮೂರು ಭಾಷೆಗಳ ಅಧ್ಯಯನ ಕಡ್ಡಾಯಗೊಳಿಸಿರುವುದು ವಿದ್ಯಾರ್ಥಿಗಳ ಮೇಲೆ ಹೆಚ್ಚುವರಿ ಶೈಕ್ಷಣಿಕ ಒತ್ತಡವನ್ನು ಉಂಟುಮಾಡುತ್ತದೆ ಎಂದು ವಾದಿಸಿದ್ದಾರೆ. ವಿಶೇಷವಾಗಿ, ಹಿಂದಿ ಹೊರತಾದ ರಾಜ್ಯಗಳ ವಿದ್ಯಾರ್ಥಿಗಳಿಗೆ ಮೂರನೇ ಭಾಷೆ ಕಡ್ಡಾಯಗೊಳಿಸುವುದು ಪ್ರಾದೇಶಿಕ ಭಾಷೆಗಳ ಮೇಲಿನ ಒತ್ತಡ ಹೆಚ್ಚಿಸಿ, ಶಿಕ್ಷಣದಲ್ಲಿ ಅಸಮಾನತೆ ಉಂಟುಮಾಡಬಹುದು ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ. ಅರ್ಜಿಯಲ್ಲಿ, ಶಿಕ್ಷಣ ಹಕ್ಕು, ಭಾಷಾ ಸ್ವಾತಂತ್ರ್ಯ ಹಾಗೂ ರಾಜ್ಯಗಳ ಭಾಷಾ ವೈವಿಧ್ಯತೆಯನ್ನು ಪರಿಗಣಿಸದೆ ಈ ನಿಯಮ ಜಾರಿಗೊಳಿಸಲಾಗಿದೆ ಎಂದು ಪ್ರಶ್ನಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ಕೇಂದ್ರ ಮತ್ತು ಎನ್‌ಸಿಇಆರ್‌ಟಿಗೆ ಪ್ರತಿಕ್ರಿಯೆ ಕೇಳಿದ್ದು, ಮುಂದಿನ ವಿಚಾರಣೆಯನ್ನು ಮುಂದೂಡಿದೆ.

ತೀವ್ರ ಉಷ್ಣತೆಗೆ ಕಾರಣ ಹವಾಮಾನ: ಸ್ಟೀಲ್

®ÜÊÜ¨æÖÜÈ: ಭಾರತದಲ್ಲಿ ವರ್ಷದಿಂದ ವರ್ಷಕ್ಕೆ ತೀವ್ರಗೊಳ್ಳುತ್ತಿರುವ ಬಿಸಿಗಾಳಿ ಹಾಗೂ ಉಷ್ಣತೆಯ ಅಲೆಗಳಿಗೆ ಹವಾಮಾನ ಬದಲಾವಣೆ ಮುಖ್ಯ ಕಾರಣ ಎಂದು ವಿಶ್ವಸಂಸ್ಥೆಯ ಹವಾಮಾನ ಸಂಸ್ಥೆಯ ಮುಖ್ಯಸ್ಥ ಸೈಮನ್ ಸ್ಟೀಲ್ ಹೇಳಿದ್ದಾರೆ.

ಜಾಗತಿಕ ತಾಪಮಾನ ಏರಿಕೆಯಿಂದ ಭಾರತ ಸೇರಿದಂತೆ ದಕ್ಷಿಣ ಏಷ್ಯಾದ ಹಲವು ದೇಶಗಳಲ್ಲಿ ಅತಿಯಾದ ಬಿಸಿಲು, ಉಷ್ಣತೆಯ ದಾಖಲೆ ಮಟ್ಟದ ಏರಿಕೆ ಮತ್ತು ಅಸಹಜ ಹವಾಮಾನ ಘಟನೆಗಳು ಹೆಚ್ಚುತ್ತಿವೆ ಎಂದು ಎಚ್ಚರಿಸಿದ್ದಾರೆ. ಈ ಬಾರಿ ಉತ್ತರ ಭಾರತ, ಮಧ್ಯ ಭಾರತ ಮತ್ತು ಕೆಲವು ದಕ್ಷಿಣ ರಾಜ್ಯಗಳಲ್ಲಿ ಉಷ್ಣತೆಯ ಮಟ್ಟ ಸಾಮಾನ್ಯಕ್ಕಿಂತ ಹೆಚ್ಚು ದಾಖಲಾಗಿದ್ದು, ಜನಜೀವನದ ಮೇಲೆ ಗಂಭೀರ ಪರಿಣಾಮ ಬೀರಿದೆ. ಶಾಲೆಗಳ ಸಮಯ ಬದಲಾವಣೆ, ಆರೋಗ್ಯ ಸಮಸ್ಯೆಗಳು ಹಾಗೂ ವಿದ್ಯುತ್ ಬಳಕೆಯ ಏರಿಕೆ ಕೂಡ ಕಂಡುಬಂದಿದೆ. ತಜ್ಞರ ಪ್ರಕಾರ, ನಗರೀಕರಣ, ಅರಣ್ಯ ನಾಶ ಮತ್ತು ಜೀವಾಶ್ಮ ಇಂಧನಗಳ ಅತಿಯಾದ ಬಳಕೆ ಹವಾಮಾನ ಬದಲಾವಣೆಯನ್ನು ಮತ್ತಷ್ಟು ವೇಗಗೊಳಿಸುತ್ತಿದೆ. ಹವಾಮಾನ ಬದಲಾವಣೆಯನ್ನು ತಡೆಯಲು ದೇಶಗಳು ತಕ್ಷಣ ಕಾರ್ಬನ್ ಉತ್ಪತ್ತಿ ಕಡಿಮೆ ಮಾಡುವ ಕ್ರಮಗಳನ್ನು ಕೈಗೊಳ್ಳಬೇಕು. ಪರಿಸರ ಸ್ನೇಹಿ ಇಂಧನ ಬಳಕೆ, ಹಸಿರು ಯೋಜನೆಗಳು ಹಾಗೂ ಜಾಗತಿಕ ಸಹಕಾರವೇ ಮುಂದಿನ ದಶಕಗಳಲ್ಲಿ ಉಷ್ಣತೆಯನ್ನು ನಿಯಂತ್ರಿಸಲು ಅಗತ್ಯ ಎಂದು ಹೇಳಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಬಾಹ್ಯಾಕಾಶ ಜಗತ್ತಿನಲ್ಲಿ ಭಾರತದ ಕೀರ್ತಿ ಪತಾಕೆ > ಇಸ್ರೋ ಮತ್ತೊಂದು ಸಾಧನೆ

ಚಂದ್ರನ ದಕ್ಷಿಣ ಧ್ರುವದಲ್ಲಿ ಹಿಮ ನಿಕ್ಷೇಪ ಪತ್ತೆಹಚ್ಚಿದ ಚಂದ್ರಯಾನ-2 ಆರ್ಬಿಟರ್

AÖÜÊÜá¨Ý¸Ý¨…: ಬಾಹ್ಯಾಕಾಶ ಜಗತ್ತಿನಲ್ಲಿ ಭಾರತದ ಕೀರ್ತಿ ಪತಾಕೆ ಮತ್ತೊಮ್ಮೆ ಎತ್ತರಕ್ಕೆ ಹಾರಿದೆ. ಭಾರತದ 2ನೇ ಚಂದ್ರಯಾನ ಯೋಜನೆಯಲ್ಲಿ ಚಂದ್ರನ ಬಳಿ ತೆರಳಿ ಆಗಿನಿಂದಲೂ ಚಂದ್ರನ ಸುತ್ತ ಸುತ್ತುತೀರುವ ಆರ್ಬಿಟರ್, ಈಗ ಹೊಸದೊಂದು ಸಾಧನೆಗೆ ಕಾರಣವಾಗಿದೆ. ಚಂದ್ರನ ಅತ್ಯಂತ ಕತ್ತಲೆಯ ಹಾಗೂ ಅತಿ ತಂಪಾದ ದಕ್ಷಿಣ ಧ್ರುವದ ದೊಡ್ಡ ಕುಳಿಗಳ ಆಳದಲ್ಲಿ ಭಾರಿ ಪ್ರಮಾಣದ ಮಂಜುಗಡ್ಡೆ ಅಥವಾ ನೀರಿನ ಹಿಮ ಅಡಗಿದೆ ಎಂಬುದನ್ನು ಪತ್ತೆ ಮಾಡಿದೆ. ಅದನ್ನು ದೃಢೀಕರಣ ಮಾಡುವಂತಹ ಬಲವಾದ ವೈಜ್ಞಾನಿಕ ಪುರಾವೆಗಳನ್ನು ಪತ್ತೆ ಹಚ್ಚಿದೆ. ಆರ್ಬಿಟರ್ ಮಾಡಿರುವ ಈ ಸಂಶೋಧನೆ ಭವಿಷ್ಯದಲ್ಲಿ ಚಂದ್ರನ ಮೇಲೆ ಮಾನವನ ದೀರ್ಘಕಾಲದ ವಾಸಸ್ಥಾನ ನಿರ್ಮಾಣಕ್ಕೆ ಕಾರಣವಾಗಲಿದೆ. ಗುಜರಾತ್ ರಾಜ್ಯದ ಅಹಮದಾಬಾದ್‌ನ ಫಿಸಿಕಲ್ ರಿಸರ್ಚ್ ಲ್ಯಾಬೋರೇಟರಿ ವಿಜ್ಞಾನಿಗಳು ಈ ಸಂಶೋಧನೆ ನಡೆಸಿದಾರೆ.

AñÝÄ«ÜáPÜÃaàvÝÄ..ñÜïñÜÀhÝñ®Ü: ಚಂದ್ರಯಾನ-2 ಆರ್ಬಿಟರ್‌ನಲ್ಲಿರುವ ಅತ್ಯಾಧುನಿಕ ಮೈಕ್ರೋವೇವ್ ಇಮೇಜಿಂಗ್ ಉಪಕರಣವಾದ 'ಡ್ಯುಯಲ್ ಫ್ರೀಕ್ವೆನ್ಸಿ ಸಿಂಥೆಟಿಕ್ ಅಪರ್ಚರ್ ರಾಡಾರ್ ಮೂಲಕ ಈ ಮಹತ್ವದ ಆವಿಷ್ಕಾರವಾಗಿದೆ. ಈ ರಾಡಾರ್ ಉಪಕರಣವು 'ಎಲ್ ಬ್ಯಾಂಡ್' ಮತ್ತು 'ಎಸ್ -ಬ್ಯಾಂಡ್' ತರಂಗಾಂತರಗಳಲ್ಲಿ ಈ ಸಂಶೋಧನಾ ಕಾರ್ಯ ಮಾಡಿದೆ. ಚಂದ್ರನ ಮೇಲ್ಮೈ ಮಾತ್ರವಲ್ಲದೆ ಅದರ ಆಳದ ಪದರಗಳನ್ನು ಕೂಡ ಸ್ಕ್ಯಾನ್ ಮಾಡುವ ಸಾಮರ್ಥ್ಯ ಈ ರಾಡಾರ್ ಹೊಂದಿದೆ. ಚಂದ್ರನ ಅನ್ವೇಷಣೆಗೆ ಕಳುಹಿಸಲಾದ ಜಗತ್ತಿನ ಮೊದಲ ಸಂಪೂರ್ಣ ಪೋಲಾರಿಮೆಟ್ರಿಕ್ ಸಿಂಥೆಟಿಕ್ ಅಪರ್ಚರ್ ರಾಡಾರ್ ಇದಾಗಿದೆ.

Êæáç®ÜÖ…248w.Óæ. ಸೂರ್ಯನನ್ನೇ ಕಾಣದ ಕೋಟಿ ವರ್ಷಗಳಿಂದ ಸೂರ್ಯನನ್ನೇ ಕಾಣದ ಕುಳಿಗಳು ಚಂದ್ರನ ಮೇಲೆ ಇವೆ. ಅಹಮದಾಬಾದ್‌ನ ವಿಜ್ಞಾನಿಗಳು ಚಂದ್ರನ ದಕ್ಷಿಣ ಧ್ರುವದ ಅತ್ಯಂತ ಅಪರೂಪದ ಡಬ್ಲಿ ಶ್ಯಾಡೋಡ್ ಕ್ರೇಟರ್ಸ್ (ಕತ್ತಲೆಯಲ್ಲಿರುವ ಕುಳಿಗಳ ಒಳಗೆ ಇರುವ ಸಣ್ಣ ಕುಳಿಗಳು) ಎಂದು ಕರೆಯಲಾಗುವ ಪ್ರದೇಶಗಳಲ್ಲಿ ರಾಡಾರ್ ಮೂಲಕ ಸಂಶೋಧನೆ ನಡೆಸಿದ್ದಾರೆ. ಈ ಕುಳಿಗಳಿಗೆ ಶತಕೋಟಿ ವರ್ಷಗಳಿಂದ ಸೂರ್ಯನ ಬೆಳಕು ಬಿದ್ದೇ ಇಲ್ಲ. ಇಲ್ಲಿನ ತಾಪಮಾನ ಕೇವಲ 25 ಕೆಲ್ವಿನ್, ಅಂದರೆ ಮೈನಸ್ 248 ಡಿಗ್ರಿ ಸೆಲ್ಸಿಯಸ್‌ಗಿಂತ ಕಡಿಮೆ ಇದೆ. ಸೌರಮಂಡಲದ ಅತ್ಯಂತ ಶೀತಲ ಪ್ರದೇಶಗಳಾಗಿರುವ ಈ ಕುಳಿಗಳು, ಶತಕೋಟಿ ವರ್ಷಗಳಿಂದ ನೀರಿನ ಅಂಶವನ್ನು ಹಿಮದ ರೂಪದಲ್ಲಿ ಸಂರಕ್ಷಿಸಿಡಲು ಅತ್ಯಂತ ಸೂಕ್ತವಾದ ಸ್ಥಳಗಳಾಗಿವೆ.

Ÿívæ&×ÉÜá®ÜvÚáÈ®ÜÉÜÂñÝÓÜ: ಚಂದ್ರನಲ್ಲಿ ಈ ಹಿಂದೆ ನಡೆದ ಸಂಶೋಧನೆಗಳಲ್ಲಿ ಚಂದ್ರನ ಮೇಲ್ಮೈನಲ್ಲಿರುವ ಒರಟಾದ ಬಂಡೆಗಳು ಮತ್ತು ಹಿಮದ ನಡುವಿನ ವ್ಯತ್ಯಾಸವನ್ನು ರಾಡಾರ್ ಮೂಲಕ ಪತ್ತೆ ಹಚ್ಚುವುದು ವಿಜ್ಞಾನಿಗಳಿಗೆ ದೊಡ್ಡ ಸವಾಲಾಗಿತ್ತು. ಆದರೆ ಇಸ್ರೋ ವಿಜ್ಞಾನಿಗಳು ಇದಕ್ಕಾಗಿ ಹೊಸದೊಂದು ರಾಡಾರ್ ತಂತ್ರವನ್ನು ಅಭಿವೃದ್ಧಿಪಡಿಸಿದ್ದಾರೆ. ಅವರು ಸರ್ಕ್ಯುಲರ್ ಪೋಲರೈಸೇಶನ್ ರೇಶಿಯೋ (ಸಿಪಿಆರ್) ಮತ್ತು ಡಿಗ್ರಿ ಆಫ್ ಪೋಲ ರೈಸೇಶನ್ (ಡಿಒಪಿ) ಎಂಬ ಎರಡು ನಿಯತಾಂಕಗಳನ್ನು ಒಟ್ಟಿಗೆ ಬಳಸಿದ್ದಾರೆ. ಯಾವ ಪ್ರದೇಶದಲ್ಲಿ ಸಿಪಿಆರ್ ಮೌಲ್ಯ 1 ಕ್ಕಿಂತ ಹೆಚ್ಚಿರುತ್ತದೆಯೋ ಮತ್ತು ಡಿಒಪಿ ಮೌಲ್ಯ 0.13 ಕ್ಕಿಂತ ಕಡಿಮೆಯಿರುತ್ತದೆಯೋ, ಅಲ್ಲಿ ಕೇವಲ ಒರಟು ಬಂಡೆಗಳಿರದೆ ಆಳದಲ್ಲಿ ಗಟ್ಟಿಯಾದ ಹಿಮದ ನಿಕ್ಷೇಪವಿರುತ್ತದೆ ಎಂಬುದನ್ನು ವಿಜ್ಞಾನಿಗಳು ಖಚಿತಪಡಿಸಿಕೊಂಡಿದ್ದಾರೆ. ದಕ್ಷಿಣ ಧ್ರುವದ ಇಂತಹ 4 ಪ್ರಮುಖ ಕುಳಿಗಳ ಆಳದಲ್ಲಿ ಹಿಮದ ಇರುವಿಕೆ ಪತ್ತೆಯಾಗಿದೆ.

ÊÜÞ®ÜÊÜ¸ÝÕÝÂPÝÍÜ±ÜÅ¿Þ|: ಚಂದ್ರನ ಮೇಲಿರುವ ನೀರು ಕೇವಲ ಕುಡಿಯಲು ಮಾತ್ರವಲ್ಲ, ಭವಿಷ್ಯದ ಇಡೀ ಬಾಹ್ಯಾಕಾಶ ವಿಜ್ಞಾನದ ದಿಕ್ಕನ್ನೇ ಬದಲಿಸಬಲ್ಲದು. ಈ ಹಿಮವನ್ನು ರಾಸಾಯನಿಕ ಪ್ರಕ್ರಿಯೆಗೆ ಒಳಪಡಿಸಿ ಕುಡಿಯುವ ನೀರು, ಉಸಿರಾಡಲು ಆಮ್ಲಜನಕ ಮತ್ತು ಪ್ರಮುಖವಾಗಿ ರಾಕೆಟ್ ಇಂಧನವನ್ನಾಗಿ ಪರಿವರ್ತಿಸಬಹುದು.

ಗೆದ್ದ ಚಂದ್ರಯಾನ-2 ಆರ್ಬಿಟರ್

2023ರಲ್ಲಿ ಭಾರತದ ಚಂದ್ರಯಾನ-3 ಮಿಷನ್ ಚಂದ್ರನ ದಕ್ಷಿಣ ಧ್ರುವದ ಮೇಲೆ ಯಶಸ್ವಿಯಾಗಿ ಲ್ಯಾಂಡಿಂಗ್ ಆಗಿ ಜಾಗತಿಕ ಇತಿಹಾಸ ಸೃಷ್ಟಿಸಿತ್ತು. ಈಗ ಚಂದ್ರಯಾನ-2 ಆರ್ಬಿಟರ್ ನೀಡಿರುವ ಈ ಮಾಹಿತಿ ಭಾರತದ ವಿಜ್ಞಾನ ಲೋಕದ ಹಿರಿಮೆಯನ್ನು ಮತ್ತಷ್ಟು ಹೆಚ್ಚಿಸಿದೆ. 2019 ರಲ್ಲಿ ಚಂದ್ರಯಾನ-2 ರ ಲ್ಯಾಂಡರ್ ಚಂದ್ರನ ಮೇಲೆ ಇಳಿಯುವಾಗ ಪತನಗೊಂಡು ಮಿಷನ್ ವಿಫಲವಾಯಿತು ಎಂದು ಭಾವಿಸಲಾಗಿತ್ತು. ಆದರೆ ಅದರ ಆರ್ಬಿಟರ್ ಮಾತ್ರ ಇಂದಿಗೂ ಚಂದ್ರನ ಕಕ್ಷೆಯಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಾ, ವರ್ಷಗಳ ನಂತರವೂ ಇಂತಹ ಉನ್ನತ ಮಟ್ಟದ ದತ್ತಾಂಶಗಳನ್ನು ಕಳುಹಿಸುವ ಮೂಲಕ ಜಗತ್ತಿಗೆ ಭಾರತದ ತಾಂತ್ರಿಕ ಶಕ್ತಿಯನ್ನು ಸಾರುತ್ತಿದೆ.

ಫಾಸ್ಟಿನಿ ಕುಳಿಯಲ್ಲಿ ಅತಿ ದೊಡ್ಡ ರಹಸ್ಯ!

ಸಂಶೋಧನೆಗೆ ಒಳಪಡಿಸಿದ ಸ್ಥಳಗಳಲ್ಲಿ, ದಕ್ಷಿಣ ಧ್ರುವದ ಬೃಹತ್ 'ಫಾಸ್ಟಿನಿ' ಕುಳಿಯ ಒಳಗಿರುವ 1.1 ಕಿ.ಮೀ. ವ್ಯಾಸದ ಮತ್ತೊಂದು ಸಣ್ಣ ಕುಳಿಯಲ್ಲಿ ಅತ್ಯಂತ ಹೆಪ್ಪುಗಟ್ಟಿದ ಹಿಮದ ನಿಕ್ಷೇಪವಿರುವುದು ರಾಡಾರ್ ಸಂಕೇತಗಳಿಂದ ದೃಢಪಟ್ಟಿದೆ. ಇದರೊಂದಿಗೆ ಈ ಕುಳಿಯ ಅಂಚುಗಳಲ್ಲಿ 'ಲೋಬೇಟ್-ರಿಮ್' ಎಂಬ ವಿಶಿಷ್ಟ ಹರಿವಿನಂತಹ ರಚನೆಗಳು ಕಂಡುಬಂದಿವೆ. ಹಿಂದೆ ಯಾವುದೋ ಆಕಾಶಕಾಯ ಚಂದ್ರನಿಗೆ ಬಂದು ಅಪ್ಪಳಿಸಿದಾಗ, ಅಲ್ಲಿನ ಹಿಮದ ಪದರವನ್ನು ಸೀಳಿಕೊಂಡು ಈ ರಚನೆಗಳು ಉಂಟಾಗಿವೆ ಎಂದು ವಿಜ್ಞಾನಿಗಳು ನಂಬಿದ್ದಾರೆ.

ಬದುಕಿಗೆ ಅಂಕಗಳಿಗಿಂತ ಕೌಶಲ ಶಿಕ್ಷಣ ಅವಶ್ಯ

ಬೆಂಗಳೂರು: ಉದ್ಯೋಗ ಕೇಂದ್ರಿತ ಶಿಕ್ಷಣ ವ್ಯವಸ್ಥೆಯ ಜತೆ ಭಾವ ಶಿಕ್ಷಣ ಇಂದಿನ ನಿಜವಾದ ಅಗತ್ಯತೆ ಎಂದು ಲೇಖಕ ಜಗದೀಶ ಶರ್ಮ ಸಂಪ ತಿಳಿಸಿದರು.

ಅವರು ನಗರದ ಮತ್ತಿಕೆರೆಯ ರಾಯಲ್ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ತರಗತಿಗಳ ಆರಂಭೋತ್ಸವ ಪ್ರಯುಕ್ತ ಹಮ್ಮಿಕೊಂಡಿದ್ದ ಅಭ್ಯುದಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಭಾರತೀಯತೆಗಿಂತ ಪಾಶ್ಚಿಮಾತ್ಯ ಪ್ರಭಾವ ಹೆಚ್ಚಾಗಿದೆ. ಉದ್ಯೋಗಗಳಿಸಲು ನೀಡು ತ್ತಿರುವ ಶಿಕ್ಷಣದ ಜತೆಗೆ ಪ್ರಾಚೀನ ಭಾರತೀಯ ಶಿಕ್ಷಣ ಕ್ರಮದ ಪ್ರಧಾನ ವ್ಯವಸ್ಥೆಯಾಗಿದ್ದ ಭಾವ ಶಿಕ್ಷಣ ಅನುಷ್ಠಾನಕ್ಕೆ ಬರಬೇಕಿದೆ, ಬದುಕಿಗೆ ಅಂಕಗಳಿಗಿಂತ ಮುಖ್ಯವಾಗಿ ಬೇಕಿರುವುದು ಜೀವನ ಶಿಕ್ಷಣ ಅಥವಾ ಕೌಶಲದ ಶಿಕ್ಷಣ ಎಂದರು. ಈ ಸಂದರ್ಭದಲ್ಲಿ ಕಾಲೇಜಿಗೆ ರಾಜ್ಯ ಮಟ್ಟದಲ್ಲಿ ಉನ್ನತ ಶ್ರೇಣಿಗಳಿಸಿದ ವಿದ್ಯಾರ್ಥಿಗಳಾದ ಆದರ್ಶ, ನಿದಾ ಖಾನ್, ಮತ್ತು ಮೈತ್ರಿ ಇವರುಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಸಂಸ್ಥಾಪಕರಾದ ಡಾ.ದೇವರಾಜ್ ವಹಿಸಿದ್ದರು. ನಿರ್ದೇಶಕರಾದ ಸುಜಾತ ದೇವರಾಜ್, ಪ್ರಾಚಾರ್ಯರಾದ ಡಾ.ಲಕ್ಷ್ಮೀಶ್ ಹೆಗಡೆ ಉಪಸ್ಥಿತರಿದ್ದರು.

ಮತ್ತಿಕೆರೆಯ ರಾಯಲ್ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ತರಗತಿಗಳ ಆರಂಭೋತ್ಸವ ಪ್ರಯುಕ್ತ ಹಮ್ಮಿಕೊಂಡಿದ್ದ ಅಭ್ಯುದಯ ಕಾರ್ಯಕ್ರಮದಲ್ಲಿ ಕಾಲೇಜಿಗೆ ರಾಜ್ಯ ಮಟ್ಟದಲ್ಲಿ ಉನ್ನತ ಶ್ರೇಣಿಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಸ್ಪೇಸ್ ಎಕ್ಸ್: ಸ್ಟಾರ್‌ಶಿಪ್ ವಿಫಲ



ಅಮೆರಿಕ: ಅಮೆರಿಕದ ಖಾಸಗಿ ಬಾಹ್ಯಾಕಾಶ ಸಂಸ್ಥೆ ಸ್ಪೇಸ್ ಎಕ್ಸ್ ನಡೆಸಿದ ಸ್ಟಾರ್‌ಶಿಪ್ ರಾಕೆಟ್‌ನ ಪರೀಕ್ಷಾ ಹಾರಾಟ ಮತ್ತೊಮ್ಮೆ ವಿಫಲವಾಗಿದ್ದು, ಘಟನೆ ಕುರಿತು ತನಿಖೆ ಪೂರ್ಣಗೊಳ್ಳುವವರೆಗೆ ರಾಕೆಟ್ ಹಾರಾಟ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಸ್ಟಾರ್‌ಶಿಪ್ ರಾಕೆಟ್ ಟೆಕ್ಸಾಸ್‌ನ ಬೋಕಾ ಚಿಕಾ ಉಡಾವಣೆ ಕೇಂದ್ರದಿಂದ ಉಡಾಯಿಸಲ್ಪಟ್ಟಿತ್ತು. ಉಡಾವಣೆಯ ಆರಂಭಿಕ ಹಂತ ಯಶಸ್ವಿಯಾಗಿದ್ದರೂ, ನಂತರದ ಹಂತದಲ್ಲಿ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿದೆ. ರಾಕೆಟ್‌ನ ಮೇಲ್ದರ್ಜೆ ಭಾಗದೊಂದಿಗೆ ಸಂಪರ್ಕ ಕಡಿತವಾದ ಕಾರಣ, ಪರೀಕ್ಷಾ ಹಾರಾಟ ವಿಫಲವಾಗಿದೆ ಎಂದು ಸಂಸ್ಥೆ ತಿಳಿಸಿದೆ. ಈ ಹಿನ್ನೆಲೆಯಲ್ಲಿ ಅಮೆರಿಕದ ಫೆಡರಲ್ ಏವಿಯೇಷನ್ ಆಡಳಿತ ತನಿಖೆಗೆ ಆದೇಶಿಸಿದೆ. ತನಿಖೆ ಪೂರ್ಣಗೊಳ್ಳುವವರೆಗೆ ಮುಂದಿನ ಸ್ಟಾರ್‌ಶಿಪ್ ಪರೀಕ್ಷಾ ಹಾರಾಟಗಳಿಗೆ ಅನುಮತಿ ನೀಡುವುದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗುಜರಾತ್‌ನ ಗಿರ್ ಅರಣ್ಯ ಪ್ರದೇಶದಲ್ಲಿ 4 ಸಿಂಹದ ಮರಿಗಳ ಸಾವು. ವೈರಸ್ ಸೋಂಕಿನಿಂದಾಗಿರಬಹುದು ಎಂಬ ಅನುಮಾನದಿಂದ ಇನ್ನುಳಿದ 17 ಸಿಂಹದ ಮರಿಗಳನ್ನು ಪ್ರತ್ಯೇಕವಾಗಿರಿಸಲಾಗಿದೆ.

BEFORE THE NOMINEE OF DEPUTY REGISTRAR OF CHITS, FIRST ZONE, MARGOSA ROAD, MALLESWARAM, AT BANGALORE
Dispute No. DRB-1/CFS/158/2025-2026
DISPUTANT: M/s Dhanalakshmi Srinivasan Chit Funds (Karnataka) Pvt Ltd
No. 32, 2nd Floor, 8th B Cross, 1st main, Near Gayathri Ganapathi Temple, Yelahanka New Town, Bengaluru-560064.
Branch: **Basaveshwaranagar**
Rep. by its Foreman /Manager,
SRI.RAJKUMAR J.
OPPONENTS
Mr. N.Prajwal And others .
4. Mr. N.Nagesh S/o Nagaraja, No.601/A,22nd ward, Prashantha Nagar, Near Bharath Gas Office, DVM Colony, Devanahalli Town, Bangalore Rural-562110.
NOTICE TO OPPONENTS NO 04
_WHEREAS, the Disputant has Instituted the above dispute U/s 64 of The Chit Funds Act, 1982 before The Deputy Registrar of Chits, First Zone, Bangalore for recovery of a sum of **12,16,725/- (Rupees Twelve Lakhs Sixteen Thousand Seven Hundred and Twenty Five Only)** from the opponents.
The Summons issued By Speed Post to the opponent No. **04** Appear for hearing on 27/05/2026 in this court not duly served .There fore the said opponent here by summons to appear before this court in person on **23 /06 / 2026 at 3:00 P M** before The Nominee of the Deputy Registrar of Chits sitting at 172,Suprabha Complex,2nd Floor,1st G Cross, Near Sharada Colony Bus stop,3rd Stage,Basaveshwaranagar, Bengaluru - 560079.If they wish to contest the above dispute with all Relavant document failing which the above dispute will be decided as per law in you absence.
Given Under my hand & seal on this office on **27/ 05/2026** at Bangalore
Nominee of The Deputy Registrar of Chits, Ist Zone, Malleshwaram, Bangalore

ಮೊದಲ ಬಾರಿಗೆ ತಾತ್ಕಾಲಿಕ ಕೀ ಉತ್ತರಗಳು ಬಿಡುಗಡೆ

®ÜÊÜ¨æÖÜÈ: ಕೇಂದ್ರ ಲೋಕಸೇವಾ ಆಯೋಗ ಮೊದಲ ಬಾರಿಗೆ ನಾಗರಿಕ ಸೇವೆಗಳ ಪ್ರಾಥಮಿಕ ಪರೀಕ್ಷೆ ಸಂಬಂಧಿಸಿದ ತಾತ್ಕಾಲಿಕ ಉತ್ತರ ಕೀ ಅನ್ನು ಬಿಡುಗಡೆ ಮಾಡಿದೆ. ಈ ಕ್ರಮವು ಪರೀಕ್ಷಾ ಪ್ರಕ್ರಿಯೆಯಲ್ಲಿ ಹೆಚ್ಚಿನ ಪಾರದರ್ಶಕತೆ ತರಲು ಮಹತ್ವದ ಹೆಜ್ಜೆಯಾಗಿ ಪರಿಗಣಿಸಲಾಗಿದೆ.

ಇದುವರೆಗೆ ಯುಪಿಎಸ್‌ಸಿ ಪ್ರಿಲಿಮ್ಸ್ ಪರೀಕ್ಷೆಯ ಅಂತಿಮ ಫಲಿತಾಂಶ ಪ್ರಕಟವಾದ ಬಳಿಕ ಮಾತ್ರ ಅಧಿಕೃತ ಉತ್ತರ ಕೀ ಬಿಡುಗಡೆ ಮಾಡುತ್ತಿತ್ತು. ಆದರೆ, ಈ ಬಾರಿ ಪರೀಕ್ಷೆ ನಡೆದ ಕೆಲವೇ ದಿನಗಳಲ್ಲಿ ತಾತ್ಕಾಲಿಕ ಉತ್ತರ ಕೀ ಪ್ರಕಟಿಸಿರುವುದು ಅಭ್ಯರ್ಥಿಗಳಲ್ಲಿ ಆಸಕ್ತಿ ಮೂಡಿಸಿದೆ. ಈ ಉತ್ತರ ಕೀ ಮೂಲಕ ಅಭ್ಯರ್ಥಿಗಳು ತಮ್ಮ ಉತ್ತರಗಳನ್ನು ಪರಿಶೀಲಿಸಿ ಅಂದಾಜು ಅಂಕಗಳನ್ನು ಲೆಕ್ಕ ಹಾಕಿಕೊಳ್ಳಬಹುದು. ಜತೆಗೆ ಯಾವುದೇ ಪ್ರಶ್ನೆ ಅಥವಾ ಉತ್ತರದ ಬಗ್ಗೆ ಆಕ್ಷೇಪಣೆ ಇದ್ದರೆ ನಿಗದಿತ ಅವಧಿಯಲ್ಲಿ ಸಲ್ಲಿಸುವ ಅವಕಾಶವೂ ನೀಡಲಾಗಿದೆ.

ತಜ್ಞರ ಅಭಿಪ್ರಾಯದಂತೆ, ಈ ಕ್ರಮದಿಂದ ಪರೀಕ್ಷಾ ವ್ಯವಸ್ಥೆಯ ವಿಶ್ವಾಸಾರ್ಹತೆ ಮತ್ತು ಪಾರದರ್ಶಕತೆ ಮತ್ತಷ್ಟು ಹೆಚ್ಚಲಿದೆ. ಅನೇಕ ವರ್ಷಗಳಿಂದ ಅಭ್ಯರ್ಥಿಗಳು ಪ್ರಿಲಿಮ್ಸ್ ಪರೀಕ್ಷೆಯ ತಕ್ಷಣ ಉತ್ತರ ಕೀ ಬಿಡುಗಡೆ ಮಾಡುವಂತೆ ಆಗ್ರಹಿಸುತ್ತಿದ್ದರು.

ಕಾಂಗ್ರೆಸ್‌ನಲ್ಲಿ ಯಾವುದೇ ಗೊಂದಲವಿಲ್ಲ ಸಿಎಂ ಸ್ಥಾನ: ಹೈಕಮಾಂಡ್ ತೀರ್ಮಾನ

bPÜRÝÜÝÛ±ÜâÃÜ: ಸಿದ್ದರಾಮಯ್ಯ ಅವರ ರಾಜೀನಾಮೆ ನಂತರ ಮುಂದಿನ ಮುಖ್ಯಮಂತ್ರಿ ಯಾರಾಗಲಿದ್ದಾರೆ ಎಂಬುದನ್ನು ಹೈಕಮಾಂಡ್ ತೀರ್ಮಾನಿಸಲಿದೆ. ಈ ಬಗ್ಗೆ ನಾವೇನೂ ಹೇಳುವುದಿಲ್ಲ ಎಂದು ಆಹಾರ ಮತ್ತು ನಾಗರೀಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಗೊಂದಲವಿಲ್ಲ. ಏನಾದರೂ ಗೊಂದಲವಿದ್ದರೆ ಅದು ವಿರೋಧ ಪಕ್ಷಗಳ ಸೃಷ್ಟಿ ಅಷ್ಟೇ. ಮುಖ್ಯಮಂತ್ರಿ ಬದಲಾವಣೆ ವಿಚಾರದ ಎಲ್ಲಾ ತೀರ್ಮಾನಗಳನ್ನು ಹೈಕಮಾಂಡ್ ಸಕಾಲದಲ್ಲಿ ತೆಗೆದುಕೊಳ್ಳಲಿದೆ. 2028ಕ್ಕೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಪುನಃ ಅಧಿಕಾರ ಸ್ಥಾನದಲ್ಲಿ ಪ್ರತಿಷ್ಠಾಪನೆ ಮಾಡುವುದು ನಮ್ಮೆಲ್ಲರ ಮೇಲಿರುವ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ಹಾಲಿ ಮುಖ್ಯಮಂತ್ರಿಗಳು ಮತ್ತು ಭಾವಿ ಮುಖ್ಯಮಂತ್ರಿಗಳು ಕಾರ್ಯೋನ್ಮುಖರಾಗಲಿದ್ದಾರೆ ಎಂದರು.

ಮಾಧ್ಯಮದವರು ಮತ್ತೆ ಮತ್ತೆ ಅದೇ ಪ್ರಶ್ನೆ ಕೇಳಿದಕ್ಕೆ ಪ್ರತಿಕ್ರಿಯಿಸಿದ ಕೆ.ಎಚ್. ಮುನಿಯಪ್ಪ ಮುಖ್ಯಮಂತ್ರಿ ಬದಲಾವಣೆ ವಿಷಯದ ಬಗ್ಗೆ ನಾನು ಹೆಚ್ಚಿಗೆ ಹೇಳುವುದಿಲ್ಲ.ಈ ಪ್ರಕ್ರಿಯೆ ಈಗಾಗಲೇ ಶುರುವಾಗಿದೆ.ಸದ್ಯ ರಾಜ್ಯಪಾಲರು ಲೋಕಭವನದಲ್ಲಿ ಇಲ್ಲ. ನಾವೆಲ್ಲಾ ಏನು ತೀರ್ಮಾನ ಮಾಡಿದ್ದೇವೆ ಎಂಬುದನ್ನು ಸದ್ಯ ಹೇಳುವುದಿಲ್ಲ. ಸಂಜೆಯ ವೇಳೆಗೆ ಎಲ್ಲವೂ ನಿಮಗೆ ತಿಳಿಯಲಿದೆ ಎಂಬುದನ್ನು ಸೂಚ್ಯವಾಗಿ ಹೇಳಿದರು. ಗ್ಯಾಸ್ ಸಮಸ್ಯೆ ಉಲ್ಬಣದ ಬಗ್ಗೆ ಪ್ರತಿಕ್ರಯಿಸಿದ ಅವರು ರಾಜ್ಯದಲ್ಲಿ ಎದುರಾಗಿರುವ ಗ್ಯಾಸ್ ಸಮಸೆಯನ್ನು ಪರಿಹರಿಸುವ ಸಲುವಾಗಿ ಅಧಿಕಾರಿಗಳ ಸಭೆ ನಡೆಸಲಾಗಿದ್ದು ಎರಡು ಮೂರು ದಿನಗಳಲ್ಲಿ ಎಲ್ಲವನ್ನು ಸರಿಪಡಿಸಲಾಗುವುದು. ಈ ಸಂಬಅಧ ನಾಗರಿಕರು ಯಾವುದೇ ಕಾರಣಕ್ಕೆ ಆತಂಕಕ್ಕೆ ಒಳಗಾಗುವುದು ಬೇಡ ಎಂದು ಸಚಿವರು ಅಭಯ ನೀಡಿದರು.

> **ಉಪಾಹಾರದ ಸಂದರ್ಭದಲ್ಲಿ ಸಿದ್ದರಾಮಯ್ಯ ನಮಗೆಲ್ಲ ಮಾರ್ಗದರ್ಶನ ಮಾಡಿದ್ದಾರೆ. 2028ಕ್ಕೆ ರಾಜ್ಯದಲ್ಲಿ ಮತ್ತೊಮ್ಮೆ ಕಾಂಗ್ರೆಸ್ ಸರಕಾರವನ್ನು ಅಧಿಕಾರಕ್ಕೆ ತರಬೇಕಾದರೆ ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಬೇಕು. ನಾನೂ ನಿಮ್ಮ ಜತೆಗಿರಲಿದ್ದೇನೆ ಎಂಬ ಭರವಸೆಯನ್ನೂ ಕೊಟ್ಟಿದ್ದಾರೆ.**
> **-ಕೆ.ಎಚ್.ಮುನಿಯಪ್ಪ,** ಸಚಿವ

ನಮ್ಮಿಂದ ತಪ್ಪಾಗಿದೆ: ಹೊಣೆ ಹೊತ್ತ ಧರ್ಮೇಂದ್ರ ಪ್ರಧಾನ್

¨æÖÜÈ: ಸಿಬಿಎಸ್‌ಇ ಪರೀಕ್ಷೆಯಲ್ಲಿ ಆನ್-ಸ್ಕ್ರೀನ್ ಮಾರ್ಕಿಂಗ್ ವ್ಯವಸ್ಥೆಯಲ್ಲಿ ಲೋಪ ಉಂಟಾಗಿರುವುದಕ್ಕೆ ವಿಷಾದಿಸಿರುವ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ಜವಾಬ್ದಾರಿಯನ್ನು ನಾವು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಲ್ಲಿ ಅದಕ್ಕೆ ಕಾರಣರಾದ ಯಾರನ್ನೂ ಶಿಕ್ಷಿಸದೇ ಬಿಡುವುದಿಲ್ಲ ಎಂದು ಎಚ್ಚರಿಕೆ ಕೊಟ್ಟಿದ್ದಾರೆ. ದೆಹಲಿಯಲ್ಲಿ ಸಿಬಿಎಸ್‌ಇ ಅಧಿಕಾರಿಗಳ ಸಭೆ ನಡೆಸಿದ ಬಳಿಕ ಮಾತನಾಡಿ, ನಾನು ಈಗ ಆಗಿರುವುದರ ಹೊಣೆ ಹೊರುತ್ತೇನೆ. ಅವೆಲ್ಲವನ್ನು ಸರಿಪಡಿಸಿ ಪರಿಹಾರ ಕಂಡುಕೊಳ್ಳಲಾಗುವುದು. ಆ ಕೆಲಸ ಮಾಡುತ್ತೇವೆ. ಪರೀಕ್ಷೆ ಬರೆದ 17 ಲಕ್ಷ ವಿದ್ಯಾರ್ಥಿಗಳಲ್ಲಿ, ನಾವು 98 ಲಕ್ಷ ಪ್ರತಿಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ನಡೆದಿದೆ. ಪ್ರತಿ ಉತ್ತರ ಪತ್ರಿಕೆ ಸುಮಾರು 40 ಪುಟಗಳನ್ನು ಹೊಂದಿದ್ದು, ಒಟ್ಟು ಸ್ಕ್ಯಾನ್ ಮಾಡಿದ ಪುಟಗಳ ಸಂಖ್ಯೆಯನ್ನು 40 ಕೋಟಿ ಎಂದು ಪರಿಗಣಿಸಲಾಗುತ್ತದೆ ಎಂದು ಮಾಹಿತಿ ನೀಡಿದ್ದಾರೆ. ಸಿಬಿಎಸ್‌ಇ ಆನ್-ಸ್ಕ್ರೀನ್ ಮಾರ್ಕಿಂಗ್ ವ್ಯವಸ್ಥೆ ಬಗ್ಗೆ ದೇಶಾದ್ಯಂತದ ವಿದ್ಯಾರ್ಥಿಗಳು ಮತ್ತು ಪೋಷಕರ ಸಮೂಹದಿಂದ ಭಾರೀ ಆಕ್ರೋಶ ವ್ಯಕ್ತವಾಗಿದೆ. ಮರುಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಮಸುಕಾದ ಸ್ಕ್ಯಾನ್ ಪ್ರತಿಗಳನ್ನು ನೀಡಿರುವುದು, ಮೌಲ್ಯಮಾಪಕರು ಪರಿಶೀಲಿಸದೇ ಇದ್ದ ಉತ್ತರಗಳನ್ನು ಕಂಡು ವಿದ್ಯಾರ್ಥಿಗಳು ಮತ್ತು ಪೋಷಕರು ಕಿಡಿಕಾರಿದ್ದರು. ಅಲ್ಲದೇ, ವೆಬ್‌ಸೈಟ್ ಮಧ್ಯೆ ಮಧ್ಯೆ ಸ್ಥಗಿತಗೊಳ್ಳುತ್ತಿದ್ದು, ಆನ್‌ಲೈನ್ ಪಾವತಿ ವ್ಯವಸ್ಥೆಯಲ್ಲಿನ ಸಮಸ್ಯೆಗಳು ಮತ್ತು ಗೊಂದಲಗಳ ಕುರಿತು ವಿದ್ಯಾರ್ಥಿಗಳಿಂದ ಭಾರೀ ಪ್ರಮಾಣದಲ್ಲಿ ದೂರುಗಳು ಬಂದಿದ್ದವು.

ಭಾರತದ ಮಾವಿನ ಹಣ್ಣುಗಳನ್ನು ಜಾಗತಿಕವಾಗಿ ಸ್ವೀಕರಿಸುತ್ತಿದ್ದರೂ, ಜಪಾನ್ ತಪಾಸಣಾ ತಂಡವು ದೇಶದ ಸೌಲಭ್ಯಗಳಲ್ಲಿ ಉತ್ಪಾದನೆಯಲ್ಲಿ ಅಕ್ರಮಗಳನ್ನು ಕಂಡು ಕೊಂಡ ನಂತರ ಈ ಬಾರಿ ಭಾರತದಿಂದ ಹಣ್ಣುಗಳನ್ನು ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಿದೆ.

2006ರಿಂದ ಪ್ರತಿ ವರ್ಷ ಟನ್‌ಗಳಷ್ಟು ಕೇಸರ್, ಅಲ್ಫೋನ್ಸೊ, ಲ್ಯಾಂಗ್ರಾ ಮತ್ತು ಬಂಗಮ್‌ಪಲ್ಲಿ ಯನ್ನು ಜಪಾನ್‌ಗೆ ರಫ್ತು ಮಾಡಲಾಗುತ್ತದೆ. ಆದರೆ, ಈ ವರ್ಷ ಎರಡು ದಶಕಗಳ ನಂತರ ನಿಷೇಧ ಹೇರಲಾಗಿದೆ. ಪ್ರತಿ ವರ್ಷ, ಮಾವಿನ ಋತುವಿನ ಮೊದಲು, ಮಾವಿನ ಹಣ್ಣುಗಳನ್ನು ಬಿಸಿ ಮತ್ತು ಆರ್ದ್ರ ಗಾಳಿಯಲ್ಲಿ ಕೀಟಗಳಿಂದ ಮುಕ್ತವಾಗಿಡುವ ರಾಸಾಯನಿಕವಲ್ಲದ ಕ್ವಾರಂಟೈನ್ ಪ್ರಕ್ರಿಯೆ ಯಾದ ಆವಿ ಶಾಖ ಚಿಕಿತ್ಸೆ (ವಿಎಟಿ)ಯನ್ನು ಮೇಲ್ವಿಚಾರಣೆ ಮಾಡಲು ಜಪಾನ್ ನಿರೀಕ್ಷಕರನ್ನು ಕಳುಹಿಸುತ್ತದೆ.

ನಿಷೇಧಕ್ಕೆ ಕಾರಣ?

ಮಾರ್ಚ್‌ನಲ್ಲಿ ಉತ್ತರ ಪ್ರದೇಶದ ರೆಹಮಾನ್ಪುರದಲ್ಲಿ ಪರಿಶೀಲನೆಯಲ್ಲಿದ್ದ ಜಪಾನ್‌ನ ಅಧಿಕಾರಿಗಳ ತಂಡವು ಭಾರತೀಯ ಸಂಸ್ಕರಣಾ ಸೌಲಭ್ಯಗಳಲ್ಲಿ ಧೂಮಪಾನ ಮತ್ತು ಸಂಬಂಧಿತ ಸೋಂಕುಗಳೆತ ಕ್ರಮಗಳಲ್ಲಿನ ನ್ಯೂನತೆಗಳನ್ನು ಕಂಡುಕೊಂಡಿತು ಆದ್ದರಿಂದ ಆಮದಿನ ಮೇಲೆ ನಿಷೇಧ ಹೇರಲು ಪ್ರೇರೇಪಿಸಿದೆ.

ಇದೇ ಮೊದಲಲ್ಲ!

ಹಣ್ಣಿನ ನೊಣಗಳ ಬಾಧೆಯ ಕಾರಣ ಜಪಾನ್ 1986ರಲ್ಲಿ ಭಾರತೀಯ ಮಾವಿನ ಹಣ್ಣುಗಳನ್ನು ನಿಷೇಧಿಸಿತು. ಆ ನಿಷೇಧವನ್ನು 20 ವರ್ಷಗಳ ನಂತರ ತೆಗೆದುಹಾಕಲಾಯಿತು.

> **ಭಾರತೀಯ ಮಾವಿನ ಹಣ್ಣುಗಳ ಗುಣಮಟ್ಟವನ್ನು ಹೆಚ್ಚಿಸಲು ಸಂಪೂರ್ಣವಾಗಿ ಹೊಸ ಸಂಸ್ಕರಣಾ ವ್ಯವಸ್ಥೆ ಇದೆ. ಜಪಾನೀಸ್ ನಿರ್ಮಿತ ವ್ಯವಸ್ಥೆ ಗಳನ್ನು ಮಾತ್ರ ಅನುಮೋದಿಸಿದರೆ, ಅದು ತಾಂತ್ರಿಕ ಅನುಸರಣೆಗಿಂತ ಏಕಸ್ವಾಮ್ಯ ಮತ್ತು ರಾಜತಾಂತ್ರಿಕತೆಯ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕುತ್ತಿವೆ.**
> **- ಅಕ್ರಮ್ ಬೇಗ್,** ಉತ್ತರ ಪ್ರದೇಶದ ರಫ್ತುದಾರ

ಯೊಕೊಹಾಮಾ ಸಸ್ಯ ಸಂರಕ್ಷಣಾ ಸಂಘದ ಕಾರ್ಯವೇನು?

ಜಪಾನ್‌ನ ಕ್ವಾರಂಟೈನ್ ಯೋಜನೆಗಳನ್ನು ಬೆಂಬಲಿಸುವ ಸಾರ್ವಜನಿಕ ಹಿತಾಸಕ್ತಿ ಸಂಸ್ಥೆಯಾದ ಯೊಕೊಹಾಮಾ ಸಸ್ಯ ಸಂರಕ್ಷಣಾ ಸಂಘವು, ಈ ವರ್ಷದ ಮಾರ್ಚ್ 25 ರಂದು ಅಥವಾ ನಂತರ ಭಾರತವು ನೀಡಿದ ತಪಾಸಣೆ ಪ್ರಮಾಣಪತ್ರಗಳನ್ನು ಹೊಂದಿರುವ ಮಾವಿನ ಸಾಗಣೆಯನ್ನು ಇನ್ನು ಮುಂದೆ ಸ್ವೀಕರಿಸಲಾಗುವುದಿಲ್ಲ, ಕಾರ್ಯಾಚರಣೆಯ ಮಾನದಂಡಗಳನ್ನು ಸುಧಾರಿಸಿದ ನಂತರವೇ ಮಾವಿನ ಹಣ್ಣುಗಳನ್ನು ಸ್ವೀಕರಿಸಲಾಗುವುದು ಎಂದು ಸ್ಪಷ್ಟಪಡಿಸಿದೆ.

BEFORE THE NOMINEE OF DEPUTY REGISTRAR OF CHITS, FIRST ZONE, MARGOSA ROAD, MALLESWARAM, AT BANGALORE
Dispute No. DRB-1/CFS/157/2025-2026
DISPUTANT: M/s Dhanalakshmi Srinivasan Chit Funds (Karnataka) Pvt Ltd
No. 32, 2nd Floor, 8th B Cross, 1st main, Near Gayathri Ganapathi Temple, Yelahanka New Town, Bengaluru-560064.
Branch: **Basaveshwaranagar**
Rep. by its Foreman /Manager,
SRI.RAJKUMAR J.
OPPONENTS
Mr.K. Mohammed Tajamulla Khan And others.
2. Mr. Y.Thavasil S/o.Y Abdul Hafiz NO:12-1-202, Prashanth Nagar Hindupur Sri Sathya Sai (D) Andhra Pradesh-515201.
3. Mr. K.M .Noorulla khan S/o. K. Mustafa Ali Khan D.NO:12-1-76, Prashanth Nagar Hindupur Sri Sathya Sai (D) Andhra Pradesh-515201.
NOTICE TO OPPONENTS NO 02, and 03 THROUGH PAPER PUBLICATION
_WHEREAS, the Disputant has Instituted the above dispute U/s 64 of The Chit Funds Act, 1982 before The Deputy Registrar of Chits, First Zone, Bangalore for recovery of a sum of **6,29,271/- (Rupees Six Lakhs Twenty Nine Thousand Two Hundred Seventy One Only)** from the opponents .
The Summons issued By Speed Post to the opponent No. **02, and 03** Appear for hearing on 27/05/2026 in this court not duly served .There fore the said opponent here by summons to appear before this court in person on **23/06/2026 at 3:00 P M** before The Nominee of the Deputy Registrar of Chits sitting at 172,Suprabha Complex,2nd Floor,1st G Cross, Near Sharada Colony Bus stop,3rd Stage,Basaveshwaranagar, Bengaluru -560079. If they wish to contest the above dispute with all Relavant document failing which the above dispute will be decided as per law in you absence.
Given Under my hand & seal on this office on 27/ 05/2026 at Bangalore
Nominee of The Deputy Registrar of Chits, Ist Zone, Malleshwaram, Bangalore

BEFORE THE NOMINEE OF DEPUTY REGISTRAR OF CHITS, FIRST ZONE, MARGOSA ROAD, MALLESWARAM, AT BANGALORE
Dispute No. DRB-1/ CFS/161/ 2025-2026
DISPUTANT: M/s Dhanalakshmi Srinivasan Chit Funds (Karnataka) Pvt Ltd
No. 32, 2nd Floor, 8th B Cross, 1st main, Near Gayathri Ganapathi Temple, Yelahanka New Town, Bengaluru-560064.
Branch: **Basaveshwaranagar**
Rep. by its Foreman /Manager,
SRI.RAJKUMAR J.
OPPONENTS
Mr. Arun kumar and others
OPPONENT NO. 04
Mr. Ramesh H.G S/o. Ganesh HR #40, Devikrupa, 2nd Cross, Ward No:03 JB Kaval, Near Udupi Krishna Bekary MS Palya Vidyaranyapura Post, Bangalore-560097
NOTICE OF CONDITIONAL ATTACHMENT OF IMMOVABLE PROPERTY OF OPPONENT NO. O4 UNDER SECTION 68 (1) OF THE CHIT FUNDS ACT,1982.THROUGH PAPER PUBLICATION
01. WHEREAS,the dispuitant has field the above dispute U/S 64 (1)of the Chit fund Act,1982,before the Deputy Registar of Chits,First zone, Margosa road, Malleshwaram, Banglore,for recovery of **Rs. Rs. 13,78,922/- (Rupees Thirteen Lakhs Seventy Eight Thousand Nine Hundred and Twenty Two Only)** with intrest @24 p.annum And the Court Costs From the Opponents.
02. Whereas, it is brought to my notice by the disputant through an application filed under section 68(1) of the Chit fund act 1982, accompanied by an affidavit stating that the opponents **No.04.** Mr. **Ramesh H.G** the Subsciber/ Guaranter of this chits and now she is contemplating to dispose off the immovable property belonging to her,as mentioned in the schedule hereunder, with an intention to delay or defeat the enforcement of execution of the award that is likely to be passed in the above dispute against him.
03. The ABJ conditional notice issued by RPAD to opponent **No.04** to appear before this Hon'ble Court **On** 25 /05/2026, the ABJ Conditional Notice to Opponent **No.04** is Not served. Therefore the opponents **No.04 i**s hereby Summoned to appear in this Court in person on 23 / 06/ 2026, at 3 :00 P.M The Nominee of the Deputy Registrar of Chits ,Sitting At 172,Suprabha Complex, 2nd Floor,,1st G Cross,Near Sharada Colony Bus stop,3rd Stage,Basaveshwaranagar, Bengaluru -560079 Without Fail Opponent to Take Notice that in default of Appearance the Dispute will be heard and Disposed Ex- Party and on Merits.
04. Further the opponent **No.04** is hereby informed that if he desires to have this attachment raised, he shall furnish cash secutity to the extent of the dispute Claim by depositing the amount to the disputant company and producing the original reciept issued by them to this court on before **23/06/2026, at 3 :00 P.M.** without fail for raising the attachment .if they fail to do so within the stipulated period, this Conditional attachment shall be deemed to have confirmed and made absolute to the extent of the dispute claim as per the award.
SCHEDULE PROPERTY
All the piece and parcel of the Property bearing Site No 258, katha No 1024, Formed in Converted Survey No 2/1 "Kanva Garden City", Situated at Sheshagirirao palya Village, Dasanapura Hobli, Bangalore North Taluk., measuring East to West 40 feet, North to South 30 feet in all measuring 1200 Square feet, together with all rights, appurtenances whatsoever whether underneath or above the surface and bounded on the:-
EAST: Site No 259
WEST: Site No 257
SOUTH Site No 225
NORTH 30 Feet Road
Given under my hand & seal of this office on Dated 25/05/2026 at Bangalore
Nominee of The Deputy Registrar of Chits, Ist Zone, Malleshwaram, Bangalore

BEFORE THE NOMINEE OF DEPUTY REGISTRAR OF CHITS, FIRST ZONE, MARGOSA ROAD, MALLESWARAM, AT BANGALORE
Dispute No. DRB-1/CFS/158/2025-2026
DISPUTANT: M/s Dhanalakshmi Srinivasan Chit Funds (Karnataka) Pvt Ltd
No. 32, 2nd Floor, 8th B Cross, 1st main, Near Gayathri Ganapathi Temple, Yelahanka New Town, Bengaluru-560064.
Branch: **Basaveshwaranagar**
Rep. by its Foreman /Manager,
SRI.RAJKUMAR J.
OPPONENTS
Mr. Prajwal.N and others
OPPONENT NO. 4
1.N.NAGESH S/o. Nataraja, Ward No.22,Shanthi Nagara, Byachapura Road, Devanahalli Town, Bangalore Rural-562110
NOTICE OF CONDITIONAL ATTACHMENT OF IMMOVABLE PROPERTY OF OPPONENT NO. 4 UNDER SECTION 68 (1) OF THE CHIT FUNDS ACT,1982.THROUGH PAPER PUBLICATION
_01. WHEREAS,the dispuitant has field the above dispute U/S 64 (1)of the Chit fund Act,1982,before the Deputy Registrar of Chits,First zone,Margosa road,Malleshwaram,Banglore,for recovery of **Rs. 12,16,725/- (Rupees Twelve Lakh Sixteen Thousand Seven Hundred and Twenty Five Only)**with intrest @24 p.annum And the Court Costs From the Opponents.
02. Whereas, it is brought to my notice by the disputant through an application filed under section 68(1) of the Chit fund act 1982, accompanied by an affidavit stating that the opponents **No.04 N.Nagesh** the Subsciber/ Guaranter of this chits and now she is contemplating to dispose off the immovable property belonging to them ,as mentioned in the schedule hereunder, with an intention to delay or defeat the enforcement of execution of the award that is likely to be passed in the above dispute against him.
03. The ABJ conditional notice issued by Speed Post to opponent **No.4** to appear before this Hon'ble Court **On** 27 /05/2026, the ABJ Conditional Notice to Opponent **No.4** is Not served. Therefore the opponents **No.04** is hereby Summoned to appear in this Court in person **on 23/06/2026, at 3. 00 P.M** The Nominee of the Depuity Registrar of Chits , Sitting At 172, Suprabha Complex, 2nd Floor, 1st G Cross, Near Sharada Colony Bus stop, 3rd Stage, Basaveshwaranagar, Bengaluru -560079. Without Fail Opponent to Take Notice that in default of Appearance the Dispute will be heard and Disposed Ex- Party and on Merits.
04. Further the opponent **No.04** is hereby informed that if he desires to have this attachment raised, he shall furnish cash secutity to the extent of the dispute Claim by depositing the amount to the disputant company and producing the original reciept issued by them to this court on before **23 /06/2026 at 3:00. P.M** without fail for raising the attachment .if they fail to do so within the stipulated period, this Conditional attachment shall be deemed to have confirmed and made absolute to the extent of the dispute claim as per the award.
SCHEDULE PROPERTY
All that piece and parcel of the vacant residential site bearing No.140 situated at Ward No.22,Division-4, of Devanahalli TMC Town, Budigere Road, Municipal Old Katha No.1692/423/140, New Katha No.1692/140/423/140 ,Site No.140, Measuring East to West 60 Feet, and North to South 31 Feet and in total measuring 1860 Sq feet. together with all rights, appurtenances whatsoever whether underneath or above the surface and bounded on the:
EAST BY : 30 Feet Road
WEST BY : Site No.139
NORTH BY : Site No.141
SOUTH BY : Private Property
Given under my hand & seal of this office on Dated 27/05/2026 at Bangalore
Nominee of The Deputy Registrar of Chits, Ist Zone, Malleshwaram, Bangalore